"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ:೦೮ನೇ ಫೆಬ್ರವರಿ ೨೦೧೮
ಗುರುವಾರ

## ವಿಷಯಾನುಕ್ರಮಣಿಕೆ

1. **ಸಂತಾಪ ಸೂಚನೆ**

2. **ನಿಯಮ ೫೯ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ರಾಜ್ಯದಲ್ಲಿರುವ ಮಠಮಾನ್ಯಗಳು ಮತ್ತು ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆನ್ನುವ ಕುರಿತು.**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**
**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)**
**ಶ್ರೀ ರಾಮಚಂದ್ರಗೌಡ**
**ಶ್ರೀ ರುದ್ರಪ್ಪ ಮಾನಪ್ಪ ಲಂಬಾಣಿ(ಮುಜರಾಯಿ ಸಚಿವರು)**
**(ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಯಿತು)**

3. **ಪ್ರಶ್ನೋತ್ತರಗಳು**

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

೨೪೩- ಸೂಲಿಕೆರೆ ಗ್ರಾಮದ ಸರ್ವೆ ನಂ.೬೯ರ ಭೂಸ್ವಾಧೀನದ ಬಗ್ಗೆ- ಶ್ರೀ ಎನ್.ಅಪ್ಪಾಜಿಗೌಡ
೨೬೧- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ದೌರ್ಜನ್ಯ ಪ್ರಕರಣ ಮತ್ತು ಕೋಮು ಗಲಭೆ ಹೆಚ್ಚುತ್ತಿರುವ ಬಗ್ಗೆ- ಕ್ಯಾಪ್ಟನ್ ಗಣೇಶ್ ಕಾರ್ಣಿಕ್
೨೪೭- ಬೆಂಗಳೂರಿನ ಕಲಾಸಿಪಾಳ್ಯದ "ಕೈಲಾಶ್ ಬಾರ್ ಅಂಡ್ ರೆಸ್ಟೋರೆಂಟ್"ನಲ್ಲಿ ಸಂಭವಿಸಿದ ಬೆಂಕಿ ಅವಘಡದ ಬಗ್ಗೆ – ಶ್ರೀ ಟಿ.ಎ.ಶರವಣ
೨೦೭ – ಇಂದಿರಾ ಕ್ಯಾಂಟೀನ್ ಸೇವೆಯನ್ನು ವಿಸ್ತರಿಸುವ ಬಗ್ಗೆ – ಡಾ.ಜಯಮಾಲ ರಾಮಚಂದ್ರ
೨೫೩ – ಬೃಹತ್ ಬೆಂಗಳೂರು ಮಹಾಗನರ ಪಾಲಿಕೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವ ಕುರಿತು – ಶ್ರೀ ರಾಮಚಂದ್ರಗೌಡ
೨೮೧ – ರಾಜ್ಯ ಸರ್ಕಾರಿ ನೌಕರರಿಗೆ ೬ನೇ ವೇತನ ಆಯೋಗದ ವರದಿ ಜಾರಿ ಬಗ್ಗೆ – ಶ್ರೀ ಕೆ.ಟಿ.ಶ್ರೀಕಂಠೇಗೌಡ

೨೮೪- ಗುತ್ತಿಗೆ/ನಿಯೋಜನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು – ಶ್ರೀ ಆರ್ ಚೌಡರೆಡ್ಡಿ ತೂಪಲ್ಲಿ

**(ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**(ಅ) ರಾಜ್ಯ ಸರ್ಕಾರ ಆಹಾರ ವಿತರಣೆಯಲ್ಲಿ ಫಲಾನುಭವಿಗಳ ವಿವರ ನೀಡದಿರುವ ಕುರಿತು**

– ಶ್ರೀ ಅಮರನಾಥ ಪಾಟೀಲ್
– ಶ್ರೀ ಯು.ಟಿ.ಖಾದರ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

**(ಆ) ವನ್ಯ ಜೀವಿಗಳ ರಕ್ಷಣೆ ಕುರಿತು**

– ಶ್ರೀ ಸಂದೇಶ್ ನಾಗರಾಜು
– ಶ್ರೀ ಎಂ.ಆರ್.ಸೀತರಾಂ(ಸಭಾ ನಾಯಕರು)

**(ಇ) ಮರಾಠ ಸಮುದಾಯವನ್ನು 2ಎ ಪಂಗಡಕ್ಕೆ ಸೇರಿಸುವ ಕುರಿತು**

– ಶ್ರೀ ಶ್ರೀಕಾಂತ ಎಲ್.ಘೋಟ್ನೆಕರ್
– ಶ್ರೀ ಎಂ.ಆರ್.ಸೀತರಾಂ(ಸಭಾ ನಾಯಕರು)

**(ಈ) ಅರಣ್ಯ ಪರಿಸರಕ್ಕೆ ಆಗುವ ತೊಂದರೆಯಿಂದ ಮೈಸೂರು ತಲಚೇರಿ ರೈಲು ಮಾರ್ಗವನ್ನು ಕೈಗೊಳ್ಳಬಾರದು ಎಂಬ ಬಗ್ಗೆ.**

– ಶ್ರೀಮತಿ ವೀಣಾ ಅಚ್ಚಯ್ಯ
– ಶ್ರೀ ಎಂ.ಆರ್.ಸೀತರಾಂ(ಸಭಾ ನಾಯಕರು)

**(ಉ) ಸಕಾಲ ಯೋಜನೆ ಸಂಪೂರ್ಣ ಸ್ಥಗಿತಗೊಳ್ಳಬಾರದು ಎಂಬ ಬಗ್ಗೆ –**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ಸಿದ್ದರಾಮಯ್ಯ(ಮುಖ್ಯ ಮಂತ್ರಿಗಳು)

**5. ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2017**

ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)
ಶ್ರೀ ರಾಮಚಂದ್ರಗೌಡ
ಶ್ರೀ ರಮೇಶ್ ಬಾಬು
ಶ್ರೀ ಡಿ.ಎಸ್.ವೀರಯ್ಯ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಶರಣಪ್ಪ ಮಟ್ಟೂರ
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.**

ಶ್ರೀ ಬಿ.ಜೆ.ಪುಟ್ಟಸ್ವಾಮಿ
ಶ್ರೀ ಆರ್.ವಿ.ದೇಶಪಾಂಡೆ(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

********

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

*ಗುರುವಾರ, 8ನೇ ಫೆಬ್ರವರಿ 2018*

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಸಂತಾಪ ಸೂಚನೆ

ವಿಷಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀಯುತ ಬಿ.ಜಿ.ಬಣಕಾರ್ ಅವರ ನಿಧನದ ಬಗ್ಗೆ.

---

**(ಪ್ರತಿ ಲಗತ್ತಿಸಲಾಗಿದೆ)**

**(71) 08/02/2018/11:20/ಎಸ್‌ಪಿಆರ್/ಆರ್‌ಎನ್**

**ಶ್ರೀ ಸಿದ್ಧರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಬಿ.ಜಿ.ಬಣಕಾರ್‌ರವರು ಇವತ್ತಿನ ದಿವಸ ನಮ್ಮನ್ನೆಲ್ಲಾ ಅಗಲಿದ್ದಾರೆ. ದಿವಂಗತರು 91 ವರ್ಷಗಳ ತುಂಬು ಜೀವನವನ್ನು ನಡೆಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ದಿವಂಗತರು ಬಹಳ ಸರಳ, ಸಜ್ಜನಿಕೆಯ ಹಾಗೂ ಪ್ರಾಮಾಣಿಕ ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿಯಾಗಿದ್ದರು. ಬಹಳ ಪ್ರಾಮಾಣಿಕರಾಗಿದ್ದ ಅವರು ಈ ಹಿಂದೆ ಶಾಸಕರಾಗಿ, ಮಂತ್ರಿಗಳಾಗಿ ಹಾಗೂ ವಿಧಾನಸಭೆಯ ಸಭಾಧ್ಯಕ್ಷರಾಗಿಯೂ ಸಹ ಸೇವೆಯನ್ನು ಸಲ್ಲಿಸಿದ್ದರು. ಅವರೊಂದಿಗೆ ಕೆಲಸ ಮಾಡುವ ಅವಕಾಶವೂ ಸಹ ನನಗೆ ದೊರಕಿತ್ತು. 1983-85 ರ ಅವಧಿಯಲ್ಲಿ ಶಾಸಕರಾಗಿದ್ದ ಅವರು ದಿವಗಂತ ರಾಮಕೃಷ್ಣ ಹೆಗಡೆರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಭಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ನಾನು ಮಂತ್ರಿಯಾಗಿ ಕೆಲಸವನ್ನು ಮಾಡಿದ್ದೇನೆ. ಇತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳಲ್ಲಿ ಬಹಳ ಹಿಂದೆ-ಮುಂದೆ ಮಾತನಾಡುವಂತಹ ಪರಿಸ್ಥಿತಿ ಇದೆ. ಆದರೆ ಯಾವುದೇ ವಿಚಾರವಿದ್ದರೂ ಅವರು ಹಿಂದೆ-ಮುಂದೆ ನೋಡದೆ ಬಹಳ ನೇರವಾಗಿ ಎದುರುಗಡೆಯೇ ಹೇಳುವಂತಹ ಸ್ವಭಾವವನ್ನು ಹೊಂದಿದ್ದರು. ಮಾನ್ಯ ವಿರೋಧ ಪಕ್ಷದವರಿಗೆ ಈ ಎಲ್ಲಾ ವಿಚಾರಗಳೂ ಗೊತ್ತಿವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ಮಾನ್ಯ ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು 'ಕೈ ತೋರಿಸಿ' ಹೇಳಿದರು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, 'ಕುಂಬಳಕಾಯಿ ಕಳ್ಳ' ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಹೆಗಲನ್ನು ಮುಟ್ಟಿ ನೋಡಿಕೊಳ್ಳುತ್ತಾರೆ. ನಾನು ಅವರ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಯ್ಯನ್ನು ತೋರಿಸಲೇ ಇಲ್ಲ. ಹಿಂದೆ-ಮುಂದೆ ಎಂಬುದಾಗಿ ಕೈಯ್ಯನ್ನು ಮಾಡಿ ತೋರಿಸಿದೆ. ನಾನು ಅವರಿಗೆ ಹೇಳುವುದಕ್ಕೆ ಬರುವುದಿಲ್ಲ; ಅವರ ಸಹವಾಸಕ್ಕೆ ಹೋಗುವುದೇ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನನ್ನ ಸಹವಾಸಕ್ಕೆ ಬರಲೇಬೇಕು, ಇಲ್ಲವೆಂದರೆ ನಾನು ಅವರನ್ನು ಬಿಡುವುದಿಲ್ಲ. ನಾನು ಮಾನ್ಯ ಸಭಾನಾಯಕರಿಗೆ ಏನು ಹೇಳಿದ್ದೇನೆ ಎಂಬುದನ್ನು ನೀವು ಅವರನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು ಸರಿಯಾಗಿದೆ ಎಂಬುದಾಗಿ ನಾನು ಹೇಳಿದ್ದೇನೆ. ಎಲ್ಲರೂ ಯಾವಾಗಲೂ ಟೀಕೆಯನ್ನು ಮಾಡುತ್ತಾರೆ ಎಂದು ನಿಮಗನ್ನಿಸಿದೆ. ನಿಮ್ಮ ಹಿತೈಷಿಗಳು, ಹಿತಶತ್ರುಗಳು ಯಾರು ಎಂಬುದು ನಿಮಗೆ ಗೊತ್ತಾಗುತ್ತಿಲ್ಲ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ರಾಜಕೀಯವಾಗಿ ಯಾರು ಎಷ್ಟೇ ಟೀಕೆಯನ್ನು ಮಾಡಿದರೂ ಕೂಡ ಅದನ್ನು ಎದುರಿಸುವಂತಹ ನೈತಿಕ ಧೈರ್ಯ ನಮಗೆ ಇದೆ. ಅದರ ಬಗ್ಗೆ ಯೋಚನೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆ ಧೈರ್ಯ ನಿಮಗಿಲ್ಲವೆಂದು ನಾನು ಹೇಳಿಲ್ಲ. ಎಲ್ಲವನ್ನೂ ಟೀಕೆ ಎಂದು ನೀವು ಭಾವಿಸುತ್ತೀರಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಯಾರನ್ನು ಬೇಕಾದರೂ ಎದುರಿಸುವ ಧೈರ್ಯ ನಮಗೆ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಎಲ್ಲವನ್ನೂ ಟೀಕೆ ಎಂದು ಏಕೆ ಭಾವಿಸುತ್ತೀರಿ? ನಿಮಗಿರುವ ಹಿತೈಷಿಗಳು ಹಾಗೂ ಹಿತಶತ್ರುಗಳು ಯಾರು ಎನ್ನುವುದನ್ನು ಗಮನಿಸಬೇಕು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ರಾಜಕೀಯವಾಗಿ ಯಾರಿಗಾದರೂ ಹೆದರಿಕೊಳ್ಳುವುದು ಎಂದರೆ, ನನಗೆ ಗೊತ್ತಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಶ್ರದ್ಧಾಂಜಲಿಯ ಸಂದರ್ಭದಲ್ಲಿ ಚರ್ಚೆಯನ್ನು ಮಾಡುತ್ತಿದ್ದೀರಿ. ನನಗೆ ಬೇಸರವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನೇನಾದರೂ ಮಾನ್ಯ ಸದಸ್ಯರ ಬಗ್ಗೆ ಮಾತನಾಡಿದೆನೇ? ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆಯೂ ಸಹ ಮಾತನಾಡಲಿಲ್ಲ. ಅವರೊಂದಿಗೆ ನನಗೆ ಒಳ್ಳೆಯ ಸ್ನೇಹವಿದೆ. ಅದು ಹೇಗೆ ಎಂದರೆ ಬಹಿರಂಗವಾಗಿ ಇಬ್ಬರೂ ಜಗಳವಾಡುತ್ತಿರುತ್ತೇವೆ, ಆಂತರಿಕವಾಗಿ ಇಬ್ಬರೂ ಒಂದೇ ರೀತಿಯಾಗಿ ಇದ್ದೇವೆ. ಈ ವಿಚಾರವಾಗಿ ಎಲ್ಲರಿಗೂ ಗೊತ್ತಾಗುವಂತೆ ಮಾನ್ಯ ಈಶ್ವರಪ್ಪನವರು ಹೇಳಲಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇವರಿಬ್ಬರೂ ಒಟ್ಟಾಗಿ ಸೇರಿಕೊಂಡು ನಮ್ಮನ್ನು ಮರುಳು ಮಾಡುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಆ ರೀತಿಯಾಗಿ ತಿಳಿದುಕೊಳ್ಳುವುದಕ್ಕೆ ಆಸ್ಪದವಿದೆ. ದಿವಂಗತರು ವಕೀಲರೂ ಸಹ ಆಗಿದ್ದರು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಸದರಿಯವರು ವಿಧಾನ ಸಭೆಯ ಸಭಾಧ್ಯಕ್ಷರಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು. ಅವರಿಗೆ ಎಲ್ಲಾ ರೀತಿಯ ಕಾನೂನುಗಳು ಗೊತ್ತಿತ್ತು. ಇದರ ಜೊತೆಗೆ ನಮ್ಮ ವಿಧಾನಸಭೆಯ ನಡವಳಿಕೆಯ ಬಗ್ಗೆ ಪತ್ರಿಕಾ ಬರಹಗಳನ್ನು ಬರೆಯುತ್ತಿದ್ದರು.

**ಸಭಾಪತಿಯವರು:-** ದಿವಂಗತ ಬಣಕಾರ್ ರವರು ಸಾಕಷ್ಟು ಪತ್ರಿಕಾ ಬರಹಗಳನ್ನು ಬರೆದಿದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಲ್ಲಿ ಯಾವ ರೀತಿಯಾಗಿ ನಡವಳಿಗಳು ನಡೆಯುತ್ತವೆ, ಸರ್ಕಾರದ ಆಯವ್ಯಯ, ರಾಜ್ಯಪಾಲರ ಭಾಷಣ, ದಾಖಲಾತಿ ಇತ್ಯಾದಿಗಳ ಕುರಿತಾಗಿ ಬಹಳವಾಗಿ ವಿಮರ್ಶೆಗಳನ್ನು ಮಾಡಿ ಬರಹಗಳನ್ನು ಬರೆಯುತ್ತಿದ್ದರು. ಅವರಿಗೆ ರಾಜಕೀಯ ಜ್ಞಾನ ತುಂಬಾ ಚೆನ್ನಾಗಿ ಇತ್ತು. ಸಂಸದೀಯ ವ್ಯವಸ್ಥೆಗಳ ಬಗ್ಗೆ ಅಪಾರವಾದ ತಿಳುವಳಿಕೆಯನ್ನು ಹೊಂದಿದ್ದರು. ಹೊಸದಾಗಿ ರಾಜಕರಣಕ್ಕೆ ಬರುವಂತಹ ಹೊಸ ಶಾಸಕರುಗಳಿಗೆ ಒಂದು ರೀತಿಯಾದ ಸ್ಫೂರ್ತಿ ಮತ್ತು ಮಾರ್ಗದರ್ಶನದಂತೆ ದಿವಂಗತರು ಇದ್ದರು ಎಂದು ನಾನು ಭಾವಿಸುತ್ತೇನೆ. ಆದರೆ ಇವತ್ತಿನ ದಿವಸ ಅವರು ನಮ್ಮನ್ನಗಲಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅವರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖವನ್ನು ಭರಿಸುವ ಧೈರ್ಯವನ್ನು ಭಗವಂತನು ನೀಡಲಿ. ದಿವಂಗತರ ಮಗ ಭಾರತೀಯ ಜನತಾ ಪಕ್ಷದ ವತಿಯಿಂದ ಚುನಾಯಿತರಾಗಿ ಹಾಲಿ ವಿಧಾನಸಭಾ ಸದಸ್ಯರಾಗಿದ್ದಾರೆ. ಅವರೂ ಸಹ ಬಣಕಾರ್ ಎಂಬ ಹೆಸರನ್ನೇ ಇಟ್ಟುಕೊಂಡಿದ್ದಾರೆ. ಬಣಕಾರ್ ಎನ್ನುವುದು ಅವರ ಉಪನಾಮವಾಗಿದೆ. ಅವರೂ ಸಹ ಒಳ್ಳೆಯ ವ್ಯಕ್ತಿಯಾಗಿದ್ದಾರೆ. ದಿವಗಂತರು ಎಲ್ಲರ ಜೊತೆಗೆ ನಗುತ್ತಲಿದ್ದರು ಹಾಗೂ ಎಲ್ಲರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದರು. ಅವರಿಗೆ ಯಾವತ್ತಿಗೂ ಸಹ ದ್ವೇಷದ ರಾಜಕಾರಣ, ಹೊಟ್ಟೆಕಿಚ್ಚಿನ ರಾಜಕಾರಣ,

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಸೂಯೆ ರಾಜಕಾರಣ ಇತ್ಯಾದಿಗಳಿರಲಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಒಳ್ಳೆಯ ವ್ಯಕ್ತಿ ಇವತ್ತಿನ ದಿವಸ ನಮ್ಮನ್ನಗಲಿದ್ದಾರೆ. ದಿವಂಗತರ ಕುಟುಂಬವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವಂತಹ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಜಿ.ಬಣಕಾರ್‌ರವರು ಇನ್ನಿಲ್ಲ ಎನ್ನುವ ಸುದ್ದಿಯು ನಿನ್ನೆಯ ದಿವಸ ರಾತ್ರಿ ಕೇಳಿದಾಗ ನನಗೆ ಬಹಳ ದುಃಖವಾಯಿತು. ನಾನು ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜ್ಯದ ಅಧ್ಯಕ್ಷನಾಗಿದ್ದಂತಹ ಸಂದರ್ಭದಲ್ಲಿ ದಿವಂಗತರು ರಾಜ್ಯದ ಭಾರತೀಯ ಜನತಾ ಪಕ್ಷದ ಉಪಾಧ್ಯಕ್ಷನಾಗಿ ಕರ್ತವ್ಯವನ್ನು ನಿರ್ವಹಿಸಿದ್ದರು. ಸಂತಾಪ ಸೂಚನೆಯಲ್ಲಿ ಸರಳ ರಾಜಕಾರಣಿ ಎಂಬ ಒಂದು ಪದವನ್ನು ಬಳಸಲಾಗಿದೆ. ಯಾರು ಸರಳರು ಹೌದು ಅಥವಾ ಇಲ್ಲ ಎನ್ನುವುದಕ್ಕಿಂತ ಸ್ವಾಭಾವಿಕವಾಗಿ ಯಾರೇ ಮೃತರಾದರೂ ಈ ರೀತಿಯ ಪದಗಳನ್ನು ಬಳಸುವುದು ಸ್ವಾಭಾವಿಕ. ಆದರೆ, ದಿವಂಗತರು ಎಷ್ಟರಮಟ್ಟಿಗೆ ಸರಳ ರಾಜಕಾರಣಿ ಎಂದರೆ, ನಾನು ತಿಳಿದುಕೊಂಡ ಹಾಗೆ 2004 ನೇ ಇಸವಿಯಲ್ಲಿ ಲೋಕಸಭೆಯ ಚುನಾವಣೆಗೆ ಅವರು ಭಾರತೀಯ ಜನತಾ ಪಕ್ಷದ ವತಿಯಿಂದ ಸ್ಪರ್ಧಿಸಿದ ಸಂದರ್ಭದಲ್ಲಿ ನಾನು ಅವರ ಮನೆಗೆ ಹೋಗಿದ್ದೆನು. ಚುನಾವಣೆಯ ಸಂಬಂಧ ಬಹಳಷ್ಟು ಗ್ರಾಮಗಳಲ್ಲಿ ಪ್ರವಾಸವನ್ನು ಕೈಗೊಳ್ಳಬೇಕಾಗುತ್ತದೆ ಇದಕ್ಕಾಗಿ ಒಂದು ಕಾರಿನ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಬೇಕೆಂದು ನಾನು ಅವರಿಗೆ ಹೇಳಿದೆನು. ಇದಕ್ಕೆ ಪ್ರತ್ಯುತ್ತರವಾಗಿ ದಿವಂಗತರು ಯಾವುದೇ ಕಾರಣಕ್ಕಾಗಿ ನಾವು ಕಾರಿನ ವ್ಯವಸ್ಥೆಯನ್ನು ಮಾಡಿಕೊಳ್ಳಬಾರದು, ಮಾಮೂಲಿನಂತೆ ಬಸ್ಸಿನಲ್ಲಿಯೇ ಪ್ರಯಾಣ ಮಾಡುವುದಾಗಿ ತಿಳಿಸಿ, ಚುನಾವಣೆಗೆ ಸ್ಪರ್ಧಿಯ ಹೆಸರು ಘೋಷಣೆಯಾಗುವವರೆಗೆ ಕೂಡ ಅವರು ಬಸ್ಸಿನಲ್ಲಿಯೇ ಪ್ರಯಾಣ ಮಾಡಿದರು. ಇಡೀ ರಾಜ್ಯದಲ್ಲಿ ಪಕ್ಷದ ಸಂಘಟನೆಯ ದೃಷ್ಟಿಯಿಂದ ಯಾವುದೇ ಒಂದು ಪ್ರದೇಶದಲ್ಲಿ ಪ್ರವಾಸವನ್ನು ಮಾಡಬೇಕೆಂದು ಹೇಳಿದರೆ, ಅಂತಹ ಪ್ರದೇಶಗಳಿಗೆ ಪ್ರವಾಸ ಮಾಡುತ್ತಿದ್ದರು ಹಾಗೂ ತಮ್ಮ ಅಭ್ಯಾಸ ವರ್ಗಗಳಲ್ಲಿ ಯಾವ ರೂಪದ ಅಂಶಗಳನ್ನು, ಅವರುಗಳು ಶಾಸಕರು, ಪಕ್ಷದ ಸಾಮಾನ್ಯ ಕಾರ್ಯಕರ್ತರು ಯಾರೇ ಇರಬಹುದು, ಅವರುಗಳಿಗೆ ವೈಚಾರಿಕ ರೂಪದಲ್ಲಿ ಅವುಗಳನ್ನು ತಿಳಿಸುವ ದಿಕ್ಕಿನಲ್ಲಿ ನಿಜವಾಗಿಯೂ ಸಹ ಒಬ್ಬ ದೊಡ್ಡ ವಿಚಾರವಂತರಾಗಿದ್ದರು. ಅವರು ಎಷ್ಟರಮಟ್ಟಿಗೆ ಅಧ್ಯಯನ ಮಾಡುತ್ತಿದ್ದರೆಂದರೆ, ನನಗನ್ನಿಸಿದ ಹಾಗೆ ವಿಧಾನಸೌಧದಲ್ಲಿರುವ ಶಾಸಕರ ಗ್ರಂಥಾಲಯವನ್ನು ಅತೀ ಹೆಚ್ಚು ಉಪಯೋಗ ಮಾಡಿಕೊಂಡಿರುವವರ ಪೈಕಿ ಅವರು ಅಗ್ರಸ್ಥಾನದಲ್ಲಿದ್ದಾರೆ. ಅಷ್ಟರಮಟ್ಟಿಗೆ ಅವರು ಪುಸ್ತಕಗಳನ್ನು ಯಾವಾಗಲೂ ಓದುತ್ತಿದ್ದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಈಗಾಗಲೇ ತಿಳಿಸಿರುವಂತೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಇನ್ನುಳಿದ ಸಂದರ್ಭದಲ್ಲಿ ಎಷ್ಟೇ ಸೌಮ್ಯವಾಗಿದ್ದರೂ ಕೂಡ ಯಾವುದೇ ರಾಷ್ಟ್ರೀಯ ವಿಚಾರಗಳು ಪ್ರಸ್ತಾಪವಾದ ಸಂದರ್ಭದಲ್ಲಿ ಅಷ್ಟೇ ಕಠೋರತೆಯಿಂದ ಇರುತ್ತಿದ್ದರು. ದಿವಂಗತರು ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಇವತ್ತಿನ ದಿವಸ ನಾವು ಅವರನ್ನು ಕಳೆದುಕೊಂಡಿದ್ದೇವೆ. ನಿಜವಾಗಿಯೂ ಸಹ ಇವರ ನಿಧನ ರಾಜ್ಯಕ್ಕೆ ಮಾತ್ರವಲ್ಲದೇ, ದೇಶಕ್ಕೂ ಸಹ ಒಬ್ಬ ರಾಷ್ಟ್ರಪ್ರೇಮಿಯನ್ನು ಕಳೆದುಕೊಂಡಂತಹ ನಷ್ಟವಾಗಿದೆ. ಮೃತರ ಕುಟುಂಬಕ್ಕೆ ಮತ್ತು ನಮ್ಮ ಇಡೀ ಸಂಘಟನೆಗೆ ಆಗಿರುವಂತಹ ನೋವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ನೀಡಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ರಾಜ್ಯದಲ್ಲಿರುವ ಮಠಮಾನ್ಯಗಳು ಮತ್ತು ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆನ್ನುವ ಕುರಿತು.**

– – –

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯ ಪ್ರಸ್ತಾವವನ್ನು ನೀಡಿದ್ದೇನು.

**ಸಭಾಪತಿಯವರು:-** ತಾವು ನೀಡಿರುವ ಸೂಚನೆಯ ವಿಷಯ ಏನು ಎಂದು ನಾನು ನೋಡಿದ್ದೇನೆ. ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಸದಸ್ಯರು ಅದಕ್ಕೆ ಸಹಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿದ್ದಾರೆ. ನಮ್ಮಲ್ಲಿನ ಪದ್ಧತಿಯಂತೆ ಐದರಿಂದ ಎಂಟು ನಿಮಿಷಗಳ ಕಾಲಾವಕಾಶದಲ್ಲಿ ನಿಲುವಳಿ ಸೂಚನೆಯ ವಿಷಯವೇನು, ಅದನ್ನು ಯಾವ ಕಾರಣಕ್ಕಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ತಾವು ಹೇಳಿದರೆ, ಸರ್ಕಾರವು ಈ ವಿಚಾರದಲ್ಲಿ ಏನು ಹೇಳುತ್ತದೆ ಎಂಬುದನ್ನು ಕೇಳುತ್ತೇನೆ.

**(ಮುಂದು...)**

(072) 11.30/08-02-2018/ CS/RN

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೇ, ಇದು ಹೊಸ ವಿಚಾರ ಏನಲ್ಲ, ದಿನಾಂಕ:೦೧.೦೫.೨೦೦೩ರಲ್ಲಿ ಹಿಂದೆ ನ್ಯಾಯಾಧೀಶರಾಗಿದ್ದ ರಾಮಾ ಜೋಯಿಸ್‌ರವರು ......

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ಸರ್ಕಾರದ ಪರವಾಗಿ ಉತ್ತರವನ್ನು ಕೊಡುವುದಕ್ಕೆ ಇವರ್ಯಾರು? ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಮಾನ್ಯ ಸಭಾನಾಯಕರಿದ್ದಾರೆ.

(ಗೊಂದಲ)

**ಸಭಾಪತಿಯವರು:-** ನಾನು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು 5 ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೇನೆ. ಅವರು ಏನು ಮಾತನಾಡುತ್ತಾರೆನ್ನುವುದನ್ನು ಮೊದಲು ಕೇಳಿ, ಅದಕ್ಕೆ ಸರ್ಕಾರ ಉತ್ತರವನ್ನು ನೀಡಬೇಕಾಗುತ್ತದೆ. ಬೇರೆಯವರಿಗೂ ಅದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಬೇಕಾದಲ್ಲಿ ಅವರಿಗೂ ಸಹ ಅವಕಾಶ ನೀಡುತ್ತೇನೆ. ಸರ್ಕಾರ ಏನು ಉತ್ತರ ನೀಡುತ್ತದೆ ಅದನ್ನು ನೋಡಿಕೊಂಡು ಚರ್ಚೆಯನ್ನು ಮುಂದುವರೆಸೋಣ. ವಿರೋಧ ಪಕ್ಷದ ನಾಯಕರು ನೀಡಿರುವ ಸೂಚನೆಯನ್ನು ನಾನು ಓದಿದ್ದೇನೆ. ಹಾಗಾಗಿ ಅವರು ಯಾವ ವಿಚಾರವನ್ನು ಪ್ರಸ್ತಾಪಿಸುತ್ತಾರೆ, ಅದಕ್ಕೆ ಸರ್ಕಾರ ಏನು ಉತ್ತರ ಕೊಡುತ್ತದೆ ಎನ್ನುವುದನ್ನು ಕೇಳಿ. ಹಾಗಾಗಿ ವಿರೋಧ ಪಕ್ಷದ ನಾಯಕರಿಗೆ 5 ನಿಮಿಷ ಮಾತನಾಡುವುದಕ್ಕೆ ನಾನು ಅವಕಾಶ ನೀಡಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಹಿಂದೂ ಸಮಾಜದಲ್ಲಿ ಮಠಗಳು ಎಂದರೆ ನಮಗೆ ದೇವಸ್ಥಾನಗಳ ಸಮಾನ. ಹಾಗೆಯೇ ಜಗದ್ಗುರುಗಳು ಹಾಗೂ ಸ್ವಾಮೀಜಿಗಳು ಎಂದರೆ ನೇರವಾಗಿ ನಮಗೆ ದೇವರ ಸಮಾನ. ಇಂತಹ ಮಠಗಳು ಹಾಗೂ ಜಗದ್ಗುರುಗಳು ಬಗ್ಗೆ ಅಂದರೆ ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಚರ್ಚೆ ನಡೆದಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಇಂದು ತಲೆತಗ್ಗಿಸಬೇಕಾಗಿದೆ.

**ಶ್ರೀ ಸಿದ್ಧರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೇ, ಮಠ ಹಾಗೂ ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತಹ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ. ಆ ರೀತಿಯ ಪ್ರಸ್ತಾವನೆಯೇ ಸರ್ಕಾರದ ಮುಂದೆ ಇಲ್ಲ. ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ತೋರಿಸಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮತ್ತೇನು ಉಲ್ಲೇಖಿಸಬೇಕೆನ್ನುವುದನ್ನು ಹೇಳಿದರೆ ನಾನು ಅದನ್ನು ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಮುಜರಾಯಿ ಸಚಿವರು ಉತ್ತರವನ್ನು ನೀಡುತ್ತಾರೆ. This is very clear. ಸರ್ಕಾರಕ್ಕೆ ಆ ರೀತಿಯ ಯಾವುದೇ ಆಲೋಚನೆ ಇಲ್ಲ. ಯಾವುದೇ ದೇವಸ್ಥಾನಗಳನ್ನು ಮಠಗಳನ್ನು ಅಥವಾ ಧಾರ್ಮಿಕ ಸಂಸ್ಥೆಗಳನ್ನು ಸರ್ಕಾರದ ವ್ಯಾಪ್ತಿಗೆ ಒಳಪಡಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳ ವ್ಯವಸ್ಥೆಯನ್ನು ಮಾತ್ರ ಸರ್ಕಾರ ನೋಡಿಕೊಳ್ಳುತ್ತದೆ. ಬೇರೆಯವರ ಉಸಾಬರಿ ನಮಗೆ ಬೇಡ. ಇದು ಒಂದು ತಪ್ಪು ಮಾಹಿತಿ ಅವರಿಗೆ ಸಿಕ್ಕಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರ ಈ ಬಗ್ಗೆ ಒಂದು 'ಸಾರ್ವಜನಿಕ ಪ್ರಕಟಣೆ' ಹೊರಡಿಸಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೇ, ಸಾರ್ವಜನಿಕ ಅಭಿಪ್ರಾಯ ಕೇಳಿರುವ ಆ ಪ್ರಕಟಣೆಯನ್ನು ಸಹ ವಿತ್‌ಡ್ರಾ ಮಾಡುವುದಕ್ಕೆ ಹೇಳಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ಪ್ರಕಟಣೆ ಬಂದ ಕಾರಣ ಕರ್ನಾಟಕದಲ್ಲಿರುವ ಎಲ್ಲಾ ಮಠಾಧೀಶರು .. .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಠಾಧೀಶರಿಗೆ ಈ ಪ್ರಕಟಣೆ ಹಿಂದಕ್ಕೆ ಪಡೆಯುತ್ತಿರುವ ಬಗ್ಗೆ ಪೂರ್ಣ ಮಾಹಿತಿ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ಗದುಗಿನ ಶ್ರೀ ತೋಂಟದಾರ್ಯ ಸ್ವಾಮೀಜಿಗಳು, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು, ಪೇಜಾವರ ಸ್ವಾಮೀಜಿಗಳು, ಬಸವಕೇಂದ್ರದ ಸ್ವಾಮೀಜಿಗಳು ಮತ್ತು ಸಿದ್ದಗಂಗಾ ಮಠದ ಸ್ವಾಮೀಜಿಗಳು ಸಹ ಈ ಪ್ರಕಟಣೆಯ ಬಗ್ಗೆ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಅದನ್ನೆಲ್ಲ ಇಲ್ಲಿ ಪ್ರಸ್ತಾಪಿಸುವುದಕ್ಕೆ ನಾನು ಹೋಗುವುದಿಲ್ಲ. ಒಬ್ಬ ಸ್ವಾಮೀಜಿಗಳು "ಮಠ ಮಾನ್ಯ ದೇವಸ್ಥಾನಗಳನ್ನು ಸರ್ಕಾರ ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕಿಂತ ದುರಂತದ ಸಂಗತಿ ಮತ್ತೊಂದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅದೇಕೆ ಇಂತಹ ಕೆಟ್ಟ ಆಲೋಚನೆ ಬಂದಿದೆಯೋ ಅರ್ಥವಾಗುತ್ತಿಲ್ಲ" ಎಂದು ಹೇಳಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸರ್ಕಾರಕ್ಕೆ ಆ ರೀತಿಯ ಯಾವುದೇ ಆಲೋಚನೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರದ ಬಗ್ಗೆ ಎಲ್ಲಾ ಮಠಗಳಿಗೂ ಸುತ್ತೋಲೆ ಕಳುಹಿಸಲಾಗಿದೆ. ಇಂತಹ ಸುತ್ತೋಲೆಗಳನ್ನು ಮಂತ್ರಿಗಳು ಕಳುಹಿಸುತ್ತಾರೋ ಅಥವಾ ಯಾವುದೋ ಸಮಿತಿಯ ಸದಸ್ಯರು ಕಳುಹಿಸಿದರೆ ಅದೇನು ಅರ್ಥ? ನೀವೆ ಹೇಳಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಗಳೇ, ಅದು ಸರ್ಕಾರದ ಸುತ್ತೋಲೆ ಅಲ್ಲ. ಅದೊಂದು ಸಾರ್ವಜನಿಕ ಅಭಿಪ್ರಾಯ ಕೇಳಿರುವ ಪ್ರಕಟಣೆ. ರಾಮಚಂದ್ರಗೌಡರೆ, ನೀವು ಹಿರಿಯ ಸದಸ್ಯರು. ಹೀಗೆ ಎದ್ದು ನಿಂತರೆ ಹೇಗೆ? This is the decision of Division Bench of our Hon'ble High Court. ಇದು ೨೦೦೬ರಲ್ಲಿ ಆಗಿರುವಂಥದ್ದು. ಆ ತೀರ್ಪಿನಲ್ಲಿ ಒಂದು ಆಕ್ಟ್ ಅನ್ನು struck down ಮಾಡಿದ್ದಾರೆ. ಅದರಲ್ಲಿ ರಾಜ್ಯಸರ್ಕಾರ ಒಂದು ಹೊಸ regulation ತರಬಹುದು ಎಂದು ಹೇಳಿದ್ದಾರೆ. On the base of it, ಸಾರ್ವಜನಿಕರ ಅಭಿಪ್ರಾಯ ಪಡೆಯಲು ಒಂದು ಪ್ರಕಟಣೆಯನ್ನು ಹೊರಡಿಸಲಾಗಿದೆ. ಅದರ ಅರ್ಥ ಸರ್ಕಾರ ಮಠ ಅಥವಾ ದೇವಸ್ಥಾನಗಳನ್ನು ಅಧೀನಕ್ಕೆ ಪಡೆಯುತ್ತದೆ ಎಂದಲ್ಲ. ಆದ್ದರಿಂದ, 'wrong message should not go' ಎನ್ನುವುದನ್ನು ಸಹ ನಾನು ಹೇಳಿದೆನು. ಈ ರೀತಿಯ ತಪ್ಪು ಮಾಹಿತಿ ಜನರಿಗೆ ಹೋಗಬಾರದೆನ್ನುವ ದೃಷ್ಟಿಯಿಂದ ಆ ಪ್ರಕಟಣೆಯನ್ನೇ ವಿತ್ ಡ್ರಾ ಮಾಡಬೇಕೆಂದು ಹೇಳಿದ್ದೇನೆ. There ends the matter. ಹಾಗಾಗಿ ಸರ್ಕಾರ ಮಠ ಅಥವಾ ದೇವಸ್ಥಾನಗಳನ್ನು ಅಧೀನಕ್ಕೆ ಪಡೆಯುತ್ತದೆ ಎನ್ನುವ ವಿಚಾರವೇ ಉದ್ಭವವಾಗುವುದಿಲ್ಲ. ಸರ್ಕಾರ ಆ ರೀತಿಯ ಆಲೋಚನೆಯನ್ನು ಮಾಡಿರುವುದಿಲ್ಲ, ಮಾಡುವುದು ಸಹ ಇಲ್ಲ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ೨೦೧೭ರಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. Under the chairmanship of Karnataka Rajya Dharmika Parishat Member and Senior Advocate N.K.Jagannath Rao, a Committee was formed to study include Mutts and.....

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ನೀವು ಸಮಿತಿಯನ್ನೇಕೆ ಮಾಡಿದಿರಿ?

**ಶ್ರೀ ಸಿದ್ಧರಾಮಯ್ಯ:-** ನಾವು ಮಾಡುವುದಿಲ್ಲವೆಂದ ಮೇಲೆ why do you argue unnecessarily?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ** :-ಸಮಿತಿಯನ್ನು ಮಾಡುವ ಅಗತ್ಯವೇನಿತ್ತು?

(ಗೊಂದಲ)

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)**:- ಮಾನ್ಯ ಸಭಾಪತಿಗಳೇ, ಈ ಬಗ್ಗೆ ಕೋರ್ಟಿನ ಆದೇಶವಿದೆ. 2005ರಲ್ಲಿ ಮಾನ್ಯ ವಿಭಾಗೀಯ ಪೀಠವು 2008-09ನೇ ಸಾಲಿನಲ್ಲಿ ನೀಡಿದ ತೀರ್ಪಿನಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯಿ ದತ್ತಿಗಳ ಕಾಯಿದೆ 1997ಕ್ಕೆ ಅನ್ವಯಿಸುವಂತೆ ಹೇಳಲಾಗಿದೆ. This has been challenged before the High Court. ಹೈಕೋರ್ಟಿನಲ್ಲಿ 2005ರಲ್ಲಿ ಒಂದು ಆದೇಶ ಮಾಡಲಾಗಿದೆ. ಅದರ ವಿರುದ್ಧ ಅರ್ಚಕರು ಮತ್ತು ಟ್ರಸ್ಟಿಗಳು ವಿಭಾಗೀಯ ಪೀಠಕ್ಕೆ ಹೋಗುತ್ತಾರೆ. ಆಗ 2006ರಲ್ಲಿ ವಿಭಾಗೀಯ ಪೀಠ ಒಂದು ತೀರ್ಪನ್ನು ನೀಡುತ್ತದೆ. ಆ ತೀರ್ಪಿನಲ್ಲಿ; *"Since the very Act is held to be discriminatory in this application, it is not possible to severe other parts and hence the entire Act has to be struck down as un constitutional and we do so in the case on hand. We also deem it proper to observe that the intention of the Legislature seems to be a uniform law for all Hindu religious institutions. If that is so, as has been done in Andhra Pradesh in terms of the Supreme court, the Government would be well advised to have a commission constituted for temple affairs and involve all non Hindu religious leaders/matadipathis/religious experts/social reformers and other experts and thereafter proceed to pass a uniform law in terms of the judgment of the Supreme Court in AIR 1980 SC 1. The Government can also think of having different regulatory measures for temples/maths/Jains etc., depending upon their religious belief etc., and of course, within the four-corners of the constitution."* ಎಂದು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ಆಗಿರುವಂಥದ್ದು. ಇದು 2006ರಲ್ಲಿ ಆದಂತಹ ತೀರ್ಪು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, 2006ರಿಂದ ಇಲ್ಲಿಯತನಕ ಸರ್ಕಾರ ನಿದ್ದೆ ಮಾಡುತ್ತಿತ್ತೇ? ಇಡೀ ಕರ್ನಾಟಕ ರಾಜ್ಯ ಇದು ನಿದ್ದೆ ಮಾಡುವ ಸರ್ಕಾರ ಎಂದು ಹೇಳಿದರೆ ಅದನ್ನು ಸರ್ಕಾರ ಒಪ್ಪುವುದೇ?

(ಮುಂದು)

(ಗೊಂದಲ)

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** 2006ರಲ್ಲಿ ನಿಮ್ಮ ಸರ್ಕಾರವೇ ಇತ್ತು, ಆಗ ನೀವು ಏಕೆ ಮಾಡಲಿಲ್ಲ? What is that you have done?

**ಶ್ರೀ ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ನಾವು ಮಾಡಲಿಲ್ಲ....

**ಶ್ರೀ ಸಿದ್ದರಾಮಯ್ಯ:-** ನೀವು ಏನು ಮಾಡಿರುವುದಿಲ್ಲ, ಸುಮ್ಮನೆ ಇದ್ರಿ, 5ವರ್ಷ ನೀವು ಏನು ನಿದ್ದೆ ಮಾಡಿದ್ದೀರಾ?

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಹೇಳಿಬಿಡಲಿ, ನಂತರ ಮಾನ್ಯ ಧಾರ್ಮಿಕ ಖಾತೆಯ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಹೇಳುವುದನ್ನು ಸ್ವಲ್ಪ ಎಲ್ಲರೂ ಕೇಳಿ.

(ಗೊಂದಲ)

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, ಕರ್ನಾಟಕ ಏಕೀಕರಣವಾದ ಮೇಲೆ ದೇವಸ್ಥಾನಗಳ ವಿಚಾರದಲ್ಲಿ ಸಮಸ್ಯೆ ಇತ್ತು. ಮದ್ರಾಸ್ ಪ್ರಾಂತ್ಯದಿಂದ ಬಂದ ದೇವಸ್ಥಾನಗಳಿಗೆ ಬೇರೆ ರೀತಿ, ಮಹಾರಾಷ್ಟ್ರ ಪ್ರಾಂತ್ಯದಿಂದ ಬಂದ ದೇವಸ್ಥಾನಗಳಿಗೆ ಬೇರೆ ರೀತಿ ಇತ್ತು, ಮೈಸೂರು ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಬೇರೆ ರೀತಿ ಇತ್ತು. ಮಾನ್ಯ ಡಾ:ವಿ.ಎಸ್.ಆಚಾರ್ಯರವರು ಮುಜರಾಯಿ ಖಾತೆ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಒಂದು ವಿಶೇಷವಾದ ಕಾನೂನನ್ನು ತರಬೇಕು ಎಂದು ಚರ್ಚೆ ಮಾಡುತ್ತಿದ್ದರು. ಹೈಕೋರ್ಟ್ 2006ರಲ್ಲಿ ಇದನ್ನು ಮಾಡಬೇಕೆಂದು ತೀರ್ಪು ಕೊಟ್ಟಿದೆ. ಆದರೆ ಇದನ್ನು ಮಾಡಲು ಇಷ್ಟು ದಿನ ಏಕೆ ಬೇಕಾಯಿತು.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವಾನ ಡಿ'ಸೋಜ್:–** 5 ವರ್ಷ ನಿಮ್ಮ ಸರ್ಕಾರ ಇತ್ತು ಆಗ ನೀವು ಏಕೆ ಮಾಡಲಿಲ್ಲ?

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾವು ಮಾಡುವುದಿಲ್ಲ. ನಾವು ಹಿಂದು ವಿರೋಧಿಗಳಲ್ಲ, ನಾವು ಮಠ–ಮಂದಿರಗಳಿಗೆ ಗೌರವ ಕೊಡುವವರು.

(ಗೊಂದಲ)

**ಶ್ರೀ ಎಂ.ಆರ್.ಸೀತಾರಂ:–** ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಬೇಕು ಹೇಳಲಿ. ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಜರಾಯಿ ಹಾಗೂ ಜವಳಿ ಸಚಿವರು):– ಮಾನ್ಯ ಸಭಾಪತಿಗಳೆ,** ಪ್ರಕಟಣೆಯನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ಮತ್ತೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಆದರೂ ಅವರು ಮಾತನಾಡಿದರೆ ಅದಕ್ಕೆ ನಾನು ಉತ್ತರವನ್ನು ಹೇಳುತ್ತೇನೆ. ಹಿಂದೆ ಅವರು ಏನು ಮಾಡಿದ್ದಾರೆ, ಏನು ಇಲ್ಲ ಎನ್ನುವ ಎಲ್ಲ ಮಾಹಿತಿ ನನ್ನ ಹತ್ತಿರ ಇದೆ.

(ಗೊಂದಲ)

**ಸಭಾಪತಿಯವರು:–** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಸಚಿವರೇ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ಈಗ ಸ್ವಲ್ಪಮಟ್ಟಿಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನೋಟಿಸ್‌ನ್ನು ಕೊಟ್ಟಿದ್ದಾರೆ. ಅದರ ಹಿನ್ನೆಲೆಯಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಎದ್ದು ನಿಂತು ಇದನ್ನು ನಾವು withdraw ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ವಿತ್‌ಡ್ರಾ ಮಾಡುತ್ತೇನೆ ಎಂದು ಹೇಳಿದ ಮೇಲೆ ಮತ್ತೆ ಅದರ ಮೇಲೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಈ ಸರ್ಕಾರದ ಮನೋಭಾವನೆ ಬಗ್ಗೆ ಹೇಳುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ........

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, I object to this. ಸಲಹೆ–ಸೂಚನೆಗಳನ್ನು ಕೇಳಲು ಕೊಟ್ಟಿರುವಂತಹ ಪ್ರಕಟಣೆ ಇದು. ಇದು ಆದೇಶವಲ್ಲ, ಸುತ್ತೋಲೆಯಲ್ಲ, ಯಾವ ಉದ್ದೇಶವೂ ಸರ್ಕಾರಕ್ಕೆ ಇಲ್ಲ. ಸಲಹೆ ಸೂಚನೆಗಳನ್ನು ಕೇಳಲು ಹೊರಡಿಸಿರುವ ಪ್ರಕಟಣೆ ಹೊರತು, ಇದು ಆದೇಶವೂ ಅಲ್ಲ, Notification ಅಲ್ಲ ಏನು ಅಲ್ಲ. ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಆ ಪ್ರಕಟಣೆಯನ್ನು ವಾಪಸ್ ತೆಗೆದುಕೊಳ್ಳಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಕರ್ನಾಟಕ ರಾಜ್ಯದಲ್ಲಿ ಬರೀ ಹಿಂದುಗಳ ದೇವಸ್ಥಾನಗಳು ಮಾತ್ರ ನಿಮ್ಮ ಕಣ್ಣಿಗೆ ಕಾಣುತ್ತಿವೆಯೇ?.......

**ಸಭಾಪತಿಯವರು:-** ಪ್ರಕಟಣೆಯನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಾಪಸ್ ತೆಗೆದುಕೊಳ್ಳುವುದು ಅಷ್ಟೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ ಮಠಾಧೀಶರ ಕ್ಷಮೆಯನ್ನು ಕೇಳಬೇಕು.

**ಶ್ರೀ ಸಿದ್ದರಾಮಯ್ಯ:-** ನೀವು ಹೇಳಿದ್ದೀರಿ ಎಂದು ನಾವೇನು ವಾಪಸ್ ತೆಗೆದುಕೊಳ್ಳುತ್ತಿಲ್ಲ. ಈಗಾಗಲೇ ವಾಪಸ್ ತೆಗೆದುಕೊಳ್ಳಲಾಗಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾವು ಹೇಳಿದ್ದೇವೆ ಎಂದು ವಾಪಸ್ ತೆಗೆದುಕೊಂಡಿರುವುದಿಲ್ಲ ಎನ್ನುವ ವಿಚಾರ ಬಿಡಿ. ಆದರೆ ಈ ಪ್ರಕಟಣೆಯಿಂದ ರಾಜ್ಯದಲ್ಲಿರುವ ಎಲ್ಲ ಹಿಂದೂಗಳಿಗೆ, ಮಠಾಧೀಶರಿಗೆ ಆಘಾತವಾಗಿದೆ. ಅವರ ಕ್ಷಮೆಯನ್ನು ಕೇಳಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅವರಿಗೆ ಆಘಾತವಾಗಿಲ್ಲ, ರಾಜಕೀಯ ಆಘಾತ ಬಿಜೆಪಿ ಯವರಿಗೆ ಆಗಿದೆ. ಸಾರ್ವಜನಿಕರಿಗೆ ಆಘಾತವಾಗಿಲ್ಲ. ಏಕೆಂದರೆ ಇಲ್ಲಿ ಸರ್ಕಾರದ ಯಾವುದೇ ದುರುದ್ದೇಶವಿಲ್ಲ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ದುರುದ್ದೇಶವಿಲ್ಲ ಎಂದರೆ ಏಕೆ ಇದನ್ನು ತಂದಿದ್ದೀರಿ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಿಮ್ಮ ಅಭಿಪ್ರಾಯವನ್ನು ಕೇಳಲು ಮಾಡಲಾಗಿತ್ತು.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಾರೆ ಮಾತನಾಡಲಿ, ನಂತರ ಮುಜರಾಯಿ ಖಾತೆ ಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನೀವು ಮಾತನಾಡಿ, ನಂತರ ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ,

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಗಳೆ, as per Rule 59 is not maintainable. ದಯಮಾಡಿ ಅರ್ಥಮಾಡಿಕೊಳ್ಳಿ, Our Hon'ble Chief Minister has made it very clear that we have not issued any notification.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ ಅವರಿಗೆ ಅವಕಾಶ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಿದ್ದಾರೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಮುಖ್ಯಮಂತ್ರಿಗಳು ಪ್ರಕಟಣೆಯನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂದು ಹೇಳಿದ ಮೇಲೆಯೂ ಏಕೆ ಮಾತನಾಡುತ್ತಾರೆ ಗೊತ್ತಿಲ್ಲ.

**ಸಭಾಪತಿಯವರು:-** ಎರಡು ನಿಮಿಷ ಮಾತನಾಡುತ್ತಾರೆ, ಅವರಿಗೆ ಅವಕಾಶ ಕೊಟ್ಟಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಗಳೆ, Rule 59 ಅಡಿಯಲ್ಲಿ ಈ ರೀತಿ ಮಾಡಲು ಬರುವುದಿಲ್ಲ. ಇದನ್ನು ಮತ್ತೆ ಹೇಗೆ ತೆಗೆದುಕೊಳ್ಳುತ್ತೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಈ ಸಾರ್ವಜನಿಕ ಪ್ರಕಟಣೆಯನ್ನು ಸರ್ಕಾರ ಕಳುಹಿಸದಿದ್ದರೆ ಹಿಂದೂ ಸಮಾಜದ ಯಾವುದೇ ಮಠ-ಮಂದಿರದ ಸ್ವಾಮೀಜಿಗಳು, ಅವರು ಶ್ರೀ ವೀರೇಂದ್ರ ಹೆಗ್ಗಡೆಯವರು ಇರಬಹುದು, ಶ್ರೀ ಸಿದ್ದಗಂಗಾ ಸ್ವಾಮೀಜಿಗಳು ಇರಬಹುದು, ಶ್ರೀ ಸುತ್ತೂರು ಸ್ವಾಮೀಜಿಗಳು ಇರಬಹುದು, ಶ್ರೀ ತೋಂಟದಾರ್ಯ ಸ್ವಾಮೀಜಿಗಳು ಇರಬಹುದು, ಶ್ರೀ ಬಸವ ಕೇಂದ್ರದ ಸ್ವಾಮೀಜಿಗಳು ಇರಬಹುದು, ಶ್ರೀ ಪೇಜಾವರ ಸ್ವಾಮೀಜಿಗಳು ಇರಬಹುದು, ಆದಿಚುಂಚನಗಿರಿ ನಿರ್ಮಲಾನಂದ ಸ್ವಾಮೀಜಿಗಳು ಇರಬಹುದು, ಇವರೆಲ್ಲರೂ ಇವತ್ತು ಆತಂಕದಿಂದ ಹೇಳಿಕೆ ಕೊಡುವಂತಹ ಪರಿಸ್ಥಿತಿಯನ್ನು ಏಕೆ ತಂದಿದ್ದೀರಿ? ಈ ಅಧಿಕಾರವನ್ನು ಯಾರು ನಿಮಗೆ ಕೊಟ್ಟವರು?

(ಗೊಂದಲ)

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಗಳೆ, ಸರ್ಕಾರ ಯಾವುದೇ ಮಠ-ಮಂದಿರಗಳ ವಿಚಾರಕ್ಕೆ ಹೋಗುವುದಿಲ್ಲ ಎಂದು ನಾನು ನಿನ್ನೆ ಸಂಜೆಯೇ ಹೇಳಿಕೆಯನ್ನು ಕೊಟ್ಟಿದ್ದೇನೆ. ಮಠಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತೇವೆ ಎಂದು ಎಲ್ಲಿಯು ನಾವು ಹೇಳಿರುವುದಿಲ್ಲ. ಇವರ ಅವಧಿಯಲ್ಲಿ ಏನೇನು ಆಗಿದೆ ಎನ್ನುವ ಎಲ್ಲ ಮಾಹಿತಿ ನನ್ನ ಹತ್ತಿರ ಇದೆ.

**ಸಭಾಪತಿಯವರು:-** ಈ ಚರ್ಚೆಯನ್ನು ಮುಕ್ತಾಯಗೊಳಿಸಬೇಕು. ವಿರೋಧ ಪಕ್ಷದ ನಾಯಕರಿಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿದ ನಂತರ ಮಂತ್ರಿಗಳಿಗೆ ಅವಕಾಶವನ್ನು ಕೊಡುತ್ತೇನೆ. ಆಗ ಮಂತ್ರಿಗಳು ಏನು ಹೇಳಬೇಕು ಅದನ್ನು ಹೇಳಬಹುದು.

**ಶ್ರೀ ಸಿದ್ದರಾಮಯ್ಯ:-** ವಿತ್‌ಡ್ರಾ ಮಾಡಿದ್ದೇವೆ ಬಿಡಿ ಏಕೆ ಸುಮ್ಮನೆ ಬೆಳೆಸುತ್ತಾ ಹೋಗುತ್ತೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಅಲ್ಪಸಂಖ್ಯಾತರ ಮುಗ್ಧರು, ಕ್ರಿಮಿನಲ್ಸ್..... ಅವರ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳುತ್ತೀರಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಈ ವಿಷಯವನ್ನು ಬಿಟ್ಟು ಬೇರೆ ವಿಷಯ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಇವರಿಗೆ ಹೇಳುವವರು ಕೇಳುವವರು ಯಾರು ಇಲ್ಲವೆ? ಮುಗ್ಧ ಅಲ್ಪಸಂಖ್ಯಾತರ ಕೇಸ್‌ಗಳ ವಾಪಸ್, ಹಿಂದೂಗಳ ಬಗ್ಗೆ ಏನು ಇಲ್ಲ... ರಾಜ್ಯದಲ್ಲಿರುವ ಇಡೀ ಮಠ-ಮಂದಿರಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ ಎಂದು ಹೊರಗೆ ಹೇಳಿಕೆ ಕೊಡುವುದು, ಇಲ್ಲಿ ಬಂದು ಆ ರೀತಿ ಏನು ಮಾಡುವುದಿಲ್ಲ ಎಂದು ವಾಪಸ್ ತೆಗೆದುಕೊಳ್ಳುವುದು. ಇದೇನು ಮೊಹಮ್ಮದ್ ಬಿನ್ ತುಘಲಕ್ ಸರ್ಕಾರವೇ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಏನು ವಿಷಯ ಇದೆ ಎಂದು ಇವರು ಮಾತನಾಡುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ವಾಪಸ್ ಏಕೆ ತೆಗೆದುಕೊಂಡಿದ್ದೀರಿ?

(ಗೊಂದಲ)

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ರಾಮಾಜೋಯಿಸ್‌ರವರು ...

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ರಾಮಾಜೋಯಿಸ್‌ರ ವಿಚಾರ ನಮಗೆ ಬೇಡ. ನೀವು ವಾಪಸ್ ಏಕೆ ತೆಗೆದುಕೊಂಡಿದ್ದೀರಿ. ಹಿಂದೂ ಸಮಾಜ ಬೇಕಾಬಿಟ್ಟಿ ಬಿದ್ದುಬಿಟ್ಟಿದೆಯಾ? ಶತ-ಶತಮಾನಗಳಿಂದ ಸಾಧು-

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಂತರು ಆ ಮಠಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ಸರ್ಕಾರ ಮಾಡಬೇಕಾದ ಕೆಲಸಗಳನ್ನು ಇವತ್ತು ಮಠಗಳು ಮಾಡುತ್ತಿವೆ. ಶಿಕ್ಷಣ, ಉಚಿತವಾಗಿ ಆರೋಗ್ಯ ತಪಾಸಣೆ ಈ ರೀತಿ ಎಲ್ಲವನ್ನು ಸಾರ್ವಜನಿಕರಿಗೆ ಕೊಡುತ್ತಿರುವ ಮಠ-ಮಂದಿರಗಳಿಗೆ ಕೈ ಹಾಕಲು ಹೋದರೆ ಯಾರು ಒಪ್ಪುತ್ತಾರೆ? ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ವಾಪಸ್ ತೆಗೆದುಕೊಂಡಿದ್ದೇವೆ ಎಂದು ಒಂದೇ ಮಾತಿನಲ್ಲಿ ಹೇಳಿಬಿಟ್ಟರು. ಆದರೆ ಇಡೀ ಹಿಂದೂ ಸಮಾಜಕ್ಕೆ ಆಘಾತವಾಗಿದೆ, ಮಠ-ಮಂದಿರಗಳ ಸ್ವಾಮೀಜಿಗಳಿಗೆ ಆಘಾತವಾಗಿದೆ. ಈ ಪ್ರಕಟಣೆ ಕೊಟ್ಟಿರುವುದಕ್ಕೆ ಸರ್ಕಾರ ಕ್ಷಮೆ ಕೇಳಬೇಕು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಗಳೆ, ಹೈಕೋರ್ಟ್‌ನ ಎರಡು ಪೀಠಗಳು ಈ ಆದೇಶವನ್ನು ರದ್ದುಪಡಿಸಿವೆ, 2013ರವರೆಗೆ ನೀವು ಏನು ಮಾಡಿದ್ದೀರಿ? 2006ರಿಂದ 2013ರವರೆಗೆ ನಿಮ್ಮ ಜವಾಬ್ದಾರಿ ಇತ್ತು. ನೀವು implement ಮಾಡಬೇಕಾಗಿತ್ತು. ನೀವು ಏಕೆ ಮಾಡಲಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಇಷ್ಟು ದಿನದಿಂದ ನೀವು ನಿದ್ದೆ ಮಾಡುತ್ತಿದ್ದೀರಾ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಅವರ ಸಮಯದಲ್ಲಿ ಅವರು ಮಾಡಬೇಕಾಗಿತ್ತು, ಆಗ ಇವರು ನಿದ್ದೆ ಮಾಡುತ್ತಿದ್ದರೇ? ಇವರ ಪಾಪದ ಕೂಸನ್ನು ತಂದು ನಮ್ಮ ಮೇಲೆ ಹಾಕುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೋ ಬೇಡವೊ ಎನ್ನುವುದನ್ನು ನಾನು ನಿರ್ಣಯ ಮಾಡಬೇಕು.

**(ಮುಂದು)**

ಸಭಾಪತಿಯವರುಃ- ಈ ವಿಷಯವನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎಂಬ ಬಗ್ಗೆ ನಾನು ನಿರ್ಣಯ ಮಾಡಬೇಕು. ನಿಲುವಳಿ ಸೂಚನೆಯ ಬಗ್ಗೆ preliminary submission ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಸದಸ್ಯರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳುವುದಿದ್ದರೆ ಅವರಿಗೂ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರು ಮಾತನಾಡಿದ ನಂತರ ನಾನು ನಿರ್ಣಯವನ್ನು ಪ್ರಕಟ ಮಾಡಬೇಕಾಗುತ್ತದೆ. ನಾನು ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ಅವಕಾಶ ಕೊಟ್ಟಿಲ್ಲ. ಆದರೆ ಈ ವಿಷಯವನ್ನು ತೆಗೆದುಕೊಳ್ಳಬೇಕೋ, ಬೇಡವೋ ಎಂಬ ಬಗ್ಗೆ preliminary submission ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಅವಕಾಶ ಕೊಟ್ಟಿದ್ದು, ಅಷ್ಟಕ್ಕೆ ಮಾತ್ರ ಚರ್ಚೆ ನಡೆಯುತ್ತಿದೆ. ಇದರಲ್ಲಿ ಸ್ವಲ್ಪ ಮಾತನಾಡುವಾಗ ಪ್ರಾಸಂಗಿಕವಾಗಿ ಬೇರೆ ಬೇರೆ ವಿಚಾರಗಳು ಬರುತ್ತಿದೆ. Preliminary submission ಗೆ ಎಲ್ಲರಿಗೂ ಅವಕಾಶ ಕೊಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸಹಿ ಹಾಕಿರುವವರಲ್ಲಿ ಒಬ್ಬರು ಮಾತನಾಡಬೇಕು. ಈಗ ಎಲ್ಲರಿಗೂ ಅವಕಾಶ ಕೊಡುವುದಿಲ್ಲ. ನಾನು ಚರ್ಚೆಗೆ ಅವಕಾಶ ಕೊಟ್ಟಾಗ ಮಾತ್ರ ಸದನದ ಎಲ್ಲಾ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):- ಮಾನ್ಯ ಸಭಾಪತಿಯವರೇ, ನನಗೆ ಚರ್ಚೆಗೆ ಅವಕಾಶ ಕೊಡಬೇಕು.

ಸಭಾಪತಿಯವರುಃ- ಆಯಿತು, ಕುಳಿತುಕೊಳ್ಳಿ. ಮಧ್ಯೇ ಯಾರೂ ಮಾತನಾಡಬೇಡಿ, ಈ ವಿಚಾರವನ್ನು ಏಕೆ ನಿಲುವಳಿ ಸೂಚನೆಯ ನಿಯಮದಡಿ ತೆಗೆದುಕೊಳ್ಳಬೇಕು ಎಂದು ಹೇಳಿ, ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ನಿಮಿಷಗಳಲ್ಲಿ ಮುಕ್ತಾಯ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪಃ- ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನಲ್ಲಿ ಹಿಂದೂ ಮಠ-ಮಂದಿರಗಳ ಬಗ್ಗೆ ತೊಂದರೆಯಾದ ವಿಚಾರಗಳ ಬಗ್ಗೆ ಚರ್ಚೆಗೆ ಬರಬಾರದಾಗಿತ್ತು. ಇವತ್ತು ಸರ್ಕಾರ ಒಂದು ಪ್ರಕಟಣೆಯನ್ನು ಹೊರಡಿಸಿದ್ದು, ಅದರಲ್ಲಿ " ಹಿಂದೂ ಧಾರ್ಮಿಕ ಪಂಗಡವು ಸ್ಥಾಪಿಸಿರುವ, ವ್ಯವಸ್ಥೆಗೊಳಿಸಿರುವ ಅಥವಾ ನಿರ್ವಹಿಸುತ್ತಿರುವ ಧಾರ್ಮಿಕ ಸಂಸ್ಥೆಯನ್ನು ಅಥವಾ ಧರ್ಮಾದಾಯ ದತ್ತಿಗಳನ್ನು ಧಾರ್ಮಿಕ ದತ್ತಿ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಬೇಕೆ, ಬೇಡವೇ? ಒಳಪಡಿಸುವುದಿದ್ದಲ್ಲಿ ಯಾವ ರೀತಿಯಾಗಿ ಮತ್ತು ಎಷ್ಟರಮಟ್ಟಿಗೆ ಒಳಪಡಿಸಬೇಕು," ಎಂದು ಹೇಳಿದ್ದಾರೆ. ಹೀಗಿದ್ದೂ ಸರ್ಕಾರವು ಏನೂ ಮಾಡಿಲ್ಲ ಎಂದು ಹೇಳುತ್ತಿದೆ. ಇವತ್ತು ಇಡೀ ಕರ್ನಾಟಕ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲಿ ಎಲ್ಲಾ ಪೂಜ್ಯ ಸ್ವಾಮೀಜಿಗಳು, ನಾನು ಸ್ವಾಮೀಜಿಗಳು ಎಂದ ತಕ್ಷಣ ದೇವರು ಎಂದು ಹೇಳಿದ್ದೇನೆ. ಸ್ವಾಮೀಜಿಗಳು ಇಡೀ ಸಮಾಜವನ್ನು ಜಾಗೃತ ಮಾಡುವುದಕ್ಕೆ ತ್ಯಾಗ ಮಾಡುತ್ತಾರೆ. ಹಿಂದೂ ಸಮಾಜ ಜಾಗೃತಿಯಾಗಬೇಕು, ಒಳ್ಳೆಯ ಸಂಸ್ಕೃತಿ ತರಬೇಕು, ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಬೇಕು, ವೈದ್ಯಕೀಯ ಸೌಲಭ್ಯ ಕೊಡಬೇಕು ಎಂದೆಲ್ಲಾ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಈ ರೀತಿ ಸರ್ಕಾರ ಮಾಡುತ್ತಿರುವ ಕೆಲಸಗಳನ್ನು ಮಠ-ಮಂದಿರಗಳು ಮಾಡುತ್ತಿರುವ ಸಂದರ್ಭದಲ್ಲಿ ಇಂತಹ ಮಠಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೋ, ಬೇಡವೋ ಎಂಬ ಪ್ರಶ್ನೆ ಕೇಳುವ ಧೈರ್ಯವನ್ನು ಈ ಸರ್ಕಾರಕ್ಕೆ ಯಾರು ಕೊಟ್ಟರು, ಹೇಗೆ ಕೊಟ್ಟರು? ಮಾನ್ಯ ಮುಖ್ಯಮಂತ್ರಿಯವರು ಈ ಪ್ರಕಟಣೆಯನ್ನು ವಾಪಸ್ಸು

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತೇನೆ ಎಂದು ಹೇಳಿರುವುದನ್ನು ಖಂಡಿತ ಸ್ವಾಗತ ಮಾಡುತ್ತೇನೆ. ಆದರೆ ಇದು ಅಚಾತುರ್ಯ ಹಾಗೂ ಹಿಂದೂ ಸಮಾಜಕ್ಕೆ ಮಾಡಿರುವ ದ್ರೋಹ. ಅದಕ್ಕಾಗಿ ಸಂಬಂಧಪಟ್ಟ ಸರ್ಕಾರದ ವ್ಯಕ್ತಿಗಳು ಮಹಮದ್-ಬಿನ್-ತೊಘಲಕ್ ರೀತಿ ಆಡಳಿತ ಮಾಡುವುದಿಲ್ಲ, ಈಗ ಆಗಿರುವ ಅಚಾತುರ್ಯಕ್ಕೆ ಕ್ಷಮೆ ಕೇಳುತ್ತೇವೆ ಎಂದು ಸಂಬಂಧಪಟ್ಟ ಮಾನ್ಯ ಮಂತ್ರಿಯವರು ಅಥವಾ ಮುಖ್ಯಮಂತ್ರಿಯವರು ಕ್ಷಮೆ ಕೇಳಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಕೆ.ಟಿ. ಶ್ರೀಕಂಠೇಗೌಡಃ- ಮಾನ್ಯ ಸಭಾಪತಿಯವರೇ,

ಸಭಾಪತಿಯವರುಃ- ಇಲ್ಲ, No, I will not allow. ಇದು ಪಕ್ಷದ ನಿಲುವಲ್ಲ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ)ಃ- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಬಹಳ ಉದ್ದವಾದ ಉತ್ತರ ಕೊಡುತ್ತಾರೆ ಎಂದು ನಾನೇ ಎದ್ದು ನಿಂತು ಉತ್ತರ ಕೊಡುತ್ತಿದ್ದೇನೆ. ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997ರ ಕಾಯ್ದೆ ಮತ್ತು ಇದರಲ್ಲಿನ ನಿಯಮಾವಳಿಗಳ ಬಗ್ಗೆ ಕೋರ್ಟ್‌ನಲ್ಲಿ challenge ಮಾಡುತ್ತಾರೆ. ಇದನ್ನು ಹೈಕೋರ್ಟ್ unconstitutional ಎಂದು ಹೊಡೆದುಹಾಕುತ್ತದೆ. ಅದನ್ನು ಹೇಳುತ್ತಾ Divisional Bench ನಲ್ಲಿ ಒಂದು observation ಅನ್ನು ಸಹ ಹೇಳಿರುತ್ತಾರೆ. ನಾನು ಈಗಾಗಲೇ ಅದನ್ನು ಓದಿ ಹೇಳಿದ್ದೇನೆ. ಅದರಲ್ಲಿ ಒಂದು ಹೊಸ ಕಾನೂನು ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದಾದ ಮೇಲೆ ದಿನಾಂಕ 1/03/2007ರಲ್ಲಿ ಒಂದು ಪ್ರಕಟಣೆ ಆಗಿದೆ. ಆಗ ಯಾರ ಸರ್ಕಾರ ಇತ್ತು? ಆಗ ಮಾನ್ಯ ರಾಮಚಂದ್ರಗೌಡರೂ ಇದ್ದರಲ್ಲವೇ? ಆಗ ಸಮ್ಮಿಶ್ರ ಸರ್ಕಾರ ಇತ್ತಲ್ಲವೇ?

ಶ್ರೀ ಕೆ.ಬಿ. ಶಾಣಪ್ಪಃ- ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಇತ್ತು.

ಶ್ರೀ ಸಿದ್ದರಾಮಯ್ಯಃ- ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿ ಯಾವಾಗಲೂ ಮೊದಲನೆಯ ಮಂತ್ರಿ ಅಷ್ಟೇ. ಮುಖ್ಯಮಂತ್ರಿ ಎಲ್ಲದ್ದಕ್ಕೂ ಜವಾಬ್ದಾರನಲ್ಲ,

ಸಭಾಪತಿಯವರುಃ- ಅವರಿಗೆ ಮಾತನಾಡಲು ಬಿಡಿ, ವಿಷಯಕ್ಕೆ ಹೋಗಲು ಬಿಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿದ್ದರಾಮಯ್ಯಃ- ಮಾನ್ಯ ಸಭಾಪತಿಯವರೇ, ಸರ್ಕಾರದ ನಿರ್ಧಾರ ಅಥವಾ ಕ್ಯಾಬಿನೆಟ್ ನಿರ್ಧಾರ ಎಂದರೆ it is a collective responsibility. We are also a party to it. ಆದ್ದರಿಂದ ವಿವರಗಳಿಗೆ ಹೋಗುವುದು ಬೇಡ ಎಂದು ಪ್ರಕರಣೆ ಹೊರಡಿಸಿರುವುದನ್ನು ವಾಪಸ್ಸು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ. ಸಮ್ಮಿಶ್ರ ಸರ್ಕಾರ ಇದ್ದಾಗಲೂ ಈ ರೀತಿಯ ಪ್ರಕರಣೆ ಆಗಿದೆ. ಶ್ರೀಯುತ ಎಂ.ರಾಮಾಜೋಯಿಷ್ ರವರ ಅಧ್ಯಕ್ಷತೆಯಲ್ಲಿ ಪ್ರಕಟಣೆ ಆಗಿದ್ದು, ಅದರ ಯಥಾವತ್ತಿನ ಕಾಪಿಯನ್ನು ಈ ಪ್ರಕರಣೆಯಲ್ಲಿಯೂ ಮಾಡಿದ್ದಾರೆ. ನಾವು ಹೊರಡಿಸಿರುವ ಪ್ರಕರಣೆಯನ್ನು ಓದಿಕೊಳ್ಳಲಿ. ಹಿಂದಿನ ಪ್ರಕಟಣೆಯಲ್ಲಿ ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯಿಸ್ ರವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿ ಎಂಬ ಶೀರ್ಷಿಕೆಯಡಿ ದಿನಾಂಕ 1/3/2007ರಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಅದರಲ್ಲಿ " ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕಃ 1/5/2003ರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997 ಮತ್ತು ನಿಯಮಾವಳಿ 2002 ಅನ್ನು ಜಾರಿಗೆ ತಂದಿದ್ದು, ಸದರಿ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ಅರ್ಚಕರ ಸಂಘಗಳವರು, ದೇವಸ್ಥಾನದ ಆಡಳಿತ ವರ್ಗದವರು ಹಾಗೂ ಸಾರ್ವಜನಿಕರು ಸಲ್ಲಿಸಿದ್ದ ರಿಟ್ ಅಪೀಲುಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ 8/9/2006ರ ತೀರ್ಪಿನಲ್ಲಿ ಕಾಯ್ದೆಯನ್ನು ರದ್ದುಗೊಳಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಗಮನದಲ್ಲಿರಿಸಿ ಹಾಗೂ ರಾಜ್ಯದಲ್ಲಿನ ದೇವಸ್ಥಾನಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಸೂಕ್ತ ಸಲಹೆ-ಶಿಫಾರಸ್ಸುಗಳನ್ನು ಮಾಡಲು ನಿವೃತ್ತ ಜಸ್ಟೀಸ್ ಎಂ. ರಾಮಾಜೋಯೀಸ್ ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರವು ನೇಮಕ ಮಾಡಿದ್ದು, ಸದರಿ ಸಮಿತಿಯು ಈ ಕೆಳಕಂಡ ಅಂಶಗಳ ಬಗ್ಗೆ ಸಾರ್ವಜನಿಕರು, ಅರ್ಚಕರು, ದೇವಸ್ಥಾನದ ಆಡಳಿತ ವರ್ಗದವರು, ಸಿಬ್ಬಂದಿ ವರ್ಗದವರು ಹಾಗೂ ಇತರೆ ಆಸಕ್ತರಿಂದ ಸಲಹೆ-ಸೂಚನೆಗಳನ್ನು ಆಹ್ವಾನಿಸಿದೆ. ಸದರಿ ಸಲಹೆ-ಸೂಚನೆಗಳನ್ನು ದಿನಾಂಕ 20/3/2007ರೊಳಗಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಧಾರ್ಮಿಕ ದತ್ತಿ ಆಯುಕ್ತರು, 3ನೇ ಮಹಡಿ, ಮಲೆಮಹದೇಶ್ವರ ಭವನ, ಚಾಮರಾಜಪೇಟೆ, ಬೆಂಗಳೂರು-18 ಇಲ್ಲಿಗೆ ಸಲ್ಲಿಸಲು ಕೋರಿದೆ" ಎಂದು ಇದೆ. ಈ ಪ್ರಕಟಣೆಯ ಅಂಶಗಳಲ್ಲಿ " ಧಾರ್ಮಿಕ ದತ್ತಿ ಕಾಯ್ದೆಯ ವ್ಯಾಪ್ತಿಗೆ ಮಠಗಳು, ಮಠಗಳಿಗೆ ಸೇರಿದ ದೇವಸ್ಥಾನಗಳು ಹಾಗೂ ಮಠಗಳ ನಿಯಂತ್ರಣಕ್ಕೆ ಒಳಪಟ್ಟ ಧಾರ್ಮಿಕ ಸಂಸ್ಥೆಗಳು ಮತ್ತು ಜೈನ್ ಬೌದ್ಧ, ಸಿಖ್ ಜನಾಂಗಗಳಿಗೆ ಒಳಪಟ್ಟ ಧಾರ್ಮಿಕ ಸಂಸ್ಥೆಗಳನ್ನು ಒಳಪಡಿಸಬೇಕೇ, ಬೇಡವೇ? ಒಳಪಡಿಸುವುದಿದ್ದಲ್ಲಿ ಯಾವ ರೀತಿಯಾಗಿ ಮತ್ತು ಎಷ್ಟರಮಟ್ಟಿಗೆ ಒಳಪಡಿಸಬೇಕು " ಎಂದು ಇದೆ. ಈ ಪ್ರಕಟಣೆಯನ್ನು ಯಾರು ಮಾಡಿದ್ದು? ಸಮ್ಮಿಶ್ರ ಸರ್ಕಾರ ಇದ್ದಾಗ ಮಾನ್ಯ ರಾಮಾಜೋಯಿಸ್ ರವರ ಉನ್ನತ ಮಟ್ಟದ ಸಮಿತಿಯನ್ನು ಮಾಡಲಾಗಿದೆ. ಈ ಪ್ರಕಟಣೆಗೂ ನಾವು ಹೊರಡಿಸಿರುವ ಪ್ರಕಟಣೆಗೂ ವ್ಯತ್ಯಾಸ ಏನು? Absolutely

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

no. There is no difference at all. ಆಗ ಅವರು ಯಾವ ಮಠಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗಿದ್ದರು?

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಇಲ್ಲಿ ಸರ್ಕಾರವೇ ನೇರವಾಗಿ ಪ್ರಕಟಣೆಯನ್ನು ಹೊರಡಿಸಿದೆ. ಆದರೆ ನಾವು ಸಮಿತಿ ಬಗ್ಗೆ ಹೊರಡಿಸಿರುವುದು. ಅದು ಇಲಾಖೆ ಹೊರಡಿಸಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಸಭಾಪತಿಯವರೇ, ಈಗಿರುವ ಪ್ರಕಟಣೆಯಲ್ಲಿಯೂ ಹಿಂದೆ ಇರುವ ಪ್ರಕಟಣೆಯನ್ನು ಯಥಾವತ್ತಾಗಿ ಹೇಳಿದ್ದಾರೆ. ಶ್ರೀಯುತ ಎಂ.ರಾಮಾಜೋಯಿಸ್ ರವರ ಅಧ್ಯಕ್ಷತೆಯಲ್ಲಿ ಹೊರಡಿಸಿರುವ ಪ್ರಕಟಣೆಯಲ್ಲಿ ಸಾರ್ವಜನಿಕರ ಅಭಿಪ್ರಾಯ ಕೇಳಲು ಹೇಳಿದ್ದು, ಅದೇ ಪದಗಳನ್ನು ಯಥಾವತ್ತಾಗಿ ಮೊನ್ನೆ ಹೊರಡಿಸಿರುವ ಪ್ರಕಟಣೆಯಲ್ಲಿಯೂ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಈಗ ಕರ್ನಾಟಕ ಸರ್ಕಾರ ಹೊರಡಿಸಿರುವ ಪ್ರಕಟಣೆಯಾಗಿದ್ದು, ಹಿಂದೆ ಶ್ರೀ ಎಂ.ರಾಮಾಜೋಯಿಸ್ ರವರ ಸಮಿತಿ ಹೊರಡಿಸಿದ ಪ್ರಕಟಣೆಯಾಗಿದೆ. ಇದು ಸರ್ಕಾರಕ್ಕೆ ಒಪ್ಪಿಗೆ ಇದೆ ಅಥವಾ ಇಲ್ಲ ಎಂಬ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಸಭಾಪತಿಯವರೇ, ಹಿಂದಿನ ಪ್ರಕಟಣೆಯಲ್ಲಿ " ಧಾರ್ಮಿಕ ದತ್ತಿ ಕಾಯ್ದೆಯ ವ್ಯಾಪ್ತಿಗೆ ಮಠಗಳು, ಮಠಗಳಿಗೆ ಸೇರಿದ ದೇವಸ್ಥಾನಗಳು ಹಾಗೂ ಮಠಗಳ ನಿಯಂತ್ರಣಕ್ಕೆ ಒಳಪಟ್ಟ ಧಾರ್ಮಿಕ ಸಂಸ್ಥೆಗಳು ಮತ್ತು ಜೈನ್ ಬೌದ್ಧ, ಸಿಖ್ ಜನಾಂಗಗಳಿಗೆ ಒಳಪಟ್ಟ ಧಾರ್ಮಿಕ ಸಂಸ್ಥೆಗಳನ್ನು ಒಳಪಡಿಸಬೇಕೆ? ಬೇಡವೇ? ಒಳಪಡಿಸುವುದಿದ್ದಲ್ಲಿ ಯಾವ ರೀತಿಯಾಗಿ ಮತ್ತು ಎಷ್ಟರಮಟ್ಟಿಗೆ ಒಳಪಡಿಸಬೇಕು? According to me it is not a circular, it is not a Government Order or it is not a direction. It is only a suggestion.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸವಿದೆ. ಈ ಪ್ರಕಟಣೆಯನ್ನು ರಾಜ್ಯ ಸರ್ಕಾರದ ಚಿಹ್ನೆ ಅಡಿಯಲ್ಲಿ ಸರ್ಕಾರ ಹೊರಡಿಸಿರುವ ಸಾರ್ವಜನಿಕ ಪ್ರಕಟಣೆ.

(ಗೊಂದಲ)

(ಮುಂದು)

(075) 8.2.2017 12.00 ಪಿಕೆ:ಬಿಎನ್‌ಎಸ್

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ನಿಮ್ಮ ಕಾಲದಲ್ಲಿ ಇದನ್ನು ಏಕೆ ಮಾಡಿಸಿದಿರಿ? ಮಾನ್ಯ ರಾಮ ಜೋಯಿಸ್‌ರವರ ಕಾಲದಲ್ಲಿ ಇದನ್ನು ಏಕೆ ಮಾಡಿಸಿದಿರಿ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಗ ಅದನ್ನು ಮಾನ್ಯ ರಾಮ ಜೋಯಿಸ್‌ರವರ ಸಮಿತಿಯವರು ಹೊರಡಿಸಿದ್ದರು. ಆದರೆ ಇವತ್ತು ಸರ್ಕಾರದ ವತಿಯಿಂದಲೇ ಹೊರಡಿಸಲಾಗಿದೆ. . .

(ಗೊಂದಲ)

**ಶ್ರೀ ಸಿದ್ಧರಾಮಯ್ಯ:-** ಆವತ್ತು ಈ ರೀತಿ ಹೊರಡಿಸಿ ಯಾವ ಮಠಗಳನ್ನು ವಶಕ್ಕೆ ತೆಗೆದುಕೊಳ್ಳಲು ಹೊರಟಿದ್ದಿರಿ? ಹಿಂದೂ ಧರ್ಮ ಇವರ ಗುತ್ತಿಗೆಯೇ? ನಾನೂ ಕೂಡ ಹಿಂದೂ. ಇವರೊಬ್ಬರೇ ಹಿಂದೂಗಳೇ? ನಮಗೂ ದೇವಸ್ಥಾನಗಳ ಬಗ್ಗೆ ಗೌರವ ಇದೆ, ದೇವರ ಬಗ್ಗೆ ಗೌರವ ಇದೆ. ನೀವು ಹಿಂದೆ ಏನು ಹೊರಡಿಸಿದ್ದಿರೋ ಅದೇರೀತಿ ಇವತ್ತು ಪ್ರಕಟಣೆ ಹೊರಡಿಸಿದ್ದಾರೆ. ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಕೂಲಂಕಷವಾಗಿ ಕಾನೂನು ಇಲಾಖೆಯೊಂದಿಗೆ ಚರ್ಚೆ ಮಾಡುತ್ತೇವೆ. ಅಲ್ಲಿಯ ತನಕ ಸದರಿ ಪ್ರಕಟಣೆಯನ್ನು ಹಿಂಪಡೆಯಲಾಗುತ್ತದೆ. ಮಾನ್ಯ ಸಭಾಪತಿಯವರೇ, ಅವರು ಮಾಡಿದ್ದನ್ನೇ ನಾವು ಮಾಡಿದ್ದೇವೆ. ಆದರೂ ಈ ಪ್ರಕಟಣೆಯನ್ನು ಹಿಂತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇದು ಭಂಡತನ. ಮಾನ್ಯ ರಾಮಜೋಯಿಸ್‌ರವರು ಮಾಡಿದ್ದಕ್ಕೂ ಸರ್ಕಾರ ಹೊರಡಿಸಿರುವುದಕ್ಕೂ ವ್ಯತ್ಯಾಸ ಇದೆ. . . .

(ಗೊಂದಲ)

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು, ಸದರಿ ಪ್ರಕಟಣೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆದೇಶ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ಈ ವಿಚಾರವನ್ನು ನಿಲುವಳಿ ಸೂಚನೆ ಅಡಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಆದ್ದರಿಂದ ನಿಲುವಳಿ ಸೂಚನೆಯನ್ನು ಸ್ಥಗಿತಗೊಳಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾ ತ್ಯಾಗ ಮಾಡಿದರು)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಯಾವಾಗಲೂ ಇವರಿಬ್ಬರು ಹೊಡೆದಾಡಿಕೊಳ್ಳುವುದೇ ಆಯಿತು. ನಾವು ಮಾತನಾಡುವುದು ಬೇಡವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ಹಿಂದೆ ಆ ಪ್ರಕಟಣೆ ಹೊರಡಿಸಿದಾಗ ಮಾನ್ಯ ಕುಮಾರಸ್ವಾಮಿಗಳೇ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ಸದಸ್ಯರಿಗೆ ಸದನದಲ್ಲಿ ಮಾತನಾಡಲು ಬೇರೆ ವಿಷಯಗಳಿಲ್ಲ. ಇಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾಗಿತ್ತು. ಇವರು ಹಿಂದೆ ಮಾಡಿದ್ದು ತಪ್ಪೋ ಸರಿಯೋ, ಕೋರ್ಟ್‌ನ ಆದೇಶದ ಮೇಲೆ ಮಾಡಿದ್ದರು. ಮಾನ್ಯ ರಾಮಜೋಯಿಸ್‌ರವರು ಚೀಫ್ ಜಸ್ಟೀಸ್ ಆಗಿದ್ದವರು. ಅಂಥವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದರು. ಅವರು ಹೊರಡಿಸಿದ್ದ ಪ್ರಕಟಣೆಯಲ್ಲೇನಿತ್ತೋ ಅದರ ಯಥಾವತ್ತು, ಒಂದಕ್ಷರವನ್ನೂ ಬಿಡದೇ ಈಗ ಪ್ರಕಟಣೆ ಹೊರಡಿಸಲಾಗಿದೆ. ಇವರ ಕಾಲದಲ್ಲಿ ಪ್ರಕಟಣೆ ಹೊರಡಿಸಿದಾಗ ಇವರು ಮಠಗಳನ್ನು, ದೇವಸ್ಥಾನಗಳನ್ನು ನಿಯಂತ್ರಿಸುವ ಉದ್ದೇಶ ಹೊಂದಿದ್ದರೇ? ಇಂತಹ ಉದ್ದೇಶ ಅವರಿಗೂ ಇರಲಿಲ್ಲ ಎಂದು ನಾನು ಭಾವಿಸುತ್ತೇನೆ. ಅದೇರೀತಿ ನಮಗೂ ಅಂತಹ ಉದ್ದೇಶವಿಲ್ಲ. ಹಾಗಾಗಿ, ಇದರಲ್ಲಿ ಮಠಗಳನ್ನು, ದೇವಸ್ಥಾನಗಳನ್ನು ವಶಪಡಿಸಿಕೊಳ್ಳುವ ಉದ್ದೇಶವಿಲ್ಲ. ಇದು ಕೇವಲ ಪ್ರಕಟಣೆಯಾಗಿದೆ. ಇದು ಆದೇಶ ಅಲ್ಲ, ಸರ್ಕ್ಯೂಲರ್ ಅಲ್ಲ, ಆರ್ಡರ್ಸ್ ಅಲ್ಲ ಅಥವಾ ನಿರ್ದೇಶನವಲ್ಲ. ಕೇವಲ ಸಲಹೆಗಳನ್ನು ಕೇಳಲಾಗಿದೆ. ಈ ಪ್ರಕಟಣೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಅಸಮಾಧಾನ ಬಂದಿದ್ದರಿಂದ, ಅವರ ಮನಸ್ಸಿಗೆ ನೋವಾಗಬಾರದು ಎನ್ನುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕಾನೂನು ಇಲಾಖೆಯ ಜೊತೆ ಚರ್ಚೆ ಮಾಡಿ ಆಮೇಲೆ ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಈಗ ಯಾವುದೇ ದೇವಸ್ಥಾನಗಳನ್ನಾಗಲಿ, ಮಠಗಳನ್ನಾಗಲಿ ತೆಗೆದುಕೊಳ್ಳುವುದಿಲ್ಲ, ಅಂತಹ ಆಲೋಚನೆ ಇಲ್ಲ, ಆ ರೀತಿ ಮಾಡುವುದೂ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಮಾನ್ಯ ಸಭಾಪತಿಯವರೇ, ರಾಜ್ಯದ ಮಠ-ಮಾನ್ಯಗಳು ಸಮಾಜಮುಖಿಯಾಗಿ, ಅತ್ಯಂತ ನಿಸ್ಪೃಹತೆಯಿಂದ ಕೆಲಸ ಮಾಡುತ್ತಿರುವಂತಹ ಈ ಸಂದರ್ಭದಲ್ಲಿ ನಾವು ಅವರ ಭಾವನೆಗಳಿಗೆ ಧಕ್ಕೆ ತರುವಂತಹ ಯಾವುದೇ ಪ್ರಯತ್ನವನ್ನು ಮಾಡಬಾರದು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಮುಖ್ಯಮಂತ್ರಿಗಳು ಈಗ ತೆಗೆದುಕೊಂಡ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಆದರೆ ಮತ್ತೆ ಮತ್ತೆ ಇಂತಹ ಪ್ರಯತ್ನಗಳು ಆಗಬಾರದು. ಆತಂಕಕ್ಕೆ ಒಳಗಾಗಿರುವ ಮಠ-ಮಾನ್ಯಗಳಿಗೆ ನಾವುಗಳು ದನಿಯಾಗಿ ಈ ಸದನದಿಂದ ಸಕಾರಾತ್ಮಕವಾಗಿ ಸ್ಪಂದಿಸಬೇಕು.

**ಶ್ರೀ ಸಿದ್ಧರಾಮಯ್ಯ:-** ಹಿಂದೆ ನಿಮ್ಮ ಸರ್ಕಾರ ಇದ್ದಾಗಲೇ ಇದನ್ನು ಮಾಡಿದ್ದರು. ಆಗ ನೀವು ಎಲ್ಲಿ ಹೋಗಿದ್ದೀರಿ? ಮಾನ್ಯ ಕುಮಾರಸ್ವಾಮಿಯವರು ಆಗ ಮುಖ್ಯಮಂತ್ರಿಗಳಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸದರಿ ವಿಷಯವಾಗಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿಲ್ಲ. ವಿಷಯವನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–**ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದರಿ ಪ್ರಕಟಣೆಯನ್ನು ವಾಪಸ್ಸು ತೆಗೆದುಕೊಂಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಇದರ ಬಗ್ಗೆ ರಾಜಕೀಯ ಮಾಡಿದರು. ಆದರೆ ಇವತ್ತು ಮುಖ್ಯಮಂತ್ರಿಗಳು . . .

(ಗೊಂದಲ)

**ಸಭಾಪತಿಯವರು:–** ಆ ವಿಷಯ ಈಗ ಬೇಡ. ನನಗೆ ಸದನ ನಡೆಸುವುದಕ್ಕೆ ಸಹಕರಿಸಿ. ನೀವು ಹಿರಿಯ ಸದಸ್ಯರಾಗಿದ್ದೀರಿ. ಅನುಮತಿ ಇಲ್ಲದೇ ಮಾತನಾಡಿದರೆ ನೀವು ಮಾತನಾಡುತ್ತಿರುವುದನ್ನು ದಾಖಲಿಸಿಕೊಳ್ಳಬೇಡಿ ಎಂದು ಹೇಳಬೇಕಾಗುತ್ತದೆ. ಅನುಮತಿ ಇಲ್ಲದೇ ಮಾತನಾಡಬೇಡಿ. ಈ ಪದ್ಧತಿ ಒಳ್ಳೆಯದಲ್ಲ.

(ಗೊಂದಲ)

**ಶ್ರೀ ಬಸನಗೌಡ ಆರ್.ಪಾಟೀಲ (ಯತ್ನಾಳ್):–** ಇಂತಹ ಕಾನೂನುಗಳನ್ನು ತರುವ ಪ್ರಯತ್ನ ಮಾಡಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ೞ.ಪ್ರಶ್ನೋತ್ತರಗಳು**

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಸಭಾಪತಿಯವರು:–** ನೀವೇನು ಭಾಷಣವನ್ನೇ ಮಾಡುತ್ತೀರಾ? ದಯವಿಟ್ಟು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ. ಮಾನ್ಯ ಬಿ.ಜೆ. ಪುಟ್ಟಸ್ವಾಮಿಯವರು ಕೇಳಿರುವ ಪ್ರಶ್ನೆ ಸಂಖ್ಯೆ ೨೯೩ಕ್ಕೆ ಕಾಲಾವಕಾಶ ಕೇಳಿದ್ದಾರೆ. ಮುಂದಿನ ಪಟ್ಟಿಯಲ್ಲಿ ಇದನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾವಾಗ ಉತ್ತರ ಕೊಡುತ್ತಾರೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-**ಮಾನ್ಯ ಸಭಾಪತಿಯವರೇ, 10 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಎಷ್ಟು, ಕೇಂದ್ರ ಸರ್ಕಾರದ ತೆರಿಗೆ ಪಾಲಿನಲ್ಲಿ ನಮ್ಮ ಪಾಲು ಎಷ್ಟು ಎಂಬ ಬಗ್ಗೆ ಪ್ರಶ್ನೆ ಕೇಳಿದ್ದಾರೆ. 10 ವರ್ಷದ ಮಾಹಿತಿ ಸಂಗ್ರಹ ಮಾಡಬೇಕಿದೆ. ಅದಕ್ಕೋಸ್ಕರ ಸ್ವಲ್ಪ ಸಮಯ ಬೇಕಾಗಿದೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಸಂಖ್ಯೆ 284 ಮಾನ್ಯ ಚೌಡರೆಡ್ಡಿ ತೂಪಲ್ಲಿ ಅವರದ್ದು. ಅವರು ಸದನಕ್ಕೆ ಬಂದಿಲ್ಲ. ಮುಂದಿನ ಪ್ರಶ್ನೆ ಸಂಖ್ಯೆ: 251 ಮಾನ್ಯ ಪಿ.ಆರ್.ರಮೇಶ್ ಅವರದ್ದು. ಇವರ ಪ್ರಶ್ನೆಗೆ ಮಾನ್ಯ ಸಚಿವರೂ ಸಹ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಯಾವತ್ತು ಉತ್ತರ ಕೊಡುತ್ತಾರೆಂದು ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಲಿ.

**ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ವಿವರಗಳನ್ನು ಕೇಳಿದ್ದಾರೆ. ಆದಷ್ಟು ಬೇಗ ಆ ಮಾಹಿತಿಗಳನ್ನು ತರಿಸಿ ಉತ್ತರ ಕೊಡುತ್ತೇನೆ.

( ಈ ಹಂತದಲ್ಲಿ ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ಸದನಕ್ಕೆ ಬಂದರು)

**ಸಭಾಪತಿಯವರು:-** ನಾನು ತಮ್ಮ ಹೆಸರನ್ನು ಕರೆದೆ. ನೀವು ಬಂದಿರಲಿಲ್ಲ. ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ಗೌರವಾನ್ವಿತ ಸದಸ್ಯರಲ್ಲಿ ಒಂದು ವಿಚಾರವನ್ನು ಮನವಿ ಮಾಡಿಕೊಳ್ಳ ಬಯಸುತ್ತೇನೆ. ಸಭೆ ನಡೆಸಬೇಕಾದರೆ, ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಕೆಲವು ಘಟನಾವಳಿಗಳು ನಡೆಯುತ್ತವೆ. ಅದಕ್ಕೆ ನಾವು ಅವಕಾಶ ಕೊಡುತ್ತೇವೆ. ತಕ್ಷಣ ನಾವು ನಮ್ಮ ಜವಾಬ್ದಾರಿ ಅರ್ಥ ಮಾಡಿಕೊಂಡು, ಮುಂದಿನ ವಿಷಯ ಯಾವುದು ಬರಬಹುದು, ಯಾರ ಪ್ರಶ್ನೆ ಬರಬಹುದು ಎಂಬ ಬಗ್ಗೆ ತಿಳಿದುಕೊಳ್ಳಬೇಕು. ನಿನ್ನೆಯೋ ಅಥವಾ ಮೊನ್ನೆಯೋ ಹಿರಿಯ ಸದಸ್ಯರಾದ ಮಾನ್ಯ ಮೋಟಮ್ಮನವರು ಬರುವುದು ತಡವಾಯಿತು. ಪ್ರಶ್ನೆ ಕೇಳಲು ಅವರ ಹೆಸರನ್ನು ಕರೆದಾಗ ಅವರು ಇರಲಿಲ್ಲವಾದ್ದರಿಂದ, ಆಬ್ಸೆಂಟ್ ಎಂದು ಡಿಕ್ಲೇರ್ ಮಾಡಿಬಿಟ್ಟೆ. ಅವರು ಸದನಕ್ಕೆ ಬಂದ ನಂತರ ನನಗೆ ಒಂದು ಚೀಟಿ ಕಳುಹಿಸಿ, ಇನ್ನೂ ಪ್ರಶ್ನೋತ್ತರ ಅವಧಿ ನಡೆಯುತ್ತಿದೆ, ನಾನು ಬರುವುದು ಸ್ವಲ್ಪ ತಡವಾಯಿತು, ನನಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದರು. ನಾನು, ದಯವಿಟ್ಟು ಕ್ಷಮಿಸಿ ಅದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದೆ. ಈಗ ಅವರು ನನ್ನ ಮುಖ ನೋಡುತ್ತಿದ್ದಾರೆ. ಆಬ್ಸೆಂಟ್ ಎಂದು ಡಿಕ್ಲೇರ್ ಮಾಡಿದವರ ಪ್ರಶ್ನೆಯನ್ನು ಕೇಳಲು ಇವತ್ತು ಹೇಗೆ ಅವಕಾಶ ಮಾಡಿಕೊಡುತ್ತೀರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬ ಭಾವದಿಂದ ಅವರ ಕಣ್ಣುಗಳಲ್ಲೇ ಪ್ರಶ್ನೆ ಕೇಳುತ್ತಿದ್ದಾರೆ. ಅವರೇನು ಈಗ ನನಗೆ ಪ್ರಶ್ನೆ ಮಾಡಲಿಲ್ಲ, ಆದರೆ ಅವರ ನೋಟದ ಭಾವನೆ ಅದೇ ಆಗಿದೆ. ಈಗ ನಾನು ಅವರಿಗೆ ಏನು ಉತ್ತರ ಕೊಡಬೇಕು ಎಂದು ಗೊತ್ತಾಗುತ್ತಿಲ್ಲ. ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೇ ಈಗ ದಯವಿಟ್ಟು ಕುಳಿತುಕೊಳ್ಳಿ. ನಂತರ ನೋಡೋಣ.

ಮಾನ್ಯ ವಿ.ಸೋಮಣ್ಣ ಅವರ ಪರವಾಗಿ ಪ್ರಶ್ನೆ ಸಂಖ್ಯೆ:254 ಅನ್ನು ಮಾನ್ಯ ಸೋಮಣ್ಣ ಮ.ಬೇವಿನಮರದ ಅವರು ಕೇಳಬೇಕಾಗಿತ್ತು. ಆದರೆ ಅವರೂ ಕೂಡ ಅನುಪಸ್ಥಿತರಿದ್ದಾರೆ. ಮುಂದಿನ ಪ್ರಶ್ನೆ ಸಂಖ್ಯೆ 215 ಮಾನ್ಯ ಅಮರನಾಥ ಪಾಟೀಲ್ ಅವರದ್ದು. ಇವರ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ನೀವು ನಮ್ಮ ರಕ್ಷಣೆಗೆ ಬರಬೇಕು. ಈಗೇನು ಪ್ರಶ್ನೆ ಕೇಳಿದ್ದೇನೆಯೋ ಅಕ್ಷರಶಃ 2014ರಿಂದಲೂ ಅದನ್ನೇ ಕೇಳುತ್ತಾ ಬಂದಿದ್ದೇನೆ. ಬೇಕಾದರೆ ದಾಖಲೆಗಳನ್ನು ಪರಿಶೀಲಿಸಬಹುದು. 371 (ಜೆ)ರ ಅನ್ವಯ ಖಾಲಿ ಇರುವ ಹುದ್ದೆಗಳು ಏಕೆ ಭರ್ತಿಯಾಗಿಲ್ಲ ಎಂದು ಕೇಳಿದ್ದೇನೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸಲು ಇನ್ನೂ ಕೆಲವು ವಿವರಗಳನ್ನು ಸಂಗ್ರಹ ಮಾಡಬೇಕಿದೆ. ಬಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ಉತ್ತರ ಒದಗಿಸಿಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್**:- ಇವರ ಮಾತಿನಲ್ಲಿ ನನಗೆ ನಂಬಿಕೆ ಇಲ್ಲ. ಮಾನ್ಯ ಸಭಾಪತಿಯವರೇ, ನೀವು ನಮ್ಮ ರಕ್ಷಣೆಗೆ ಬರಬೇಕು. ಹಿಂದಿನ ಸಲ ಪ್ರಶ್ನೆ ಕೇಳಿದ್ದಾಗಲೂ, ಉತ್ತರವನ್ನು ಮನೆಗೆ ಕಳುಹಿಸಿ ಕೊಡುತ್ತೇವೆ ಎಂದು ಹೇಳಿದ್ದರು.

(ಈ ಹಂತದಲ್ಲಿ ಮಾನ್ಯ ಅಮರನಾಥ ಪಾಟೀಲ್‌ರವರು ಬಾವಿಯೊಳಗೆ ಧರಣಿ ಕುಳಿತುಕೊಂಡರು)

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ಉತ್ತರ ಒದಗಿಸಿಕೊಡುತ್ತೇವೆ. ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ.

**ಸಭಾಪತಿಯವರು**:- ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

(ಮುಂದು . . .)

ಚುಕ್ಕೆ ಪ್ರಶ್ನೆ ಸಂಖ್ಯೆ:243

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಲಗತ್ತಿಸಲಾಗಿದೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮಾನ್ಯ ಎನ್. ಅಪ್ಪಾಜಿಗೌಡರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಎಲ್ಲೋ ಒಂದು ಕಡೆ ಅಧಿಕಾರಿಗಳು ಶಾಮೀಲಾಗಿ ಸರ್ಕಾರದ ಆಶಯಕ್ಕೆ ತುಂಬಾ ಅಡ್ಡಿ ಬರುತ್ತಾರೆ ಎನ್ನುವುದಕ್ಕೆ ಇದೊಂದು ಜ್ವಲಂತ ಉದಾಹರಣೆಯಾಗಿದೆ. ಮಾನ್ಯ ಸಚಿವರು ಉತ್ತರವನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಆ ಉತ್ತರವನ್ನು ನೋಡಬೇಕು. 2010 ರಲ್ಲಿ ಒಟ್ಟು 4 ಎಕರೆ 12 ಗುಂಟೆ ಜಮೀನಿನ ಪೈಕಿ 3 ಎಕರೆ 32 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಮಾನ್ಯ ಸಚಿವರು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. 1 ಎಕರೆ 16 ಗುಂಟೆ ಜಮೀನಿಗೆ ಒಟ್ಟು 1,12,00,000 ರೂಪಾಯಿಗಳ ಪರಿಹಾರವನ್ನು ಕೊಡುತ್ತಾರೆ. ಉಳಿದಿರುವುದನ್ನು 40:60 ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಕೊಡುವುದಕ್ಕೆ ಅವರು ಅನುಮತಿಯನ್ನು ಕೊಡುತ್ತಾರೆ. ಆಮೇಲೆ 2015 ರವರೆಗೆ ಏನು ಮಾಡುವುದಿಲ್ಲ. 2015 ರಲ್ಲಿ ಸರ್ಕಾರ ಕೊಟ್ಟಂಥ ರೂ.1,12,00,000 ರೂಪಾಯಿಗಳನ್ನೇ ಬಂಡವಾಳವನ್ನಾಗಿಟ್ಟುಕೊಂಡು ಅವರು ಕೋರ್ಟ್‌ಗೆ ಹೋಗುತ್ತಾರೆ. ಕೋರ್ಟ್‌ಗೆ ಹೋಗುವವರೆಗೂ ಬಡಾವಣೆಯನ್ನು ಅಭಿವೃದ್ಧಿ ಮಾಡುವುದಿಲ್ಲ. ಅದು ಸರ್ಕಾರದ ಜವಾಬ್ದಾರಿಯಲ್ಲಿರುತ್ತದೆ. ಆದರೂ ಬಡಾವಣೆಯನ್ನು ಅಭಿವೃದ್ಧಿ ಮಾಡುವುದಿಲ್ಲ. ರೂ.1,12,00,000 ಹಣವನ್ನು ಕೊಟ್ಟಿದ್ದಾರೆ. ಮಧ್ಯೆದಲ್ಲಿ ಕೋರ್ಟ್‌ನಲ್ಲಿ ಏನು ತೀರ್ಮಾನವಾಗುತ್ತದೆ ಇಡೀ ಜಮೀನನ್ನು ಅವರಿಗೆ ವಾಪಸ್ ಕೊಡುವುದು ಎಂದು ತೀರ್ಮಾನವಾಗುತ್ತದೆ. ಅಧಿಕಾರಿಗಳು ಏನು ಮಾಡುತ್ತಿದ್ದರು? ರೈತ ಒಪ್ಪಿಗೆ ಕೊಟ್ಟಿದ್ದಾನೆ. ರೂ. 1,12,00,000 ಹಣವನ್ನು ತೆಗೆದುಕೊಂಡಿದ್ದಾನೆ. ಇನ್ನು 3 ಎಕರೆ 12 ಗುಂಟೆ ಜಮೀನನ್ನು 40:60 ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ತೆಗೆದುಕೊಳ್ಳುವುದಕ್ಕೆ ಆತ ಒಪ್ಪಿದ್ದಾನೆ. ಎಲ್ಲೋ ಕಾನೂನು ಸಲಹೆಗಾರರು, ಅಧಿಕಾರಿಗಳು ಶಾಮೀಲಾಗಿ ಇಡೀ ಜಮೀನಿಗೆ ಪರಿಹಾರವನ್ನು ಕೊಟ್ಟಿದ್ದರೂ ವಾಪಸ್ ತೆಗೆದುಕೊಳ್ಳುವಂತಹ ತೀರ್ಮಾನ ಇಲ್ಲಿ ಆಗಿದೆ. ಈಗ ಅಪೀಲು ಹೋಗಿದ್ದಾರೆ. ಇದು ಒಂದು ಸ್ಯಾಂಪಲ್ ಅಷ್ಟೆ. ಈ ತರಹದ ಪ್ರಕರಣಗಳು ಅಲ್ಲಿ ಪುನರಾವರ್ತನೆಯಾಗುತ್ತಿವೆ. ಅಧಿಕಾರಿಗಳೇ BDA (Bengaluru Development Authority) ನಲ್ಲಿ ನಿಂತು ಇಡೀ ಆ ಬಡಾವಣೆಯ ಯೋಜನೆಯನ್ನು ಮೂಲೆಗೆ ಸೇರಿಸುವ ಕೆಲಸ ಮಾಡುತ್ತಿದ್ದಾರೆ. ರೈತ ಒಪ್ಪಿಗೆ ಕೊಟ್ಟಿದ್ದಾನೆ, 1 ಎಕರೆ 16 ಗುಂಟೆ ಜಮೀನಿಗೆ 1,12,00,000 ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. 40:60 ರ ಅನುಪಾತದ ಬದಲಾಗಿ ಇಡೀ ಜಮೀನನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ನಿರ್ಧಾರ ಮಾಡುವಲ್ಲಿ ಅಧಿಕಾರಿಗಳು ಸಹಕರಿಸಿದ್ದಾರೆ. ಇನ್ನು ಬಡಾವಣೆ ಎಲ್ಲಿ ಆಗುತ್ತದೆ, ಯೋಜನೆ ಎಲ್ಲಿ ಪೂರ್ಣವಾಗುತ್ತದೆ, ಅರ್ಜಿ ಹಾಕಿಕೊಂಡು ಕಾಯುತ್ತಾ ಕುಳಿತಿರುವವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗತಿ ಏನಾಗಬೇಕು? ಈ ವಿಚಾರದ ಬಗ್ಗೆ ಸರ್ಕಾರ ಏನು ಕ್ರಮ ಜರುಗಿಸುತ್ತದೆ, ಏನು ನ್ಯಾಯ ಕೊಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, 2010 ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಒಟ್ಟು 4 ಎಕರೆ 12 ಗುಂಟೆ ಜಮೀನಿನ ಪೈಕಿ 3 ಎಕರೆ 32 ಗುಂಟೆ ಜಮೀನನ್ನು ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. 1 ಎಕರೆ 16 ಗುಂಟೆಗೆ ಶೇಕಡ 45 ರಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ಉಳಿದಿರುವುದಕ್ಕೆ 40:60 ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ತೆಗೆದುಕೊಳ್ಳುವುದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದಾರೆ. ನಂತರ ಇಡೀ ಕೆಂಪೇಗೌಡ ಬಡಾವಣೆ lake ಆಗಿದೆ ಎಂದು ಕೋರ್ಟ್‌ನಿಂದ ಆದೇಶ ಬರುತ್ತದೆ. Single Judge Bench ಆದೇಶವನ್ನು ರದ್ದು ಮಾಡುತ್ತದೆ. ನಂತರ BDA ರವರು ಉಚ್ಛ ನ್ಯಾಯಾಲಯಕ್ಕೆ ಅಪೀಲು ಹೋಗಿ Single Judge Bench ಏನು ತಡೆಯಾಜ್ಞೆ ಹೊರಡಿಸಿದ್ದರು ಅದನ್ನು ತೆರವುಗೊಳಸಲಾಯಿತು. ನಂತರ ಏನಾಗುತ್ತದೆಂದರೆ, ಈ ಜಮೀನಿನವರೇ individual ಆಗಿ ಹೋಗಿ ಆ ಸಮಯದಲ್ಲಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದಿದ್ದಾರೆ. ಆ ತರಹ individual ಆಗಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದಿರುವುದಕ್ಕೆ ನಾವು ಈಗ ಅಪೀಲು ಹಾಕಿ ತಡೆಯಾಜ್ಞೆಯನ್ನು ತೆರವುಗೊಳಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** Individual ಆಗಿ ತೆಗೆದುಕೊಂಡು ಬರುವುದಕ್ಕೆ ನಿಮ್ಮ ಅಧಿಕಾರಿಗಳು ಸಹಕಾರ ನೀಡಿದ್ದಾರೆ. ನೀವು ಹಣ ಕೊಟ್ಟಿರುವುದಕ್ಕೆ ಅವನು ಒಪ್ಪಿಗೆ ಕೊಟ್ಟಿದ್ದಾನೆ. ಅವನು ಮತ್ತೆ ಕೋರ್ಟ್‌ಗೆ 2015 ರಲ್ಲಿ ಹೋಗಿದ್ದಾನೆ. 2012 ರಲ್ಲಿ ಎಲ್ಲಾ ವ್ಯವಹಾರ ಮುಗಿದಿದೆ. ಇದು ಕೋರ್ಟ್‌ಗೆ ಏಕೆ ಹೋಯಿತು?

**ಶ್ರೀ ಕೆ.ಜೆ.ಜಾರ್ಜ್:-** ಇದು ನಮ್ಮ ಕಾಲದಲ್ಲಿ ಆಗಿರುವಂಥದ್ದಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** 2015 ಕ್ಕೆ ನಿಮ್ಮ ಕಾಲದಲ್ಲೇ ಆಗಿರುವುದು.

**ಶ್ರೀ ಕೆ.ಜೆ.ಜಾರ್ಜ್:-** ನಮ್ಮ ಕಾಲದಲ್ಲಿ ಅಪೀಲು ಹಾಕಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನೀವು ಮಾಹಿತಿ ಸರಿಯಾಗಿ ನೋಡಿ ಉತ್ತರವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಜೆ.ಜಾರ್ಜ್**:- ಉತ್ತರ ಕೊಟ್ಟಿರುವುದು ಸರಿಯಾಗಿದೆ. ಈಗ ಅದು ಕೋರ್ಟ್ ಮುಂದೆ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, 'ಶ್ರೀ ರೇವಣ್ಣ ಮತ್ತು ಇತರರು ಪ್ರಾಧಿಕಾರದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:20159/2015 ನ್ನು ದಾಖಲಿಸಿದ್ದು, ದಿನಾಂಕ:05.04.2016 ರಂದು ಮಾನ್ಯ ನ್ಯಾಯಾಲಯವು ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಪಡಿಸಿರುತ್ತದೆ' ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್**:- ಮಾನ್ಯ ಸಭಾಪತಿಯವರೇ, ಈಗ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಕೋರ್ಟ್‌ನಿಂದ ಆದೇಶ ಬಂದ ಮೇಲೆ ನಾವು ಕೋರ್ಟ್‌ನಲ್ಲಿ ವಾದ ಮಾಡಿದ್ದೇವೆ. ಈಗ ಅದಕ್ಕೆ ಅಪೀಲು ಹಾಕಿದ್ದೇವೆ. ಆ ಜಮೀನನ್ನು ನಾವು ತೆಗೆದುಕೊಳ್ಳುತ್ತೇವೆ, ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿಲ್ಲ. ಈಗ ಅಪೀಲು ಹಾಕಿದ್ದೇವೆ, stay vacate ಆದಮೇಲೆ ಅದನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಅಧಿಕಾರಿಗಳೇ ಶಾಮೀಲಾಗಿ ಅವರನ್ನು ಕೋರ್ಟ್‌ಗೆ ಕಳುಹಿಸಿ, ಅವರು ಸತ್ಯವನ್ನು ಕೋರ್ಟ್ ಮುಂದೆ ಹೇಳದೆ ಈ ತರಹದ ಪ್ರಕರಣಗಳು ಬಂದು ಇಡೀ ಯೋಜನೆ ನೆಲ ಕಚ್ಚುತ್ತಿದೆ. ಇದಕ್ಕೆ ಎಚ್ಚರಿಕೆ ವಹಿಸಿ ಅಂಥವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಲ್ಲವೆ? ರೂ.1,12,00,000 ಪರಿಹಾರ ಕೊಟ್ಟಿರುವುದು, 40:60 ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನ ಕೊಡುತ್ತೇವೆ ಎಂದು ಹೇಳಿರುವ commitment letter ನ್ನು ಕೋರ್ಟ್ ಗಮನಕ್ಕೆ ಏಕೆ ತರಲಿಲ್ಲ? ಕೋರ್ಟ್ ಗಮನಕ್ಕೆ ತಂದಿದ್ದರೆ ಈ ಪ್ರಕ್ರಿಯೆ ಕೈಬಿಡುವ ಆದೇಶ ಏಕೆ ಆಗುತ್ತಿತ್ತು?

**ಶ್ರೀ ಕೆ.ಜೆ.ಜಾರ್ಜ್**:- ಇದೊಂದೆ ಪ್ರಕರಣ ಅಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಈ ತರಹದ್ದು ನೂರಾರು ಪ್ರಕರಣಗಳಿವೆ. ನಾವು ನಿಮಗೆ ಸ್ಯಾಂಪಲ್ ಆಗಿ ಒಂದು ಪ್ರಕರಣವನ್ನು ಕೊಟ್ಟಿದ್ದೇವೆ ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಈ ತರಹದು ಕೋರ್ಟ್ ಆದೇಶದ ಪ್ರಕಾರ 700 ಎಕರೆಗೆ ಈಗಾಗಲೇ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಆ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾವು ಬಂದ ಮೇಲೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆದಷ್ಟು ಬೇಗ ತೆರವುಗೊಳಿಸಿ ಅದನ್ನು ನಮ್ಮ possession ಗೆ ತೆಗೆದುಕೊಂಡು ಹಂಚಿಕೆ ಮಾಡುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:261**

**ಸಭಾಪತಿಯವರು:-** ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಪ್ರಶ್ನೆಗೆ ಮಾನ್ಯ ಗೃಹ ಸಚಿವರು ಸಮಯ ಕೇಳಿದ್ದಾರೆ. ಮಾನ್ಯ ಗೃಹ ಸಚಿವರು ಏಕೆ ಸಮಯಾವಕಾಶ ಕೇಳಿದ್ದಾರೆಂದು ಹೇಳುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಿನ್ನೆ ಇದರ ಬಗ್ಗೆ ವಿಸ್ತೃತ ಚರ್ಚೆಯಾಗಿದೆ. ನಿನ್ನೆಯೆಲ್ಲಾ ಉತ್ತರ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರು ಏಕೆ ಕಾಲಾವಕಾಶ ಕೇಳಿದ್ದಾರೆಂದು ಹೇಳುತ್ತಾರೆ. ಮಾನ್ಯ ಗೃಹ ಸಚಿವರೇ, ಕಾಲಾವಕಾಶ ಏಕೆ ಬೇಕು ಎಂದು ಹೇಳಿ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ನಿನ್ನೆಯೇ ಬಹುತೇಕವಾಗಿ ಮುಖ್ಯವಾಗಿರುವುದನ್ನೆಲ್ಲಾ ಹೇಳಿದ್ದೇನೆ. 'ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಹಿಂದೂ ಸಂಘ ಪರಿವಾರ ಕಾರ್ಯಕರ್ತರ ಮೇಲೆ ಪದೇ ಪದೇ ಹಲ್ಲೆ ಮತ್ತು ಹತ್ಯೆಯಾಗುತ್ತಿರುವುದನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ' ಎಂದು ಪ್ರಶ್ನೆ ಕೇಳಿದ್ದಾರೆ. 'ಹಿಂದೂ ಸಂಘ ಪರಿವಾರ ಕಾರ್ಯಕರ್ತರ ಮೇಲೆ ಪದೇ ಪದೇ ಹಲ್ಲೆ' ಎಂದು ಹೇಳುತ್ತಿದ್ದಾರೆ. ಹಿಂದೂ ಸಂಘ ಪರಿವಾರ ಕಾರ್ಯಕರ್ತರು ಎಂದರೆ.....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಇದಕ್ಕೆ ಉತ್ತರ ಕೊಡುತ್ತಿದ್ದೀರೋ ಅಥವಾ ಸಮಯ ಏಕೆ ಬೇಕು ಎಂದು ಹೇಳುತ್ತಿದ್ದೀರೋ?

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಸಮಯ ಕೇಳುತ್ತಿದ್ದೇನೆಂದು ಹೇಳುತ್ತಿದ್ದೇನೆ. ಸಂಘ ಪರಿವಾರ ಎಂದರೆ ಶ್ರೀರಾಮಸೇನೆ, ವಿಶ್ವ ಹಿಂದೂ ಪರಿಷತ್,

ಹಿಂದೂ ಜಾಗರಣ ವೇದಿಕೆ, ಭಜರಂಗದಳ, ಆರ್.ಎಸ್.ಎಸ್., ಬರುತ್ತದೆ. ಇದರಲ್ಲಿ ಯಾವುದರಲ್ಲೂ ಅವರ ಮೆಂಬರ್‌ಶಿಪ್ ಇಲ್ಲ. ಸಾವು ಆದಂತಹ ಸಂದರ್ಭದಲ್ಲಿ ಯಾವುದು ಎಂಬುದು ನಮಗೆ ಹೇಗೆ ಗೊತ್ತಾಗುತ್ತದೆ? ಅದಕ್ಕೆ ಸಮಯವನ್ನು ಕೇಳಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಹಿಂದೂ ಸಂಘ ಪರಿವಾರ ಕಾರ್ಯಕರ್ತರ ಮೇಲೆ ಎಂದು ಕೇಳಿದ್ದೇನೆ.

**ಶ್ರೀ ರಾಮಲಿಂಗಾರೆಡ್ಡಿ**:- ಹಿಂದೂ ಸಂಘ ಪರಿವಾರ ಕಾರ್ಯಕರ್ತರು ಎಂದು ನಾವು identify ಮಾಡುವುದು ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ. Identify ಮಾಡದಿದ್ದರೆ ಅದಕ್ಕೇನು ಕ್ರಮ ತೆಗೆದುಕೊಳ್ಳುವುದಿಲ್ಲವೆ? ನಿನ್ನೆ ಒಂದು ಕೊಲೆಯಾಗಿದೆ. ನಿನ್ನೆ ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಎಲ್ಲವೂ ಸರಿಯಾಗಿದೆ, ಚೆನ್ನಾಗಿದೆ, percentage, ratio ಅನ್ನು ಬೇರೆ ರಾಜ್ಯಕ್ಕೆ ಹೋಲಿಕೆ ಮಾಡಿದ ಮೇಲೆ, ಉತ್ತರ ಕೊಡಬೇಕಾದರೆ ಮತ್ತೊಂದು ಕೊಲೆಯಾಗಿದೆ. ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಹೇಳುವುದಕ್ಕೆ ಸಮಯ ಏಕೆ ಬೇಕು?

**ಶ್ರೀ ರಾಮಲಿಂಗಾರೆಡ್ಡಿ**:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾಲ್ಕು ವರ್ಷಗಳಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಹಿಂದೂ ಸಂಘ ಪರಿವಾರ ಕಾರ್ಯಕರ್ತರ ಮೇಲೆ ಹಲ್ಲೆ ಮತ್ತು ಹತ್ಯೆ ಪ್ರಕರಣ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈ ಹಿಂದೂ ಸಂಘ ಪರಿವಾರ ಎಂದರೆ ಶ್ರೀರಾಮಸೇನೆ, VHP (Vishva Hindu Parishad), ಹಿಂದೂ ಜಾಗರಣ ವೇದಿಕೆ, ಭಜರಂಗದಳ, RSS (Rashtriya Swayamsevak Sangh) ಬರುತ್ತದೆ. ಇದರಲ್ಲಿ ಅವರ ಮೆಂಬರ್‌ಶಿಪ್ ಇಲ್ಲ. ಯಾರು ಯಾವ್ಯಾವುದು ಎಂದು ನಮಗೇನು ಗೊತ್ತಾಗುತ್ತದೆ? ದೂರು ಕೊಟ್ಟಾಗ ಅವರು ಹಿಂದೂ ಪರಿಷತ್, ಶ್ರೀರಾಮಸೇನೆ ಎಂದು ಹೇಳಿದಾಗ ನಮಗೆ ಗೊತ್ತಾಗುತ್ತದೆ. ಅದಕ್ಕೆ ಸ್ವಲ್ಪ ಸಮಯ ಬೇಕು ಎಂದು ಕೇಳಿದ್ದೇನೆ ಅಷ್ಟೆ.

**ಸಭಾಪತಿಯವರು**:- ಮಾನ್ಯ ಸಚಿವರೇ, ಮುಂದಿನ ವಾರ ಅದಕ್ಕೆ ಉತ್ತರ ಕೊಡುತ್ತೀರಾ?

**ಶ್ರೀ ರಾಮಲಿಂಗಾರೆಡ್ಡಿ**:- ಮುಂದಿನ ವಾರ ಉತ್ತರ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಿನ್ನೆ ಉತ್ತರ ಕೊಡಬೇಕಾದರೆ ಇದೇ ಸಂಗತಿಗಳನ್ನು ಮಾನ್ಯ ಸಚಿವರು ಉಲ್ಲೇಖ ಮಾಡಿದ್ದಾರೆ. ಹೆಸರು ಹೇಳಬಿಟ್ಟು ಯಾವ್ಯಾವುದೋ ಎಂದು ಹೇಳದ್ದಾರೆ. ಈಗ ನಮಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:-** ಗೊತ್ತಿಲ್ಲ ಎಂದು ಹೇಳಲಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮತ್ತೆ ನಿನ್ನೆ ಹೇಗೆ ಹೇಳಿದರು? 13 ಜನ ಕಾರ್ಯಕರ್ತರು ಈ ತರಹದವರು ಎಂದು ಹೇಳದ್ದಾರೆ. ನಿನ್ನೆ ಉತ್ತರ ಕೊಡಬೇಕಾದರೆ ಅವರ ಹತ್ತಿರ ಮಾಹಿತಿ ಇತ್ತು. ನಿನ್ನೆ 13 ಜನ ಯಾವ್ಯಾವ ಸಂಘದವರು ಎಂದು ಹೇಳಿದರು. ಇವತ್ತು ನಮ್ಮ ಹತ್ತಿರ ಮಾಹಿತಿ ಇಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ನಿನ್ನೆ ಉತ್ತರವನ್ನು ಬೇಕಾದರೆ ಈಗಲೇ ಕೊಟ್ಟುಬಿಡುತ್ತೇನೆ. ಆದರೆ ನಿಮಗೆ ನಿರ್ದಿಷ್ಟವಾಗಿ ಉತ್ತರವನ್ನು ಕೊಡುವುದಕ್ಕೆ ಸಮಯ ಕೇಳಲಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅದನ್ನು ನಿಯಂತ್ರಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ.

**ಶ್ರೀ ರಾಮಲಿಂಗಾರೆಡ್ಡಿ:-** ನಾನು ಅದನ್ನು ಹೇಳುತ್ತೇನೆ.

**ಸಭಾಪತಿಯವರು:-** ಮುಂದಿನ ವಾರ ಲಿಸ್ಟ್ ಆದಾಗ ಈ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

<u>ಚುಕ್ಕೆ ಪ್ರಶ್ನೆ ಸಂಖ್ಯೆ:247</u>
ಉತ್ತರ ಲಗತ್ತಿಸಲಾಗಿದೆ

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಜನರ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ಎರಡು ದಿನಗಳಿಂದ ನಾವು ಕಾನೂನು ಸುವ್ಯವಸ್ಥೆಯ ಬಗ್ಗೆ ಬಹಳ ಚರ್ಚೆ ಮಾಡಿದ್ದೇವೆ. ಆದರೂ ಕೂಡ ದಿನನಿತ್ಯ ಈ ರಾಜ್ಯ ಒಂದು ರೀತಿ ಅಪರಾಧಿಗಳ ತವರು ಮನೆಯಾಗುತ್ತಿದೆ. ಇವತ್ತು ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಅದನ್ನು ನೋಡಿದಾಗ ಬೆಂಗಳೂರು ನಗರದಲ್ಲಿ ಜೀವಗಳಿಗೆ ಬೆಲೆ ಇಲ್ಲವೆ? ಬಾರ್ ನಡೆಸಲು ಪರವಾನಗಿ ನೀಡುವುದರಲ್ಲಿ ಅಬಕಾರಿ ಇಲಾಖೆಯ ಮಾನದಂಡ ಏನಿದೆ ಅದನ್ನು ಕೂಡ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ ಗೃಹ ಇಲಾಖೆಗೆ ಗುರುತರವಾದ ಜವಾಬ್ದಾರಿಯೂ ಕೂಡ ಇದೆ. ಇವತ್ತು ಬಾರ್ ಪರವಾನಗಿ ನೀಡುವಲ್ಲಿ ಅಧಿಕಾರಿಗಳು ಪರಿಶೀಲನೆ ಮಾಡದೆ ಈ ಕಟ್ಟಡ ಬಾರ್ ನಡೆಸಲು ಯೋಗ್ಯತೆ ಇದೆಯೇ, ಅಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳವೆಯೇ ಎಂಬುದನ್ನು ಕೂಡ ಪರಿಶೀಲನೆ ಮಾಡದೆ ಪರವಾನಗಿಯನ್ನು ಕೊಟ್ಟಿದ್ದಾರೆ. ಇವತ್ತು ಬಡ ಜೀವಗಳನ್ನು ಉಳಿಸಬಹುದಾಗಿತ್ತು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಜೀವಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಜೊತೆಗೆ ಪರಿಹಾರವನ್ನು ಈ ವ್ಯಾಪ್ತಿಯಲ್ಲಿ ಕೊಡುವುದಕ್ಕೆ ಬರುವುದಿಲ್ಲವೆಂದು ಉತ್ತರದಲ್ಲಿ ಕೊಡಲಾಗಿದೆ. ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಜಾರ್ಜ್‌ರವರು ಆ ಸ್ಥಳಕ್ಕೆ ಭೇಟಿ ನೀಡಿ ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಘೋಷಣೆ ಮಾಡಿ ಒಂದು ತಿಂಗಳ ಕಾಲ ಆಗಿದೆ.

(ಮುಂದು)

**ಶ್ರೀ ಟಿ.ಎ.ಶರವಣ(ಮುಂದು. . .)**

ಆದರೆ, ಇಲ್ಲಿಯವರೆಗೂ ಕೂಡ ಇದರ ಬಗ್ಗೆ ಯಾರೂ ಕೂಡ ಚಕಾರವೆತ್ತಿಲ್ಲ. ಆ ನೊಂದ ಕುಟುಂಬಗಳಿಗೆ ಯಾವುದೇ ರೀತಿಯ ಪರಿಹಾರವನ್ನು ನೀಡಿಲ್ಲ. ಮತ್ತೆ ನಿಮ್ಮ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಇಂತಹ ಒಂದು ದುರಂತ ನಡೆದಿದೆ. ಇನ್ನು ಮುಂದಾದರೂ ಇಂತಹ ಅವಾಂತರಗಳು ನಡೆಯದೇ ನಿಮ್ಮ ಸರ್ಕಾರ ಈ ಅಧಿಕಾರಿಗಳ ಮೇಲೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಇಂತಹ ಘಟನೆಗಳು ಮತ್ತೊಮ್ಮೆ ಮರುಕಳಿಸದಂತೆ ತಾವು ನೋಡಿಕೊಳ್ಳಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಬಾರ್‌ಗಳಿಗೆ license ಕೊಟ್ಟು 30-40 ವರ್ಷಗಳಾಗಿದೆ. ಆ ಬಿಲ್ಡಿಂಗ್‌ಗಳು ಕೂಡ 30-40 ವರ್ಷಗಳ ಬಿಲ್ಡಿಂಗ್‌ಗಳಾಗಿವೆ. ಅವುಗಳು ಹಳೆಯ ದೊಡ್ಡ ಬಿಲ್ಡಿಂಗ್‌ಗಳೇನೂ ಅಲ್ಲ. License ಕೊಡುವುದು ಅಬಕಾರಿ ಇಲಾಖೆಯವರು. License ಅನ್ನು ಪ್ರತಿವರ್ಷ ನವೀಕರಣ ಮಾಡುತ್ತಿರುತ್ತಾರೆ. ಮತ್ತೆ ಅದೇ ರೀತಿಯಲ್ಲಿ ಅಲ್ಲಿ ರೆಸ್ಟೋರೆಂಟ್ ಇರುತ್ತದೆ. ರೆಸ್ಟೋರೆಂಟ್‌ಗೆ ಬಿಬಿಎಂಪಿಯವರು ನವೀಕರಣ ಮಾಡುತ್ತಿರುತ್ತಾರೆ. ಮತ್ತೆ ಅವುಗಳಿಗೆ ಒಂದು ಸಮಯ ನಿಗದಿ ಮಾಡಿರುತ್ತಾರೆ. 11 ಗಂಟೆಯಿಂದ ಬಾರ್‌ಗಳನ್ನು open ಮಾಡಬೇಕು ಅಥವಾ ಬೆಳಿಗ್ಗೆ 10 ಗಂಟೆಗೆ ತೆಗೆದರೆ ರಾತ್ರಿ 11-00 ಗಂಟೆಗೆ close ಮಾಡಬೇಕು. ಈ ರೀತಿಯಲ್ಲಿ ಅವುಗಳಿಗೆ ನಿಗದಿತ ಸಮಯವಿರುತ್ತದೆ. ನಿಗದಿತ ಸಮಯಕ್ಕೆ ತೆಗೆಯಬೇಕು, ನಿಗದಿತ ಸಮಯಕ್ಕೆ ಮುಚ್ಚಬೇಕೆಂದು ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ವಿಚಾರದಲ್ಲಿ ನಾನೇ ಹಿರಿಯ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಕೊಟ್ಟಿದ್ದೇನೆ. ಜಿಲ್ಲೆ, ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ವೈನ್ ಶಾಪ್‌ಗಳು, ಬಾರ್‌ಗಳು, ರೆಸ್ಟೋರೆಂಟ್‌ಗಳು ನಿಗದಿತ ಅವಧಿಗಿಂತ ಮುಂಚಿತವಾಗಿ ತೆರೆಯುವ ಅಥವಾ ನಿಗದಿತ ಅವಧಿಗಿಂತ ಹೆಚ್ಚಿನ ಸಮಯ ತೆಗೆದಿರುವವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸ್ಪಷ್ಟಪಡಿಸಿದ್ದೇನೆ. ಅದರ ಪ್ರಕಾರ 206 ವೈನ್‌ಶಾಪ್‌ಗಳು ಮತ್ತು ಬಾರ್‌ಗಳ ಮೇಲೆ ಈ ನಾಲ್ಕು ತಿಂಗಳುಗಳಲ್ಲಿ ಕೇಸ್‌ಗಳು ನೋಂದಣಿಯಾಗಿವೆ. ಕಲಂ 21 ಅಬಕಾರಿ ನಿಯಮದ ಪ್ರಕಾರ 158 ವೈನ್‌ಶಾಪ್‌ಗಳು ಮತ್ತು ಬಾರ್‌ಗಳನ್ನು close ಕೂಡ ಮಾಡಿದ್ದೇವೆ. ಮೊದಲು ಪೊಲೀಸ್‌ನವರು ಈ ರೀತಿಯ ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಈಗ ಅಬಕಾರಿ ಇಲಾಖೆಯವರು ತೆಗೆದುಕೊಳ್ಳುತ್ತಾರೆ, ನಮ್ಮ ಇಲಾಖೆಯಿಂದಲೂ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದು ಅಗ್ನಿಶಾಮಕ ದಳಕ್ಕೆ ಸಂಬಂಧಪಟ್ಟಿದ್ದಲ್ಲ. 15 ಮೀಟರ್‌ಗಿಂತಲೂ ಮೇಲೆ ಇರತಕ್ಕಂತಹ ಕಟ್ಟಡಗಳು ಅಗ್ನಿಶಾಮಕ ದಳದ ವ್ಯಾಪ್ತಿಗೆ ಬರುತ್ತವೆ. ಅಂದು ನಾನು ಕೂಡ ಅಲ್ಲಿಗೆ ಹೋಗಿದ್ದೆ. ಅಲ್ಲಿ ಕೆಲಸ ಮಾಡುವ 5 ಜನರು ಒಳಗಡೆ ಮಲಗಿಕೊಳ್ಳುತ್ತಾರೆ. Entrance ನಲ್ಲಿಯೇ ಬೆಂಕಿ ಬಿದ್ದು ಹೋಗಿದೆ. Short circuit ಆಗಿರಬಹುದು ಎಂದು ಮೇಲ್ನೋಟಕ್ಕೆ ಅನಿಸಿತು. ಆದರೆ, ಈ ಬಗ್ಗೆ ತನಿಖೆಯ ವರದಿ ಇನ್ನೂ ಬಂದಿಲ್ಲ. ಇದು ಮೇಲ್ನೋಟಕ್ಕೆ ಅನಿಸಿರುವುದಾಗಿದೆ. ಒಳಗಡೆ ಇದ್ದಂತಹವರು ಹೊಗೆ ಸುತ್ತಿಕೊಂಡಾಗ ಈ ರೀತಿ ಇಲ್ಲಿ short circuit ನಿಂದಾಗಿ ತೊಂದರೆಯಾಗಿದೆ ಎಂದು ಹೇಳಿ ಅವರುಗಳ ಸಂಬಂಧಿಕರಿಗೆ ಫೋನ್ ಮಾಡುತ್ತಾರೆ. ಸತ್ತು ಹೋದ ಹುಡುಗನೇ ಫೋನ್ ಮಾಡುತ್ತಾನೆ. ಅವರ ಮಾವನಿಗೆ ಫೋನ್ ಮಾಡುತ್ತಾನೆ. ಈ ರೀತಿ ಆಗಿದೆ ಎಂದು ಹೇಳಿ ಫೋನ್ ಮಾಡುತ್ತಾನೆ. ಅವರಿಗೆ ಏನಾಗಿದೆ ಎಂದರೆ entrance ನಲ್ಲಿಯೇ ಬೆಂಕಿ ಬಿದ್ದಿರುವುದರಿಂದ ಅವರುಗಳು ಆಚೆಗೆ ಬರಲಿಕ್ಕೆ ಆಗಿರುವುದಿಲ್ಲ. ಮೇಲುಗಡೆ ಹೋಗಿ ಬಾತ್‌ರೂಮ್‌ನಲ್ಲಿ ಸೇರಿಕೊಂಡಿದ್ದಾರೆ. ಅವರು ಉಸಿರುಗಟ್ಟಿ ಸತ್ತು ಹೋಗಿದ್ದಾರೆ. ಇಬ್ಬರಿಗೆ ಸುಟ್ಟು ಗಾಯಗಳಾಗಿ ತೀರಿ ಹೋಗಿರುತ್ತಾರೆ. ಅದಕ್ಕೆ ಪರಿಹಾರ ಕೊಡಬೇಕಾಗಿದ್ದು, ಕೊಡುತ್ತಾರೆ. ಅದಕ್ಕೆ ಏನೂ ಸಮಸ್ಯೆಯಿಲ್ಲ. ಅವರ ಕಡೆಯುವರು ಬಂದು ಈ ವಿಚಾರವಾಗಿ ಕೇಳಿದ್ದರೆ, ನಾನೇ pursue ಮಾಡಿ ಮಾಡಿಸಿಕೊಡುತ್ತಿದ್ದೆ. ಅವರ ಕಡೆಯವರು ಯಾರೂ ಬಂದಿಲ್ಲ. ಮತ್ತೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಮ್ಮ ಇಲಾಖೆಗಿಂತ ಅಬಕಾರಿ ಇಲಾಖೆ ಮತ್ತು ಕಾರ್ಪೊರೇಷನ್‌ರವರು ಇದಕ್ಕೆ ಅನುಮತಿ ಕೊಡುವವರಿದ್ದಾರೆ. ನಮ್ಮ ಪೊಲೀಸ್‌ನವರದ್ದು ಸಹ ಅಧಿಕಾರ ವ್ಯಾಪ್ತಿ ಇದೆ. ನೋಡಿ, 204 ಪ್ರಕರಣಗಳನ್ನು ನಾವು ಅವಧಿಗೆ ಮುಂಚೆ ಮತ್ತು ಅವಧಿಯಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಬಾರ್‌ಗಳ ಮೇಲೆ ಕೇಸ್‌ಗಳನ್ನು ಹಾಕಿ, ಅವುಗಳನ್ನು ಮುಚ್ಚಿಸಿದ್ದೇವೆ. 158 ಅಂಗಡಿಗಳನ್ನು close ಮಾಡಿಸಿದ್ದೇವೆ. ಈ ರೀತಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳುತ್ತಿರುವುದಕ್ಕೂ ಇದಕ್ಕೂ ಸಂಬಂಧವಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ಪರಿಹಾರ ಕೊಡುವ ಬಗ್ಗೆ ಕೇಳುತ್ತಿದ್ದಾರೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಪರಿಹಾರವನ್ನು ಕೊಡಿಸುತ್ತೇವೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಯಾವಾಗ ಪರಿಹಾರವನ್ನು ಕೊಡಿಸುತ್ತಾರೆಂದು ಸಚಿವರು ಹೇಳಬೇಕು.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರ ಕುಟುಂಬದವರು ಯಾರಾದರೂ ಬಂದು ಈ ಬಗ್ಗೆ ಕೇಳಬೇಕು.

**ಸಭಾಪತಿಯವರು:-** ಈ ಬಗ್ಗೆ ಅವರ ಕುಟುಂಬದವರು ಯಾರಾದರೂ ಬಂದು ಕೇಳಬೇಕು, ಆದರೆ, ಕೇಳಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದ್ದರಿಂದ, ಈ ಬಗ್ಗೆ ಯಾರನ್ನಾದರೂ ಕಳುಹಿಸಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅವರು ಬಂದು ಸರ್ಕಾರಕ್ಕೆ ಪತ್ರ ಸಹ ಕೊಟ್ಟಿದ್ದಾರೆ. ಮಾನ್ಯ ಸಚಿವರಾದ ಶ್ರೀಯುತ ಜಾರ್ಜ್ ರವರು ಈ ಬಗ್ಗೆ ಘೋಷಣೆ ಮಾಡಿ ಒಂದು ತಿಂಗಳಾಗಿದೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಮಾನ್ ಜಾರ್ಜ್‌ರವರು ಘೋಷಣೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಾನು ಸಹ ಅಲ್ಲಿಯೇ ಇದ್ದೆ. ಈ ವಿಚಾರದಲ್ಲಿ ಕಾರ್ಪೊರೇಷನ್ ಕಮೀಷನರ್‌ಗೆ ಅವರು ಸೂಚನೆಗಳನ್ನು ಕೊಟ್ಟಿದ್ದಾರೆ. ಅವರ ಸಂಬಂಧಿಕರು ಯಾರಾದರೂ ಬಂದಿದ್ದರೆ, ಇಷ್ಟೊತ್ತಿಗೆ ಅವರಿಗೆ ಪರಿಹಾರ ಸಿಕ್ಕುತ್ತಿತ್ತು.

**ಸಭಾಪತಿಯವರು:-** ಅವರ ಕಡೆಯವರು ಬಂದರೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ 5–6 ಗಂಟೆಗೆ ಕಳ್ಳ ವಹಿವಾಟು ನಡೆಯುತ್ತದೆ. ನಿಮ್ಮ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದು ಸಹ ಇಲ್ಲಿನ ಪ್ರಶ್ನೆಯಾಗಿದೆ. ತಾವು ನೋಡದೇ ಮಾತನಾಡಬೇಡಿ. ಸುಮ್ಮನೆ ಏನೋ ಹೇಳಬೇಡಿ.

**ಶ್ರೀ ರಾಮಲಿಂಗಾ ರೆಡ್ಡಿ:–** ಮಾನ್ಯ ಸಭಾಪತಿಯವರೇ, ರಾತ್ರಿ 1 ಗಂಟೆಯವರೆಗೂ ವೈನ್ ಶಾಪ್‌ಗೆ ಅನುಮತಿ ಇದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಗಮನಿಸಬೇಕು. ನನ್ನ ಉದ್ದೇಶ ಇಷ್ಟೆ. ಇವತ್ತು ಪರಿಹಾರವನ್ನು ಅವರ ಕುಟುಂಬದವರಿಗೆ ತುರ್ತಾಗಿ ಕೊಡಲಿಕ್ಕೆ ವ್ಯವಸ್ಥೆ ಮಾಡಿ. ಎರಡನೆಯದಾಗಿ, ಇಂತಹ ಬೆಂಕಿಯ ಘಟನೆಗಳು ಮರುಕಳಿಸದಂತೆ ಅಧಿಕಾರಿಗಳು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಹೇಳಬೇಕು. ಇಂತಹ ಘಟನೆ ಆಗಲಿಕ್ಕೆ ಅವಕಾಶ ಮಾಡಿಕೊಟ್ಟಿರುವ ಅಧಿಕಾರಿಗಳ ಮೇಲೆ ಕೂಡ ಕಠಿಣವಾದ ಕ್ರಮವನ್ನು ಮಂತ್ರಿಗಳು ತೆಗೆದುಕೊಳ್ಳಬೇಕು.

**ಶ್ರೀ ರಾಮಲಿಂಗಾ ರೆಡ್ಡಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರಕ್ಕೂ ನಡೆದಿರುವ ಘಟನೆಗೂ ಸಂಬಂಧವೇ ಇರುವುದಿಲ್ಲ. ಬಾರ್‌ನೊಳಗಡೆ ಬೀಗ ಹಾಕಿಕೊಂಡು ಅವರು ಒಳಗಡೆ ಮಲಗಿಕೊಳ್ಳುತ್ತಾರೆ. ಒಳಗಡೆ short circuit ಆದರೆ ಪೊಲೀಸ್‌ನವರು ಅದನ್ನು ಕಾಯಲಿಕ್ಕೆ ಆಗುತ್ತದೆಯೇ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈ ಘಟನೆ ಬೆಳಿಗ್ಗೆ 6 ಗಂಟೆಗೆ ಆಗಿರುವುದಾಗಿದೆ.

**ಶ್ರೀ ರಾಮಲಿಂಗಾ ರೆಡ್ಡಿ:–** ಅದು 6 ಗಂಟೆಗೆ ಆಗಲಿ, 4 ಗಂಟೆಗೆ ಆಗಲಿ, ಪೊಲೀಸ್‌ನವರು ಏನು ಮಾಡಲಿಕ್ಕೆ ಆಗುತ್ತದೆ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅದನ್ನೇ ನಾನು ಹೇಳುತ್ತಿರುವುದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪರಿಹಾರದ ವಿಚಾರವಾಗಿ ಕೇಳುತ್ತಿದ್ದಾರೆ.

**ಸಭಾಪತಿಯವರು:-** ಶ್ರೀಯುತ ಶ್ರೀಕಂಠೇಗೌಡರವರೆ, ಪರಿಹಾರವನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

(ಗೊಂದಲ)

**ಶ್ರೀ ರಾಮಲಿಂಗಾರೆಡ್ಡಿ:-** ಒಳಗಡೆ ಪೋಲೀಸ್‌ನವರೇನೂ ಕಾವಲು ಇರಲಿಕ್ಕೆ ಆಗುತ್ತದೆಯೇ? ಮಾನ್ಯ ಸದಸ್ಯರು ಏನು ಮಾತನಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಆಯಿತು, ಎಲ್ಲರೂ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀಯುತ ಸಂಕನೂರ ಅವರದ್ದಾಗಿದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಹೆಚ್ಚು ಮಾಹಿತಿಯನ್ನು ಕೊಡಬೇಕಾಗುತ್ತದೆ. ಆ ಮಾಹಿತಿಯನ್ನು ತರಿಸಬೇಕು. ಅದಕ್ಕೆ ಸಮಯ ಬೇಕಾಗಿದೆ. ಮುಂದಿನವಾರ ಮತ್ತೆ ಸದನ ಸೇರುತ್ತಿರುವುದರಿಂದ, ಆಗ ಈ ಬಗ್ಗೆ ಮಾಹಿತಿಯನ್ನು ಕೊಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈಗ ಏನು ರಾಜ್ಯದ ವಿವಿಧ ಇಲಾಖೆಗಳಲ್ಲಿ ವಿವಿಧ ಹುದ್ದೆಗಳು ಖಾಲಿ ಇವೆ, ಅವುಗಳನ್ನು ಯಾವಾಗ ತುಂಬುತ್ತಾರೆಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಎರಡು ವಾರಗಳ ಸಮಯ ಬೇಕೆಂದು ಪತ್ರವನ್ನು ಕೊಡಲಾಗಿದೆ. ನಾನು ಹೇಳುವುದಿಷ್ಟೆ. ಇವತ್ತು ಪತ್ರಿಕೆಯೊಳಗಡೆ ಬಂದಿದೆ. 6ನೇ ವೇತನ ಆಯೋಗಕ್ಕೆ 2.52 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ಹೇಳಿ ಅವರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ನನಗೆ ಕೊಡುವುದಿಲ್ಲವೆಂದರೆ ಹೇಗೆ ಮಾನ್ಯ ಸಭಾಪತಿಯವರೇ, ಇದು ತಪ್ಪು ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಏನು ಉತ್ತರ ಹೇಳಲಿ? ಶ್ರೀಯುತ ಸಂಕನೂರರವರು ಇಲ್ಲಿ ಗಮನಿಸಬೇಕು. ಪತ್ರಿಕೆಯಲ್ಲಿ ಬಂದಿರುವುದಕ್ಕೆಲ್ಲಾ ಉತ್ತರವನ್ನು ಹೇಳಲಿಕ್ಕೆ ಆಗುವುದಿಲ್ಲ. ನಾನು official ಆಗಿ ಉತ್ತರ ಕೊಡಬೇಕಲ್ಲವೇ? ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವ ವಿಚಾರದ ಆಧಾರದ ಮೇಲೆ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಪತ್ರಿಕೆಯಲ್ಲಿ ಬಂದಿದ್ದು, ಅದಕ್ಕೆ ಉತ್ತರ ಹೇಳಬೇಕೆಂದು ಕೇಳುತ್ತಿದ್ದಾರೆ. ಇವರು ಕೇಳಿದ ಪ್ರಶ್ನೆ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಇದ್ದು, ಸಾಕಷ್ಟು ಮಾಹಿತಿ ಶೇಖರಣೆ ಮಾಡಬೇಕು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸದ್ಯ ನಿವೃತ್ತಿ, ನಿಧನ, ರಾಜೀನಾಮೆಯಿಂದ ತೆರವಾದ ಹುದ್ದೆಗಳ ಕುರಿತು ಎಂದು ಕೇಳಿದ್ದಾರೆ. ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ತರಿಸಬೇಕಲ್ಲವೇ? ಅದಕ್ಕೋಸ್ಕರ ಇದಕ್ಕೆ ಸ್ವಲ್ಪ ಸಮಯ ಬೇಕಿದೆ. ಬಜೆಟ್ ಅಧಿವೇಶನದೊಳಗಡೆ ಈ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, 6ನೇ ವೇತನ ಆಯೋಗಕ್ಕೆ ಈಗಾಗಲೇ ಈ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದು ನನಗೂ ಕೊಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾನೇ ಸರಿಯಾಗಿ ನೋಡಿಲ್ಲ. ನಿಮಗೆ ಹೇಗೆ ಮಾಹಿತಿಯನ್ನು ಕೊಡಲಿ.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ನೋಡಿ, ನಮಗೆ ಮಾಹಿತಿಯನ್ನು ಕೊಡಲಿ.

**ಸಭಾಪತಿಯವರು:-** ಶ್ರೀಯುತ ಸೋಮಣ್ಣ ಮ. ಬೇವಿನಮರದ ರವರ ಮುಂದಿನ ಪ್ರಶ್ನೆಗೂ ಸಹ ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಈಶ್ವರ ಭೀಮಣ್ಣ ಖಂಡ್ರೆ(ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮುಂದಿನ ವಾರ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಸಭಾಪತಿಯವರು:-** ಶ್ರೀಯುತ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ರವರ ಪ್ರಶ್ನೆಗೂ ಸಹ ಮುಖ್ಯಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸದಸ್ಯರಾದ ಶ್ರೀಯುತ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ರವರ ಪ್ರಶ್ನೆಯೂ ಸಹ ಇದೇ ರೀತಿ ಇದೆ. ಇವರು ಹೇಗೆ ಪ್ರಶ್ನೆಯನ್ನು ಕೇಳುತ್ತಾರೆಂದರೆ ತಕ್ಷಣ ಉತ್ತರ ಕೊಡುವಂತಹ ಪ್ರಶ್ನೆಗಳನ್ನು ಕೇಳಿದರೆ ಪರವಾಗಿಲ್ಲ. ಇಡೀ ಜಗತ್ತಿನದ್ದೇ ಪ್ರಶ್ನೆಯನ್ನು ಕೇಳಿದರೆ ಎಲ್ಲಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇವರು ಏನು ಹೇಳಿದ್ದಾರೆಂದರೆ ಸರ್ಕಾರದ ಯೋಜನೆಗಳ ಪ್ರಚಾರ ನೆಪದಲ್ಲಿ ಸರ್ಕಾರ ದುಂದು ವೆಚ್ಚ ಮಾಡುತ್ತಿದೆ ಎಂದು ಹೇಳಿದ್ದಾರೆ. ಅಂದರೆ, ಮೊನ್ನೆ ಶ್ರೀಯುತ ನರೇಂದ್ರ ಮೋದಿಯವರು ಬೆಂಗಳೂರಿಗೆ ಬಂದರು, ಅದು ದುಂದು ವೆಚ್ಚವೇ? ಸುಮ್ಮನೆ ಈ ರೀತಿ ಏತಕ್ಕೆ ಮಾಡುತ್ತೀರಿ? ಮುಖ್ಯಮಂತ್ರಿಗಳು ಹೋದರು, ಅಲ್ಲಿ ಸಮಾರಂಭ ಮಾಡಿದರು, ಸರ್ಕಾರದ ಅಧಿಕಾರಿಗಳು ಬಂದಿದ್ದರು. ವಾಹನಗಳು ಬಂದಿದ್ದವು. ಅಂದರೆ, ಇವುಗಳಿಗೆಲ್ಲಾ ದುಂದು ವೆಚ್ಚ ಎಂದು ಕರೆಯಲಿಕ್ಕೆ ಆಗುತ್ತದೆಯೇ? ಪ್ರಧಾನ ಮಂತ್ರಿಗಳು ಪದೇ ಪದೇ ವಿದೇಶಕ್ಕೆ ಹೋಗುತ್ತಾರೆ, ಅದನ್ನು ದುಂದು ವೆಚ್ಚವೆಂದು ಕರೆಯುವುದಿಲ್ಲವೇ? ಈ ರೀತಿಯಲ್ಲಿ ಸುಮ್ಮನೆ ಏತಕ್ಕೆ ಕೇಳುತ್ತೀರಿ?

**ಪ್ರಶ್ನೆ ಸಂಖ್ಯೆ 207**
**(ಉತ್ತರವನ್ನು ಒದಗಿಸಲಾಗಿದೆ)**

**ಡಾ:: ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅತ್ಯಂತ ಒಳ್ಳೆಯ ಉತ್ತರವನ್ನು ಒದಗಿಸಿದ್ದಾರೆ. ಕರ್ನಾಟಕ ಸರ್ಕಾರದ ಅತ್ಯಂತ ಜನಪ್ರಿಯ ಯೋಜನೆಗಳಲ್ಲಿ “ಇಂದಿರಾ ಕ್ಯಾಂಟೀನ್” ಒಂದು ಯೋಜನೆ ಆಗಿದೆ.

ಮಾನ್ಯ ಸಭಾಪತಿಯವರೇ, ಇಂದಿರಾ ಕ್ಯಾಂಟೀನ್ ಬಗ್ಗೆ ಹೇಳುವಾಗ ನಮಗೆ ಹೆಮ್ಮೆಯಾಗುತ್ತದೆ. ಈ ಇಂದಿರಾ ಕ್ಯಾಂಟೀನ್ ಸಾರ್ವಜನಿಕರಿಗಾಗಿ ಅದರಲ್ಲೂ ಶ್ರಮಿಕ ವರ್ಗಕ್ಕೆ, ಬಡವರಿಗಾಗಿ, ಹಸಿದವರಿಗೆ ರೂಪಿಸಿರುವಂತಹ ಯೋಜನೆ ಇದಾಗಿದೆ. ಈ ಯೋಜನೆಯ ಬಗ್ಗೆ BBC News Channel ನಲ್ಲಿ ಚರ್ಚೆಯಾಗುತ್ತದೆ. BBC News Channel ನಲ್ಲಿ ಇವತ್ತು ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಎಲ್ಲದಕ್ಕೂ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಈ ಪೈಕಿ ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ಆಸ್ಪತ್ರೆಗಳ ಸಮೀಪ ಅಲ್ಲಿ ರೋಗಿಗಳನ್ನು ನೋಡಿಕೊಳ್ಳುವವರಿಗೆ ಇಂತಹ ಒಂದು ಒಳ್ಳೆಯ ಊಟದ ವ್ಯವಸ್ಥೆ ಸಿಕ್ಕಿದರೆ ಅದೂ ಕೂಡ ಆ ಜನರಿಗೆ ಸಹಾಯವಾಗುತ್ತದೆ. ಮತ್ತೆ truck terminals ಇರುವಂತಹ

ಜಾಗದಲ್ಲಿ ಈ ಕ್ಯಾಂಟೀನ್‌ಗಳನ್ನು ತೆರೆದರೆ ಬಹಳಷ್ಟು ಜನರಿಗೆ ಸಹಾಯವಾಗುತ್ತದೆ. ಮತ್ತೊಂದು ಈ ಸಂಚಾರಿ ಕ್ಯಾಂಟೀನ್‌ಗಳನ್ನು ಮಾಡಿದ್ದಾರೆ. ಕನಿಷ್ಠ ಇವುಗಳಾದರೂ ಇವುಗಳ ಪಕ್ಕದಲ್ಲಿ ಇದ್ದರೆ ತುಂಬಾ ಸಹಾಯವಾಗುತ್ತದೆ. ಮತ್ತೆ, ನಮ್ಮ ಫ್ರೀಡಂ ಪಾರ್ಕ್‌ನ ಹತ್ತಿರ ಸಂಚಾರಿ ಕ್ಯಾಂಟೀನ್ ಸೌಲಭ್ಯವನ್ನು ಕೊಡಬೇಕಾಗುತ್ತದೆ. ಏಕೆಂದರೆ, ಅಲ್ಲಿ ಸಮಾವೇಶಗಳು, ಚಳುವಳಿಗಳು ಆಗುವಂತಹ ಜಾಗದಲ್ಲಿ ಇಂತಹ ಒಂದು ಸಂಚಾರಿ ಕ್ಯಾಂಟೀನ್ ಅಥವಾ ಇನ್ನು ಯಾವುದಾದರೂ ಅಲ್ಲಿ permanent structure ಇದ್ದರೆ ಜನರಿಗೆ ತುಂಬಾ ಸಹಾಯವಾಗುತ್ತದೆ.

ಮುಂದು...

(078) 08.02.2018 12.30 ಎಸ್‌ವಿ-ಕೆಎಸ್

**ಡಾ:ಜಯಮಾಲ ರಾಮಚಂದ್ರ(ಮುಂದು):-**

ನಾನು ಕೇಳದಂತಹ ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಸಚಿವರು ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೂ ಸಹ ಇದನ್ನು ತಲುಪಿಸುತ್ತೇವೆ ಎಂದು ಹೇಳಿದ್ದಾರೆ. ಈ ಭಾಗಗಳಲ್ಲಿಯೂ ಕೂಡ ಆದರೆ ಒಂದಷ್ಟು ಒಳ್ಳೆಯದಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಆದೇಶದಂತೆ ಜನನಿಬಿಡ ಪ್ರದೇಶಗಳಾದ ಆಸ್ಪತ್ರೆ, ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆ ಮುಂತಾದ ಜಾಗಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲು ಸಮೀಕ್ಷೆಯನ್ನು ಮಾಡಲಾಗುತ್ತಿದೆ. ಸಮೀಕ್ಷೆ ಮುಗಿದ ಕೂಡಲೇ ಅಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ರಘುನಾಥರಾವ್ ಮಲ್ಕಾಪೂರೆ ಅವರದ್ದಾಗಿದೆ. ಅವರು ಗೈರು ಹಾಜರಾಗಿರುವುದರಿಂದ ಮುಂದಿನ ಪ್ರಶ್ನೆ ಶ್ರೀ ರಾಮಚಂದ್ರಗೌಡ ಅವರದ್ದು.

**<u>ಪ್ರಶ್ನೆ ಸಂಖ್ಯೆ : 253</u>**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಬಹಳಷ್ಟು ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇವೆ ಎಂಬುದಾಗಿ ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. 'ಹೆಣ ಹೂಳುವುದಕ್ಕೂ ಖಾಯಂ ಸಿಬ್ಬಂದಿ ಇಲ್ಲ' ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಸ್ಮಶಾನದಲ್ಲಿ ಹೆಣ ಹೂಳುವುದಕ್ಕೆ ಖಾಯಂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಬ್ಬಂದಿ ಇಲ್ಲ. ಮಾನ್ಯ ಸಚಿವರೇ ಒಪ್ಪಿಕೊಂಡಿರುವಂತೆ ಶೇ.೫೮ರಷ್ಟು ಜನ ನಿಯೋಜನೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಸುಮಾರು ೬೫,೦೦೦ ಎಕರೆಯಷ್ಟು ವ್ಯಾಪ್ತಿಯಲ್ಲಿ ಬರುವಂತಹ ವಿವಿಧ ಕೆರೆಗಳ ನಿರ್ವಹಣೆ ಮಾಡಬೇಕು. ಬೆಳ್ಳಂದೂರು ಕೆರೆಯ ನಿರ್ವಹಣೆ ಮಾಡಬೇಕು. ಅನಧಿಕೃತ ಕಟ್ಟಡಗಳನ್ನು ತೆರವು ಮಾಡಬೇಕಾಗುತ್ತದೆ. ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿ ತಲುಪುತ್ತಿದೆ. ಶೇ.೪೦ರಷ್ಟು ಕುಡಿಯುವ ನೀರು ಲೆಕ್ಕಕ್ಕೆ ಸಿಗದೆ ಪೋಲಾಗುತ್ತಿದೆ. ಇವೆಲ್ಲವನ್ನೂ ತಡೆಗಟ್ಟುವುದಕ್ಕೆ ನಿಯುಕ್ತಿಯ ಮೇಲೆ ಬಂದಿರುವಂತಹ ಕೆಲಸಗಾರರ ಕೈಯಲ್ಲಿ ಸಾಧ್ಯವೆ ಎಂಬುದನ್ನು ಸರ್ಕಾರ ಯೋಚಿಸಬೇಕು. ಇತ್ತೀಚೆಗೆ 110 ಹಳ್ಳಿಗಳು ಸೇರಿಕೊಂಡ ನಂತರ ಅದಕ್ಕೂ ಕೂಡ 1170 ಹುದ್ದೆಗಳನ್ನು ಸೃಜಿಸಲಾಗಿದೆ. ಆದರೆ ಯಾವುದೇ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. ವಿಶೇಷವಾಗಿ ಬಿ.ಬಿ.ಎಂ.ಪಿ.ಯ ಹನ್ನೊಂದು ಕಾಲೇಜುಗಳದ್ದು, ಒಂದು ಕಾಲೇಜಿನಲ್ಲಿಯೂ ಪ್ರಾಂಶುಪಾಲರು ಇರುವುದಿಲ್ಲ. ಬಿ.ಬಿ.ಎಂ.ಪಿ.ಯ ಅಧೀನದಲ್ಲಿ ಶಿಕ್ಷಣ ಇಲಾಖೆ ಏಕೆ ಬೇಕು? ಅದನ್ನು ಶಿಕ್ಷಣ ಇಲಾಖೆಗೆ ಬಿಟ್ಟು ಬಿಡಲಿ. ಶಾಲೆ-ಕಾಲೇಜುಗಳನ್ನು ನಡೆಸುವುದಾದರೆ ಸರಿಯಾಗಿ ನಡೆಸಬೇಕು. 11 ಕಾಲೇಜುಗಳಲ್ಲಿ ಒಂದು ಕಾಲೇಜಿನಲ್ಲಿಯೂ ಪ್ರಾಂಶುಪಾಲರು ಇರುವುದಿಲ್ಲ. ಎಲ್ಲಾ ಕೆಲಸಗಾರರು ನಿಯತ್ತಿನ ಮೇಲೆಯೇ ಕೆಲಸ ಮಾಡುವುದಾದರೆ ಅಲ್ಲಿ ಖಾಲಿಯಾಗುತ್ತದೆ. ಅಲ್ಲಿಯೂ ಕೆಲಸವಾಗುವುದಿಲ್ಲ, ಇಲ್ಲಿಯೂ ಕೆಲಸವಾಗುವುದಿಲ್ಲ. ಈ ಧೋರಣೆ ಸರಿಯಿಲ್ಲ ಎಂದು ನನ್ನ ಭಾವನೆ. ಆದ್ದರಿಂದ ಖಾಲಿ ಇರತಕ್ಕಂತಹ ಹುದ್ದೆಗಳನ್ನು ಎಷ್ಟು ಬೇಗ ಭರ್ತಿ ಮಾಡುತ್ತೀರಿ ಎನ್ನುವುದು ನನ್ನ ಮುಖ್ಯವಾದ ಪ್ರಶ್ನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು ಹೇಳಿದ್ದನ್ನು ನಾನೂ ಸಹ ಒಪ್ಪುತ್ತೇನೆ. ಇದರಲ್ಲಿ ಮುಖ್ಯವಾಗಿ ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇರುವುದಾಗಿದೆ. ಇದರ ಬಗ್ಗೆ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಪೌರಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಪೌರ ಕಾರ್ಮಿಕರನ್ನು ನೇಮಕ ಮಾಡಲು Indian Institute of Science ಅವರಿಗೆ ಹೇಳಿದ್ದೇವೆ. ಆದರೆ ಸಿ & ಆರ್ ನಿಯಮಗಳ ಪ್ರಕಾರ ಬೇರೆಯವರು ಮಾಡುವುದಕ್ಕಾಗುವುದಿಲ್ಲ, ಕೆ.ಪಿ.ಎಸ್.ಸಿ. ಅವರೇ ಮಾಡಬೇಕೆಂದು ಕಾನೂನು ವಿಭಾಗದವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಸುಮಾರು ತಿಂಗಳುಗಳ ಕಾಲ ಕೆ.ಪಿ.ಎಸ್.ಸಿ. ಕೆಲಸ ಮಾಡುತ್ತಿರಲಿಲ್ಲ. ಈಗ ಕೆಲಸ ಮಾಡುತ್ತಿದೆ. ಕೆ.ಪಿ.ಎಸ್.ಸಿ. ಮೂಲಕ ೪,೦೦೦ ಪೌರ ಕಾರ್ಮಿಕರನ್ನು ಈಗ ನೇಮಕ ಮಾಡುತ್ತೇವೆ. ಯಾರು ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆಯೋ, ಅವರಿಗೆ ಸಹ ಆದ್ಯತೆಯನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 15-20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವವರನ್ನು ಖಾಯಂಗೊಳಸಲೂ ಸಹ ಕ್ರಮ ಕೈಗೊಂಡಿದ್ದೇವೆ.

ಮಾನ್ಯ ಸದಸ್ಯರು ಕಾಲೇಜುಗಳಲ್ಲಿ ಪ್ರಾಂಶುಪಾಲರು ಇಲ್ಲವೆಂದು ಹೇಳಿದರು. ಹೊರಗುತ್ತಿಗೆ ಆಧಾರದಲ್ಲಿ ಸದ್ಯ ನಿರ್ವಹಿಸಲಾಗುತ್ತಿದೆ. ಖಾಯಂ ಪ್ರಾಂಶುಪಾಲರನ್ನು ನೇಮಕ ಮಾಡಿದರೆ ಒಳ್ಳೆಯದು. ಇದರ ಬಗ್ಗೆ ಆಯುಕ್ತರಿಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುವಂತೆ ಹೇಳುತ್ತೇನೆ.

ಪಾರ್ಕ್ ಮಾಡುವುದಕ್ಕೂ ಸಹ ನಾವು ಹೊರಗುತ್ತಿಗೆ ನೀಡಿರುತ್ತೇವೆ. ಅವರ ಕೆಳಗೆ ಜನ ಕೆಲಸ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ನೇರವಾಗಿ ನೇಮಕ ಮಾಡುವಂತೆ ಬಿ.ಬಿ.ಎಂ.ಪಿ. ಆಯುಕ್ತರಿಗೆ ಆದೇಶವನ್ನು ಕೊಡುತ್ತೇನೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ದೇಶದ ಯಾವುದೇ ಮಹಾನಗರ ಪಾಲಿಕೆಗೆ ಹೋಲಿಸಿದರೆ ಅತ್ಯಂತ ಕಡಿಮೆ ಸಿಬ್ಬಂದಿ ಹೊಂದಿರುವ ಪಾಲಿಕೆ ನಮ್ಮದು. ನಮ್ಮ ಸಿಬ್ಬಂದಿ ಮೇಲೆ ಕೆಲಸದ ಹೊರೆ ಹೆಚ್ಚು ಇದೆ. ಈ ರೀತಿ ಜವಾಬ್ದಾರಿ ಇರುವ ಒಬ್ಬ ಪ್ರಮುಖರೇ ಹೇಳಿದ್ದಾರೆ. I don't want to mention his name. ಅಂದರೆ ಈಗ ಏನು ಸೃಜಿಸಲಾಗಿದೆಯೋ ಅದೇ shortage ಇದೆ. ಅದನ್ನೇ fill-up ಮಾಡದಿದ್ದರೆ ಹೇಗೆ? ಬೆಂಗಳೂರು ನಗರವನ್ನು ಸ್ವಚ್ಛಗೊಳಸಲು ಸಾಧ್ಯ ಎಂಬುದು ನನ್ನ ಆತಂಕವಾಗಿದೆ.

**ಶ್ರೀ ಕೆ.ಜೆ.ಜಾರ್ಜ್**:- ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರಿಗೆ ತಿಳಿದಿರುವಂತೆ ಯಾವುದೇ ಕಛೇರಿಯಲ್ಲಿಯೂ ಸಹ ಖಾಲಿ ಇರುವುದಿಲ್ಲ. ಬೇರೆ ಬೇರೆ ಇಲಾಖೆಗಳಿಂದ deputation ಅಥವಾ contract basis ಮೇಲೆ ಬಂದು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಬಿಬಿಎಂಪಿಯೇ ನೇರ ನೇಮಕಾತಿ ಮಾಡಿಕೊಳ್ಳಲಿ ಎಂದು ಹೇಳುತ್ತಿದ್ದಾರೆ. ಅದನ್ನೂ ಸಹ ನಾನು ಪರಿಶೀಲಿಸುತ್ತೇನೆ. ಮೊದಲು contractors ಬಳಿಯಿದ್ದಾಗ ರೂ.5,000 ಕೊಡುತ್ತಿದ್ದರು. ಈಗ ರೂ.17,500/-ಗಳನ್ನು ನೀಡುತ್ತಿದ್ದೇವೆ ಹಾಗೂ ಅವರಿಗೆ Mid-day meals ಅನ್ನು ಸಹ ನೀಡುತ್ತಿದ್ದೇವೆ. ನನ್ನ ಅಭಿಪ್ರಾಯದ ಪ್ರಕಾರ ಶಾಲೆ-ಕಾಲೇಜುಗಳನ್ನು ಶಿಕ್ಷಣ ಇಲಾಖೆಯವರು ನಡೆಸಿದರೆ ಒಳ್ಳೆಯದು. ಏಕೆಂದರೆ ಬಿಬಿಎಂಪಿ ಯವರು ಶಾಲೆ-ಕಾಲೇಜುಗಳನ್ನು ನಡೆಸಲು technical knowledge and experience ಅವರಿಗಿರುವುದಿಲ್ಲ. ಇದನ್ನು ಪರಿಶೀಲನೆ ಮಾಡಲಾಗುವುದು.

<u>**ಪ್ರಶ್ನೆ ಸಂಖ್ಯೆ : 281**</u>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಕೆ.ಟಿ.ಶ್ರೀಕಂಠೇಗೌಡ:- ಮಾನ್ಯ ಸಭಾಪತಿಯವರೇ, ಏಕೋ ಏನೋ ಅತ್ಯಂತ ಬೇಸರ ತರಿಸುವಂತಹ ವರದಿ ಕೈಸೇರಿರುವಂತೆ ಮಾನ್ಯ ಮುಖ್ಯಮಂತ್ರಿಯವರ ಉತ್ತರವೂ ಸಹ ಕೈಸೇರಿದೆ. ಈಗಾಗಲೇ ಕೇಂದ್ರ ಸರ್ಕಾರದ ನೌಕರರಿಗೆ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಶೇ.69ರಿಂದ ಶೇ.110 ರಷ್ಟು ವ್ಯತ್ಯಾಸವಿರುವುದನ್ನು ಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಮತ್ತೊಂದು ವೇತನ ಆಯೋಗವನ್ನು ರಚಿಸಲು ಕೇಂದ್ರ ನಿರ್ಧಾರ ಮಾಡಿದೆ. ಬಹುಶಃ ಆ ವೇತನ ಆಯೋಗವು ಇನ್ನು ಮೂರು-ನಾಲ್ಕು ತಿಂಗಳಲ್ಲಿ ಜಾರಿಗೆ ಬರುವುದಾದರೆ ನೂರಕ್ಕೆ ನೂರರಷ್ಟು ವ್ಯತ್ಯಾಸವಾಗುವ ಎಲ್ಲಾ ಸ್ಪಷ್ಟ ಸೂಚನೆಗಳಿವೆ. ಈಗ 6ನೇ ವೇತನ ಆಯೋಗದ ಶ್ರೀ ಶ್ರೀನಿವಾಸಮೂರ್ತಿಯವರ ನೇತೃತ್ವ ಸಮಿತಿಯು ಶೇ.30ರಷ್ಟು ರಾಜ್ಯಸರ್ಕಾರದ ನೌಕರರಿಗೆ ಹೆಚ್ಚಳ ಮಾಡಲು ಮಾಡಿರುವ ಶಿಫಾರಸ್ಸಿನಿಂದ ಯಾವುದೇ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಈಗಾಗಲೇ ನೌಕರರು ಪ್ರತಿಭಟನೆಗಿಳಿದಿರುವುದು ನಮ್ಮ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ. ಇದಕ್ಕೆ ಪರಿಹಾರವೇನು? ವೇತನ ಆಯೋಗದ ಶಿಫಾರಸ್ಸಿನಲ್ಲಿ ಈಗಾಗಲೇ ಯಾರು 400, 450, 500 ಈ ರೀತಿ exgratia ಪಡೆಯುತ್ತಿದ್ದಾರೆ, ಅವರಲ್ಲಿ ಶಿಕ್ಷಕರು, ಪದವಿಪೂರ್ವ ಶಿಕ್ಷಕರು, ಉಪನ್ಯಾಸಕರು ಎಂದಷ್ಟೇ ಹೇಳಿ ಬಿಟ್ಟಿದ್ದಾರೆ. ಅದನ್ನು ಮೂಲ ವೇತನಕ್ಕೆ merge ಮಾಡುವುದು. ಈಗ exgratia ಪಡೆಯುತ್ತಿರುವವರಲ್ಲಿ ಪ್ರಾಂಶುಪಾಲರೂ ಸಹ ಇದ್ದಾರೆ. 2008ರ ನಂತರದ ಶಿಕ್ಷಕರು, ಉಪನ್ಯಾಸಕರೂ ಸಹ ಇದ್ದಾರೆ. ಸುಪ್ರೀಂ ಕೋರ್ಟ್ ಸಹ ಅವರಿಗೆ exgratia ಕೊಡಬೇಕೆಂದು ಹೇಳಿದೆ. ಈಗ ಅದನ್ನು recovery ಗೆ ಹಾಕಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೇ ಒಂದು increment ಮತ್ತು ಒಂದು exgratia ಕೊಡುವಂತಹ ತೀರ್ಮಾನವನ್ನು ಮಾಡಿದ್ದರು. ಈಗ exgratia ಗೆ ಹೊರಟಿದ್ದಾರೆ. ಸುಪ್ರೀಂ ಕೋರ್ಟ್ ಅವರಿಗೆ ಕೊಡಬೇಕೆಂದು ಹೇಳಿದೆ. 2008ರ ನಂತರದ exgratia ಮುಂದುವರೆಸುವಂತಹದ್ದು, ಪ್ರಾಚಾರ್ಯರಿಗೆ ಕೊಡಲಾಗುತ್ತಿರುವಂಥ exgratia ವನ್ನು ಉಳಿದ ಶಿಕ್ಷಕರು, ಉಪನ್ಯಾಸಕರ ರೀತಿಯಲ್ಲಿ basic ಗೆ merge ವಂತಹ ನಿರ್ಧಾರವನ್ನು ಹಾಗೂ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಮನೆ ಬಾಡಿಗೆ ಭತ್ಯೆ ಈ ಹಿಂದೆ 30, 20, 10%ರ ಮೂಲ ವೇತನದ ಮೇಲಿತ್ತು. ಈಗ ಅದನ್ನು ಇಳಿಕೆ ಮಾಡಲಾಗಿದೆ. ನಮಗೆ ಹೆಚ್ಚು ಮಾಡಿಕೊಡಿ ಎಂದರೆ 24, 16, 8ಕ್ಕೆ ಇಳಿಕೆ ಮಾಡಲಾಗಿದೆ. ಇಲ್ಲಿ ಕಿತ್ತು ಅಲ್ಲಿ ಕೊಡುವುದಾದರೆ ಒಟ್ಟಾರೆ ನೌಕರರಿಗೆ ಆದ ಪ್ರಯೋಜನವೇನು? ಅಂತಿಮವಾಗಿ ಮತ್ತೊಂದು ವಿಚಾರವನ್ನು ಅವರು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(....ಮುಂದು)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು..):-**

ಶೇಕಡ 33 ರಷ್ಟು ಹುದ್ದೆಗಳು ಖಾಲಿ ಇವೆ. ಅವುಗಳನ್ನು ಯಾವಾಗ ಭರ್ತಿ ಮಾಡುತ್ತಾರೆ? ನಾವು ಅಂತಿಮವಾಗಿ ವೇತನ ತಾರತಮ್ಯದ ಬಗ್ಗೆ ದೊಡ್ಡ ಹೋರಾಟವನ್ನು ಮಾಡಿದ್ದೇವೆ. ಆಗ ಮಾನ್ಯ ಮುಖ್ಯಮಂತ್ರಿಯವರು ಮತ್ತು ಶಿಕ್ಷಣ ಸಚಿವರು ಮಾತು ಕೊಟ್ಟಿದ್ದರು. ಅದೇರೀತಿ ಎಲ್ಲಾ ಶಾಸಕರು ಸಹ ವೇತನ ಆಯೋಗ ರಚನೆಯಾದಂತಹ ಸಂದರ್ಭದಲ್ಲಿ ಇದನ್ನು ಸರಿಪಡಿಸುತ್ತೇವೆಂದು ಮಾತು ಕೊಟ್ಟಿದ್ದರು. ಆದರೆ, ಅದರ ಬಗ್ಗೆ ಪ್ರಸ್ತಾಪ ಇಲ್ಲ. ಈಗ ಇನ್ನು 4 ತಿಂಗಳ ಕಾಲಾವಕಾಶ ಕೊಟ್ಟಿದ್ದಾರೆ. ಇನ್ನೂ ಒಂದೂವರೆ ತಿಂಗಳಲ್ಲಿ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬರುತ್ತದೆ. ನಮಗೆ 15 ದಿವಸಗಳ ಕಾಲಾವಕಾಶ ಕೊಟ್ಟಿದ್ದರೆ, ನಾವು ಅದರ ಬಗ್ಗೆ ಚಿಂತೆ ಮಾಡುತ್ತಿರಲಿಲ್ಲ. ಬಜೆಟ್ ಮುಂಚೆ ಆ ವರದಿಯನ್ನು ತೆಗೆದುಕೊಂಡು ವೇತನ ತಾರತಮ್ಯವನ್ನು ನಿವಾರಣೆ ಮಾಡಿದ್ದರೆ, ನಾವು ಬೀದಿಗೆ ಬೀಳುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಅವರು ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ಈ ವರದಿಯಲ್ಲಿ "ಶ್ರೀ ಕುಮಾರನಾಯಕ್" ವರದಿಯನ್ನು ಜಾರಿಗೆ ತರುವಂತಹ ಪ್ರಯತ್ನ ಪ್ರಸ್ತಾಪವಾಗಿಲ್ಲ. ಹಾಗಾಗಿ, ನಮ್ಮನ್ನು ಪುನಃ ಗೊಂದಲಕ್ಕೆ ತಳ್ಳಿ ಬೀದಿಗೆ ಬೀಳಿಸುವಂತಹ ಪ್ರಯತ್ನ ಆಗಿರುತ್ತದೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಮಾತಿನಂತೆ ವೇತನ ತಾರತಮ್ಯ ನಿವಾರಣೆ ಮತ್ತು ಮೂಲವೇತನಕ್ಕೆ ex gratia ವನ್ನು ಸೇರಿಸುವಂಥದ್ದು ಆಗಬೇಕು. ಅಲ್ಲದೇ, 30% ವೇತನ ಹೆಚ್ಚಳ ಸಾಕಾಗುವುದಿಲ್ಲ. ಕೇಂದ್ರ ಸರ್ಕಾರಿ ನೌಕರರಿಗೊಂದು ಮತ್ತು ರಾಜ್ಯ ಸರ್ಕಾರಿ ನೌಕರರಿಗೊಂದು ಜೀವನ ವೆಚ್ಚ ಇದೆಯಾ? ತರಕಾರಿ ಮಾರುಕಟ್ಟೆಯಲ್ಲಿ ಇರಬಹುದು, ಮನೆಯ ಬಾಡಿಗೆಯ ವಿಚಾರದಲ್ಲಿ ಇರಬಹುದು ಕೇಂದ್ರ ಸರ್ಕಾರಿ ನೌಕರರಿಗೊಂದು ಮತ್ತು ರಾಜ್ಯ ಸರ್ಕಾರಿ ನೌಕರರಿಗೊಂದು ಬೆಲೆ ಇದೆಯಾ? ಈ ವ್ಯತ್ಯಾಸ ಮಾನ್ಯ ಮುಖ್ಯಮಂತ್ರಿಯವರಿಗೆ ಅರ್ಥವಾಗುವುದಿಲ್ಲವೇ? ನಾವು ಸ್ವಾಭಿಮಾನದಿಂದ ಹಾಗೂ ಪ್ರಮಾಣಿಕವಾಗಿ ಬದುಕಬೇಕು ಅಲ್ಲವೇ, ಆ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಒಂದು ರಚನಾತ್ಮಕ ಪರಿಹಾರವನ್ನು ನೀಡಬೇಕೆಂದು ನಾನು ಬಯಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ವೇತನ ಪರಿಷ್ಕರಣೆ ಮಾಡುವುದಕ್ಕೆ 10 ವರ್ಷಗಳಿಗೊಮ್ಮೆ ಒಂದು Pay Commission ಅನ್ನು ನೇಮಕ ಮಾಡುತ್ತಾರೆ. ಅವರು 10 ವರ್ಷಗಳಿಗೊಮ್ಮೆ ವರದಿ ಕೊಡುತ್ತಾರೆ. ಕೇಂದ್ರ ಸರ್ಕಾರಿ ನೌಕರರು ಮಾಡುವಂತಹ ಕೆಲಸ ಮತ್ತು ಅವರ ಕೆಲಸದ ಅವಧಿ ಬೇರೆ ಬೇರೆ ರೀತಿಯಾಗಿರುತ್ತದೆ. ನಮ್ಮ ರಾಜ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಮೊದಲಿನಿಂದಲೂ ಕೂಡ ಕೇಂದ್ರ ಸರ್ಕಾರವನ್ನು follow ಮಾಡಿರುವುದಿಲ್ಲ. ಕೇಂದ್ರ ಸರ್ಕಾರ ಯಾವ ಯಾವ ವರದಿಯನ್ನು ಕೊಡುತ್ತದೆಯೋ, ಅದು ಕೇಂದ್ರ ಸರ್ಕಾರದ ನೌಕರರಿಗೆ ಅನ್ವಯಿಸುತ್ತದೆ. ರಾಜ್ಯ ಸರ್ಕಾರ ತನ್ನದೇ ಅದಂತಹ Pay Committee ಅಥವಾ Pay Commission ಗಳನ್ನು ಮಾಡಿಕೊಂಡು ಬಂದಿರುತ್ತದೆ. ಈ ಬಾರಿ ನಾವು Pay Commission ಅನ್ನು ದಿನಾಂಕ 01.06.2017 ರಂದು ಮಾಡಿದ್ದೇವೆ. ನಾವು ಅವರಿಗೆ ವರದಿ ಸಲ್ಲಿಸಲು 4 ತಿಂಗಳ ಕಾಲಾವಕಾಶ ಕೊಟ್ಟಿದ್ದೆವು. ದಿನಾಂಕ 31/01/2018 ರಂದು ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ನಾನಿನ್ನೂ ಓದಿಲ್ಲ. ಏಕೆಂದರೆ, ಅದಿನ್ನೂ ಕ್ಯಾಬಿನೆಟ್ ಮುಂದೆ ಬಂದಿಲ್ಲ. ಮಾನ್ಯ ಸದಸ್ಯರು ಈಗಾಗಲೇ ಆ ವರದಿಯನ್ನು ಓದಿಕೊಂಡು ಬಂದ ರೀತಿಯೇ ಹೇಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಆ ವರದಿಯನ್ನು ಇನ್ನೂ ಓದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಮುಖ್ಯಮಂತ್ರಿಯವರು ಇನ್ನೂ ವರದಿಯನ್ನು ಓದಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದು ಇನ್ನು ಕ್ಯಾಬಿನೇಟ್ ಮುಂದೆ ಬಂದಿಲ್ಲ. ಅದು ಇನ್ನು premature. ಹಾಗಾಗಿ, ಅದರ ಬಗ್ಗೆ ಅಷ್ಟೊಂದು ವಿವರವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ, ಇದು ಒಂದು. ಎರಡನೆಯದಾಗಿ, ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ವೇತನ ಸಮಿತಿ ಶಿಫಾರಸ್ಸು ಪ್ರಕಾರ ವೇತನ ಹೆಚ್ಚಳ ಮಾಡಿ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 6 ವರ್ಷಕ್ಕೊಮ್ಮೆ ಅಥವಾ 7 ವರ್ಷಕ್ಕೊಮ್ಮೆ Pay Commission or Pay Committee ಗಳನ್ನು ಮಾಡುತ್ತಾರೆ. ಆದರೆ, ನಾನು Pay Commission ಅನ್ನು ಸ್ವಲ್ಪ ಮುಂಚೆಯೇ ಮಾಡಿದ್ದೇನೆ. ಅವರು ವರದಿಯನ್ನು ಕೊಟ್ಟಿದ್ದಾರೆ. ನಾನು ವರದಿಯಲ್ಲಿ ಏನು ಕೊಟ್ಟಿದ್ದಾರೆ ಎನ್ನುವುದನ್ನು ನೋಡುತ್ತೇನೆ. ಹಿರಿಯ ನಿವೃತ್ತ ಐ.ಎ.ಎಸ್ ಅಧಿಕಾರಿಯಾದ ಶ್ರೀ ಎಂ.ಆರ್.ಶ್ರೀನಿವಾಸ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚನೆ ಮಾಡಲಾಗಿದೆ. ಆಯೋಗದಲ್ಲಿ ಇಬ್ಬರು ಸದಸ್ಯರು ಇದ್ದಾರೆ. ಶ್ರೀ ಎಂ.ಆರ್.ಶ್ರೀನಿವಾಸ ಮೂರ್ತಿರವರು ಬಹಳ ಸುದೀರ್ಘವಾಗಿ ಕರ್ನಾಟಕ ಸರ್ಕಾರದಲ್ಲಿ ಕೆಲಸ ಮಾಡಿರುವಂತಹವರು. ಅವರು ಹಣಕಾಸು ಕಾರ್ಯದರ್ಶಿಯಾಗಿದ್ದವರು. ಅವರ ಅನುಭವದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿನ್ನೆಲೆಯಲ್ಲಿ ಮತ್ತು ಅವರು ಎಲ್ಲಾ ವರ್ಗದ ಸರ್ಕಾರಿ ನೌಕರರ ಅಭಿಪ್ರಾಯಗಳನ್ನು ಕೇಳಿರುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಅದನ್ನು ಪರಿಶೀಲನೆ ಮಾಡಿ ನೋಡೋಣ. ಈ ಹಿಂದಿನ 5ನೇ ವೇತನ ಪರಿಷ್ಕರಣಾ ಸಮಿತಿಯವರು ೨೨% ರಷ್ಟು ಕೊಟ್ಟಿದ್ದರು. ಈಗ ವೇತನ ಆಯೋಗದವರು ಮೊದಲನೇ Volume ಅನ್ನು ಮಾತ್ರ ಕೊಟ್ಟಿದ್ದಾರೆ. ಇನ್ನೂ ಎರಡನೇ Volume ಅನ್ನು ಕೊಡಬೇಕು. ಮೊದಲನೆ Volume ನಲ್ಲಿ ವೇತನ ಪರಿಷ್ಕರಣೆ ಎಷ್ಟು ಹೆಚ್ಚಳ ಮಾಡಬೇಕೆಂಬುದನ್ನು ವರದಿಯನ್ನು ಸಲ್ಲಿಸುವ ವೇಳೆಯಲ್ಲಿ ಶ್ರೀ ಎಂ.ಆರ್.ಶ್ರೀನಿವಾಸ ಮೂರ್ತಿಯವರು ನನಗೂ ಮತ್ತು ಪ್ರೆಸ್‌ಗೂ ಹೇಳಿದ್ದಾರೆ. ಅದರಲ್ಲಿ ೩೦% ಅಂದರೆ, ಮೂಲ ವೇತನ ಎಷ್ಟಿದೆ, ಅದರ ಮೇಲೆ ೩೦% ರಷ್ಟು ಹೆಚ್ಚು ಮಾಡಿದ್ದೇವೆಂದು ಹಾಗೂ ಅದೇರೀತಿ ನಿವೃತ್ತಿ ನೌಕರರಿಗೂ ಸಹ ೩೦% ರಷ್ಟು ಹೆಚ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇಷ್ಟು ಮಾತ್ರ ನನಗೆ ಮಾಹಿತಿ ಇದೆ. ನನಗೆ ಇನ್ನುಳಿದ ಮಾಹಿತಿಗಳು ಇಲ್ಲ. ಅದು ಮುಂದಿನ ಕ್ಯಾಬಿನೆಟ್‌ಗೆ ಬರುತ್ತದೆ. ಆ ಸಂದರ್ಭದಲ್ಲಿ ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ನಮ್ಮ ಸರ್ಕಾರಿ ನೌಕರರಿಗೆ ೯೯.೯೯೯% ರಷ್ಟು they are happy. ಕೆಲವರೆಲ್ಲ happy ಆಗಿ ಇದ್ದಾರೆ. Hon'ble Member Sri Srikantegowda is also very happy.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿರುವುದು ಉಲ್ಟಾ ಆಗಿದೆ. ೯೯.೯೯೯% ಅತೃಪ್ತರು ಸಹ ಇದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮತ ಕೊಟ್ಟಿರುತ್ತಾರೆ ಅಲ್ಲವೇ, ಅದಕ್ಕೆ ಅವರು ಈ ಪ್ರಶ್ನೆಯನ್ನು ಕೇಳಿದಂತೆ ಕಾಣಿಸುತ್ತದೆ. ನಾನು ಈಗ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

Mr.CHAIRMAN:- It's premature.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸರ್ಕಾರದ ನಿಲುವು ಏನೆಂದು ಪ್ರಕಟ ಮಾಡಿಲ್ಲ. ಸರ್ಕಾರದ ನಿಲುವು ಪ್ರಕಟವಾದ ನಂತರ ಮಾನ್ಯ ಸದಸ್ಯರು ಇಂತಹ ಪ್ರಶ್ನೆಗಳನ್ನು ಕೇಳಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ex gratia ಕೊಡುತ್ತಿರುವವರ ಮೂಲ ವೇತನವನ್ನು merge ಮಾಡಬೇಕು ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:- ಮಾನ್ಯ** ಸದಸ್ಯರೇ, ಮಾನ್ಯ ಮುಖ್ಯಮಂತ್ರಿಯವರು ಅದನ್ನು ಅಷ್ಟೊಂದು ವಿವರವಾಗಿ ಈಗ ಚರ್ಚೆ ಮಾಡುವುದು ಬೇಡವೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಬಿಟ್ಟು, ಬೇರೆ ಏನನ್ನು ಹೇಳಲಿ. I am not in a position to answer all his queries.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 2೦೦8 ಕ್ಕೂ ಮುಂಚೆ ex gratia ಕೊಡುತ್ತಿದ್ದರು. ಈಗ ಅದನ್ನು ರಿಕವರಿಗೆ ಹಾಕಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, the Government has not yet taken its stand. How can I answer this question? Its premature.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ವೇತನ ತಾರತಮ್ಯದ ಬಗ್ಗೆ ಕೇಳುತ್ತಿಲ್ಲ. ನಾನು ಬೇರೆ ವಿಷಯವನ್ನು ಕೇಳುತ್ತಿದ್ದೇನೆ. ನಾವು ಮೊನ್ನೆ ದಿವಸ ಚಳುವಳಿ ಮಾಡಿದಾಗ ex gratia ಕೊಟ್ಟಿದ್ದಾರೆ. ಈಗ ಅದನ್ನು ರಿಕವರಿಗೆ ಹಾಕಿದ್ದಾರೆ. ಅದನ್ನು ವಾಪಸ್ಸು ವಸೂಲು ಮಾಡುತ್ತಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಹ ಕೊಡಬೇಕೆಂದು ಹೇಳಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

**ಸಭಾಪತಿಯವರು:-** ಈಗ ನಾನು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ನಾನು ಆಗಲೇ ಪ್ರಸ್ತಾಪ ಮಾಡಿದ್ದೆ. ಸದನದಲ್ಲಿ ಒಂದು ಸ್ವಲ್ಪ ಉದ್ವೇಗದ ಮತ್ತು ಕಾವೇರಿದ ವಾತಾವರಣವಿದ್ದ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಾದ ಆರ್.ಚೌಡರೆಡ್ಡಿ ತೂಪಲ್ಲಿಯವರು ಮುಂದಿನ ಪ್ರಶ್ನೆ ನಮ್ಮದಿದೆ ಎಂಬುದನ್ನು ನೋಡಿಕೊಂಡಿದ್ದರೊ ಇಲ್ಲವೋ ಅಥವಾ ಮೊದಲನೇ ಪ್ರಶ್ನೆಯಾದ ನಂತರ ಸ್ವಲ್ಪ ಸಮಯ ಸಿಗುತ್ತದೆಂದು ಹೇಳಿ ಸದನದ ಒಳಗಡೆ ಇದ್ದವರು ಹೊರಗಡೆ ಹೋಗಿ ಒಳಗಡೆ ಬರುವುದಕ್ಕೆ ಸ್ವಲ್ಪ ತಡವಾಗಿತ್ತು. ಹಾಗಾಗಿ, ನಾವು ಮುಂದಿನ ಪ್ರಶ್ನೆಗೆ ಹೋದಂತಹ ಸಂದರ್ಭದಲ್ಲಿ ಅವರಿಗೆ ಆ ಮೇಲೆ ನೋಡೋಣವೆಂದು ಹೇಳಿದ್ದೆ. ಈ ರೀತಿಯ ಘಟನೆಯಿಂದ ಇದೊಂದು ವಿಶೇಷ ಪ್ರಕರಣವಾಗಿದೆ. ಅವರು ಸಭೆಯೊಳಗೆ ಇದ್ದರು. ಕಾರಣಾಂತರದಿಂದ ಸಭಾತ್ಯಾಗ ಮಾಡಿ ಒಳಗಡೆ ಬರುವುದಕ್ಕೆ ಸ್ವಲ್ಪ ತಡವಾಗಿತ್ತು. ಅವರು ವಾಪಸ್ಸು ಬರುವಷ್ಟರಲ್ಲಿ ನಮ್ಮ ಗಾಡಿ ಮುಂದಿನ ಪ್ರಶ್ನೆಗೆ ಹೋಗಿತ್ತು. ಹಾಗಾಗಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾನ್ಯ ಸದಸ್ಯರಾದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆರ್.ಚೌಡರೆಡ್ಡಿ ತೂಪಲ್ಲಿಯವರಿಗೆ ಪ್ರಶ್ನೆ ಕೇಳಲು ಅವಕಾಶ ಕೊಡುತ್ತಿದ್ದೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು ಸದನದಲ್ಲಿ ಹಾಜರಿದ್ದಾರೆ. ಮಾನ್ಯ ಚೌಡರೆಡ್ಡಿಯವರೇ, ತಾವೀಗ ತಮ್ಮ ಪ್ರಶ್ನೆಯನ್ನು ಕೇಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: ೨೮೪

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರತಿದಿವಸ ಸುಮಾರು 4 ಲಕ್ಷ ಜನ

ಪ್ರಯಾಣಿಕರು ನೆಮ್ಮದಿಯಾಗಿ ಪ್ರಯಾಣ ಮಾಡುತ್ತಿದ್ದಾರೆ. ಪ್ರತಿ ಮೂರು ನಿಮಿಷಗಳಿಗೆ ಒಂದಾವರ್ತಿ ರೈಲುಗಳು ಸಂಚರಿಸುತ್ತಿವೆ. ಇದಕ್ಕೆ ನಾನು ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕಳೆದ ಬೆಳಗಾಂ ಅಧಿವೇಶನದಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಲ್ಲಿ ನಮ್ಮ ಕನ್ನಡಿಗರಿಗೆ ನೌಕರಿಯಲ್ಲಿ ಅವಕಾಶ ಸಿಗುತ್ತಿಲ್ಲವೆಂದು ಚರ್ಚೆ ಆಗಿತ್ತು. ಸುಮಾರು 1,500 ರಷ್ಟು ಜನ ನಮ್ಮ ಕನ್ನಡಿಗರು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಇವರ ಮೇಲಿರುವಂತಹ ಎಲ್ಲಾ ಮೇಲಧಿಕಾರಿಗಳು ಕೂಡ temporary basis ನ ಮೇಲೆ ನೇಮಕವಾಗಿ ಇವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಇವರ ದಬ್ಬಾಳಿಕೆಯನ್ನು ತಡೆದುಕೊಳ್ಳಲಾಗದೆ ಈಗಾಗಲೇ ಕೆಲವರು ಕೆಲಸವನ್ನು ಕೂಡ ಬಿಟ್ಟಿದ್ದಾರೆ. ಆದ್ದರಿಂದ ಮೇಲಧಿಕಾರಿಗಳಾದ ಶ್ರೀಯುತರುಗಳಾದ ಹರಿಸ್ವಾಮಿ ಮತ್ತು ರಘುರಾಮ್‌ರವರನ್ನು ಕೊಡಲೇ ಬದಲಾವಣೆ ಮಾಡಬೇಕೆಂದು ಹೆಸರುಗಳ ಸಮೇತವಾಗಿ ಹೇಳಿದ್ದೆ. ಆದರೆ, ಇಷ್ಟಾದರೂ ಸಹ, ಶ್ರೀ ಹರಿಸ್ವಾಮಿಯವರಿಗೆ ಅಲ್ಲಿಯೇ ಮುಂಬಡ್ತಿ ಕೊಟ್ಟಿದ್ದಾರೆ. ದಿನಾಂಕ 01.012.2017 ರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಯಾವ ಯಾವ ಹುದ್ದೆಗಳಿಗೆ ಗುತ್ತಿಗೆ ಆಧಾರದಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ 52 ಜನ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಉತ್ತರವನ್ನು ನೀಡಿದ್ದಾರೆ. ಅದರಲ್ಲಿ ಮೊದಲನೆಯದಾಗಿ, ಶ್ರೀ ಹರಿಸ್ವಾಮಿಯವರ ಜೊತೆಗೆ ಪುನಃ ತಮಿಳಿನ ಇನ್ನೊಬ್ಬ ವ್ಯಕ್ತಿ ಶ್ರೀ ರಾಮಚಂದ್ರನ್ ಎನ್ನುವವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ಯಾರು ಕೆ.ಎ.ಎಸ್ ಮತ್ತು ಐ.ಎ.ಎಸ್ ಅಧಿಕಾರಿಗಳು ಯಾರು ಆ ಆಡಳಿತ ನಡೆಸುವವರು ಇರಲಿಲ್ಲವೇ?

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಳೆದ ಬಾರಿಯ ಅಧಿವೇಶನದಲ್ಲಿ ನಮ್ಮ ಕನ್ನಡಿಗರಿಗೆ ಆದ್ಯತೆ ಕೊಡುತ್ತೇವೆಂಬ ಭರವಸೆಯನ್ನು ಸಹ ಕೊಟ್ಟಿದ್ದರು. ಅದೇರೀತಿ ನಮ್ಮ ಕನ್ನಡಿಗರು ಅಲ್ಲಿ ಕೆಲಸ ಮಾಡುತ್ತಿದ್ದಾರೆ ಅವರ ಮೇಲಧಿಕಾರಿಗಳಾದ, ಶ್ರೀ ರಘುರಾಮನ್ ಇರಬಹುದು, ಶ್ರೀ ರಾಮಚಂದ್ರನ್ ಇರಬಹುದು, ಶ್ರೀ ಅಮೃತನ್ ಇರಬಹುದು, ಶ್ರೀ ಟಿ.ಮಾಧವರಾಜ್ ಇರಬಹುದು, ಶ್ರೀ ಎಸ್.ಆರ್.ಭಾಸ್ಕರನ್ ಇರಬಹುದು ಮತ್ತು ಶ್ರೀ ಏಡ್ರೀಸನ್ ಇರಬಹುದು, ಇವರೆಲ್ಲರೂ ಸಹ ತಮಿಳರು. ಈ ರೀತಿ ಏಕೆ ಮಾಡುತ್ತಾರೆ? ನಾನು ವ್ಯವಸ್ಥಾಪಕ ನಿರ್ದೇಶಕರ ಹತ್ತಿರ ಈ ಬಗ್ಗೆ ಮಾತನಾಡಿದ್ದೆ. ಆದರೆ, ಅವರು ಈಗ ವರ್ಗಾವಣೆಯಾಗಿ ಹೋಗಿದ್ದಾರೆ. ಹೊಸದಾಗಿ ಬಂದಿರುವಂತಹ ವ್ಯವಸ್ಥಾಪಕ ನಿರ್ದೇಶಕರು ಅದನ್ನು ಸರಿಪಡಿಸಿಕೊಡುತ್ತೇವೆಂದು ಹೇಳಿದ್ದಾರೆ. 2017 ರ ಡಿಸೆಂಬರ್‌ನಿಂದೀಚೆಗೆ ಶ್ರೀ ರಾಮಚಂದ್ರನ್ ಎಂಬುವವರಿಗೆ ರೂ.75 ಸಾವಿರ ವೇತನ ಕೊಟ್ಟು ಗುತ್ತಿಗೆ ಆಧಾರದ ಮೇಲೆ ನೇಮಕ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಂಡಿದ್ದಾರೆ. ಶ್ರೀ ರಾಮಚಂದ್ರನ್ ರವರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಜಾಹೀರಾತು ಹೊರಡಿಸಿದ್ದರೆ?

(ಮುಂದು...)

(೦೮೦)೦೮.೦೨.೨೦೧೮-೧೨.೫೦-ಎಂವಿ-ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಮುಂದು):-**

ಅವರನ್ನು ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದಾರೆ. ಇದರಿಂದ ನಮ್ಮ ಕನ್ನಡಿಗರಿಗೆ ತುಂಬಾ ಅನ್ಯಾಯವಾಗುತ್ತಿದೆ. ಈ ಮೂರು ಜನ ಅಧಿಕಾರಿಗಳನ್ನು ಮೊದಲು ನೀವು ತೆಗೆದು ಹಾಕಿದರೆ, ಅಲ್ಲಿನ ನೌಕರರು ನೆಮ್ಮದಿಯಾಗಿ ಕೆಲಸ ಮಾಡುತ್ತಾರೆ. ಈಗ ಮೂರು ಮತ್ತು ನಾಲ್ಕು ನಿಮಿಷಕ್ಕೆ ಒಂದರಂತೆ ಟ್ರೈನ್ ಓಡುತ್ತಿದೆ, ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈ ಕೂಡಲೆ ಆ ಮೂರು ಜನ ಅಧಿಕಾರಿಗಳನ್ನು ತೆಗೆದುಹಾಕಿ, ಅಲ್ಲಿರುವಂತಹ ನೌಕರರು ನೆಮ್ಮದಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಈ ಹಿಂದಿನ ಎಂ.ಡಿ.ಯವರನ್ನು ನಾವು ವರ್ಗಾವಣೆ ಮಾಡಲಿಲ್ಲ. ಕೇಂದ್ರ ಸರ್ಕಾರದವರು ಅವರನ್ನು ಏರ್ ಇಂಡಿಯಾ ಸಂಸ್ಥೆಗೆ ಎಂ.ಡಿ., ಮಾಡಬೇಕೆಂದು ಕೇಳಿದರು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವರನ್ನು relieve ಮಾಡಿದರು. ಈಗ ಏನಾಗಿದೆ ಎಂದರೆ, ಬಿ.ಎಂ.ಆರ್.ಸಿ.ಎಲ್., ಒಂದು Corporation ಅದು ನಮಗೆ ನೇರವಾಗಿ ಬರುವುದಿಲ್ಲ. ಅದರಲ್ಲಿ ಶೇಕಡ ೫೦ರಷ್ಟು ಕೇಂದ್ರ ಸರ್ಕಾರದ್ದು, ಇನ್ನುಳಿದ ಶೇಕಡ ೫೦ರಷ್ಟು ರಾಜ್ಯ ಸರ್ಕಾರದ್ದು. ಆದುದರಿಂದ ನಾವು ಅದರ ದಿನನಿತ್ಯದ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡುವುದಕ್ಕೆ ಆಗುವುದಿಲ್ಲ. ನಾನು ಆ ಸಂದರ್ಭದಲ್ಲೇ ಈ ಹಿಂದಿನ ಎಂ.ಡಿ., ಯವರಿಗೆ ಹೇಳಿದ್ದೇನೆ. ಏನೆಂದರೆ, ಯಾವ ಕನ್ನಡಿಗರಿಗೂ ಸಹ ಅನ್ಯಾಯವಾಗಬಾರದು ಮತ್ತು ಕನ್ನಡಿಗರಿಗೆ ಆದ್ಯತೆ ಕೊಡಬೇಕೆಂದು ತಿಳಿಸಿದ್ದೇನೆ. ಈ ವಿಷಯವನ್ನು ಈಗ ಹೊಸದಾಗಿ ಬಂದಿರುವಂತಹ ಎಂ.ಡಿ.ಯವರ ಗಮನಕ್ಕೂ ಸಹ ತರುತ್ತೇನೆ. ಮಾನ್ಯ ಸದಸ್ಯರು ಒಬ್ಬೊಬ್ಬರ ವಿಚಾರದ ಬಗ್ಗೆ ಕೇಳಿದರೆ, ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಸಾಮಾನ್ಯವಾಗಿ ತಾವು ಏನು ಹೇಳಿದ್ದೀರಿ ಅದನ್ನು ಎಂ.ಡಿ.,ಯವರ ಗಮನಕ್ಕೆ ತರುತ್ತೇನೆ. ಅದರ ಪ್ರಕಾರ ಕನ್ನಡಿಗರಿಗೆ ಆದ್ಯತೆ ಕೊಡುವುದಕ್ಕೆ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಒಬ್ಬೊಬ್ಬರ ವಿಷಯ ಎಂದರೆ, ನಾನು ಎಲ್ಲಾ ನೌಕರರ ಬಗ್ಗೆ ಹೇಳಲಿಲ್ಲ. ಎಲ್ಲಾ ಕನ್ನಡಿಗ ನೌಕರರು ಸುಮಾರು 1,500 ಜನರು ಇದ್ದಾರೆ, ಅವರ ಮೇಲಿನ ಅಧಿಕಾರಿಗಳ ಮೂರು ಜನರ ಹೆಸರನ್ನು ಮಾತ್ರ ಹೇಳಿದ್ದೇನೆ. ಅವರುಗಳೇ ಮುಖ್ಯ ಹುದ್ದೆಗಳಲ್ಲಿ ಇರುವುದು. ಅವರ ಮೇಲಿನ ಅಧಿಕಾರಿಗಳು ಮಾತ್ರ ಗುತ್ತಿಗೆ ಆಧಾರದ ಮೇಲೆ ಬಂದಿರುವುದು. ನಮ್ಮ ರಾಜ್ಯದ ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳನ್ನು ಅಲ್ಲಿಗೆ ನಿಯೋಜನೆ ಮಾಡಿದ್ದರೆ ನಾನು ಬೇಡವೆಂದು ಹೇಳುತ್ತಿರಲಿಲ್ಲ. ಮಾನ್ಯ ಸಚಿವರು ನವೆಂಬರ್‌ನ ಬೆಳಗಾವಿ ಅಧಿವೇಶನದಲ್ಲಿ ಕನ್ನಡಿಗರಿಗೆ ಆದ್ಯತೆ ಕೊಡುತ್ತೇವೆಂದು ಹೇಳಿದ್ದರು. ಆದರೆ, ಅವರು ಇನ್ನೂ 52 ಜನರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಮೊದಲನೆಯವರೆ ರಾಮಚಂದ್ರನ್, ಅವರಿಗೆ 75 ಸಾವಿರ ರೂಪಾಯಿಗಳನ್ನು ಕೊಟ್ಟು ಮತ್ತೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಅವರು ಬೆಳಗಾವಿ ಅಧಿವೇಶನದಲ್ಲಿ ಭರವಸೆ ಕೊಟ್ಟಿದ್ದರು, ಈ ಅಧಿವೇಶನದ ಸಮಯಕ್ಕೆ ಮತ್ತೆ ಅವರನ್ನು ನೇಮಕ ಮಾಡಿಕೊಳ್ಳುತ್ತಾರೆ, ಹಾಗಾದರೆ ಇದು ಯಾವ ನ್ಯಾಯ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿಯವರು ದಯವಿಟ್ಟು ಇದನ್ನು ತಿಳಿದುಕೊಳ್ಳಬೇಕು. ಅದು ಏನೆಂದರೆ, ದಿನನಿತ್ಯದ ಆಡಳಿತದಲ್ಲಿ ನಾವು ಅಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅವರು ಅದನ್ನು ನಡೆಸಿಕೊಂಡು ಹೋಗುತ್ತಾರೆ. ಕನ್ನಡಿಗರಿಗೆ ಆದ್ಯತೆ ಕೊಡಬೇಕೆಂದು, ನಾನು ಈ ಹಿಂದಿನ ಎಂ.ಡಿ.,ಯವರಿಗೆ ಹೇಳಿದ್ದೇನೆ. ಕನ್ನಡಿಗರು ಸಿಗದೇ ಇದ್ದರೆ, ಈಗ ಕೆಲವು ಟೆಕ್ನಿಕಲ್ ಹುದ್ದೆಗಳು ಬರುತ್ತವೆ. ಆಗ ಆ ಹುದ್ದೆಗಳಿಗೆ ಅಗತ್ಯ ವಿದ್ಯಾರ್ಹತೆ ಇರುವವರನ್ನು ನೇಮಕ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಈಗ ನಾನು ತಮ್ಮ ಅನಿಸಿಕೆಗಳನ್ನು ಅವರಿಗೆ ಹೇಳಬಹುದು. ಅದರ ಪ್ರಕಾರ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಿ ಎಂದು ಮೇಲಿನ ಅಧಿಕಾರಿಗಳಿಗೆ ಹೇಳುತ್ತೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ದಯವಿಟ್ಟು ಸ್ವಲ್ಪ ಕೇಳಿ, ನಾನು ರಘುರಾಮನ್‌ರವರ ಮೇಲೆ ಏನು ಆಪಾದನೆ ಮಾಡಿದ್ದೇನೆ, ಅವರು ಅಲ್ಲಿನ ಸಿಬ್ಬಂದಿ ಮೇಲೆ ಅನುಚಿತವಾಗಿ ವಹಿಸಿ, ಅಲ್ಲಿನ ಸಿಬ್ಬಂದಿಗಳಿಗೆ ಶೋಕಾಸ್ ನೋಟೀಸ್ ನೀಡಿರುವಂತಹ ದಾಖಲೆಗಳನ್ನು ಸಹ ತಮಗೆ ತೋರಿಸುತ್ತೇನೆ. ಈ ತರಹದ ಮೇಲಿನ ಅಧಿಕಾರಿಗಳನ್ನು ತೆಗೆದುಹಾಕಿ ಎಂದು ಹೇಳಿದ್ದೇನೆ. ಆ ತರಹ ಕೆಲಸ ಮಾಡಿಲ್ಲವೆಂದರೆ ಈ ಸದನ ಏಕೆ ಬೇಕು ಮತ್ತು ಈ ಚರ್ಚೆ ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕು? ನಾವು ಮಾತನಾಡುತ್ತಿರುವುದೆಲ್ಲಾ waste ಅಲ್ಲವೆ? ನಾವು ಈ ವಿಷಯವನ್ನು ಅನೇಕ ಬಾರಿ ಚರ್ಚೆ ಮಾಡಿದ್ದೇವೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಕನ್ನಡಿಗರಿಗೆ ಕೆಲಸ ಸಿಗಲಿಲ್ಲವೆಂದರೆ ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಯೆ?

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಸಂಬಂಧಪಟ್ಟಿದ್ದಾರೆ. ಸಭಾಪತಿಗಳ ಮುಖಾಂತರ ನಾವೆಲ್ಲಾ ಸದಸ್ಯರು ಚರ್ಚೆ ಮಾಡುತ್ತಿದ್ದೇವೆ. ಅವರ ಮೇಲೆ ಅಪಾದನೆ ಇದೆ, ಅದಕ್ಕೆ ಅವರನ್ನು ತೆಗೆದುಹಾಕಿ ಎಂದು ಹೇಳಿದರೆ ಅದಕ್ಕೆ ಮಾನ್ಯ ಸಚಿವರು ಅವರನ್ನು ತೆಗೆಯುವುದಿಲ್ಲವೆಂದರೆ ನಾವು ಇಲ್ಲಿ ಈ ಕುರಿತು ಚರ್ಚೆಯನ್ನು ಏಕೆ ಮಾಡಬೇಕು? ಈಗ ನಾವು ಪ್ರಶ್ನೆ ಹಾಕುವಂತೆಯೂ ಇಲ್ಲ, ಅದಕ್ಕೆ ಉತ್ತರವೂ ಬರುವಂತೆಯೂ ಇಲ್ಲ. ದಯವಿಟ್ಟು ಇದಕ್ಕೆ ಹಾರಿಕೆಯ ಉತ್ತರ ಬೇಡ, ಇದಕ್ಕೆ ಮಾನ್ಯ ಸಚಿವರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.

**ಶ್ರೀ ಕೆ.ಜೆ.ಜಾರ್ಜ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿಯವರೇ, ಬಿ.ಎಂ.ಆರ್.ಸಿ.ಎಲ್., ಒಂದು ಕಾರ್ಪೋರೇಶನ್ ಎಂದು ನಾನು ಈ ಮೊದಲೇ ಹೇಳಿದ್ದೇನೆ. ಶೇಕಡ ೫೦ರಷ್ಟು ಕೇಂದ್ರ ಸರ್ಕಾರದ್ದು, ಶೇಕಡ ೫೦ರಷ್ಟು ರಾಜ್ಯ ಸರ್ಕಾರದ್ದು. ಕನ್ನಡಿಗರಿಗೆ ಮೊದಲ ಆಧ್ಯತೆ ಕೊಡಬೇಕೆಂದು ಈ ಹಿಂದಿನ ಎಂ.ಡಿ.,ಯವರಿಗೂ ಹೇಳಿದ್ದೇನೆ ಮತ್ತು ಈಗಿನ ಹೊಸ ಎಂ.ಡಿ.ಯವರನ್ನು ಸಹ ಕರೆದು ಹೇಳಿದ್ದೇನೆ. ಸರ್ಕಾರದಿಂದ ನೇರವಾಗಿ ಅವರ ಮೇಲೆ disciplinary action ಅನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಾರಣ ಅದು ಒಂದು ಕಾರ್ಪೋರೇಶನ್. ಸದಸ್ಯರು ಏನು ಆಪಾದನೆ ಮಾಡಿದ್ದಾರೆ, ಅದನ್ನು ಎಂ.ಡಿ.,ಯವರ ಗಮನಕ್ಕೆ ತಂದು, ವಿಚಾರಣೆ ಮಾಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಈಗ ಜಾಗ ನಮ್ಮದು, ಓಡಾಡುವವರು ನಮ್ಮ ಪ್ರಯಾಣಿಕರು, ಆಡಳಿತ ಮಾತ್ರ ಅವರು ನಡೆಸಬೇಕು. ಈಗ ಆಡಳಿತದಲ್ಲಿ harassment ಆಗುತ್ತಿದೆ ಎಂದರೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರನ್ನು ಮತ್ತು ನನ್ನನ್ನು ಸಹ ಸಭೆಗೆ ಕರೆದಿದ್ದರು, ಅದಕ್ಕೆ ನಾನು ಧನ್ಯವಾದಗಳನ್ನು ಸಹ ಹೇಳಿದ್ದೇನೆ. ಮಾನ್ಯ ಸಚಿವರು ಒಂದು ವರ್ಷದ ಹಿಂದೆ, ಎಂ.ಡಿ.ಯವರನ್ನು ಕರೆಯಿಸಿ, ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದಾರೆ ಮತ್ತು ಬೇರೆ ಮೆಟ್ರೋಗಳಲ್ಲಿ ಅವರಿಗೆಲ್ಲಾ ಪ್ರತ್ಯೇಕವಾಗಿ ಭತ್ಯೆಗಳನ್ನು ಕೊಡುತ್ತಿದ್ದಾರೆ, ಇಲ್ಲಿನ ನೌಕರರಿಗೆ ಯುಗಾದಿ ಹಬ್ಬಕ್ಕೆ ಏನಾದರೂ ಗಿಫ್ಟ್ ಆಗಿ ಹತ್ತು ರೂಪಾಯಿಯಾದರೂ ನೀಡಿ, ಏನಾದರೂ ಇದ್ದರೆ ತೆಗೆದುಕೊಂಡು ಬನ್ನಿ ಅದಕ್ಕೆ ನಾನು ಸಹಿ ಮಾಡುತ್ತೇನೆ ಎಂದು ಸಚಿವರೇ ಹೇಳಿದರು ಕೂಡ, ಅದನ್ನು ಅವರು ಮಾಡಲಿಲ್ಲ, ಈ ರೀತಿಯಾದರೆ ಇದು ಕನ್ನಡಿಗರಿಗೆ ಮಾಡಿದ ಅನ್ಯಾಯವಲ್ಲವೆ? ಇದರ ಬಗ್ಗೆ ನಾವು ಚರ್ಚೆ ಮಾಡದೆ ಇದ್ದರೆ, ನಾವು ನಮ್ಮ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದುದರಿಂದ ತಾವು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳಲೇಬೇಕು. ಈಗ ಹೊಸ ಎಂ.ಡಿ.,ಯವರ ಮುಖಾಂತರ ಒಂದು ಸಭೆ ಮಾಡಿ, ಈ ವಿಷಯದ ಬಗ್ಗೆ ಚರ್ಚೆ ಮಾಡಿ ಅವರಿಗೆ ಸಹಾಯ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಅಲ್ಲಿನ ನೌಕರರು ಪ್ರತಿನಿತ್ಯ ಕಣ್ಣಿನಲ್ಲಿ ನೀರು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ, ಅಲ್ಲಿ ಆ ರೀತಿಯ ದಬ್ಬಾಳಿಕೆ ನಡೆಯುತ್ತಿದೆ. ನಾನು ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ಇದರಲ್ಲಿ ನನಗೆ ಬೇರೆ ಏನೂ ಇಲ್ಲ. ದಯವಿಟ್ಟು ಸಚಿವರು ನುಣುಚಿಕೊಳ್ಳಬಾರದು, ಆ ರೀತಿ ಆಗಿದ್ದೇ ಆದರೆ, ಇಷ್ಟೆಲ್ಲಾ ಚರ್ಚೆ ಮಾಡಿರುವುದಕ್ಕೆ ಯಾವುದೇ ಅರ್ಥ ಸಿಗುವುದಿಲ್ಲ.

**ಶ್ರೀ ಕೆ.ಜೆ.ಜಾರ್ಜ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿಯವರೇ ನಾನು ನುಣುಚಿಕೊಳ್ಳುವಂತಹ ಪ್ರಶ್ನೆಯೇ ಬರುವುದಿಲ್ಲ. ನೀವು ಏನು ಪ್ರಶ್ನೆಯನ್ನು ಎತ್ತಿದ್ದೀರಿ ಅದಕ್ಕೆ ನನ್ನ ಸಹಮತ ಇದೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದರೂ ಸಹ ಅವರು ನೌಕರರಿಗೆ ಹಣವನ್ನು ಕೊಡಲಿಲ್ಲ.

**ಶ್ರೀ ಕೆ.ಜೆ.ಜಾರ್ಜ್**:- ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳನ್ನು ಎರಡು ಬಾರಿ ಕರೆಯಿಸಿ ಮಾತನಾಡಿದ್ದೇನೆ. ಅವರಿಗೆ ಈ ರೀತಿ ಮಾಡಿ ಎಂದು ಹೇಳಿದ್ದೇನೆ. ಆಗ ಇದ್ದಂತಹ ಎಂ.ಡಿ.,ಯವರು ವರ್ಗಾವಣೆಗೊಂಡಿದ್ದಾರೆ. ಈಗ ಹೊಸ ಎಂ.ಡಿ.,ಯವರನ್ನು ಕರೆಯಿಸಿ ಅವರಿಗೆ ಹೇಳುತ್ತೇನೆ, ಈ ತರಹ ಅನ್ಯಾಯ ಆಗಬಾರದು, ಎಲ್ಲಿ ಯಾರ ಮೇಲೆ ಆರೋಪ ಇದೆ, ಅವರ ವಿರುದ್ಧ ತನಿಖೆ ಮಾಡಿ, ಕ್ರಮ ತೆಗೆದುಕೊಳ್ಳುವಂತೆ ಅವರಿಗೆ ತಿಳಿಸುತ್ತೇನೆ. ಈಗ ಅದು ನಮ್ಮ ಇಲಾಖೆಯಾಗಿದ್ದರೆ ನೇರವಾಗಿ ನಾವು ಅದನ್ನು ಸರಿಪಡಿಸಬಹುದಿತ್ತು. ನಾನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿ.ಎಂ.ಆರ್.ಸಿ.ಎಲ್., ನವರನ್ನು ಕರೆದು ಏಕೆ ರೀತಿಯಾಗಿದೆ ಎಂದು ಕೇಳುತ್ತೇನೆ. ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಅದು ನಮ್ಮದೆ ಜಾಗ. ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ, ಈಗ ಬೆಂಗಳೂರು ಸಬ್-ಅರ್ಬನ್ ರೈಲ್ ಅನ್ನು ಮಾಡಿ ಎಂದು ಕೇಂದ್ರ ಸರ್ಕಾರದವರಿಗೆ ನಾವು ಮತ್ತು ಮಾನ್ಯ ಲೋಕಸಭಾ ಸದಸ್ಯರಾದ ಪಿ.ಸಿ.ಮೋಹನ್‌ರವರು ಅವರಿಗೆ ಮನವಿ ಮಾಡಿಕೊಂಡಿದ್ದೇವೆ. ಅದನ್ನು MEMU (Mainline Electric Multiple Unit ) Train ಅನ್ನು ಮಾಡಬೇಕೆಂದು ರಾಜ್ಯ ಸರ್ಕಾರದಿಂದ ೩೫೦ ಕೋಟಿ ರೂಪಾಯಿಗಳನ್ನು sanction ಮಾಡಿ, ಅದಕ್ಕೆ ಈಗಾಗಲೇ ೧೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಅದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲ. ಈಗ ಮಾನ್ಯ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಸಬ್-ಅರ್ಬನ್ ರೈಲಿಗೆ ಸುಮಾರು ೧೨ ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದರು. ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರು ಸುಮಾರು ೧೭ ಸಾವಿರ ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದಲ್ಲ ಅದು ಕೇಂದ್ರ ಸರ್ಕಾರದ್ದು ಎಂದು ವಿಧಾನಸಭೆಯಲ್ಲಿ ಹೇಳಿದರು. ಈಗ ಪಿಂಕ್ ಬುಕ್ ಬಂದಿದೆ, ಆ ಪಿಂಕ್ ಬುಕ್‌ನಲ್ಲಿ ಏನೆಂದು ಹೇಳಿದ್ದಾರೆ, ಸುಮಾರು ೧೨ ಸಾವಿರ ಕೋಟಿ ರೂಪಾಯಿಗಳ ಪೈಕಿ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಇನ್ನುಳಿದ ಆರು ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಕೊಡಬೇಕು. ಮತ್ತೆ ನಾವು ಶೇಕಡ ೫ರಷ್ಟು FAR (Floor Area Ratio) ಕೊಡಬೇಕೆಂದು condition ಹಾಕಿದ್ದಾರೆ. ನಾವು ಈಗಾಗಲೇ SPV (Special Purpose Vehicle) ಮಾಡಿ ready ಮಾಡಿ ಇಟ್ಟಿದ್ದೇವೆ ಅದಕ್ಕೆ ಅವರು ಸಹಿ ಮಾಡಬೇಕು. ಈಗ ನಾವು ಏನನ್ನು ಹೇಳಿದ್ದೇವೆ ಎಂದರೆ SPV ಮಾಡಿ, ನೀವು ಶೇಕಡ ೫೦ರಷ್ಟನ್ನು ನೀಡಿ, ನಾವು ಶೇಕಡ ೫೦ರಷ್ಟನ್ನು ನೀಡುತ್ತೇವೆಂದು ಹೇಳಿದ್ದೇವೆ. ಈಗ ೧೭ ಸಾವಿರ ಕೋಟಿ ರೂಪಾಯಿಗಳು ಎಂದು ಪ್ರಧಾನಿಯವರು ಹೇಳಿದರು, ಇದರಿಂದ ಜನರಿಗೆ ಈ ರೀತಿಯ ತಪ್ಪು ಸಂದೇಶ ಹೋಗುತ್ತದೆ. ಅವರು ಪಿಂಕ್ ಬುಕ್‌ನಲ್ಲಿ ಕೊಟ್ಟಿರುವುದು ಬರೀ ಒಂದು ಕೋಟಿ ರೂಪಾಯಿಗಳು ಮಾತ್ರ. ಈಗ ನಾವು ಏನು ಮಾಡಿದ್ದೇವೆ ಎಂದರೆ, ನಾವೆಲ್ಲಾ ಚರ್ಚೆ ಮಾಡಿ, ಸುಮಾರು ೧೭೫೦ ಕೋಟಿ ರೂಪಾಯಿಗಳಲ್ಲಿ first phase ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅದರಲ್ಲಿ ಶೇಕಡ ೨೫ರಷ್ಟನ್ನು ಕೇಂದ್ರ ಸರ್ಕಾರದವರು ನೀಡಲಿ, ಶೇಕಡ ೨೫ರಷ್ಟನ್ನು ರಾಜ್ಯ ಸರ್ಕಾರ ನೀಡಲಿ, ಇನ್ನುಳಿದ ಶೇಕಡ ೫೦ರಷ್ಟನ್ನು ಹಣಕಾಸು ಸಂಸ್ಥೆಗಳಿಂದ ತೆಗೆದುಕೊಳ್ಳೋಣವೆಂದು ತೀರ್ಮಾನ ಮಾಡಿದ್ದೇವೆ. ಈ ಕುರಿತು ನಮ್ಮ ರಾಜ್ಯ ಸರ್ಕಾರದ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ನಾವು ನಮ್ಮ ಪಾಲನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಕ್ಕೆ ಸಿದ್ಧರಿದ್ದೇವೆ. At least ಅದನ್ನಾದರೂ ಬೇಗ ಕೊಟ್ಟಿದ್ದರೆ first phase ಆಗುತ್ತಿತ್ತು. ಈಗ ರೈಲ್ವೇ ಎಂದರೆ ಶೇಕಡ ೫೦ರಷ್ಟನ್ನು ಕೊಡಬೇಕು, ಭೂಮಿಯನ್ನು ಕೊಡಬೇಕು, ಇದೆಲ್ಲವನ್ನೂ ಕೊಟ್ಟರು ಸಹ ಆ ಸಂಸ್ಥೆಯನ್ನು ನಡೆಸುವವರು ರೈಲ್ವೆಯವರು ಎಂದು ತಮಗೆ ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾರೆ, ಈಗ 17 ಸಾವಿರ ಕೋಟಿ ರೂಪಾಯಿಗಳೆಂದು ಏನು announce ಮಾಡಿದ್ದಾರೆ, ಅದರಲ್ಲಿ ಮೊದಲನೇ ಹಂತವಾಗಿ ಅವರು ಸುಮಾರು 1,750 ಕೋಟಿ ರೂಪಾಯಿಗಳ ಈ ಯೋಜನೆಗೆ ಚಾಲನೆ ಕೊಟ್ಟರೆ ಒಳ್ಳೆಯದು. ಆ MEMU Train ಗೂ ಸಹ ಶೇಕಡ ೫೦ರಷ್ಟನ್ನು ಕೊಡಬೇಕೆಂದು ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಅದನ್ನು

ಆದಷ್ಟು ಬೇಗನೆ ಮಾಡಬೇಕೆಂದು ಮನವಿಯನ್ನು ತಮ್ಮ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇನೆ.

**ಸಭಾಪತಿಯವರು**:- ಧನ್ಯವಾದಗಳು. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೆ, ದಿನಾಂಕ ೦೮ನೇ ಫೆಬ್ರವರಿ, ೨೦೧೮ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 4ರಲ್ಲಿನ ಲಿಖಿತ ಮೂಲಕ ಉತ್ತರಿಸುವ ಒಟ್ಟು ೯೦ ಪ್ರಶ್ನೆಗಳ ಪೈಕಿ 25 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**:- ಮಂಡಿಸಲಾಯಿತು.

(ಉತ್ತರಗಳನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಅದನ್ನು ಮತ್ತೊಮ್ಮೆ ಓದಿ ಹೇಳಲಿ. ಏಕೆಂದರೆ ಅದು ಪ್ರೆಸ್‌ನವರಿಗೆ ಗೊತ್ತಾಗಲಿ. ನಾವು ಅದಕ್ಕೆ ಹೇಳುವುದು, ಮೊನ್ನೆಯ ದಿವಸ ಗೃಹ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ, ಇಡೀ ದಿವಸ ಅಧಿಕಾರಿಗಳು ಇರಲಿಲ್ಲ.

**ಸಭಾಪತಿಯವರು**:- ಇದು Unstarred. ಮಾನ್ಯ ಮುಖ್ಯಮಂತ್ರಿಗಳು B.A.C., ಯಲ್ಲಿ ಸಿಗುತ್ತಾರೆ, ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಇವತ್ತಿನ ದಿವಸ ತುಂಬಾ ಪ್ರಶ್ನೆಗಳಿಗೆ ಕಾಲಾವಕಾಶ ತೆಗೆದುಕೊಳ್ಳುವಂಥದ್ದನ್ನು ನಾನು ಗಮನಿಸಿದ್ದೇನೆ. ನಾನು ಇಲ್ಲಿ ಸಭಾಪತಿಯವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಥಾನದಲ್ಲಿ ಕುಳಿತುಕೊಂಡು ಟೀಕೆ ಮಾಡುವುದು ಸರಿಯಲ್ಲವೆಂದು ಸುಮ್ಮನಿದ್ದೇನೆ. ಈ ರೀತಿಯ ಪ್ರಶ್ನೆಗಳಿಗೆ ಬಹಳ ಕಡಿಮೆ ಉತ್ತರಗಳು ಬರುತ್ತಿವೆ. ಅದನ್ನು ಹೇಳುವಂತಹ ಜಾಗದಲ್ಲಿ ಹೇಳುತ್ತೇನೆ, ಅದನು ಸಭೆಯಲ್ಲಿ ಹೇಳುವುದಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ತಾವುಗಳು ಹೇಳದಿದ್ದರೆ, ಅದನ್ನು ಮತ್ಯಾರು ಹೇಳುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಇಂದು ಸಂಜೆ ಮುಖ್ಯ ಕಾರ್ಯದರ್ಶಿಯವರನ್ನು ಭೇಟಿ ಮಾಡುತ್ತೇನೆ. ನಿನ್ನೆಯ ದಿವಸ ಮತ್ತು ಇವತ್ತಿನ ದಿವಸಕ್ಕೆ ಸಂಬಂಧಪಟ್ಟಂತೆ ಇದನ್ನು ಅವರ ಗಮನಕ್ಕೆ ತರುತ್ತೇನೆ. ಈ ಕೆಲಸವನ್ನು ಚುರುಕಾಗಿ ಮಾಡಿಸಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾವು ಇರುವುದನ್ನು ಹೇಳಬೇಕಾಗುತ್ತದೆ, ಸುಳ್ಳನ್ನು ಹೇಳುವುದಕ್ಕೆ ಆಗುವುದಿಲ್ಲ.

**(ಮುಂದು...)**

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳು ಬಂದಂತಹ ಸಂದರ್ಭದಲ್ಲಿ ಯಾವ್ಯಾವ ಪ್ರಶ್ನೆಯನ್ನು ಬಾಕಿ ಇಡುತ್ತಾರೆ ಎಂದು ದಯವಿಟ್ಟು ಗಮನಿಸಿ. ಕೇಂದ್ರ ಸರ್ಕಾರದಿಂದ ಬಂದಂತಹ ಅನುದಾನ ಎಷ್ಟು ಎನ್ನುವ ಉತ್ತರ ಆಮೇಲೆ. ಕೇಂದ್ರ ಸರ್ಕಾರದಿಂದ ಎಷ್ಟೆಷ್ಟು ಹಣ ಯಾವ್ಯಾವುದಕ್ಕೆ ಬಂದಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದನ್ನು ಕೂಡ ಇವರು ಉತ್ತರ ಬಂದಿರುವುದಿಲ್ಲವೆಂದು ಬಾಕಿ ಇಡುತ್ತಾರೆ. ಅದೇ ರೀತಿ ಶ್ರೀ ನಂಜುಡಪ್ಪ ವರದಿ ಬಗ್ಗೆ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಬಗ್ಗೆ ಎಷ್ಟು ಹುದ್ದೆ ಖಾಲಿಯಿದೆ, ಎಷ್ಟು ಹುದ್ದೆ ಭರ್ತಿಯಾಗಿದೆ, ಅಲ್ಲಿ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲವೆಂದು ಇಡೀ ಪ್ರಪಂಚಕ್ಕೆ ಗೊತ್ತು. ಉತ್ತರ ಕೊಡುವುದಕ್ಕೆ ಆಗದೇ, ಉತ್ತರ ಬಂದಿಲ್ಲವೆಂದು ಹೇಳಿದರೆ ಇದನ್ನು ಸರ್ಕಾರ...

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಪ್ರದೇಶದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉತ್ತರ ನೀಡಿರುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ಹಾಗಾದರೆ, ರಾಜ್ಯಪಾಲರ ಭಾಷಣದಲ್ಲಿ ಉತ್ತರ ನೀಡಿ, ಈ ಸದನದಲ್ಲಿ ಉತ್ತರ ನೀಡದೇ ಏತಕ್ಕೆ ಬಾಕಿ ಇಟ್ಟಿದ್ದಾರೆ? 91 ಚುಕ್ಕೆರಹಿತ ಪ್ರಶ್ನೆಗಳಲ್ಲಿ 25 ಪ್ರಶ್ನೆಗಳಿಗೆ ಉತ್ತರ, ಈ ಸರ್ಕಾರ ಬದುಕಿದೆಯೇ? ಈ ಮಾತನ್ನು ಸರ್ಕಾರದವರೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಲಿ. ಇದು ಅವರಿಗೆ ಸಮಾಧಾನವಾದರೆ ಸರಿ, ಅದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಯಾವ ಅಧಿಕಾರಿಗಳಿಗೂ ಈ ಸರ್ಕಾರದ ಮೇಲೆ ಗೌರವ ಇಲ್ಲ, ಜೊತೆಗೆ ಭಯ ಕೂಡ ಇರುವುದಿಲ್ಲ. ಈ ಮಾತನ್ನು ನಾವು ಹೇಳುವಂಥದ್ದಲ್ಲ, ತಾವು ನೀಡುವಂತಹ ಉತ್ತರದಲ್ಲಿಯೇ ಇದೆ.

**(ಗೊಂದಲ)**

**ಶ್ರೀ ಕೆ.ಜೆ. ಜಾರ್ಜ್(ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಯವರೇ, ಕೆಲವೊಂದು ಪ್ರಶ್ನೆಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ವಿವರಣೆಯನ್ನು ಪಡೆಯಬೇಕಾಗಿರುತ್ತದೆ. ಆ ವಿವರಣೆ ಪಡೆಯಲು ಸಮಯ ಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ರೀತಿ ಅಧಿಕಾರಿಗಳನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವುದರಿಂದಲೇ ಅವರು ಹಾಸಿಗೆ ಹಾಕಿಕೊಂಡು ಮಲಗುತ್ತಿದ್ದಾರೆ. 91 ಪ್ರಶ್ನೆಗಳಿಗೆ 25 ಉತ್ತರಗಳು.

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ನಾವು ಯಾವ ಅಧಿಕಾರಿಗಳನ್ನೂ ಸಮರ್ಥನೆ ಮಾಡಿಕೊಳ್ಳುವುದಿಲ್ಲ. ಎಲ್ಲಾ ಅಧಿಕಾರಿಗಳಿಗೂ ಆದಷ್ಟು ಬೇಗ ಉತ್ತರ ಒದಗಿಸಬೇಕೆಂದು ಹೇಳಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಿನ್ನೆ ದಿವಸದ ವಿಚಾರವನ್ನು ಕೇಳಲಿ. ನಿನ್ನೆಯೂ ದಿವಸವು ಕೂಡ ಇದೇ ಹಣೆಬರಹ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳಲ್ಲಿ 5 ಪ್ರಶ್ನೆ ಅಥವಾ 10 ಪ್ರಶ್ನೆಗಳಿಗೆ ಉತ್ತರ ನೀಡಿಲ್ಲವೆಂದರೆ ಸರಿ. 91 ಪ್ರಶ್ನೆಗಳಲ್ಲಿ ಕೇವಲ 25 ಪ್ರಶ್ನೆಗಳಿಗೆ ಉತ್ತರವೆಂದು ಹೇಳಿದರೆ ಏನು ಅರ್ಥ? ಏತಕ್ಕೆ ಅಧಿವೇಶನ ನಡೆಸಬೇಕು? ಪ್ರಶ್ನೋತ್ತರ ಅವಧಿ ಏತಕ್ಕೆ ಬೇಕು? ಇವರಿಗೆ ಅಧಿಕಾರಿಗಳಲ್ಲಿ ಚುರುಕು ಮೂಡಿಸುವಂತಹ ಕೆಲಸವಾಗುತ್ತಿಲ್ಲವೆಂದರೆ, ಎಲ್ಲಿಯೋ ಒಂದು ಕಡೆ ಆಡಳಿತದ ವೈಫಲ್ಯ ಎದ್ದು ಕಾಣುತ್ತಿದೆ. ಶೇಕಡ 5 ಅಥವಾ 10 ರಷ್ಟಾದರೆ ತಡೆಯೋಣ. ಆದರೆ, ಶೇಕಡ 70 ರಷ್ಟು ಭಾಗ ಉತ್ತರ ನೀಡಿಲ್ಲವೆಂದರೆ ಏನು ಇದರ ಅರ್ಥ? ಒಂದು ಕಡೆ ಅಧಿಕಾರಿಗಳು ಈ ಸದನಕ್ಕೆ ಹಾಜರಾಗುವುದಿಲ್ಲ. ಒಂದು ಕಡೆ ಉತ್ತರ ಸಮರ್ಪಕವಾಗಿ ನೀಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಲ್ಲಿ ಪ್ರಶ್ನೆಗಳಿಗೂ ಸರಿಯಾದ ಉತ್ತರ ನೀಡುವುದಿಲ್ಲ. ಏನು ಇದರ ಅರ್ಥ? ಈ ಸಮಯದಲ್ಲಿ ತಾವುಗಳು ಕೂಡ ನಮ್ಮ ನೆರವಿಗೆ ಬಾರದೇ ಹೋದರೆ ನಾವು ಮಾಡುವುದು ಏನಿದೆ?

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ನಿನ್ನೆಯ ದಿವಸ ಸದನದಲ್ಲಿ ಅಧಿಕಾರಿಗಳು ಉಪಸ್ಥಿತರಿಲ್ಲದೇ ಇರುವ ವಿಚಾರವನ್ನು ಈ ದಿನ ಸದನದಲ್ಲಿ ಮುಖ್ಯಮಂತ್ರಿಯವರು ಹಾಜರಿದ್ದಾಗ ತಿಳಿಸಿದ್ದೇನೆ. ಕಾನೂನು ಮಂತ್ರಿಗಳು ಈಗಾಗಲೇ ಮುಖ್ಯ ಕಾರ್ಯದರ್ಶಿಯವರನ್ನು ಕರೆಯುವುದಕ್ಕೆ ಹೇಳಿದ್ದಾರೆ. ಅವರ ಬಳಿ ಮಾತನಾಡಿ, ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ನಮಗೂ ಕೂಡ ಅದರ ಬಗ್ಗೆ ನೋವಿದೆ.

**ಶ್ರೀ ಅಮರನಾಥ ಪಾಟೀಲ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ... ಮತ್ತೆ ಇವತ್ತಿನ ದಿವಸ ನನ್ನ ಚುಕ್ಕೆ ಗುರುತು ಮತ್ತು ಚುಕ್ಕೆರಹಿತ ಪ್ರಶ್ನೆಗೆ ಒಂದು ಉತ್ತರ ಬಂದಿರುವುದಿಲ್ಲ. ಹೈದರಾಬಾದ್-ಕರ್ನಾಟಕ ಪ್ರದೇಶದ ಇಲಾಖೆ ಬಗ್ಗೆ, ಖಾಲಿ ಹುದ್ದೆ ಮತ್ತು ಆ ಹುದ್ದೆಗಳು ಏತಕ್ಕೆ ಭರ್ತಿಯಾಗಿಲ್ಲವೆಂದು 4 ವರ್ಷಗಳಿಂದ ಪ್ರಶ್ನೆ ಕೇಳುತ್ತಿದ್ದೇನೆ? ಇವತ್ತಿನ ದಿವಸ ಕೂಡ ಅದೇ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಉತ್ತರ ನೀಡಿರುವುದಿಲ್ಲ. 4 ವರ್ಷದಿಂದ word to word same question ಹಾಕಿದ್ದೇನೆ. ಇದುವರೆವಿಗೂ ನನಗೆ ಉತ್ತರ ಬಂದಿರುವುದಿಲ್ಲ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಆಯಿತು, ಆಯಿತು ಎಂದು ವಿಷಯವನ್ನು ಮುಂದಕ್ಕೆ ಹಾಕಿಕೊಂಡು ಹೋಗಬಾರದು. ಮಾನ್ಯ ಸದಸ್ಯರು ಹೇಳುವುದನ್ನು ದಯಮಾಡಿ ಕೇಳಲಿ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಆದುದರಿಂದ, ಆಯಿ

ತು ತಾವು ಒಂದು ನಿಮಿಷ ಕುಳಿತುಕೊಳ್ಳಿ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಿದೆನಷ್ಟೇ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಇವತ್ತು ಉತ್ತರ ನೀಡಲು ಸಾಧ್ಯವಿಲ್ಲದಿದ್ದರೆ ನಾಳೆ ಉತ್ತರ ನೀಡಲಿ. ಮಾನ್ಯ ಸದಸ್ಯರು 4

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷದಿಂದ ಒಂದೇ ಪ್ರಶ್ನೆ ಕೇಳುತ್ತಿದ್ದಾರೆ. ಯಾವ ಪದ ಬಳಸಬೇಕು ಸರ್ಕಾರದ ಬಗ್ಗೆ. ಪ್ರತಿ ಬಾರಿ ಮುಂದಿನ ಬಾರಿ, ಉತ್ತರ ಬಂದಿಲ್ಲವೆಂದು ಹೇಳುತ್ತಾರೆ. ಉತ್ತರ ಬಂದಿಲ್ಲವೆಂದರೆ ನಾವು ಏತಕ್ಕೆ ಬರಬೇಕು? ಹಾಗಾದರೆ, ನಾವು ರಾಜೀನಾಮೆ ಬಿಸಾಕಿ ಹೋಗೋಣವೇ? ಹೈದರಾಬಾದ್-ಕರ್ನಾಟಕದ ಅಭಿವೃದ್ಧಿ ನಾವು ಅದು ಮಾಡುತ್ತೇವೆ ಇದು ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತದೆಯಲ್ಲಾ ಅದರ ಬಗ್ಗೆಯೇ ಮಾನ್ಯ ಸದಸ್ಯರು ಪ್ರಶ್ನೆ ಕೇಳರುವುದು. ಆ ಪ್ರಶ್ನೆಗೆ 4 ವರ್ಷದಿಂದ ಉತ್ತರ ನೀಡಿಲ್ಲವೆಂದರೆ ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ...

**ಶ್ರೀ ಕೆ.ಬಿ. ಶಾಣಪ್ಪ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬ್ಯಾಕ್‌ಲಾಗ್ ಹುದ್ದೆಗಳು 6 ಸಾವಿರ, 8 ಸಾವಿರ, 16 ಸಾವಿರ ಹುದ್ದೆ ಖಾಲಿ ಇವೆಯೆಂದು ಹೇಳುತ್ತಿದ್ದಾರೆ. ಆದರೆ, 4 ವರ್ಷದಿಂದ Hon'ble member word by word, he is putting the same question before the House.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಂಕನೂರುರವರು ಪ್ರಶ್ನೆ ಕೇಳದ್ದಾರೆ...

**(ಗೊಂದಲ)**

**ಸಭಾಪತಿಯವರು:-** ಈ ವಿಷಯ ಮುಗಿದುಬಿಡಲಿ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇಷ್ಟು ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ, ಇಷ್ಟು ಮಾಡುವುದಕ್ಕಾಗುವುದಿಲ್ಲ ಎಂದು ಏನಾದರೂ ಒಂದು ಉತ್ತರ ನೀಡಬೇಕಲ್ಲವೇ?

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಹೇಳುತ್ತಿರುವ ವಿಚಾರವನ್ನು ನಾವು ಒಪ್ಪಿಕೊಳ್ಳುತ್ತೇವೆ. 4 ವರ್ಷದಿಂದ ಪ್ರಶ್ನೆಗೆ ಉತ್ತರ ನೀಡಿಲ್ಲವೆಂದರೆ ಅದು ತಪ್ಪು. ಆದರೆ, ನಾನು ಹೇಳದ ವಿಷಯ ಬೇರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕನಿಷ್ಠ ನಾನು ಹೇಳುತ್ತಿರುವುದು... ಈಗ ಸಭಾನಾಯಕರು ಮತ್ತು ಇತರ ಮಂತ್ರಿಗಳು ಸದನದಲ್ಲಿ ಹಾಜರಿದ್ದಾರೆ. ನಾಳೆ ದಿವಸವಂತೂ ಆಗುವುದಿಲ್ಲ. ಕನಿಷ್ಠ ೨೮ ನೇ ತಾರೀಖಿನೊಳಗೆ 4 ವರ್ಷದಿಂದ ಬರದೇ ಇರುವಂತಹ ಪ್ರಶ್ನೆಗೆ ಉತ್ತರವನ್ನು ನಿರ್ಧಿಷ್ಟವಾಗಿ 19 ನೇ ತಾರೀಖಿನಂದು ಕೊಡಿಸುತ್ತಾರೆಯೇ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಶ್ರೀ ಅಮರನಾಥ ಪಾಟೀಲ್‌ರವರ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿಸುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ನಾನೇ ಅದನ್ನು ಖುದ್ದು ಪರಿಶೀಲನೆ ಮಾಡಿ, ಆ ಪ್ರಶ್ನೆಯ ಹಿಂದೆ ಬಿದ್ದು, ಆ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಗೆ 19 ನೆಯ ತಾರೀಖಿನಂದು ಉತ್ತರ ಕೊಡಿಸುತ್ತಾರೆಯೇ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಗೆ 19 ನೇ ತಾರೀಖು ಅಥವಾ ೨೦ ತಾರೀಖು, ಒಂದು ದಿನ ಹೆಚ್ಚು-ಕಡಿಮೆ ಉತ್ತರ ಕೊಡಿಸುತ್ತೇನೆ. ನಾನು ಆ ಉತ್ತರವನ್ನು ನೇರವಾಗಿ ಮಾನ್ಯ ಸದಸ್ಯರಿಗೇ ಕೊಡಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಂಕನೂರುರವರ ಇವತ್ತಿನ ದಿನದ ಪ್ರಶ್ನೆಗೆ ಉತ್ತರ ಕೊಟ್ಟಿರುವುದಿಲ್ಲ. ಆದರೆ, ಮುಖ್ಯಮಂತ್ರಿಗಳು Pay Commission ಗೆ ವರದಿ ಕೊಡಬೇಕಾದರೆ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

**ಸಭಾಪತಿಯವರು:-** ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನನಗೆ ವರದಿಯೇ ಬಂದಿರುವುದಿಲ್ಲವೆಂದು, ನಾನು ಅದನ್ನು ಓದಿರುವುದಿಲ್ಲವೆಂದು ಉತ್ತರ ನೀಡಿದ್ದಾರೆ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅದು writing ನಲ್ಲಿ ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Pay Commission ವರದಿಯಲ್ಲಿ ಮಾಹಿತಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಕೊಡುವುದಿಲ್ಲ. ಅದು ವಿಜಯವಾಣಿ ಪತ್ರಿಕೆಯಲ್ಲಿ ಎಷ್ಟು ಎಂದು ವರದಿಯಾಗಿದೆ. ಸುಳ್ಳು ಮಾಹಿತಿಯನ್ನು ನಾನು ಹೇಳುತ್ತಿಲ್ಲ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆಯೆಂದರೆ...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಹೇಳುತ್ತೇನೆ...

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಉತ್ತರ ನೀಡುತ್ತಿದ್ದೇನೆ. ಒಂದು ನಿಮಿಷ ಕೇಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಂಕನೂರರವರ ಪ್ರಶ್ನೆಗೆ ನಮ್ಮ ಹತ್ತಿರ ಮಾಹಿತಿಯಿಲ್ಲ ಅದನ್ನು ಸಂಗ್ರಹ ಮಾಡಬೇಕೆಂದು ಉತ್ತರ ನೀಡಿದ್ದಾರೆ. ಆದರೆ, Pay Commission ಗೆ ಏನು ವರದಿ ಕೊಟ್ಟಿದ್ದಾರೆ ಆ ವರದಿಯನ್ನು ಮುಖ್ಯಮಂತ್ರಿಗಳು ಲಿಖಿತ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಅದೇ ವಿಚಾರವನ್ನು ಹೇಳುತ್ತಿದ್ದೇನೆ. ಆದರೆ, ನನಗೆ ಆ ವಿಚಾರವನ್ನು ಮಾತನಾಡುವುದಕ್ಕೆ ಬಿಡುತ್ತಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಪತ್ರಿಕೆಯಲ್ಲಿ ವಿವರವಾಗಿ ವರದಿಯಾಗಿದೆ. ಆದರೆ, ಸದನದಲ್ಲಿ ಸದಸ್ಯರಿಗೆ ಮಾಹಿತಿ ನೀಡುವುದಿಲ್ಲವೆಂದರೆ ಹೇಗೆ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಸ್ವಲ್ಪ ಪ್ರಯತ್ನವನ್ನು ಮಾಡುತ್ತಿಲ್ಲ. ನನಗೆ ಶೇಕಡ ೩೩ ರಷ್ಟು ಹುದ್ದೆ ಖಾಲಿ ಇದೆ, ೨,೫೮,೦೦೦ ಹುದ್ದೆ ಎಂದು ಮಾಹಿತಿಯನ್ನು ಅಧಿಕೃತವಾಗಿ ಕೊಟ್ಟಿದ್ದಾರೆ. ಆ ಉತ್ತರವನ್ನು ಇಲ್ಲಿ ಕೊಡುವುದಕ್ಕೆ ಒಂದು ಸಣ್ಣ exercise ಸಾಕು. ೧೦ ನಿಮಿಷದ ಕೆಲಸ ಅದು. ಅಷ್ಟು ತಾಳ್ಮೆಯಿಲ್ಲ ಈ ಅಧಿಕಾರಿಗಳಿಗೆ. ಅವರಿಗೆ ಆ ಉತ್ತರವನ್ನು ಬರೆದು ಕೊಡುವಷ್ಟು ತಾಳ್ಮೆ ಇಲ್ಲ. ಅವರಿಂದ ಕೆಲಸ ತೆಗೆಯುವುದಕ್ಕೆ ಈ ಸರ್ಕಾರಕ್ಕೆ ಆಗುತ್ತಿಲ್ಲ. ಅದನ್ನು ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಪ್ಪಿಕೊಳ್ಳಲಿ. ನನಗೆ ಉತ್ತರ ಕೊಡುತ್ತಾರೆ, ಅವರಿಗೆ ಉತ್ತರ ಕೊಡುವುದಿಲ್ಲ. ಹೋಗಲಿ ನನಗೆ ಅಧಿಕಾರ ಕೊಡಿ ಆ ಉತ್ತರವನ್ನು ನಾನು ಕೊಡುತ್ತೇನೆ. ಏನು ಇದರ ಅರ್ಥ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಏನು ಉತ್ತರ ಕೊಡುತ್ತಾರೆ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದ್ದಾರೆ. ಈಗ ಅವರು ಕುಳಿತುಕೊಳ್ಳಲಿ. ಆ ಬಗ್ಗೆ ನಾನು ಉತ್ತರ ನೀಡುತ್ತೇನೆ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರ ಸಮಿತಿ ವರದಿ ಕೊಟ್ಟಾಗ ಮಾತ್ರ ನನಗೆ ಈ ರೀತಿ ಹೇಳಿದರು. ಈ ವರ್ಷ ಶೇಕಡ ೩೦ ರಷ್ಟು ಸರಾಸರಿ ಮಾಡುತ್ತಿದ್ದೇವೆ. ಉಳಿದ ವಿವರಗಳಿಗೆ ನಾನು ಹೋಗಿರುವುದಿಲ್ಲ. ಆ ವರದಿ ಸಚಿವ ಸಂಪುಟದ ಮುಂದೆ ಬಂದಾಗ ಪೂರ್ತಿ ತೀರ್ಮಾನ ತೆಗೆದುಕೊಂಡು ನಾನು ಅದರ ಬಗ್ಗೆ comment ಮಾಡುವುದಕ್ಕೆ ಬರುತ್ತದೆ. ಅಲ್ಲಿಯವರೆಗೂ comment ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ...

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನನಗೆ ಪೂರ್ತಿ ಮಾತನಾಡುವುದಕ್ಕೆ ಅವಕಾಶ ನೀಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ನೀಡಿರುವ ಲಿಖಿತ ಉತ್ತರದಲ್ಲಿಯೇ ಈ ಬಗ್ಗೆ ಮಾಹಿತಿ ಇದೆ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿ ಅಥವಾ ಮಾನ್ಯ ಸದಸ್ಯರುಗಳೇ ಮಾತನಾಡಬೇಕೆಂದರೆ ಅವರು ಮಾತನಾಡಿಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಆಯಿತು ಹೇಳುತ್ತೇನೆ ಕೇಳಿ. ಮುಖ್ಯಮಂತ್ರಿಗಳು ಲಿಖಿತ ರೂಪದಲ್ಲಿಯೇ ಉತ್ತರ ನೀಡಿದ್ದಾರೆ.

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ**:- ಮಾನ್ಯ ಸಭಾಪತಿಯವರೇ, if he keeps on interrupting... ಈಗ ನಾವು ಮಾತನಾಡುತ್ತಿರುವಾಗ interrupt ಮಾಡುತ್ತಿದ್ದರೆ ಕಷ್ಟವಾಗುತ್ತದೆ. ಅವರು ಏನು ಹೇಳಿದರೆಂದರೆ...

**(ಗೊಂದಲ)**

**ಸಭಾಪತಿಯವರು**:- ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ**:- ಮಾನ್ಯ ಸಭಾಪತಿಯವರೇ, ಈಗ ನನಗೆ ಗೊತ್ತಿರುವುದು ಇಷ್ಟು ಮಾಹಿತಿ. ಸಚಿವ ಸಂಪುಟ ಆದ ನಂತರ ಖಂಡಿತವಾಗಿ ಇದರ ಬಗ್ಗೆ ಬೆಳಕು ಚೆಲ್ಲುತ್ತೇನೆಂದು ಮುಖ್ಯಮಂತ್ರಿಗಳು ಹೇಳಿದರು. ಆದರೆ, ಇಲಾಖೆಯಿಂದ ಉತ್ತರ ಬಂದಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರಿ. ಮಾನ್ಯ ಸದಸ್ಯರು ಹೇಳಿರುವುದನ್ನು...

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ನಾನು ಹೇಳುವುದನ್ನು ಕೇಳಿಸಿಕೊಳ್ಳಿ.

**ಸಭಾಪತಿಯವರು**:- ಮಾನ್ಯ ಶ್ರೀ ಕೆ.ಟಿ. ಶ್ರೀಕಂಠೇಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ. ಈಗ ಆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಉತ್ತರ ಕೂಡ ಸಿಗುವುದಿಲ್ಲ. ನಾವು ಚರ್ಚೆ ಮಾಡುತ್ತಿರುವ ವಿಷಯ ವಿಷಯಾಂತರವಾಗುತ್ತಿದೆ. ಆದುದರಿಂದ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ನಾನು ಸರ್ಕಾರದ ಗಮನಕ್ಕೆ ತರವುದಕ್ಕೆ ಪ್ರಯತ್ನ ಮಾಡಿದ್ದೇನೆಂದರೆ, ಈ ಉತ್ತರಗಳು ತಡ ಆಗುತ್ತಿರುವುದು ಒಳ್ಳೆಯದಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳ ಬಳಿ ನಾನು ಮಾತನಾಡಿದ್ದೇನೆ ಮತ್ತೂ ಮಾತನಾಡುತ್ತೇನೆ. ಇದನ್ನು ಗಮನಿಸಿ ಎಂದು ಸದನದಲ್ಲಿ ಈ ಹಿಂದೆ ತಾವು ಕೂಡ ಹೇಳಿದ್ದೀರಿ. ಈಗ ಅವರು ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳಿದರು. ಇಬ್ಬರು ಸದಸ್ಯರು ಒಂದೇ ರೀತಿಯಾದಂತಹ ಪ್ರಶ್ನೆ ಕೇಳಿದಾಗ, ಒಬ್ಬರಿಗೆ ಉತ್ತರ ಬಂದಿದೆ, ಮತ್ತೊಬ್ಬರಿಗೆ ಉತ್ತರ ನೀಡಲು ಕಾಲಾವಕಾಶ ಕೇಳಿರುವುದು ಧರ್ಮವೇ ಎಂದು ಕೇಳಿದ್ದಾರೆ. ಈ ರೀತಿಯ ಘಟನೆಗಳು ನಡೆಯಬಾರದು. ಈ ಬಗ್ಗೆ ಅಧಿಕಾರಿಗಳು ಜಾಗರೂಕರಾಗಿರುವ ಹಾಗೆ ಅವರನ್ನು ಎಚ್ಚರಗೊಳಿಸುವಂತಹ ಕೆಲಸ ಸರ್ಕಾರ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬೇಕು. ಈ ರೀತಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಬೇಕಾದ್ದು, ಸರ್ಕಾರದ ಕರ್ತವ್ಯ. ಅದನ್ನು ಜಾಗೃತಗೊಳಿಸಿ ಇದರ ಕಡೆಗೆ ಗಮನಿಸಿ ಎಂದು ಹೇಳುತ್ತಿದ್ದೇನೆ. ಈಗ ಶೂನ್ಯ ವೇಳೆ.

**೩. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:- ರಾಜ್ಯ ಸರ್ಕಾರದ ಆಹಾರ ವಿತರಣೆಯಲ್ಲಿ ಫಲಾನುಭವಿಗಳ ವಿವರ ನೀಡದಿರುವ ಕುರಿತು**

- - -
-

**ಶ್ರೀ ಅಮರನಾಥ ಪಾಟೀಲ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅತ್ಯಂತ ಜರೂರಾದಂತಹ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ: 07.02.2018 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ "ಫಲಾನುಭವಿಗಳ ವಿವರ ಕೊಡಲು ಕರ್ನಾಟಕ ವಿಫಲ: ಆರೋಪ' "ರಾಜ್ಯಕ್ಕೆ ಧಾನ್ಯ ಹಂಚಿಕೆಗೆ ಕೇಂದ್ರದ ಅಂಕುಶ" ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟವಾದ ಸುದ್ದಿ.

ಕರ್ನಾಟಕದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಧಾನ್ಯ ಹಂಚಿಕೆಯನ್ನು ನಾಲ್ಕು ತಿಂಗಳಿನಿಂದ ಕೇಂದ್ರ ಸರ್ಕಾರ ನಿಲ್ಲಿಸಿದೆ. ಕೇಂದ್ರ ಸರ್ಕಾರ ಆಹಾರ ಧಾನ್ಯಗಳ ವಿತರಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಉದ್ದೇಶದಿಂದ ಧಾನ್ಯಗಳನ್ನು ಬಳಸುವ ಸಂಸ್ಥೆಗಳು ಹಾಗೂ ಫಲಾನುಭವಿಗಳ ಪಟ್ಟಿ ನೀಡುವಂತೆ ಕೇಂದ್ರ ಸೂಚಿಸಿತ್ತು. ಬಡವರಿಗೆ ನೀಡಬೇಕಿದ್ದ ಆಹಾರ ಧಾನ್ಯಗಳನ್ನು ಕರ್ನಾಟಕ ಸರ್ಕಾರ ಬೇರೆ ಉದ್ದೇಶಗಳಿಗೆ ಬಳಸಿದೆ ಎಂಬ ಅನುಮಾನ ಈ ಕ್ರಮಕ್ಕೆ ಕಾರಣ ಎಂದು ತಿಳಿದುಬಂದಿದೆ. ಸಮಾಜ ಕಲ್ಯಾಣ ಯೋಜನೆಗಳ ಅಡಿಯಲ್ಲಿ ವೃದ್ಧಾಶ್ರಮಗಳು, ಭಿಕ್ಷುಕರ ಪುನರ್ವಸತಿ ಕೇಂದ್ರಗಳು, ನಿರಾಶ್ರಿತ ಕೇಂದ್ರಗಳು ಮತ್ತು ವಿದ್ಯಾರ್ಥಿನಿಲಯಗಳಿಗಾಗಿ ಪ್ರತಿ ವರ್ಷ ರಾಜ್ಯಕ್ಕೆ ಕೇಂದ್ರ ಸರ್ಕಾರ 65,714 ಟನ್ ಆಹಾರ ಧಾನ್ಯವನ್ನು ಮಂಜೂರು ಮಾಡುತ್ತಿದ್ದು, ಫಲಾನುಭವಿಗಳ ವಿವರವನ್ನು ರಾಜ್ಯವು ಕೊಡಬೇಕು ಎಂದು ಕೇಂದ್ರ ಸರ್ಕಾರ ಕೇಳಿತ್ತು. ಆದರೆ, ರಾಜ್ಯ ಸರ್ಕಾರ ಫಲಾನುಭವಿಗಳ ಪಟ್ಟಿಗಳ ಪಟ್ಟಿಯನ್ನು ಸಲ್ಲಿಸಿಲ್ಲವೆಂದು ಕೇಂದ್ರ ಸರ್ಕಾರ ಧಾನ್ಯಗಳ ಹಂಚಿಕೆಯನ್ನು ನಿಲ್ಲಸಿಲಾಗಿದೆ. ಫಲಾನುಭವಿಗಳ ಪಟ್ಟಿಗಳ ವಿವರ ನೀಡಿದರೆ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯ ಧಾನ್ಯಗಳನ್ನು ಹಂಚಿಕೆ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಮಾನ್ಯ ಆಹಾರ ಸಚಿವರು ಕೇಂದ್ರದಿಂದ ಆಹಾರ ಧಾನ್ಯ ಪೂರೈಕೆ ಸ್ಥಗಿತಗೊಂಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಕರ್ನಾಟಕದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯವರು ತುರ್ತಾಗಿ ಕೇಂದ್ರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಲ್ಲಿ ಈ ವಿಷಯ ಪ್ರಸ್ತಾಪಿಸಲು ಬಯಸುತ್ತೇನೆ.

(ಮುಂದುವರೆದಿದೆ...)

(082) 08.02.2018 1.10 ವೈಎಲ್-ಎಜಿಡಿ

**ಆ) ವಿಷಯ:- ವನ್ಯ ಜೀವಿಗಳ ರಕ್ಷಣೆ ಕುರಿತು**

- - -

**ಶ್ರೀ ಸಂದೇಶ್ ನಾಗರಾಜು(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆಯು ಬಂಡೀಪುರ, ಮಲೆಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಹುಲಿಧಾಮ, ನಾಗರಹೊಳೆ ಈ ರೀತಿ ನಾಲ್ಕು ರಾಷ್ಟ್ರೀಯ ಸಂರಕ್ಷಿತ ಅರಣ್ಯವನ್ನು ಹೊಂದಿರುವ ಜಿಲ್ಲೆಯಾಗಿದೆ. ಆದರೆ, ಅರಣ್ಯ ರಕ್ಷಣೆಗೆ, ವನ್ಯ ಪ್ರಾಣಿಗಳ ರಕ್ಷಣೆಗೆ ಸಿಬ್ಬಂದಿಯ ಕೊರತೆ, ವನ್ಯಜೀವಿ ತಜ್ಞ ವೈದ್ಯರ ಕೊರತೆ, ಎದುರಾಗಿದ್ದು, ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ಗಮನ ಹರಿಸುತ್ತಿಲ್ಲ. ಇದರಿಂದ ಅಪರೂಪದ ಅನ್ಯ ಪ್ರಾಣಿಗಳ ಸಾವು, ಅರಣ್ಯ ನಾಶ ಅವ್ಯಾಹತವಾಗಿ ನಡೆಯುತ್ತಿದೆ.

ಚಾಮರಾಜನಗರ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಹೊಸ ವರ್ಷದ ಆರಂಭದಿಂದ ಇದುವರೆಗೆ ಐದು ಆನೆಗಳು ಮೃತಪಟ್ಟಿವೆ. ಜನವರಿ 2 ರಂದು ಓಂಕಾರ್ ವಲಯದಲ್ಲಿ ತಾಯಿಯಿಂದ ಬೇರ್ಪಟ್ಟ ಆನೆ ಮರಿ ಸಾವನ್ನಪ್ಪಿದೆ. ಜನವರಿ 16 ರಂದು ಕುಂದಕೆರೆ ವಲಯದಲ್ಲಿ 30 ವರ್ಷದ ಆನೆ ಸತ್ತಿದೆ. ಇದೇ ಅವಧಿಯಲ್ಲಿ ಗೋಪಾಲಸ್ವಾಮಿ ಬೆಟ್ಟದ ಸೋಮನಾಥಪುರ ಬೀಟ್‌ನಲ್ಲಿ ಎರಡೂವರೆ ವರ್ಷದ ಆನೆ ಮರಿ ಕೊಳಚೆ ನೀರು ಕುಡಿದು ಸತ್ತಿದೆ. ಜನವರಿ 23 ರಂದು ಕುಂದಕೆರೆ ವಲಯದ ಮಂಗಲ ಗ್ರಾಮದ ಮಾರಿಗುಡಿ ವ್ಯಾಪ್ತಿಯಲ್ಲಿ 2 ವರ್ಷದ ಹೆಣ್ಣಾನೆ ಗಾಯದಿಂದ ಮೃತಪಟ್ಟಿದೆ. ಜನವರಿ 25 ರಂದು ಹಿರಿಕೆರೆ ವಲಯದಲ್ಲಿ ಹೆಣ್ಣಾನೆಯ ಕಳೇಬರ ಸಿಕ್ಕಿದೆ. ಇದರ ಸಾವಿಗೆ ಕಾರಣ ಗೊತ್ತಿಲ್ಲ. ಈ ಆನೆಗಳ ಸಾವು ಪತ್ತೆಯಾಗಿರುವುದು, ಪತ್ತೆಯಾಗದೇ ಇರುವುದೂ ಇರಬಹುದು.

ಅದೇ ರೀತಿ ಬಂಡೀಪುರ ಉದ್ಯಾನವನದ ವ್ಯಾಪ್ತಿಯಲ್ಲಿ 11 ದಿನಗಳಲ್ಲಿ ಮೂರು ಹುಲಿಗಳು ಸತ್ತಿವೆ. ಜನವರಿ 25 ರಂದು ಗೋಪಾಲಸ್ವಾಮಿ ಬೆಟ್ಟದ ಹಿರಿಕೆರೆ ಬಳಿ ಎರಡು ಹುಲಿಗಳು ಅನುಮಾನಾಸ್ಪದವಾಗಿ ಮೃತಪಟ್ಟಿವೆ. ದಿನಾಂಕ 6.02.2018 ರಂದು ಮದ್ದೂರು ವಲಯದ ಹೊಂಗಳ್ಳಿ ಬಳಿ 5 ವರ್ಷದ ಗಂಡು ಹುಲಿ ಶವ ಪತ್ತೆಯಾಗಿದೆ. ದಿನಾಂಕ 03.02.2018 ರಂದು ಓಂಕಾರ್ ಅರಣ್ಯ ವ್ಯಾಪ್ತಿಯ ಕಾಡಂಚಿನ ಗ್ರಾಮ ಕುರುಬರ ಹುಂಡಿಯಲ್ಲಿ ಹುಲಿ ಮೂರು ಹಸುಗಳ ಮೇಲೆ ದಾಳಿ ಮಾಡಿದೆ. ಬೇಟೆಯಿಂದ ಮತ್ತು ಆಹಾರದ ಕೊರತೆಯಿಂದ ಹುಲಿಗಳು ಸತ್ತಿರುವ ಸಾಧ್ಯತೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಹುಲಿ ಚರ್ಮ ಮಾರಿದ್ದ ಇಬ್ಬರನ್ನು ಬಂಡೀಪುರ ಅರಣ್ಯ ಪೊಲೀಸರು ಬಂಧಿಸಿದ್ದರು. ಅವರು ತಾಳವಾಡಿ ಬಳಿ ಹುಲಿ ಚರ್ಮ ಪಡೆದು ಬೆಂಗಳೂರಿನಲ್ಲಿ ಮಾರಾಟ ಮಾಡಿದ್ದರೆಂದು ತಿಳಿದುಬಂದಿತು. ನಮ್ಮ ಪೊಲೀಸರು ಅವರನ್ನು ವಶದಲ್ಲಿ ಇಟ್ಟುಕೊಂಡು ಹುಲಿ ಬೇಟೆ ಜಾಲವನ್ನು ಭೇದಿಸದೇ ಅವರನ್ನು ತಮಿಳುನಾಡು ಪೊಲೀಸರಿಗೆ ಒಪ್ಪಿಸಿದ್ದಾರೆಂದು ತಿಳಿದು ಬಂದಿದೆ.

ಇದರ ಜೊತೆಗೆ ಚಿರತೆಗಳ ಸಾವೂ ಸಂಭವಿಸುತ್ತಿದೆ. ಮೈಸೂರು ತಾಲ್ಲೂಕು, ಮೈಸೂರು ನಗರ, ಚಾಮುಂಡಿ ಬೆಟ್ಟ, ರಾಮನಗರಗಳಲ್ಲಿ ಚಿರತೆಗಳ ಹಾವಳಿ ಜಾಸ್ತಿಯಾಗಿದೆ. ಕೂಡಲೇ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ವನ್ಯ ಜೀವಿಗಳ ರಕ್ಷಣೆಗೆ ಕ್ರಮ ಜರುಗಿಸಬೇಕು. ಸಾಕಷ್ಟು ಸಿಬ್ಬಂದಿಯನ್ನು ನೇಮಿಸಬೇಕು. ವನ್ಯ ಜೀವಿ ತಜ್ಞ ವೈದ್ಯರನ್ನು, ವನ್ಯ ಜೀವಿ ತಜ್ಞರನ್ನೂ ನೇಮಿಸಿಕೊಳ್ಳಬೇಕು. ಸಧ್ಯದಲ್ಲೇ ಬೇಸಿಗೆ ಕಾಲ ಎದುರಾಗುತ್ತಿದ್ದು ಕಾಡಿನ ಪ್ರಾಣಿಗಳಿಗೆ ಆಹಾರ ಮತ್ತು ನೀರು ಪೂರೈಕೆಯ ಬಗ್ಗೆ ಕ್ರಮ ಜರುಗಿಸಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯವನ್ನು ಅರಣ್ಯ ಮತ್ತು ಪರಿಸರ ಸಚಿವರ ಗಮನಕ್ಕೆ ತಂದು ಅವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಇ) ವಿಷಯ:- ಮರಾಠ ಸಮುದಾಯವನ್ನು 2 ಪಂಗಡಕ್ಕೆ ಸೇರಿಸುವ ಕುರಿತು**

- - -

**ಶ್ರೀ ಶ್ರೀಕಾಂತ ಎಲ್.ಘೋಟ್ನೆಕರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಮರಾಠಾ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ: 24 & 25.09.2012 ರಂದು ಮರಾಠಾ ಸಮಾಜದ ಸ್ಥಿತಿಗತಿಗಳನ್ನು ಹಿಂದೂಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಾನ್ಯ ಶಂಕರಪ್ಪನವರು ಖುದ್ದಾಗಿ ಪರಿಶೀಲಿಸಿ ದಿನಾಂಕ 30.12.2012ಕ್ಕೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ "III B" ಯಿಂದ "II A" ಗೆ ಶಿಫಾರಸ್ಸನ್ನು ಮಾಡಿರುತ್ತಾರೆ. ಆದರೆ ರಾಜ್ಯ ಸರ್ಕಾರವು ಮರಾಠಾ ಸಮುದಾಯದವರನ್ನು "II A" ಗೆ ಸೇರಿಸುವಲ್ಲಿ ವಿಳಂಬ ಮಾಡಿದ್ದಾರೆ. ಮರಾಠಾ ಸಮಾಜದವರು ಹಿಂದಿನಿಂದಲು ಇತರೆ ಜಾತಿ ಸಮಾಜ ಧರ್ಮದವರ ಜೊತೆ ಸಹಬಾಂಧವ್ಯ ಪ್ರೀತಿ ವಿಶ್ವಾಸದಿಂದ ಬಾಳುತ್ತಿದ್ದಾರೆ. ಆದರೆ ಆರ್ಥಿಕವಾಗಿ, ಸಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ತೀರಾ ಹಿಂದುಳಿದಿದ್ದಾರೆ. ಇತರೆ ಸಮಾಜದವರಿಗೆ ಹೋಲಿಸಿದರೆ ಎಲ್ಲಾ ಕ್ಷೇತ್ರಗಳಲ್ಲಿ ಮರಾಠಾ ಸಮಾಜದವರು ಅಲ್ಪ ಸಂಖ್ಯಾತರಾಗಿದ್ದು ತೀರಾ ಹಿಂದೂಳಿದವರಾಗಿದ್ದಾರೆ. ಅಗತ್ಯ ಮೀಸಲಾತಿ ದೊರೆಯದ ಕಾರಣ ಎಲ್ಲ ಕ್ಷೇತ್ರಗಳಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವಕಾಶಗಳಿಂದ ವಂಚಿತರಾಗಿದ್ದಾರೆ, ಅನೇಕರು ತೀರಾ ಬಡವರಾಗಿದ್ದು ತಮ್ಮ ಮಕ್ಕಳಿಗೆ ವಿಧ್ಯಾಭ್ಯಾಸಕ್ಕಾಗಿ ಸಾವಿರಾರು ರೂಪಾಯಿ ಶುಲ್ಕ ಮತ್ತು ಡೊನೇಷನ್ ನೀಡಲು ಆಗಲಾರದೇ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಆದರೆ ಸಮಾಜದ ಅಭಿವೃದ್ಧಿಗೋಸ್ಕರ ಹಾಗೂ ವಿವಿಧ ಬೇಡಿಕೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಎಷ್ಟು ಸಾರಿ ಮನವಿಯನ್ನು ನೀಡಿದ್ದರು, ಇಲ್ಲಿಯವರೆಗೆ ಪ್ರಯೋಜನವಾಗಿಲ್ಲ. ಸರ್ಕಾರಕ್ಕೆ ಮರಾಠರ ಧ್ವನಿ ಕೇಳಿಸಿಲ್ಲ, ಆದ್ದರಿಂದ ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯ ಮೇರೆಗೆ "III B" ಯಿಂದ "II A" ಗೆ ಸೇರಿಸಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಸದರಿ ವಿಷಯವನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸುತ್ತೇನೆ.

**ಶ್ರೀ ಶ್ರೀಕಾಂತ ಎಲ್.ಘೋಟ್ನೇಕರ್:-** ಮಾನ್ಯ ಸಭಾಪತಿಯವರೇ, 5 ವರ್ಷಗಳಿಂದಲೂ ನಾನು ಈ ಸಮಸ್ಯೆ ಬಗ್ಗೆ ಕೇಳುತ್ತಿದ್ದೇನೆ. ಈ ವಿಷಯದ ಬಗ್ಗೆ ಏನಾದರೂ ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ,

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಸಚಿವರ ಮೂಲಕ ಉತ್ತರವನ್ನು ಕೊಡಿಸುತ್ತೇನೆ. ವಾಸ್ತವವಾಗಿ ಇರತಕ್ಕಂಥ ವಾಸ್ತವಾಂಶವೇನಿದೆ ಇದು ಹಲವಾರು ಸಮಾಜಗಳಿಗೂ......

(ಗೊಂದಲ)

**ಸಭಾಪತಿಯವರು:-** ಶೂನ್ಯ ವೇಳೆಯಲ್ಲಿ ಓದುವುದಕ್ಕೆ ಅಷ್ಟೇ ಅವಕಾಶ ಇರುವುದು. ಅದಕ್ಕೆ ಸರ್ಕಾರದಿಂದ ಉತ್ತರ ಕೊಡಿಸುತ್ತಾರೆ. ತಮ್ಮ ಭಾವನೆ ಏನೆಂಬುದು ಮಾನ್ಯ ಸಭಾನಾಯಕರಿಗೆ ಅರ್ಥವಾಗಿದೆ. ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)**ವಿಷಯ**:- ಅರಣ್ಯ ಪರಿಸರಕ್ಕೆ ಆಗುವ ತೊಂದರೆಯಿಂದ, ಮೈಸೂರು-ತಲಚೇರಿ ರೈಲು ಮಾರ್ಗವನ್ನು ಕೈಗೊಳ್ಳಬಾರದು ಎಂಬ ಬಗ್ಗೆ.

- - -

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಮೂಲಕ ಹಾದು ಹೋಗಲಿರುವ ಪ್ರಸ್ತಾವಿತ ಮೈಸೂರು-ಪಿರಿಯಾಪಟ್ಟಣ-ತಿತಿಮತಿ-ಬಾಳೆಲೆ-ಕುಟ್ಟ-ಮಾನಂದವಾಡಿ-ಕೂತುಪರಂಬು-ತಲಶ್ಯೇರಿ ರೈಲು ಮಾರ್ಗವು ಅನುಷ್ಠಾನಗೊಂಡರೆ ಕೊಡಗು ಜಿಲ್ಲೆಯ ಆನೆಕಾಡು ಮೀಸಲು ಅರಣ್ಯ, ಕೆದಕಲ್, ಸುಂಟಿಕೊಪ್ಪ ಸಮೀಪದ ಸಾವಿರಾರು ಎಕರೆ ಕಾಫಿತೋಟ ನಾಶವಾಗಲಿದೆ. ಅಲ್ಲದೆ ಸಾವಿರಾರು ವಿವಿಧ ಜಾತಿಯ ಮರಗಳ ಹನನವಾಗಲಿದೆ. ಕಾವೇರಿ ಕಣಿವೆಯಲ್ಲಿ ಮಳೆ ಕೊರತೆ ಕಾಡಲಿದ್ದು ಆನೆಗಳ ದಾಳಿಯಿಂದ ಬೆಳೆ ನಾಶ ಇನ್ನಷ್ಟೂ ಹೆಚ್ಚಾಗಲಿದೆ.  ಅಲ್ಲದೇ ಈಗಾಗಲೇ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಮಾನವ-ಕಾಡುಪ್ರಾಣಿ ಸಂಘರ್ಷ ಇನ್ನಷ್ಟು ಹೆಚ್ಚಾಗಿ ಜೀವಹಾನಿ ಹೆಚ್ಚಾಗಲಿದೆ.

ಆದುದರಿಂದ ಕೊಡಗು ಜಿಲ್ಲೆಯ ಮೂಲಕ ಹಾದು ಹೋಗುವ ಪ್ರಸ್ತಾವಿತ ಮೈಸೂರು-ಪಿರಿಯಾಪಟ್ಟಣ-ತಿತಿಮತಿ-ಬಾಳೆಲೆ-ಕುಟ್ಟ-ಮಾನಂದವಾಡಿ-ಕೂತುಪರಂಬು-ತಲಶ್ಯೇರಿ ರೈಲು ಮಾರ್ಗವನ್ನು ಅನುಷ್ಠಾನ ಮಾಡದೆ ಪರಿಸರಕ್ಕೆ ಹಾಗೂ ಸಾರ್ವಜನಿಕರಿಗೆ ಆಗುವ ತೊಂದರೆಯನ್ನು ನಿವಾರಿಸಬೇಕೆಂದು ಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ. ಅಲ್ಲದೇ ಈಗಾಗಲೇ ಕೇರಳಕ್ಕೆ ಕೊಡಗಿನ ಮೂಲಕ ರೈಲು ಮಾರ್ಗದ ಜೊತೆಗೆ ವಿದ್ಯುತ್ ಮಾರ್ಗವನ್ನು ಎಳೆಯುವಂತ ಸಂದರ್ಭದಲ್ಲಿ ಸುಮಾರು ೬೫ ಸಾವಿರ ಮರಗಳನ್ನು ಹನನ ಮಾಡಲಾಗಿದೆ. ಹಾಗಾಗಿ ಕೊಡಗು ಜಿಲ್ಲೆ ಎಂದರೆ, ಇಡೀ ಕರ್ನಾಟಕಕ್ಕೆ ನೀರು ಕೊಡುವಂಥ ಒಂದು ಜಿಲ್ಲೆಯಾಗಿದೆ. ಹಾಗಾಗಿ ಇಂತಹ ಪರಿಸರ ನಾಶವಾಗುವ ಯಾವುದೇ ವಿಧವಾದ ಕುತ್ತು ಉಂಟಾಗದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಇದೇ ಮಾಹೆಯ ೧೮ ರಂದು ವಿವಿಧ ಸಂಘ ಸಂಸ್ಥೆಗಳು ಸೇರಿ ಮೈಸೂರಿನಲ್ಲಿ ಇದೇ ವಿಚಾರವಾಗಿ ಪ್ರತಿಭಟನೆಯನ್ನು ಸಹ ಮಾಡುತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)**:- ಮಾನ್ಯ ಸಭಾಪತಿಯವರೇ, ನಿನ್ನೆ ತಾನೇ ಮಾನ್ಯ ಸಚಿವರ ಸಮಕ್ಷಮದಲ್ಲಿ ಚರ್ಚೆ ಮಾಡಿದ್ದೇನೆ. ಈಗಾಗಲೇ ಪತ್ರಿಕೆಗಳಲ್ಲಿಯೂ ಈ ವಿಚಾರದ ಬಗ್ಗೆ ಪ್ರಕಟಣೆಯಾಗಿದೆ. ಕರ್ನಾಟಕ ಸರ್ಕಾರ ಮೈಸೂರು-ಪಿರಿಯಾಪಟ್ಟಣ-ತಿತಿಮತಿ-ಬಾಳೆಲೆ-ಕುಟ್ಟ-ಮಾನಂದವಾಡಿ-ಕೂತುಪರಂಬು-ತಲಶ್ಯೇರಿ ರೈಲು ಮಾರ್ಗವನ್ನು ಅನುಷ್ಠಾನ ಮಾಡುವುದಕ್ಕೆ ತಾತ್ವಿಕವಾಗಿ ವಿರೋಧವಾಗಿದ್ದೇವೆ. ಈಗಾಗಲೇ ರೈಲು ಮಾರ್ಗವನ್ನು ಅನುಷ್ಠಾನಗೊಳಿಸುತ್ತಿಲ್ಲವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದೇವೆ. ನಾನು ಸಹ ಕೊಡಗು ಜಿಲ್ಲೆಯಲ್ಲಿ ಉಸ್ತುವಾರಿ ಸಚಿವನಾಗಿದ್ದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಮಸ್ಯೆಯನ್ನು ಅವರ ಗಮನಕ್ಕೆ ತಂದು ನಿಲ್ಲಿಸಿದ್ದೇವೆ. ಕೊಡಗು ಜಿಲ್ಲೆಯ ಜನರಿಗೆ ಯಾವುದೇ ರೀತಿಯ ಆತಂಕ ಬೇಡವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

(ಉ) ಸಕಾಲ ಯೋಜನೆ ಸಂಪೂರ್ಣ ಸ್ಥಗಿತಗೊಳ್ಳಬಾರದು ಎಂಬ ಬಗ್ಗೆ

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಿ ಸೇವೆ ನಿರ್ದಿಷ್ಟ ಸಮಯದಲ್ಲಿ ಖಾತರಿಪಡಿಸುವ ಸಕಾಲ ಸೇವೆ ತಿದ್ದುಪಡಿ 2011 ರಂತೆ ರಾಜ್ಯದಲ್ಲಿನ ಸಾರ್ವಜನಿಕರಿಗೆ ಉತ್ತಮ ಸೇವೆಯಾಗಿ ಮಾರ್ಪಟ್ಟಿತ್ತು. ಹಳ್ಳಿ ಬಡವರೊಬ್ಬರ ಮಕ್ಕಳನ್ನು ಶಾಲೆಗೆ ಸೇರಿಸಲು ಜಾತಿ ಆದಾಯ, ವಿವಿಧ ಯೋಜನೆಗಳಲ್ಲಿ ಅರ್ಹರಿಗೆ ಪಿಂಚಣಿ, ಒಟ್ಟಾರೆ 73 ಇಲಾಖೆಗಳ 852 ಸೇವೆಗಳು ಸಕಾಲ ವ್ಯಾಪ್ತಿಯಲ್ಲಿ ಬಂದು ಜನೋಪಯೋಗಿ ಸೇವೆ ಎಂದು ಪ್ರಶಂಸೆಗೊಳಗಾಗಿತ್ತು. ಸಕಾಲ ಯೋಜನೆಯಿಂದಾಗಿ ಇ-ಆಡಳಿತದಲ್ಲಿ ರಾಜ್ಯ ಕೇಂದ್ರ ಸರ್ಕಾರದ ಪ್ರಶಂಸೆಗೆ ಪಾತ್ರವಾಗಿತ್ತು.

ಪ್ರಸ್ತುತ ಸರ್ಕಾರಿ ಆಡಳಿತದಲ್ಲಿ ಸಕಾಲ ಯೋಜನೆಯು ಸಂಪೂರ್ಣವಾಗಿ ಅಕಾಲ ಯೋಜನೆಯಾಗಿ ಮಾರ್ಪಟ್ಟಿದೆ. ಒಂದೆಡೆ ಕಾನೂನು ಮಂತ್ರಿಗಳ ಮೂಲಕ ಸಕಾಲ ಕಾಯ್ದೆಗೆ ತಿದ್ದುಪಡಿ ತಂದು ಸರ್ಕಾರಕ್ಕೆ ಶಕ್ತಿ ಕೊಡುವ ಪ್ರಸ್ತಾಪ ಸರ್ಕಾರ ಮಾಡುತ್ತಿದ್ದರೆ, ಮತ್ತೊಂದೆಡೆ ಸರ್ಕಾರ ಕಾರ್ಯಾಂಗದ ಮೂಲಕ ಸಕಾಲ ಯೋಜನೆಯ ಕೈ ಕಟ್ಟಿ ಹಾಕಿದೆ. ಸಕಾಲ ಯೋಜನೆಯಂತೆ ಸರ್ಕಾರಿ ಸವಲತ್ತಿಗೋಸ್ಕರ ಯಾರೇ ಅರ್ಜಿ ಕೊಟ್ಟರೂ ಆ ಅರ್ಜಿ ಕೊಟ್ಟ ದಿನಾಂಕದಂದೇ ಮಂಜೂರಾತಿಯ ದಿನವನ್ನು ನಿಗದಿಪಡಿಸಿ ಕಾಲಮಿತಿ ಸೇವೆ ನೀಡತಕ್ಕದ್ದು. ಅದಕ್ಕೆ ತಪ್ಪಿದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ದಿನಕ್ಕೆ 20 ರೂ ಗಳಿಂದ ರೂ.500 ರವರೆಗೆ ದಂಡ ವಿಧಿಸಬಹುದಾಗಿದೆ. ಆ ದಂಡದ ಮೊತ್ತ ಸಂತೃಸ್ಥ ಅರ್ಜಿದಾರನಿಗೆ ಸಲ್ಲಬೇಕು. ಇಷ್ಟೊಂದು ಪರಿಣಾಮಕಾರಿ ಯೋಜನೆಯನ್ನು ಪ್ರಸ್ತುತ ಸರ್ಕಾರ ಸಂಪೂರ್ಣ ಸ್ಥಗಿತಗೊಳಿಸಲು ನಿರ್ಧರಿಸಿದಂತಿದೆ. ಸಕಾಲ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಮುಖ್ಯಮಂತ್ರಿಗಳಿಗೆ ಆಡಳಿತಾಧಿಕಾರಿ ಕೊಟ್ಟ ದೂರು ತನಿಖೆಯಾಗುತ್ತಿಲ್ಲ. ಸಕಾಲ ಇಲಾಖೆಯಲ್ಲೇ ಹಿರಿಯ ಅಧಿಕಾರಿಗಳ ನಡುವೆ ಜಗಳ ಆರಂಭವಾಗಿ ಸಕಾಲ ಗೊಂದಲದ ಗೂಡಾಗಿದೆ. ಮುಖ್ಯಮಂತ್ರಿಗಳು ಕೊಟ್ಟ ವರದಿಯು ಯಾವುದೇ ತನಿಖೆಯಾಗಿಲ್ಲ. ಒಂದು ಮಾಹಿತಿಯ ಪ್ರಕಾರ 60 ಲಕ್ಷ ಅರ್ಜಿದಾರರಿಗೆ ಸಕಾಲ ಯೋಜನೆಯಲ್ಲಿ ತೊಂದರೆಯಾಗಿ ಅವರಿಗೆ ಪರಿಹಾರವೂ ಸಿಕ್ಕಿಲ್ಲ. ಕಾಲಮಿತಿ ಸೇವೆಯೂ ಸಿಕ್ಕಿಲ್ಲ. ಹಾಸನ ಜಿಲ್ಲೆಯ ಜಿಲ್ಲಾಸ್ಪತ್ರೆಯಲ್ಲಿ ಸಕಾಲ ಬೋರ್ಡನ್ನೇ ಹಾಕಿಲ್ಲ ಮತ್ತು ಸಕಾಲ ಕೌಂಟರನ್ನೇ ಮುಚ್ಚಲಾಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಬಿಎಂಪಿ ಉಪ ಕಛೇರಿಗಳಲ್ಲಂತೂ ಸಕಾಲ ಸುದ್ದಿಯೇ ಇಲ್ಲ ಬಿಡಿಎ ಯಲ್ಲಂತೂ ಸಕಾಲ ಕಾಲಮಿತಿ ಸೇವೆಗಳನ್ನೇ ಕೇಳುತ್ತಿಲ್ಲ. ಕೆಲವು ಕಛೇರಿಗಳಲ್ಲಿ ಸಕಾಲ ಫಲಕಗಳನ್ನು ತೂಗುಹಾಕಿ ಸೇವೆಯ ಹೆಸರನ್ನು ಪ್ರಕಟಿಸಿ ಸವಲತ್ತು ಕೊಡಬೇಕಾದ, ನಿಗದಿಗೊಳಿಸಿದ ದಿನಗಳನ್ನು ಮುಚ್ಚಿಡಲಾಗಿದೆ ಎಂದು ಪತ್ರಿಕೆಗಳಲ್ಲಿ ಫೋಟೋ ಸಹಿತಿ ವರದಿಯಾಗಿದೆ. ಸಕಾಲ ವೆಬ್‌ಸೈಟ್ ಕಣ್ಮರೆಯಾಗಿದೆ. ಯೋಜನೆಯ ವಿಳಂಬ ನೀತಿಯ ಬಗ್ಗೆ ಪ್ರಕರಣದ ಪತ್ತೆಗಾಗಿ ನೇಮಿಸಿದ ಮಾಹಿತಿ ತಂತ್ರಜ್ಞಾನದ ಹುದ್ದೆಯನ್ನೇ ಸ್ಥಗಿತಗೊಳಸಲಾಗಿದೆ. ಒಟ್ಟಾರೆ 2011 ರಲ್ಲಿ ತಂದ ಸಕಾಲ ಯೋಜನೆ ಪ್ರಸ್ತುತ ಸರ್ಕಾರ ಅವಧಿಯಲ್ಲಿ ಶೇ 50 ರಷ್ಟು ಕುಂಠಿತಬಾಗಿದೆ. ಸಕಾಲ ಯೋಜನೆಯು ನೇರವಾಗಿ ಮುಖ್ಯಮಂತ್ರಿಗಳ ಅಧೀನಕ್ಕೆ ಬರುವುದರಿಂದ ಇದೇ ಸದನದಲ್ಲಿ ಸಕಾಲವನ್ನು ಸಚಿವಾಲಯದವರೆಗೂ ವಿಸ್ತರಿಸುತ್ತೇನೆ ಎಂದು ನುಡಿದಂತೆ ನಡೆವ ಮುಖ್ಯಮಂತ್ರಿಗಳು ಕೊಟ್ಟ ಭರವಸೆ ಸುಳ್ಳಾಗಿದೆ. ಸಕಾಲ ಯೋಜನೆಯ ಅಡಿಪಾಯದ ಒಂದೊಂದೇ ಕಲ್ಲು ಕೀಳುತ್ತಿರುವ ಇವತ್ತಿನ ವ್ಯವಸ್ಥೆ ಬಗ್ಗೆ ಸಮಗ್ರವಾದ ತನಿಖೆ ನಡೆಯಬೇಕು ಸಕಾಲ ಸಾಮಾನ್ಯ ಜನರಿಗೂ ಉಪಯೋಗಕ್ಕಿರಬೇಕೋ ಸಕಾಲ ಯೋಜನೆಯಾಗಿ ನಾಮಕಾವಸ್ತೆಗಿರಬೇಕೋ ಎಂಬ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟನೆ ನೀಡಬೇಕು. ಸಕಾಲ ಯೋಜನೆಯನ್ನು ಪರಿಪೂರ್ಣ ಜಾರಿಗೆ ತರಬೇಕು ಎಂಬ ಆಗ್ರಹದ ಬಗ್ಗೆ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಈ ಮೂಲಕ ಗೌರವಾನ್ವಿತ ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತೇನೆ.

(ಮುಂದು) . . .

(083)/08.02.2018/1.20/ಎಸ್‌ಕೆ-ಎಕೆ

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಅವರು ನುಡಿದಂತೆ ನಡೆಯದೇ ಇರುವ ಸರ್ಕಾರ ಎಂದು ಹೇಳುತ್ತಿರುವುದು ತಪ್ಪು. ಇದನ್ನು ನಾನು ಏನು...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನುಡಿಯುತ್ತಾರೆ, ಮತ್ತೆ ನಡೆದು ಬಿಡುತ್ತಾರೆ. ಏನು ಆಗಲ್ಲ. ನುಡಿದಂತೆ ನಡೆಯಲ್ಲ, ನುಡಿಯುತ್ತಾರೆ, ನಡೆಯುತ್ತಾರೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ ಮಾನ್ಯ ಪೂಜಾರಿಯವರು ಹೇಳುತ್ತಿರುವುದು ತಪ್ಪು. ಪರಿಹಾರವನ್ನು ಅದಷ್ಟು ಬೇಗ ಕೊಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಭರವಸೆಯಂತೆ 'ನುಡಿದಂತೆ ನಡೆಯುತ್ತೇವೆ' ಎಂದು ಹೇಳುತ್ತಾರೆ. ಆದರೆ ಈ ವಿಚಾರದಲ್ಲಿ ನಡೆಯಲಿಲ್ಲ. ಏಕೆಂದರೆ ಎರಡು ವರ್ಷಗಳ ಹಿಂದೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಬಹುಶಃ ಮಾನ್ಯ ಎಸ್.ಆರ್. ಪಾಟೀಲ್‌ರವರು ಎದುರು ಸಭಾನಾಯಕರಿದ್ದಾಗ ಇದನ್ನು ಸಚಿವಾಲಯದವರಿಗೂ ವಿಸ್ತರಿಸುತ್ತೇವೆ ಮತ್ತು ಸಕಾಲವನ್ನು ಪೂರ್ಣಗೊಳಿಸುತ್ತೇವೆ ಎನ್ನುವಂತಹ ಒಂದು ಮಾತನ್ನು ಹೇಳಿದರು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಆ ರೀತಿ ಹೇಳಿದ್ದು ಹೌದೋ, ಅಲ್ವೋ

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ನೀವು ಹೇಳಿದ್ದು ಹೌದೋ, ಅಲ್ವೋ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಸತ್ಯ ಹೇಳಿ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)**:- ಮಾನ್ಯ ಸಭಾಪತಿಯವರೇ...

**ಸಭಾಪತಿಯವರು**:- ಈಗ ಬೇಡಿ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆಗೆ ಕೊಡಲಿಲ್ಲ. ಆದರೆ ಚುಕ್ಕೆ ರಹಿತ ಪ್ರಶ್ನೆಗೆ ಉತ್ತರ ಕೊಡುತ್ತಾರೆ. ದಯವಿಟ್ಟು, ಇದಕ್ಕೆ ಅಭಾಸ . . .

**ಸಭಾಪತಿಯವರು**:- ಹೇಳುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ವಾರ್ತಾ ಇಲಾಖೆ...

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)**:- ಮಾನ್ಯ ಕವಟಗಿಮಠರವರೇ, ಈಗ ನೀವೆಲ್ಲಾ ಹೇಳಿದ್ದೀರಲ್ಲಾ. ಅದನ್ನು ಸಮಗ್ರವಾಗಿ ಕೊಡಿ.

**(ಗೊಂದಲ)**

**ಸಭಾಪತಿಯವರು**:-ನೀವು ಅದನ್ನು ಏಕೆ ಚರ್ಚೆ ಮಾಡುತ್ತೀರಾ.

**ಶ್ರೀ ಎಂ.ಆರ್. ಸೀತಾರಾಂ**:- ಅದನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ನೀವು ನಮ್ಮ ರಕ್ಷಣೆಗೆ ಬರಬೇಕು. ಇದು ತುಂಬಾ ಸ್ಪಷ್ಟವಿದೆ. ನೋಡಿ, ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳುತ್ತಾರೆ. ಸರ್ಕಾರದ ವಿವಿಧ ಯೋಜನೆಗಳ ಪ್ರಚಾರ ಕುರಿತು ಸುದ್ದಿ ಮಾಧ್ಯಮಗಳಾದ ಎಲೆಕ್ಟ್ರಾನಿಕ್ ಮಾಧ್ಯಮ, ಪ್ರಿಂಟ್ ಮಾಧ್ಯಮ ಹಾಗೂ ವಿವಿಧ ಜಾಹಿರಾತುಗಳ ಮೂಲಕ ಪ್ರಚಾರ ಮಾಡುತ್ತಿರುವುದು ನಿಜವೇ; ಇದಕ್ಕೆ ಎಷ್ಟು ಖರ್ಚಾಗಿದೆ? ಏನು ಎಂಬುದನ್ನು ವಿವರವಾಗಿ ಕೇಳಿದ್ದಾರೆ.

**ಸಭಾಪತಿಯವರು:-** ಸಮಯ ಕೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದೇ ಪ್ರಶ್ನೆ ಚುಕ್ಕೆ ರಹಿತ ಪ್ರಶ್ನೆಗಳ ಪಟ್ಟಿಯಲ್ಲಿದ್ದು, ಅದಕ್ಕೆ ಇವತ್ತೆ ಉತ್ತರ ಬಂದಿದೆ. ಮಾನ್ಯ ರಮೇಶ್ ಬಾಬುರವರ ಪ್ರಶ್ನೆಗೆ ಪೂರ್ಣ ವಿವರವಾದ ಉತ್ತರ ಬಂದಿದೆ. ನಾವು ಇದಕ್ಕೆ ಏನು ಹೇಳಬೇಕು.

**ಶ್ರೀ ಎಂ.ಆರ್. ಸೀತಾರಾಂ:-** ನನ್ನ ಗಮನಕ್ಕೆ ಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಯಾರ ಗಮನಕ್ಕೆ ಕೊಡುತ್ತೀರಿ.

**ಶ್ರೀ ಎಂ.ಆರ್. ಸೀತಾರಾಂ:-** ನನಗೆ ಕೊಡಿ ಸಾರ್. ನಾನು ಅದನ್ನು ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಇಲಾಖೆಯ ಕಾರ್ಯದರ್ಶಿಗಳ ಹತ್ತಿರ ಚರ್ಚೆ ಮಾಡಿ, ಏನು ಕ್ರಮ ತೆಗೆದುಕೊಳ್ಳಬೇಕೋ, ಮುಖ್ಯ ಕಾರ್ಯದರ್ಶಿ...

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ.

**ಶ್ರೀ ಎಂ.ಆರ್. ಸೀತಾರಾಂ:-** ನಾನು ಖಂಡಿತ ಸೂಚನೆ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು, ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸದನಕ್ಕೆ ತಿಳಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್. ಸೀತಾರಾಂ:-** ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿ, ನಾನು ಇಲ್ಲಿ ವರದಿ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಉದ್ದೇಶವೇನು?

**ಸಭಾಪತಿಯವರು:-** ಧನ್ಯವಾದಗಳು. ಆಯಿತು ಬಿಡಿ. ಅವರು ಏಕೆ ಉತ್ತರ ಕೊಡುತ್ತಾರೆ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಇದು ಏಕೆ ಆಗಿದೆ ಎಂಬುದನ್ನು ತಿಳಿದುಕೊಳ್ಳುತ್ತೇನೆ. ನಾನು ತಿಳಿದುಕೊಂಡು...

**ಶ್ರೀ ಕೆ.ಎಸ್. ಈಶ್ವರಪ್ಪ:-** ಉತ್ತರ ಕೊಡಿ.

**ಸಭಾಪತಿಯವರು:-** ಈಗ ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ವಂದನೆಯನ್ನು ಸಲ್ಲಿಸುವುದರ ಮೇಲೆ ಚರ್ಚೆ ಪ್ರಾರಂಭವಾಗಿದೆ. ಈಗ ಚರ್ಚೆಯನ್ನು ಮುಂದುವರೆಸುತ್ತೇವೆ. ಯಾರಾದರೂ ಒಬ್ಬರು ಅಥವಾ ಇಬ್ಬರು.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತರಕರು):-** ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ತೆಗೆದುಕೊಳ್ಳಬಹುದು ಎನಿಸುತ್ತದೆ. ಶಾಸನ ರಚನೆಗೆ ಮೇಡಂ ಅವರು...

**ಸಭಾಪತಿಯವರು:-** ವಿಧೇಯಕವನ್ನು ನಂತರ ತೆಗೆದುಕೊಳ್ಳೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಗೆ ಕರೆದಿದ್ದೀರಿ.

**ಸಭಾಪತಿಯವರು:-** ಅದು ಮಧ್ಯಾಹ್ನ ಒಂದೂವರೆಗೆ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸುಮಾರು ಎರಡೂವರೆ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಕರೆದಿದ್ದಾರೆ. ನಾವು ಏನು ಮಾಡಬೇಕೆಂಬುದನ್ನು ತಾವೇ ತೀರ್ಮಾನವನ್ನು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸದನದ ಅಭಿಪ್ರಾಯವನ್ನು ಸಭಾನಾಯಕರಿಗೆ ಕೇಳೋಣ.

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ..

**ಸಭಾಪತಿಯವರು:–** ನಿಮ್ಮದು ಮಧ್ಯಾಹ್ನ ಊಟವಾದ ನಂತರ ತೆಗೆದುಕೊಳ್ಳೋಣ.

**ಶ್ರೀಮತಿ ಉಮಾಶ್ರೀ :–** ಮಾನ್ಯ ಸಭಾಪತಿಯವರೇ, ದಯವಿಟ್ಟು ..

**ಸಭಾಪತಿಯವರು:–** ಊಟವಾದ ನಂತರ ತೆಗೆದುಕೊಳ್ಳೋಣ. ಕನಿಷ್ಟ ಅರ್ಧ ಗಂಟೆ ಸಮಯವನ್ನು ಇಟ್ಟುಕೊಳ್ಳದೇ ವಿಧೇಯಕವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಮಾತನಾಡುವವರಿಗೆ ಪ್ರಾರಂಭ ಮಾಡಿ ಐದು ನಿಮಿಷ ನಿಲ್ಲಿಸಿ, ಮತ್ತೆ ಕೊಡುತ್ತೇನೆಂದು ಹೇಳಬಹುದು. ಬಿಲ್‌ಗಳನ್ನು ಹಾಗೇ ಮಧ್ಯೆ ನಿಲ್ಲಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಮತ್ತು ಊಟ ಮುಗಿದ ನಂತರ ನಿಮ್ಮದು ತೆಗೆದುಕೊಳ್ಳೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಭೋಜನ ವಿರಾಮದ ನಂತರ ಅವರಿಗೆ ಅವಕಾಶ ಕೊಡಿ. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಮುಗಿಸಿದ ನಂತರ ಅವರು ಮಾತನಾಡಲಿ.

**ಸಭಾಪತಿಯವರು:–** ಮಾನ್ಯ ಸಂದೇಶ್ ನಾಗರಾಜ್‌ರವರು ಏನು ಹೇಳುತ್ತಿದ್ದಾರೆ.

**ಶ್ರೀ ಸಂದೇಶ್ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ಗಂಟೆಗೆ ಸಭೆ ಇಟ್ಟುಕೊಂಡಿದ್ದಾರೆ.

**ಸಭಾಪತಿಯವರು:–** ಇವತ್ತು.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಈಗ

**ಸಭಾಪತಿಯವರು:–** ಸದನ ನಡೆಯುವಾಗ ಸಭೆ ಇಟ್ಟುಕೊಂಡಿದ್ದಾರೆಯೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಹೌದು ಒಂದು ಗಂಟೆಗೆ ಸಭೆ ಇಟ್ಟುಕೊಂಡಿದ್ದಾರೆ.

**ಸಭಾಪತಿಯವರು:-** ಸದನ ನಡೆಯುವಾಗ ಸಭೆ ನಡೆಸುವುದು ಸರಿಯಲ್ಲ ಎಂದು ಹೇಳಿದೆ. ಇದು ಒಳ್ಳೆಯದಲ್ಲ ಎಂದು ನಾನು ಅಧಿಕಾರಿಗಳಿಗೆ ತಿಳಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಮುಗಿಸಿಬಿಡಿ. ಅವರದು ಆಮೇಲೆ ಪ್ರಾರಂಭವಾಗಲಿ.

**ಸಭಾಪತಿಯವರು:-** ಅದಕ್ಕೆ ಬಿಲ್ ಒಂದು ಪೆಂಡಿಂಗ್ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದಕ್ಕೂ ಮತ್ತು ಮಹದಾಯಿ ಮೀಟಿಂಗ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಯಾವುದಾದರೊಂದು ಮುಗಿಸಿ. ಇದನ್ನು ಮುಗಿಸಿಕೊಂಡರೆ, ಆಮೇಲೆ ಇವರಿಗೆ ಅವಕಾಶ ಕೊಡಿ. ಆನಂತರ ಬಿಲ್ ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:-** ಈಗ ಹತ್ತು ನಿಮಿಷಕ್ಕೆ ಬಿಲ್ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ನಾವು ಕಳುಹಿಸಿದ್ದೇವೆ. ನಿನ್ನೆ ಅಜೆಂಡಾ ಪ್ರತಿಯಲ್ಲಿ ಬಂದಿದೆ. ನನ್ನ ಟೇಬಲ್‌ನಲ್ಲಿ ಇದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗಲಾದರೂ ಮುಗಿಸಿ.

**ಸಭಾಪತಿಯವರು:-** ನೀವು general ಆಗಿ ಕೇಳಬೇಡಿ. ನಾನು ತರುವುದು ಮರೆತು ಹೋಗಿದೆ. ಒಂದು ಪ್ರತಿಯನ್ನು ಕೊಡಿ ಎಂದು ಕೇಳಿದರೆ, ಅದನ್ನು ಕೊಡುತ್ತಾರೆ. ಎಲ್ಲರಿಗೂ ಕೊಟ್ಟಿದ್ದೇವೆ. ಈಗ ಒಂದು ಕೆಲಸ ಮಾಡೋಣ. ಭೋಜನ ವಿರಾಮದ ನಂತರ ಪುನಃ ಸದನ ಸಮಾವೇಶಗೊಂಡಾಗ ಮೊದಲು ವಿಧೇಯಕವನ್ನು ತೆಗೆದುಕೊಂಡು, ಚರ್ಚೆಯನ್ನು ಪ್ರಾರಂಭ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡೋಣ. ಭೋಜನಕ್ಕಾಗಿ ಇವತ್ತು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಇರುವ ಕಾರಣಕ್ಕಾಗಿ, ಮೂರು ಗಂಟೆಯವರೆಗೆ ಸದನವನ್ನು ಮುಂದೂಡುತ್ತಿದ್ದೇನೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 27 ನಿಮಿಷದಿಂದ ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲ್ಪಟ್ಟಿತು.)

(೦84)೦8.೦2.2೦18/3.1೦/ಎಂಎಂ-ಆರ್‌ಎನ್

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ ೦3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಉಪಸ್ಥಿತರಿದ್ದರು)**

5. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2017

ಪರ್ಯಾಲೋಚನಾ ಪ್ರಸ್ತಾವ

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರು ಮತ್ತು ಹಿರಿಯ ನಾಗರೀಕರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ "ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರು ಮತ್ತು ಹಿರಿಯ ನಾಗರೀಕರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಅನೇಕ ವಿವಿಧ ರಾಜ ಮನೆತನಗಳು ನಮ್ಮನ್ನು ಆಳಿ ಹೋಗಿರುವುದನ್ನು ಕಾಣುತ್ತೇವೆ. ಅದರಲ್ಲಿ ಚಾಲುಕ್ಯರು ಸಹ ಅಷ್ಟೇ ಪ್ರಮುಖರಾಗಿದ್ದಾರೆ. ಸುಮಾರು 6-12ನೇ ಶತಮಾನದವರೆಗೂ ಕೂಡ ಚಾಲುಕ್ಯರು ಕರ್ನಾಟಕದ ಪಶ್ಚಿಮ ಭಾಗದಲ್ಲಿ ಆಡಳಿತವನ್ನು ನಡೆಸಿದ್ದರು. ಅಂತಹ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿನ 'ವಾತಾಪಿ' ಅಂದರೆ ಈಗಿನ 'ಬಾದಾಮಿ' ಅವರ ರಾಜಧಾನಿಯಾಗಿತ್ತು. ಅವರ ಕಾಲದಲ್ಲಿ ಬಹಳಷ್ಟು ಸಾಂಸ್ಕೃತಿಕವಾಗಿ ಕೊಡುಗೆಗಳನ್ನು ಕೊಟ್ಟಿರುವ ಕುರುಹುಗಳನ್ನು ನಾವು ನೋಡಿದ್ದೇವೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು ಇಲ್ಲೆಲ್ಲಾ ಅನೇಕ ವಿದೇಶಿಗರು ಕೂಡ ಬಂದು ಅವುಗಳನ್ನು ನೋಡಿಕೊಂಡು ಹೋಗಿ, ಸಂಶೋಧನೆಗಳನ್ನು ಮಾಡಿರುವುದನ್ನು ಕಂಡಿದ್ದೇವೆ. ಇಲ್ಲಿರುವಂತಹ ಪರಂಪರೆ, ಪುರಾತತ್ವ ಅವಶೇಷಗಳು, ಸ್ಮಾರಕಗಳು, ಶಾಸನಗಳಿಗೆ ಮತ್ತು ಸಾಹಿತ್ಯಕ್ಕೆ ಕೊಟ್ಟಂತಹ ಕೊಡುಗೆಗಳು ವಿಪುಲವಾಗಿರುವುದರಿಂದ ಅವನ್ನು ಸಂರಕ್ಷಣೆ ಮಾಡುವುದು ಮತ್ತು ಅದರ ಸಮಗ್ರತೆಯನ್ನು ರಕ್ಷಿಸುವುದು ಬಹಳ ಪ್ರಮುಖವಾಗಿದೆ. ನಮ್ಮ ಪಾರಂಪರಿಕ ಪಟ್ಟಿಗಳನ್ನು ನೋಡಿದಾಗ ಬಹಳ ಸಂತೋಷ ಮತ್ತು ಹೆಮ್ಮೆಯೆನಿಸುತ್ತದೆ. ಅಲ್ಲಿ ವಿಶಿಷ್ಟವಾದಂತಹ ವಾಸ್ತುಶಿಲ್ಪದ ಶೈಲಿ, ಗುಡಿಗಳು, ದೇವಾಲಯಗಳು, ಕೋಟೆ-ಕೊತ್ತಲೆಗಳು, ಗುಹಾಲಯಗಳು, ತೀರ್ಥಗಳು ಸಾಕಷ್ಟು ಕಂಡುಬರುತ್ತವೆ. ಆ ಕಾರಣದಿಂದ ಮುಂದಿನ ಪೀಳಿಗೆಗೆ ಇವುಗಳನ್ನೆಲ್ಲಾ ಸಂರಕ್ಷಿಸಿ ಇಡಬೇಕಾದುದು ನಮ್ಮ ಕರ್ತವ್ಯವಾಗಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಪ್ರಾಧಿಕಾರಗಳನ್ನು ಮಾಡಿ ಅನೇಕ ಭಾಗಗಳಲ್ಲಿ ಇದನ್ನು ಸಂರಕ್ಷಣೆ ಮಾಡುವಂತಹ ಕೆಲಸ ಮಾಡಿದ್ದೇವೆ. ಅದೇ ರೀತಿಯಲ್ಲಿ ಐಹೊಳೆ, ಪಟ್ಟದಕಲ್ಲು ಮತ್ತು ಬಾದಾಮಿಯನ್ನು ಸ್ಮಾರಕಗಳ ತೊಟ್ಟಿಲು ಎಂದು ಕರೆಯುವುದಕ್ಕೆ ಹೆಮ್ಮೆಯೆನಿಸುತ್ತದೆ. ಏಕೆಂದರೆ ಪಟ್ಟದಕಲ್ಲು ವಿಶ್ವ ಪಾರಂಪರಿಕ ಸ್ಥಾನಮಾನಗಳಲ್ಲಿ ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿದೆ. ಅದರ ಅಕ್ಕಪಕ್ಕದಲ್ಲಿರುವ ಬಾದಾಮಿ ಮತ್ತು ಐಹೊಳೆ ಕೂಡ ಸಾಕಷ್ಟು ವಿಶೇಷತೆಗಳನ್ನು ಒಳಗೊಂಡಿವೆ. ಆ ಕಾರಣದಿಂದ ನೈಸರ್ಗಿಕವಾಗಿರುವ ಸಿಕ್ಕಿರುವ ಈ ಪರಂಪರೆಯನ್ನು ನಾವು ಸಂವರ್ಧನೆ, ಬಲವರ್ಧನೆ ಮಾಡಬೇಕಾಗುತ್ತದೆ. ಇವುಗಳೆಲ್ಲವನ್ನೂ ಮಾಡಬೇಕಾದರೆ ಒಂದು ಪ್ರಾಧಿಕಾರವನ್ನು ರಚನೆ ಮಾಡಬೇಕಾಗುತ್ತದೆ. 2015-16ರ ಬಜೆಟ್‌ನಲ್ಲಿ ಚಾಲುಕ್ಯ ಪ್ರಾಧಿಕಾರವನ್ನು ರಚಿಸಲು ನಮ್ಮ ಸರ್ಕಾರ ಘೋಷಣೆ ಮಾಡಿತು. ಇಲ್ಲಿ ಅನೇಕ ಉದ್ದೇಶಗಳಿವೆ. ಸಂರಕ್ಷಣೆ ಅಷ್ಟೇ ಅಲ್ಲ, ಪ್ರವಾಸೋದ್ಯಮವನ್ನು ಕೂಡ ಉತ್ತೇಜನಗೊಳಿಸುವುದಕ್ಕೆ ಇಲ್ಲಿ ಸಾಕಷ್ಟು ಅವಕಾಶಗಳಿವೆ. ಅದರ ಮೂಲಕ ರಾಜಸ್ವ ಕೂಡ ನಮ್ಮ ಸರ್ಕಾರಕ್ಕೆ ಬರುತ್ತಿದೆ. ಇದಕ್ಕೋಸ್ಕರವಾಗಿ ಸಂಬಂಧಪಟ್ಟಂತಹ ಇಲಾಖೆಗಳನ್ನು ಮತ್ತು ಸಚಿವರುಗಳ ಅನುಮತಿಗಳನ್ನು ಕೂಡ ಪಡೆದುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಇಂತಹ ಮಹತ್ತರವಾದ, ಅಗತ್ಯವಾದ, ಬಹಳ ಪ್ರಮುಖವಾದ ವಿಧೇಯಕವನ್ನು ಸದನದಲ್ಲಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಅನುಮೋದನೆ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಶ್ರೇಷ್ಠತನವಾದ ಕೆಲಸ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2017 ಇದರಲ್ಲಿ ಎರಡು ಮಟ್ಟದ ಸಮಿತಿಗಳನ್ನು ತಾವು ಮಾಡಿದ್ದೀರಿ. ಒಂದು ರಾಜ್ಯಮಟ್ಟದ ಸಮಿತಿ, ಇನ್ನೊಂದು ಪ್ರಾಧಿಕಾರವನ್ನು ರಚಿಸುವುದು ಮತ್ತು ನಿಗದಿಪಡಿಸುವುದು.

(ಮುಂದು . .

(85) 08-02-2018/3-20/ಕೆಹೆಚ್/ಆರ್‌ಎನ್

**ಶ್ರೀ ರಾಮಚಂದ್ರಗೌಡ (ಮುಂದು)**:- ಯಾವುದೇ ರೀತಿಯಾದಂತಹ ಪ್ರಾಧಿಕಾರಗಳನ್ನು ಮಾಡುವಂತಹ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳ ಜೋಡಣೆಯು ಬಹಳ ಅವಶ್ಯಕತೆ ಇದೆ. ಏಕೆಂದರೆ ಸರ್ಕಾರವು ಚುನಾಯಿತ ಪ್ರತಿನಿಧಿಗಳಿಂದ ಕೂಡಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳೆಲ್ಲ ಸೇರಿ ಮಂತ್ರಿಮಂಡಲದಲ್ಲಿ ಈ ವಿಧೇಯಕದ ಬಗ್ಗೆ ಚರ್ಚೆ ಮಾಡಿ ಈ ವಿಧೇಯಕವನ್ನು ತರಲಾಗಿದೆ. ಹಾಗೆಯೇ ರಾಜ್ಯ ಮಟ್ಟದ ಸಲಹಾ ಸಮಿತಿಯಲ್ಲಿ ಎಲ್ಲಾ ರೀತಿಯ ಅಧಿಕಾರಿ ವರ್ಗದವರು ಆ ಸಮಿತಿಯಲ್ಲಿ ಇದ್ದಾರೆ. ಅದರಲ್ಲಿ ಅಲ್ಲಿಯ ಸ್ಥಳೀಯ ಶಾಸಕರು ಕೂಡ ಇದ್ದಾರೆ. ಶಾಸಕ ಎಂದರೆ ವಿಧಾನ ಸಭಾ ಸದಸ್ಯ ಮತ್ತು ವಿಧಾನ ಪರಿಷತ್ತಿನ ಸದಸ್ಯ ಇಬ್ಬರೂ ಸಹ ಆ ಸಮಿತಿಯಲ್ಲಿ ಇದ್ದರೆ ಬಹಳ ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಇದ್ದು, ಇದನ್ನು ಸಲಹಾ ಸಮಿತಿ ಎಂದು ಕರೆಯುತ್ತಾರೆ. ಅದರಲ್ಲೂ ಕೂಡ ನಮ್ಮ ಅಧಿಕಾರಿಗಳಿಗೆ ಎಷ್ಟೊಂದು ಕೆಲಸವಿರುತ್ತದೆ. ಸಮಿತಿ ಸಭೆಗಳು, ಇನ್ನೊಂದು ಸಭೆ, ಮತ್ತೊಂದು ಸಭೆ ಎಂದು ಆ ಅಧಿಕಾರಿಗಳಿಗೆ ಸಮಯವೇ ಸಿಗುವುದಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸದನಕ್ಕೆ ಬರುವುದಿಲ್ಲವೆಂದು ಹೇಳುತ್ತೇವೆ. ಅವರು ಸದನಕ್ಕೆ ಬರುವುದಿಲ್ಲವೆಂದು ಏಕೆ ಹೇಳುತ್ತೇವೆ ಎಂದರೆ ಅವರನ್ನು ಮಂತ್ರಿಗಳು ಕರೆದಿರುತ್ತಾರೆ ಅಥವಾ ವಿಧಾನ ಸಭೆಯಲ್ಲಿ ಮಂತ್ರಿಗಳು ಕುಳಿತಿರುತ್ತಾರೆ. ಅವರು ಕೇಳುವಂತಹ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಿರುತ್ತಾರೆ. ಅವರುಗಳು ಏನಾದರೂ ಒಂದು ಕೆಲಸವನ್ನು ಮಾಡುತ್ತಲೇ ಇರುತ್ತಾರೆ. ಅವರುಗಳ ಮೇಲೆ ಯಾವುದೇ ದೋಷಗಳನ್ನು ಹೊರೆಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಇಂತಹ ಸಂದರ್ಭದಲ್ಲಿ ಪ್ರತಿಯೊಂದು ನಿಗಮದಲ್ಲೂ ಕೂಡ ಅಧಿಕಾರಿಗಳನ್ನೇ ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳುತ್ತಾ ಹೋದಾಗ, ನಾವು ಅಪೇಕ್ಷೆಪಡುವಂತಹ ಕೆಲಸಗಳು ಆಗುವುದಿಲ್ಲ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯ ಮಟ್ಟದ ಸಮಿತಿಯಲ್ಲಿಯೂ ಕೂಡ ಸ್ಥಳೀಯ ಶಾಸಕರನ್ನು ಬಿಟ್ಟು, ರಾಜ್ಯದ ಬೇರೆ ಯಾವುದೇ ಶಾಸಕರುಗಳು ಇದರಲ್ಲಿ ಕೆಲಸ ಮಾಡುವುದಕ್ಕೆ ಇಷ್ಟಪಟ್ಟರೆ ಅವರಿಗೂ ಸಹ ಅವಕಾಶವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ನಿಗಮಕ್ಕೋಸ್ಕರ ಒಂದು ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಒಂದು ಕೋಟಿ ರೂಪಾಯಿಗಳಲ್ಲಿ ತಾವೇನು ಈ ಸಂಸ್ಥೆ ಅಥವಾ ನಿಗಮವನ್ನು ಮಾಡುತ್ತಿದ್ದಿರೋ, ಆ ಸಂಸ್ಥೆಗೆ ಬಂದು ಹೋಗುವವರಿಗೆ T.A, D.A, and sitting fee ಅನ್ನು ಕೊಡುವುದಕ್ಕೆ ಆ ಒಂದು ಕೋಟಿ ರೂಪಾಯಿಗಳು ಅದಕ್ಕೆಂದೇ ಮುಗಿದು ಹೋಗುತ್ತದೆ. ಉದಾಹರಣೆಗೆ ಅನೇಕ ಕಡೆಗಳಲ್ಲಿ ಕಾಂಪೌಂಡ್ ಕಟ್ಟಿಸಬೇಕು, ಇನ್ನೊಂದು ಕಡೆಗೆ ಹೋಗಿ ಅಲ್ಲಿ ಗುಂಡಿ ತೆಗೆಸಬೇಕು, ಎಲ್ಲೆಲ್ಲಿ ಏನಾಗಿದೆ ಎಂಬುದನ್ನು ಹುಡುಕಬೇಕು. ಇದೆಲ್ಲಾ ಕೆಲಸಗಳನ್ನು ಮಾಡಬೇಕಾದರೆ ಹಣದ ಅವಶ್ಯಕತೆ ಬೇಕಾಗುತ್ತದೆ. ಹಣ ಇಲ್ಲದೆ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅವರು ಕೇವಲ ಒಂದು ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಆರ್ಥಿಕ ಜ್ಞಾಪನ ಪತ್ರ ಎಂಬುದರಲ್ಲಿ "ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಒಂದು ಕೋಟಿ ರೂಪಾಯಿಗಳ ಹೆಚ್ಚಿನ ಅಂದಾಜು ವೆಚ್ಚವನ್ನು ಒಳಗೊಂಡಿರುತ್ತದೆ" ಎಂದು ಹೇಳಲಾಗಿದೆ. ಅವರು ಐದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇಲ್ಲವೆಂದು ಹೇಳಬೇಕಾಗಿತ್ತು. ಒಂದು ಕೋಟಿ ರೂಪಾಯಿಯ ಮೇಲೆ ಒಂದು ರೂಪಾಯಿಯಾದರೂ ಆಗಬಹುದು. ಐದು ಕೋಟಿ ರೂಪಾಯಿಗೆ ಕಡಿಮೆ ಇಲ್ಲದಂತೆ ಈ ನಿಗಮವನ್ನು ಸ್ಥಾಪಿಸುತ್ತೇವೆ ಮತ್ತು ಈ ನಿಗಮವನ್ನು ನಡೆಸುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳಿದರೆ ಬಹುಮಟ್ಟಿಗೆ ಈ ವಿಧೇಯಕವನ್ನು ತಂದಿರುವುದಕ್ಕೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರವು ಸದ್ದುದ್ದೇಶದಿಂದ ಈ ಕಾಯ್ದೆಯನ್ನು ತಂದಿರುವುದರಿಂದ ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಕೆಲವು ಗೊಂದಲಗಳಿರುವುದು ಎದ್ದು ಕಾಣುತ್ತಿದೆ.

ಮೊದಲನೆಯದಾಗಿ ವಿಧೇಯಕದ ಕಲಂ-3ರಲ್ಲಿ "ಪ್ರಾಧಿಕಾರವನ್ನು ರಚಿಸುವುದು ಮತ್ತು ನಿಗಮಿತಗೊಳಿಸುವುದು" ಎಂದರೆ ಒಂದು ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದರಲ್ಲಿ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡುವಂತಹ ಪ್ರಕ್ರಿಯೆಗೆ ಅವಕಾಶವನ್ನು ಕೊಟ್ಟಿದ್ದಾರೆ. ಬಹುತೇಕವಾಗಿ ಇವರು ಈ ಪ್ರಸ್ತಾಪವನ್ನು ಏನು ಕೊಟ್ಟಿದ್ದಾರೆ, ಇದು ಸಮಂಜಸವಲ್ಲವೆಂದು ನನಗನಿಸುತ್ತದೆ. ಸಾಮಾನ್ಯವಾಗಿ ಇಂತಹ ಪಾರಂಪರಿಕ ಸ್ಥಳಗಳನ್ನು ಸಂರಕ್ಷಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಸ್ಥಳೀಯ ಮಂತ್ರಿಗಳನ್ನು ಅಥವಾ ಉಸ್ತುವಾರಿಯಾಗಿ ಯಾರು ಇರುತ್ತಾರೋ, ಅವರನ್ನು ಅಧ್ಯಕ್ಷರನ್ನಾಗಿ ಮಾಡುವಂತಹ ಅವಕಾಶವನ್ನು ಕೊಡಬೇಕು. ಆ ಸಮಿತಿಗೆ ಅವರು ಅಧ್ಯಕ್ಷರಾಗಿ, ಜಿಲ್ಲಾಧಿಕಾರಿಗಳು ಸಂಚಾಲಕರಾದರೆ ಬಹುತೇಕವಾಗಿ ಈ ಸಮಿತಿಯು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಂಬಾ ಪ್ರಬಲವಾಗಿರುತ್ತದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ 40 ರಿಂದ 50 ಇಲಾಖೆಗಳ ಜವಾಬ್ದಾರಿಯನ್ನು ಕೊಟ್ಟಿದ್ದಾರೆ, ಯಾವುದೇ ಸಮಿತಿಯ ಸಭೆಯನ್ನು ಮಾಡಿದರೆ ಅದು ಕೇವಲ ನಾಮ್‌ಕೇವಾಸ್ಥೆಯ ಸಭೆಗಳು ಆಗುತ್ತಿದೆಯೇ ವಿನಃ, ಅದನ್ನು implementation ರೀತಿಯಲ್ಲಿ ಯಾವತ್ತೂ ಸಹ ಅದರ ಪ್ರಯೋಜನ ಸಿಗುತ್ತಿಲ್ಲ. ಹಾಗಾಗಿ ಒಂದು ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ಆ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿಗಳ ಬದಲಾಗಿ ಜಿಲ್ಲಾ ಮಂತ್ರಿ ಅಥವಾ ಜಿಲ್ಲಾ ಉಸ್ತುವಾರಿ ಮಂತ್ರಿಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಈ ಪ್ರಾಧಿಕಾರದಲ್ಲಿ ಸ್ಥಳೀಯ ಚುನಾಯಿತ ಪ್ರತಿನಿಧಿಗಳಿಗೂ ಸಹ ಅವಕಾಶವನ್ನು ಕೊಡಬೇಕಾಗುತ್ತದೆ. ಚುನಾಯಿತ ಪ್ರತಿನಿಧಿಗಳಿಗೆ ರಾಜ್ಯ ಸಮಿತಿ ಸಭೆಯಲ್ಲಿ ಅವಕಾಶವನ್ನು ಕೊಟ್ಟಿದ್ದಾರೆಯೇ ಹೊರತು, ಈ ಪ್ರಾಧಿಕಾರದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶವನ್ನು ಕೊಟ್ಟಿಲ್ಲ. ಆ ನಿಟ್ಟಿನಲ್ಲಿ ಈ ಕಾಯ್ದೆಯಲ್ಲಿ ಲೋಪ ಇದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ನಂತರ ವಿಧೇಯಕದ ಕಲಂ-5 ರಲ್ಲಿ "ಪ್ರಾಧಿಕಾರ ಭದ್ರತಾ ದಳ" ಎಂದು ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಇದಕ್ಕೆ ಏನು ಅಧಿಕಾರಗಳಿವೆ. ಅವರು ಸಿ.ಆರ್.ಪಿ.ಸಿ., ಮತ್ತು ಐ.ಪಿ.ಸಿ., ಅಡಿಯಲ್ಲಿ ಕೆಲಸವನ್ನು ಮಾಡಬಹುದೇ, ಇವರು ಸಂರಕ್ಷಣೆಗೆ ಅಧಿಕಾರವೆಂದು ಹೇಳುತ್ತಾರೆ. ಇದು ಯಾವ ರೀತಿಯ ಅಧಿಕಾರ. ಒಂದು ಸಿವಿಲ್ ಅಧಿಕಾರವನ್ನು ಕೊಟ್ಟಿದ್ದಾರೆಯೇ? ಸಿ.ಆರ್.ಪಿ.ಸಿ., ಮತ್ತು ಐ.ಪಿ.ಸಿ., ಅಡಿಯಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆಯೇ? ಇದರ ಬಗ್ಗೆ ಯಾವ ರೀತಿಯಲ್ಲಿಯೂ ಸ್ಪಷ್ಟತೆ ಇಲ್ಲ. ಇವರು ಸಂರಕ್ಷಣೆ ಮಾಡುವುದಕ್ಕೆ ಈಗಿರುವಂತಹ ಪೋಲೀಸ್ ವ್ಯವಸ್ಥೆ ಅಥವಾ ಬೇರೆ ಇರುವಂತಹ ಕಾನೂನನ್ನು ಬಳಸಿಕೊಳ್ಳಬಹುದು. ಇಲ್ಲಿ "ಪ್ರಾಧಿಕಾರ ಭದ್ರತಾ ದಳ" ಎಂದು ಬಂದ ಮೇಲೆ ಯಾವ ಗ್ರೂಪಿನ ಅಧಿಕಾರಿಯನ್ನು ಈ ಪ್ರಾಧಿಕಾರಕ್ಕೆ ನೇಮಕ ಮಾಡಲಾಗುತ್ತದೆ? ಪೋಲೀಸ್ ಒಬ್ಬ Investigating Officer ನ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಲಾಗಿದೆಯೇ ಅಥವಾ ಒಬ್ಬ ಸಿವಿಲ್ ನ್ಯಾಯಾಧೀಶನ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಲಾಗಿದೆಯೇ ಎಂಬ ಬಗ್ಗೆ ಈ ಕಲಂ ನಲ್ಲಿ ಸ್ಪಷ್ಟತೆ ಇಲ್ಲ. ಹಾಗಾಗಿ ಕಲಂ-5ರಲ್ಲಿ ಕೊಟ್ಟಿರುವಂತಹ ಅಂಶಗಳನ್ನು ಅದಕ್ಕೆ ಅನುಗುಣವಾಗಿ ಬದಲಾವಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿಧೇಯಕದ ಕಲಂ-7ರಲ್ಲಿ "ಆಯುಕ್ತನ ನೇಮಕಾತಿ" ಎಂದು ಹೇಳಲಾಗುತ್ತದೆ. "ರಾಜ್ಯ ಸರ್ಕಾರವು, ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಬಗ್ಗೆ ಪರಿಜ್ಞಾನವಿರುವ, ರಾಜ್ಯ ಸಿವಿಲ್ ಸೇವೆಯ ಗ್ರೂಪ್-ಎ (ಹಿರಿಯ ಶ್ರೇಣಿ) ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು, ಯಾವುದೇ ಸ್ಥಳೀಯ ಅಥವಾ ಇತರೆ ಪ್ರಾಧಿಕಾರದ ಮುಖ್ಯಸ್ಥನನ್ನು ಅಥವಾ ಪ್ರಾಧ್ಯಾಪಕನ ಹುದ್ದೆಗಿಂತ" ಎಂದರೆ ಇವರು ರಾಜ್ಯ ಸಿವಿಲ್ ಸೇವೆಯ ಗ್ರೂಪ್-ಎ ಅಡಿಯಲ್ಲಿ ಬರುತ್ತಾರೆಯೇ? ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕದಲ್ಲಿರುವಂತಹ ಪದ ಯಾವುದೇ ಸ್ಥಳೀಯ ಅಥವಾ ಇತರೆ ಪ್ರಾಧಿಕಾರದ ಮುಖ್ಯಸ್ಥನನ್ನು ಎಂದು ಕೊಟ್ಟಿದ್ದಾರೆ. ಇತರೆ ಪ್ರಾಧಿಕಾರದಲ್ಲಿ ಗ್ರೂಪ್-ಎ ದರ್ಜೆಗಿಂತ ಕಡಿಮೆ ಇರುವಂತಹ ಅಧಿಕಾರಿಗಳು ಆಯುಕ್ತರಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಸ್ಪಷ್ಟತೆ ಇಲ್ಲದೆ ಇರುವುದರಿಂದ ಗೊಂದಲಕ್ಕೆ ಅವಕಾಶ ಉಂಟಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟತೆಯನ್ನು ಕೊಡಬೇಕಾಗುತ್ತದೆ. ಇವರು ಯಾರನ್ನು ಪ್ರಾಧಿಕಾರದ ಆಯುಕ್ತರನ್ನಾಗಿ ನೇಮಿಸತಕ್ಕದ್ದು ಎಂದು ಒಂದು ಅವಕಾಶವನ್ನು ಕೊಟ್ಟಿದ್ದಾರೆ, ಅದಕ್ಕೆ ಒಂದು ಸ್ಪಷ್ಟತೆಯನ್ನು ಕೊಟ್ಟರೆ ಬಹುತೇಕ ಮುಂದೆ ಆಗುವಂತಹ ಗೊಂದಲಗಳಿಗೆ ಕಡಿವಾಣವನ್ನು ಹಾಕಬಹುದು. ಆಯುಕ್ತರ ವೇತನ ಶ್ರೇಣಿಯು ಯಾವ ದರ್ಜೆಗನುಸಾರವಾಗಿ ಒಳಪಟ್ಟಿರುತ್ತದೆ ಎಂಬುದರ ಬಗ್ಗೆ ಒಂದು ಸ್ಪಷ್ಟತೆಯನ್ನು ಕೊಟ್ಟರೆ, ಈ ವಿಧೇಯಕವು ಬಹುತೇಕವಾಗಿ ಸ್ಪಷ್ಟತೆಯಿಂದ ಕೂಡಿರುತ್ತದೆ ಎಂದು ಹೇಳಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

ಹಾಗೆಯೇ, ವಿಧೇಯಕದ ಕಲಂ-8 (ಡಿ) ರಲ್ಲಿ "ಪ್ರಾಧಿಕಾರದ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಪ್ರಾಧಿಕಾರಕ್ಕೆ ಪ್ರತಿಯೊಂದು ಹಣಕಾಸಿನ ವರ್ಷಾಂತ್ಯದ ಮೂರು ತಿಂಗಳುಗಳ ಒಳಗೆ ಸಿದ್ಧಪಡಿಸಿ, ಅನುಮೋದನೆಗಾಗಿ ಸಲ್ಲಿಸತಕ್ಕದ್ದು" ಎಂದು ಕೊಟ್ಟಿದ್ದಾರೆ. ಇದನ್ನು ಅನುಮೋದನೆಗಾಗಿ ಯಾರಿಗೆ ಸಲ್ಲಿಸುವುದು? ಅನುಮೋದನೆಗಾಗಿ ಪ್ರಾಧಿಕಾರದ ಆಡಳಿತ ಮಂಡಳಿಗೆ ಸಲ್ಲಿಸುವುದೋ ಅಥವಾ ರಾಜ್ಯ ಸಲಹಾ ಸಮಿತಿಗೆ ಸಲ್ಲಿಸುವುದೋ ಎಂಬ ಬಗ್ಗೆ ಯಾವುದೇ ರೀತಿಯಲ್ಲಿ ಸ್ಪಷ್ಟತೆ ಇಲ್ಲ.

ಮುಂದುವರೆದು, "ಆ ತರುವಾಯ ಅವುಗಳ ಪ್ರತಿಗಳನ್ನು ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು" ಎಂದು ಹೇಳುತ್ತಾರೆ. ಈ ಅನುಮೋದನೆಯನ್ನು ಆಡಳಿತ ಮಂಡಳಿಯಲ್ಲಿ ಇಡಬಹುದೇ ಅಥವಾ ರಾಜ್ಯ ಸಮಿತಿಯಲ್ಲಿ ಇಡಬಹುದೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಹಾಗಾಗಿ ಈ ವಿಧೇಯಕದಲ್ಲಿ ಏನೇನು ಗೊಂದಲಗಳಿವೆ, ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರವರು ಮತ್ತು ಮಾನ್ಯ ರಮೇಶ್ ಬಾಬು ರವರು ಹೇಳಿರುವಂತಹ ವಿಚಾರಗಳಿಗೆ ಪೂರಕವಾಗಿ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಈಗಾಗಲೇ ರಾಜ್ಯ ಮಟ್ಟದಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಿದ್ದಾರೆ. ಈ ಸಲಹಾ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಉಪಾಧ್ಯಕ್ಷರನ್ನಾಗಿ ಮಾಡಲಾಗಿದೆ. ಅಲ್ಲದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಕೂಡ ಈ ಸಮಿತಿಯಲ್ಲಿ ಇರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕದ ಕಲಂ-6 (ಇ) ರಲ್ಲಿ; "ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಮತಕ್ಷೇತ್ರದ ಮತ್ತು ಆ ಪ್ರದೇಶದಲ್ಲಿ ಮತದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವ ಪಾರಂಪರಿಕ ಪ್ರದೇಶವನ್ನು ಭಾಗಶಃವಾಗಿ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು" ಎಂದು ಕೊಟ್ಟಿದ್ದಾರೆ. ಈ ಸಲಹಾ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭೆಯ ಸದಸ್ಯರನ್ನು ಹಾಕಿಕೊಳ್ಳಲಾಗಿದೆ. ಪ್ರಾಧಿಕಾರದಲ್ಲೂ ಕೂಡ ಇವರನ್ನು ಹಾಕಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕೊಡಬೇಕು ಎನ್ನುವ ಒಂದು ಸಲಹೆಯನ್ನು ಕೊಟ್ಟು ಈ ವಿಧೇಯಕವನ್ನು ಸ್ವಾಗತ ಮಾಡುತ್ತಿದ್ದೇನೆ. ಜನ ಪ್ರತಿನಿಧಿಗಳು ಇದ್ದಾಗ ಮಾತ್ರ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಅದಕ್ಕೆ ಪೂರಕವಾದಂತಹ ಸಲಹೆಗಳು ಬರುತ್ತದೆಯೇ ಹೊರತು ಕೇವಲ ಅಧಿಕಾರಿಗಳನ್ನು ಇಟ್ಟುಕೊಂಡು ವ್ಯವಹಾರಿಕವಾಗಿ ಪ್ರಾಧಿಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. ಹಾಗಾಗಿ ರಾಜ್ಯ ಮಟ್ಟದ ಸಲಹಾ ಸಮಿತಿಯಲ್ಲಿ ಎಲ್ಲಾ ಸದಸ್ಯರುಗಳನ್ನು ಹೇಗೆ ಹಾಕಿಕೊಂಡಿದ್ದಾರೆಯೋ, ಹಾಗೆಯೇ ಸಂಸತ್ ಸದಸ್ಯರು ಮತ್ತು ವಿಧಾನ ಮಂಡಲದ ಸದಸ್ಯರುಗಳನ್ನು ಈ ಪ್ರಾಧಿಕಾರಕ್ಕೆ ಹಾಕಿಕೊಳ್ಳಬೇಕು. ಇದರಿಂದ ಪ್ರಾಧಿಕಾರವು ಮುಕ್ತವಾಗಿ ಕೆಲಸವನ್ನು ಮಾಡುವುದಕ್ಕೆ ಅನುಕೂಲವನ್ನು ಮಾಡಿಕೊಡಬೇಕೆನ್ನುವ ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಜಗತ್ತಿನಲ್ಲಿ ಅದ್ಭುತವಾದ ನಾಗರೀಕತೆಯ ಕುರುಹುಗಳು ನಮ್ಮ ದೇಶದಲ್ಲಿ ಇದೆ. ಆದರೆ ಅವುಗಳನ್ನು ಸಂರಕ್ಷಣೆ ಮಾಡುವಂತಹ ಕೆಲಸದಲ್ಲಿ ನಾವೆಲ್ಲಾ ಹಿಂದೆ ಇದ್ದೇವೆ ಎಂಬುದು ನನಗೆ ಅನಿಸುತ್ತದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಈ ರೀತಿಯ ಪರಂಪರೆಯನ್ನು ಮತ್ತು ಇತಿಹಾಸವನ್ನು ಪ್ರತಿಬಿಂಬಿಸುವಂತಹ ಪುರಾತತ್ವ ಅವಶೇಷಗಳು ನಮ್ಮ ರಾಜ್ಯದಲ್ಲಿ ಇದೆ. ಮುಂದಿನ ತಲೆಮಾರಿಗೆ ಅನೇಕ ಸಂಗತಿಯನ್ನು ತಿಳಿಸುವಂತಹ ಪಾರಂಪರಿಕ ಕುರುಹುಗಳನ್ನು, ಸ್ಮಾರಕಗಳನ್ನು ಅವುಗಳನ್ನೆಲ್ಲಾ ಸಂರಕ್ಷಣೆ ಮಾಡುವಂತಹ ಜವಾಬ್ದಾರಿ ನಮ್ಮದಾಗಿದ್ದರೂ ಕೂಡ ಅದನ್ನೆಲ್ಲಾ ಸಂರಕ್ಷಣೆ ಮಾಡುವಂತಹ ವಿಚಾರದಲ್ಲಿ ನಾವೆಲ್ಲಾ ವಿಫಲರಾಗಿದ್ದೇವೆ. ಹಾಗಾಗಿ ಮಾನ್ಯ ಮಂತ್ರಿಗಳು "ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2017" ನ್ನು ತಂದಿರುವುದನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಿದ್ದೇನೆ. ಏಕೆಂದರೆ ನಾನು historical perspective ಎಂದು ಅಂದುಕೊಳ್ಳುತ್ತೇನೆ. ನಮ್ಮಲ್ಲಿ ಐತಿಹಾಸಿಕ ದೃಷ್ಟಿಕೋನ ಎಂಬುದು ಇಲ್ಲ. ಐತಿಹಾಸಿಕ ಸ್ಥಳಕ್ಕೆ ಹೋದಾಗ ಅಲ್ಲಿನ ಕಲ್ಲುಗಳನ್ನೋ ಮತ್ತು ಚಪ್ಪಡಿ ಕಲ್ಲುಗಳನ್ನೋ ಅಥವಾ ಅಲ್ಲಿ ಉಪಯೋಗ ಮಾಡಿದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸ್ತುಗಳನ್ನೋ ಮನೆಗೆ ತೆಗೆದುಕೊಂಡು ಬಂದು ಮನೆಯ ಕೊಟ್ಟಿಗೆಯಲ್ಲಿಯೋ, ಮನೆಯ ಮೆಟ್ಟಿಲಿಗೋ, ಕರುವನ್ನು ಕಟ್ಟಲು ಉಪಯೋಗ ಮಾಡುವಂತಹದ್ದನ್ನು ನಾವು ನೋಡುತ್ತೇವೆ.

(ಮುಂದು)

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದು):-**

ನಾನು ಒಂದು ಸಣ್ಣ ಘಟನೆಯನ್ನು ಹೇಳಬಯಸುತ್ತೇನೆ. ನಾನು ಚೈನಾ ದೇಶದ ಪ್ರವಾಸಕ್ಕೆ ಹೋದಾಗ, ಅಲ್ಲಿ "Terracotta warriors"ನ ಸ್ಮಾರಕವನ್ನು ನೋಡುವುದಕ್ಕಾಗಿ ಹೋಗಿದ್ದೆನು. ಅಲ್ಲಿ ಏನೋ ಬಹಳ ದೊಡ್ಡದಾದ ಸ್ಮಾರಕವಿರಬಹುದು ಎಂದು ಭಾವಿಸಿ ಅಲ್ಲಿಗೆ ಹೋಗಿ ನೋಡಿದಾಗ, ಅಲ್ಲಿ ಏನೂ ಇರಲಿಲ್ಲ. ಅಲ್ಲಿ 3500-4000 ಸಾವಿರ ಟೆರ್ರಾಕೋಟಾ ವಿಗ್ರಹಗಳನ್ನು ನೋಡಿದೆವು. ಆದರೆ ಸದರಿ ಸ್ಥಳದಲ್ಲಿ ವಿಗ್ರಹಗಳನ್ನು ಇಟ್ಟಿರುವ ರೀತಿಯನ್ನು ಹಾಗೂ ಜಗತ್ತಿನಾದ್ಯಂತ ಆ ಸ್ಥಳದ ಬಗ್ಗೆ ಪ್ರಚಾರ ಮಾಡುವ ರೀತಿಯನ್ನು ನೋಡಿದರೆ, ತಾವು ಹೇಳಿದ ಹಾಗೆ ಆ ದೇಶದ ಪ್ರವಾಸೋದ್ಯಮಕ್ಕೆ ಹಾಗೂ ಅದರಿಂದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವಂತಹ ಅನೇಕ ಸಂಗತಿಗಳು ಆಗಿವೆ. ಸದರಿ ಸ್ಥಳಕ್ಕೆ ಹೋಲಿಸಿದರೆ, ಅದರ ನೂರು ಪಟ್ಟು ಹೆಚ್ಚು ಐತಿಹಾಸಿಕ ವಿಶೇಷಣಗಳಿರುವಂತಹ ಅತ್ಯಂತ ಹೆಚ್ಚು ವೈಭವದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಅನೇಕ ಸ್ಮಾರಕಗಳು ನಮ್ಮಲ್ಲಿವೆ. ಆದರೆ, ಅವುಗಳ ಹತ್ತಿರ ನಾವುಗಳು ಹೋಗುವ ಹಾಗಿಲ್ಲ. ಹೀಗಾಗಿ ಅಂತಹ ಸ್ಮಾರಕಗಳನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದ ಹಾಗೂ ಅದರ ಸಾಂಸ್ಕೃತಿಕ ಅನನ್ಯತೆಯನ್ನು ರಕ್ಷಿಸುವ ದೃಷ್ಟಿಯಿಂದ ಪ್ರಸ್ತುತ ವಿಧೇಯಕವನ್ನು ಸರ್ಕಾರವು ತಂದಿರುವುದಕ್ಕೆ ನಾನು ಅತ್ಯಂತ ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಆದರೆ ಪ್ರಸ್ತುತ ವಿಧೇಯಕವು ಚಾಲುಕ್ಯ ಪರಂಪರೆಗೆ ಮಾತ್ರವೇ ಸಿಮೀತವಾದರೆ ಸಾಕೇ? ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾಗಿ ಹೊಯ್ಸಳ ಹಾಗೂ ಕದಂಬ ರಾಜವಂಶಗಳ ಐತಿಹಾಸಿಕ ಕಲೆ, ಪರಂಪರೆಗಳನ್ನು ಬಿಂಬಿಸುವ ಅನೇಕ ಸ್ಮಾರಕಗಳಿವೆ. ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ನಾವು ಸ್ವಾಗತ ಮಾಡುತ್ತೇವೆ ಹಾಗೂ ಖಂಡಿತವಾಗಿಯೂ ಸಹ ವಿಧೇಯಕವನ್ನು ಅನುಮೋದಿಸುತ್ತೇವೆ. ಈ ರೀತಿಯಾಗಿ ನಮ್ಮ ರಾಜ್ಯದ ಅನೇಕ ರಾಜವಂಶಗಳನ್ನು ಪ್ರತಿಬಿಂಬಿಸುವಂತಹ ಅದು ಯಾವುದೇ ರಾಜವಂಶ ಇರಬಹುದು, ಎಲ್ಲಾ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರಿಗಳನ್ನು ಸ್ಥಾಪಿಸುವುದಕ್ಕೆ ತಮ್ಮ ಇಲಾಖೆಯಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನನಗೆ ಒಂದು ಸಂದೇಹ ಇದೆ, ಅದೇನೆಂದರೆ, ಕೇಂದ್ರದ ಹಾಗೂ ರಾಜ್ಯದ ಪುರಾತತ್ವ ಇಲಾಖೆಗಳಿವೆ. ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರದಲ್ಲಿ ಇವರಿಬ್ಬರನ್ನು ಸದಸ್ಯರುಗಳನ್ನಾಗಿ ಮಾಡಲಾಗಿದೆ. ಆದರೆ ಈ ಎರಡೂ ಇಲಾಖೆಗಳು ಈ ರೀತಿಯ ಸ್ಮಾರಕಗಳನ್ನು ಸಂರಕ್ಷಣೆ ಮಾಡುವಲ್ಲಿ ತಮ್ಮದೇ ಆದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಸ್ಥಳೀಯರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾರಂಪರಿಕ ವಸ್ತುಗಳನ್ನು ಮುಟ್ಟುವುದಕ್ಕೆ ಬಿಡುವುದಿಲ್ಲ ಹಾಗೂ ಅವರು ಇಚ್ಛಿಸಿದರೂ ಸಹ ಅವುಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಬಿಡುವುದಿಲ್ಲ. ಹೀಗಾಗಿ ಈ ರೀತಿಯ ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ. ಎರಡೂ ಪುರಾತತ್ವ ಇಲಾಖೆಗಳು ಪ್ರಾಧಿಕಾರದ ಸದಸ್ಯರುಗಳಾಗಿದ್ದಾರೆ. ಆದರೆ, ಎಲ್ಲಿಯೋ ಒಂದು ಕಡೆ ಈ ಎರಡು ಪುರಾತತ್ವ ಇಲಾಖೆಗಳು ಹಾಗೂ ಈ ಪ್ರಾಧಿಕಾರದ ನಡುವೆ ಮುಂದಿನ ದಿನಗಳಲ್ಲಿ ಕಚ್ಚಾಟಗಳು ಉಂಟಾಗುವ ಸಂಭವವಿದೆ. ಹೀಗಾಗಿ ನಾನು ಸ್ಥಾಪಿಸಲು ಹೊರಟಿರುವ ಪ್ರಾಧಿಕಾರವು ಕೇಂದ್ರದ ಮತ್ತು ರಾಜ್ಯದ ಪುರಾತತ್ವ ಇಲಾಖೆಗಳಿಗೆ ಪೂರಕವಾಗಿ ಇರಬೇಕು ಎಂಬುದಾಗಿ ನಾನು ಉಲ್ಲೇಖವನ್ನು ಮಾಡುತ್ತೇನೆ. ಇದರ ಜೊತೆಗೆ ಈ ಎರಡೂ ಇಲಾಖೆಗಳು ಕೇವಲ ಪ್ರಾಧಿಕಾರದ ಸದಸ್ಯರಾದರೆ ಸಾಕಾಗುವುದಿಲ್ಲ, ಇಲಾಖೆಗಳ ನಡುವಿನ ಹೊಂದಾಣಿಕೆಯ ದೃಷ್ಟಿಯಿಂದ ನಾವು ಕೇಂದ್ರದ ಪುರಾತತ್ವ ಇಲಾಖೆಯೊಂದಿಗೆ ಸಮನ್ವಯ ಮಾಡಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಉಲ್ಲೇಖಿಸಿರುವಂತೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವಂತಹ ಸಮಿತಿಯಲ್ಲಿ ಅವರಿಗಿಂತ ಉನ್ನತ ಹುದ್ದೆಯಲ್ಲಿರುವ ಆಯುಕ್ತರು ಅಥವಾ ಬೇರೆಯವರು ಸದಸ್ಯರಾಗಿರುವುದಕ್ಕೆ ಸಾಧ್ಯವಿದೆಯೇ? ಹೀಗಾಗಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಅದು ಜಿಲ್ಲಾ ಉಸ್ತುವಾರಿ ಸಚಿವರು ಅಥವಾ ಪ್ರಾಧಿಕಾರದ ಜವಾಬ್ದಾರಿಯಿರುವ ರಾಜ್ಯದ ಸಚಿವರು ಯಾರೇ ಆಗಿರಬಹುದು ಅವರೇ ಈ ಸಮಿತಿಯ ಅಧ್ಯಕ್ಷರಾದರೇ, ಪ್ರಾಯಶಃ ಯಾವ ಉದ್ದೇಶಕ್ಕಾಗಿ ಈ ಪ್ರಾಧಿಕಾರವನ್ನು ರಚನೆ ಮಾಡಲಾಗಿದೆ, ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ ಎಂಬುದಾಗಿ ಹೇಳುತ್ತೇನೆ. ಮಾನ್ಯ ಸದಸ್ಯರು ಉಲ್ಲೇಖಿಸಿರುವಂತೆ ಚುನಾಯಿತ ಜನ ಪ್ರತಿನಿಧಿಗಳಿಗೆ ಪ್ರಾಧಿಕಾರದಲ್ಲಿ ಒಂದು ಅವಕಾಶವನ್ನು ನೀಡಬೇಕು. ರಾಜ್ಯ ಮಟ್ಟದ ಸಲಹಾ ಸಮಿತಿಯಲ್ಲಿ ಚುನಾಯಿತ ಜನ ಪ್ರತಿನಿಧಿಗಳಿಗೆ ಸ್ಥಾನವನ್ನು ನೀಡಲಾಗಿದೆ. ಪ್ರಾಧಿಕಾರದಲ್ಲಿ ಜನ ಪ್ರತಿನಿಧಿಗಳು ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸಬೇಕು ಎಂಬುದಾಗಿ ಹೇಳಿದರೆ, ಅವರಿಗೆ ಪ್ರಾಧಿಕಾರದಲ್ಲಿ ಅವಕಾಶವನ್ನು ನೀಡಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಪ್ರವಾಸೋದ್ಯಮ ಮತ್ತು ಉದ್ಯೋಗ ಸೃಷ್ಟಿ ಈ ಎರಡೂ ದೃಷ್ಟಿಯಲ್ಲಿ ನನಗೆ ತಿಳಿದಿರುವ ಹಾಗೆ ತಮ್ಮಲ್ಲಿ ಅನುದಾನಗಳಿಲ್ಲ. ಪ್ರಾಯಶಃ ಈ ಕಾರಣಕ್ಕಾಗಿ ತಾವು ಪ್ರವಾಸೋದ್ಯಮ ಇಲಾಖೆಯೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತೀರಿ. ಬಹಳ ಕಡೆಗಳಲ್ಲಿ ಪ್ರವಾಸಕ್ಕೆ ಹೋದಾಗ ಅಲ್ಲಿ ಅದ್ಭುತವಾದ ಪಾರಂಪರಿಕ ಕುರುಹು, ಸ್ಮಾರಕ ಮತ್ತು ಅವಶೇಷಗಳು ಉಳಿಕೊಂಡಿದ್ದರೂ ಸಹ, ಅಲ್ಲಿ ಬರುವಂತಹ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಹಾಗೂ ಅವುಗಳನ್ನು ನಿರ್ವಹಣೆ ಮಾಡುವುದಕ್ಕೆ ಅಲ್ಲಿ ಯಾವುದೇ ರೀತಿಯ ವ್ಯವಸ್ಥೆಗಳಾಗಿರುವುದಿಲ್ಲ. ಪ್ರಾಧಿಕಾರವು ಈ ವಿಚಾರದಲ್ಲಿ ವಿಶೇಷವಾಗಿ ಗಮನವನ್ನು ಹರಿಸಿದರೆ ಬಹಳ ಪ್ರಮುಖವಾಗಿ ಈ ರೀತಿಯ ಹೊಯ್ಸಳ ರಾಜವಂಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರುಹು ಇರುವಂತಹ ಬೇಲೂರು, ಹಳೆಬೀಡು ಪ್ರದೇಶಗಳಿಗೆ ಲಕ್ಷಾಂತರ ಪ್ರವಾಸಿಗರು ಹೋಗುತ್ತಾರೆ. ಆದರೆ ದೇವಸ್ಥಾನದ 100-200 ಮೀಟರ್‌ಗಳ ದೂರ ಹೊರಗಡೆ ಬಂದರೆ ಪ್ರವಾಸಿಗರಿಗೆ ಅಲ್ಲಿ ಕಾರುಗಳನ್ನು ನಿಲುಗಡೆ ಮಾಡದಿರುವಂತಹ ವ್ಯವಸ್ಥೆಗಳಿವೆ. ಹೀಗಾಗಿ ಪ್ರಾಧಿಕಾರವು ಈ ರೀತಿಯ ಸಂಗತಿಗಳನ್ನು ಗಮನಿಸಬೇಕು. ನಾನು ಈಗಾಗಲೇ ಉಲ್ಲೇಖಿಸಿರುವಂತೆ ಚೈನಾ ದೇಶದ Xian ಪ್ರ್ಯಾಂತದಲ್ಲಿರುವ "Terracotta warriors" ಇರುವ ಪ್ರದೇಶಕ್ಕೆ ಹೋದರೆ, ಅಲ್ಲಿನ ಸುತ್ತಮುತ್ತಲಿನ ಸುಮಾರು 400-500 ಎಕರೆ ಪ್ರದೇಶದಲ್ಲಿ ಅದ್ಭುತವಾದ ಉದ್ಯಾನವನ್ನು ನಿರ್ಮಿಸಿದ್ದಾರೆ. ಸದರಿ ಪ್ರದೇಶಕ್ಕೆ ಹೋದಾಗ ಅಲ್ಲಿ out of the world ಈ ಪ್ರದೇಶವನ್ನು ಸೃಷ್ಟಿಸಿದ್ದಾರೆ ಎಂದು ಅನ್ನಿಸುತ್ತದೆ. ಈ ರೀತಿಯಲ್ಲಿ ಪ್ರಾಧಿಕಾರವು ಸ್ಥಳವನ್ನು ಆಯ್ಕೆ ಮಾಡಿಕೊಂಡು, ಸರ್ಕಾರವು ವಿಧೇಯಕದಲ್ಲಿ ಉಲ್ಲೇಖಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ, ಪ್ರಾಧಿಕಾರವು ಎಲ್ಲಾ ಭಾಗದಲ್ಲಿಯೂ ಕೂಡ, ಕೆಲವೊಂದು ಕಡೆ ಸರ್ಕಾರಿ ಜಾಗ ಅತಿಕ್ರಮಣವಾಗಿರಬಹುದು, ಸರ್ಕಾರಿ ಜಾಗದಲ್ಲಿ ಅಂಗಡಿ ಹಾಗೂ ಇತರೆ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿರುವ ಸಂಗತಿಗಳಿರಬಹುದು. ತಮಗೆ ತಿಳಿದಿರುವ ಹಾಗೆ ಹಂಪಿ ಪ್ರದೇಶದ ಬಗ್ಗೆ ನಾವು ಯಾವಾಗಲೂ ಉಲ್ಲೇಖವನ್ನು ಮಾಡುತ್ತಿರುತ್ತೇವೆ. ಅಲ್ಲಿ ಕಿಡಿಗೇಡಿಗಳಿಂದ ದುಷ್ಕೃತ್ಯಗಳಾಗುತ್ತಿರುವುದು, ಅನೈತಿಕ ಚಟುವಟಿಕೆಗಳು ಆಗುತ್ತಿವೆ, ಅಲ್ಲಿನ ವಿಗ್ರಹಗಳನ್ನು ಭಂಗ ಮಾಡುತ್ತಿದ್ದಾರೆ, ಅಲ್ಲಿನ ವಿಗ್ರಹಗಳನ್ನು ಕಳ್ಳ ಸಾಗಾಣಿಕೆ ಮಾಡಿ ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಇಂತಹ ನೂರಾರು ಸಂಗತಿಗಳು ನಮ್ಮ ಈ ರೀತಿಯ ಅನೇಕ ಪಾರಂಪರಿಕ ಸ್ಥಳಗಳಿಂದ ದುರ್ಬಳಕೆ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ರೀತಿಯ ಪಾರಂಪರಿಕ ಸ್ಥಳಗಳ ರಕ್ಷಣೆಗೆ ಪ್ರಾಧಿಕಾರ ಭದ್ರತಾ ದಳವನ್ನು ಮಾಡುತ್ತೇವೆ ಎಂಬುದಾಗಿ ಉಲ್ಲೇಖವನ್ನು ಮಾಡಲಾಗಿದೆ. ನನ್ನ ಅನಿಸಿಕೆಯ ಪ್ರಕಾರ ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಪ್ರಾಯಶಃ ನಿಮ್ಮಲ್ಲಿ ಆರ್ಥಿಕ ಸಾಮರ್ಥ್ಯವಿಲ್ಲ ಹಾಗೂ ಕಾನೂನಾತ್ಮಕವಾದ ಅಧಿಕಾರವಿರುವುದಿಲ್ಲ. ಇದನ್ನು coordinate ಮಾಡಿಕೊಂಡು ನಮ್ಮ ಸ್ಮಾರಕಗಳ ಸಂರಕ್ಷಣೆಗೆ ಇನ್ನೂ ಹೆಚ್ಚಿನ ಒತ್ತು ನೀಡುವಂತಹ ಅಗತ್ಯವಿದೆ. ಹೀಗಾಗಿ ತಾವು ಇವತ್ತಿನ ದಿವಸ ಇಟ್ಟಿರುವ ಹೆಜ್ಜೆ ಪ್ರಾಮಾಣಿಕವಾಗಿ ಕರ್ನಾಟಕ ಸರ್ಕಾರವು ಕಳೆದ 68-70 ವರ್ಷಗಳಲ್ಲಿ ನಮ್ಮ ಈ ರೀತಿಯ ಪಾರಂಪರಿಕ ಪ್ರದೇಶಗಳ ಸಂರಕ್ಷಣೆಗೆ ಇಟ್ಟಿರುವಂತಹ ದೊಡ್ಡ ಹೆಜ್ಜೆಯಾಗಿದೆ ಎಂದು ನಾನು ಅಂದುಕೊಳ್ಳುತ್ತೇನೆ. ಈ ಕಾರಣಕ್ಕಾಗಿ ನಾನು ಸರ್ಕಾರವನ್ನು ಅತ್ಯಂತ ಹಾರ್ದಿಕವಾಗಿ ಅಭಿನಂದಿಸುತ್ತಾ, ವಿಧೇಯಕವನ್ನು ಸ್ವಾಗತಿಸುತ್ತೇನೆ. ಮುಂದಿನ ದಿನಗಳಲ್ಲಿ ಇದೇ ರೀತಿಯ ಪ್ರಾಧಿಕಾರಗಳನ್ನು ನಮ್ಮ ರಾಜ್ಯದ ಎಲ್ಲಾ ರಾಜವಂಶದ ಪಾರಂಪರಿಕ ಮತ್ತು ಸಂಸ್ಕೃತಿಗಳನ್ನು ರಕ್ಷಣೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಲು ತಮ್ಮ ಇಲಾಖೆಯ ಮೂಲಕ ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕೆಂದು ವಿನಂತಿ ಮಾಡುತ್ತಾ, ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಮತಿ ಉಮಾಶ್ರೀರವರು ಇವತ್ತಿನ ದಿವಸ ಚಾಲುಕ್ಯ ಪಾರಂಪರಿಕ ಪ್ರದೇಶಗಳಾದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಇವುಗಳೊಂದಿಗೆ ಅದರ ಎಲ್ಲಾ ಪುರಾತತ್ವ ಅವಶೇಷಗಳು ಮತ್ತು ಸುತ್ತುವರಿದ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದಕ್ಕಾಗಿ ಪ್ರಸ್ತುತ ವಿಧೇಯಕವನ್ನು ತಂದಿದ್ದಾರೆ, ಅದನ್ನು ಸ್ವಾಗತ್ತಿಸುತ್ತೇನೆ ಹಾಗೂ ಇದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ ಈ ಭಾಗದ ಪ್ರದೇಶಗಳಿಂದ ನಾನು ಬಂದಿದ್ದೇನೆ. ನಮ್ಮ ದೇಶದ ಇತಿಹಾಸವನ್ನು ಇಣುಕಿ ನೋಡಿದಾಗ, ಚಾಲುಕ್ಯ ರಾಜವಂಶದ ಕೊಡುಗೆ ಅದ್ಭುತ ಮತ್ತು ಅನನ್ಯ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರಸ್ತುತ ವಿಧೇಯಕದಲ್ಲಿ ಸಮಿತಿಯ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾದ ರಾಮಚಂದ್ರಗೌಡ ರವರು ಪ್ರಸ್ತಾಪಿಸಿರುವ ಅಂಶಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಸದಸ್ಯರುಗಳನ್ನು ಈ ಸಮಿತಿಯಲ್ಲಿ ತರುವಂತಹದ್ದು ಒಳ್ಳೆಯದು ಎಂಬ ಸಲಹೆಯನ್ನು ನಾನು ಕೊಡಲಿಚ್ಛಿಸುತ್ತೇನೆ.

ಎರಡನೆಯ ವಿಚಾರವೇನೆಂದರೆ, ವಿಧೇಯಕದ ಪುಟ ಸಂಖ್ಯೆ 4 ರಲ್ಲಿ ನಮೂದಾಗಿರುವ ರಾಜ್ಯಮಟ್ಟದ ಸಲಹಾ ಸಮಿತಿಯಲ್ಲಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರನ್ನು ಸಮಿತಿಯ 'President' ಎಂಬ ಪದವನ್ನು ಕರಡು ವಿಧೇಯಕದಲ್ಲಿ ಉಪಯೋಗಿಸಿದ್ದಾರೆ. ಅದರ ಬದಲಾಗಿ ಅಧ್ಯಕ್ಷ ಎಂಬ ಪದವನ್ನು ಉಪಯೋಗಿಸಿ. ಇದನ್ನು ತಿದ್ದುಪಡಿಯನ್ನು ಮಾಡಿ.

ಸಭಾಪತಿಯವರು:- ಇಲ್ಲಿ 'President' ಎಂಬ ಪದ ಸರಿಹೋಗಲಿಲ್ಲ. ಈ ವಿಚಾರವನ್ನು ನಾನು ಆಗಲೇ ಪ್ರಸ್ತಾಪ ಮಾಡಬೇಕೆಂದು ಅಂದುಕೊಂಡಿದ್ದೇನು.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಅಧ್ಯಕ್ಷ ಎಂಬ ಪದದ ಬದಲಾಗಿ 'President' ಎಂಬುದನ್ನು ಉಪಯೋಗಿಸಿದ್ದಾರೆ. ಇದನ್ನು ತಿದ್ದುಪಡಿ ಮಾಡಿಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರನೆಯ ವಿಚಾರವೇನೆಂದರೆ, ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಒಂದು ವಿಚಾರವನ್ನು ಪ್ರಸ್ತಾಪಿಸಿದರು. ಅದು ನನಗೆ ಅರ್ಥವಾಗಲಿಲ್ಲ. **ಪ್ರಾಧಿಕಾರದ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಪ್ರಾಧಿಕಾರಕ್ಕೆ ಪ್ರತಿಯೊಂದು ಹಣಕಾಸಿನ ವರ್ಷಾಂತ್ಯದ ಮೂರು ತಿಂಗಳುಗಳ ಒಳಗೆ ಸಿದ್ಧಪಡಿಸಿ, ಅನುಮೋದನೆಗಾಗಿ ಸಲ್ಲಿಸತಕ್ಕದ್ದು ಹಾಗೂ ಆ ತರುವಾಯ ಅವುಗಳ ಪ್ರತಿಗಳನ್ನು ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು** ಈ ಅಂಶವು ಸರಿ ಇದೆ ಎಂದು ನನಗನ್ನಿಸುತ್ತದೆ.

**ಸಭಾಪತಿಯವರು**:- ಯಾರಿಗೆ ಸಲ್ಲಿಸಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕದಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಎಂಬುದಾಗಿ ವಿಧೇಯಕದಲ್ಲಿ ನಮೂದಿಸಲಾಗಿದೆ. ಇದರಲ್ಲಿ ಏನು ambiguity ಇದೆ ಎಂಬುದು ನನಗೆ ಅರ್ಥವಾಗಲಿಲ್ಲ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಮೊದಲು ಆಡಳಿತ ಮಂಡಳಿಯ ಅನುಮೋದನೆಯನ್ನು ತೆಗೆದುಕೊಳ್ಳಬೇಕು. ಈ ಅಂಶವನ್ನು ನಾನು ಪ್ರಸ್ತಾಪಿಸಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸ್ವಲ್ಪ rectification ಆಗಬೇಕಾಗುತ್ತದೆ. ಮಾತನಾಡಲು ನನಗೆ ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2017 ನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ, ಚಾಲುಕ್ಯ ಪಾರಂಪರಿಕ ಪ್ರದೇಶಗಳಾದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಇವುಗಳೊಂದಿಗೆ ಅದರ ಎಲ್ಲಾ ಪುರಾತತ್ವ ಅವಶೇಷಗಳು ಮತ್ತು ಸುತ್ತುವರಿದ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದಕ್ಕಾಗಿ ಪ್ರಸ್ತುತ ವಿಧೇಯಕವನ್ನು ತಂದಿರುವುದಾಗಿ ಹೇಳಿದ್ದಾರೆ. ಆದರೆ ಇದರ ಅಧಿಕಾರ ವ್ಯಾಪ್ತಿ, ಕರ್ನಾಟಕದ ಇಡಿ ರಾಜ್ಯದಲ್ಲಿ ಇವತ್ತಿನ ದಿವಸ ಬೇರೆ ಬೇರೆ ಪ್ರದೇಶಗಳಲ್ಲಿ ಈ ರೀತಿಯಾದ ಅನೇಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾರಂಪರಿಕವಾಗಿರುವಂತಹ ವಿಚಾರಗಳು ಮತ್ತು ಬೇರೆ ಬೇರೆ ಪುರಾತತ್ವ ಸ್ಥಳಗಳಲ್ಲಿ ಬೇರೆ ಬೇರೆ ವಿಚಾರಗಳಿವೆ. ಹೀಗಾಗಿ ಇಂತಹ ಪ್ರಾಧಿಕಾರಗಳನ್ನು ರಾಜ್ಯ ಮಟ್ಟದಲ್ಲಿ ಮಾಡುವುದರಿಂದ ಎಲ್ಲಿಯೋ ಒಂದು ಕಡೆ ಅಧಿಕಾರ ವ್ಯಾಪ್ತಿಯ ಅಂಶವನ್ನು ಗಮನಿಸಿದರೆ, ಅವುಗಳು ಎಲ್ಲೆಲ್ಲಿ ಇವೆ ಎಂಬುದಾಗಿ ಪ್ರಶ್ನೆಯನ್ನು ಕೇಳಿದರೆ, ಸಾಂಸ್ಕೃತಿಕ ಪರಂಪರೆ ಎಂದರೆ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣೆ ಮತ್ತು ರಾಜ್ಯ ಪುರಾತತ್ವ ಇಲಾಖೆ ಸಂರಕ್ಷಿಸಿರುವ ಕಿಸುವೊಳಲು ಎಂದು ಪ್ರಸಿದ್ಧವಾದ ಐತಿಹಾಸಿಕ ಸ್ಥಳ, ಬಾದಾಮಿಯಲ್ಲಿರುವ ಚಾಲುಕ್ಯರ ಅವಧಿಯ ದೇವಾಲಯಗಳು ಎಂಬುದಾಗಿ ಹೇಳುತ್ತಾರೆ. ಇಡಿ ರಾಜ್ಯಕ್ಕೆ ಪ್ರಾಧಿಕಾರದ ಅಧಿಕಾರ ವ್ಯಾಪ್ತಿ ಇರುವುದರಿಂದ, it should be a State Committee. ಆ ರೀತಿಯಲ್ಲಿ ಕಾರ್ಯನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಹೀಗಾಗಿ ಎಲ್ಲಿಯೋ ಒಂದು ಕಡೆ ಕೋರ್ ಪ್ರದೇಶ ವಲಯದ ಒಂದು ಕಿಲೋಮೀಟರ್ ಪರಿಮಿತಿಯ ಆಚೆ ವಿಸ್ತರಿಸಿರುವ ಪ್ರದೇಶಗಳು ರಕ್ಷಾ ವಲಯ ಎಂಬುದಾಗಿ ಹಾಗೂ ರಕ್ಷಾ ವಲಯದ ಒಂದು ಕಿಲೋಮೀಟರ್ ಪರಿಮಿತಿಯ ಆಚೆ ವಿಸ್ತರಿಸಿರುವ ಪ್ರದೇಶಗಳು ಹೊರ ಪ್ರದೇಶ ವಲಯ ಎಂಬುದಾಗಿ ಪ್ರಸ್ತುತ ವಿಧೇಯಕದಲ್ಲಿ ನಮೂದಿಸಲಾಗಿದೆ. ಈ ಅಂಶಗಳ ಬಗ್ಗೆ ನಾನು ಸ್ಪಷ್ಟೀಕರಣವನ್ನು ಕೇಳಲಿಚ್ಛಿಸುತ್ತೇನೆ. What exactly the jurisdiction of this Authority is? ಪ್ರಾಧಿಕಾರದ ಅಧಿಕಾರ ವ್ಯಾಪ್ತಿ ಏನು? ಯಾವ ಅಧಿಕಾರ ವ್ಯಾಪ್ತಿಯಲ್ಲಿ ಪ್ರಾಧಿಕಾರವು ಕಾರ್ಯ ನಿರ್ವಹಣೆಯನ್ನು ಮಾಡುತ್ತದೆ? ಪ್ರಾಧಿಕಾರದಲ್ಲಿ ಎರಡು ರೀತಿಯ ಸಮಿತಿಗಳನ್ನು ಮಾಡಲಾಗಿದೆ. ರಾಜ್ಯಮಟ್ಟದ ಸಲಹಾ ಸಮಿತಿಗೆ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಅಧ್ಯಕ್ಷರು ಮತ್ತು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಉಪಾಧ್ಯಕ್ಷರು ಎಂಬುದಾಗಿ ವಿಧೇಯಕದಲ್ಲಿ ನಮೂದಿಸಲಾಗಿದೆ.

(ಮುಂದು)

(087) 3.40/08-02-2018/ಸಿಎಸ್/ವಿಕೆ

**ಶ್ರೀ ಐವನ್ ಡಿ'ಸೋಜಾ(ಮುಂದು):-**

ಇದಕ್ಕಾಗಿ ಎರಡು ಸಮಿತಿಗಳನ್ನು ರಚಿಸಲಾಗಿದ್ದು, ರಾಜ್ಯಮಟ್ಟದಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಲಾಗಿದೆ, ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅದರ ಉಪಾಧ್ಯಕ್ಷರಾಗಿರುತ್ತಾರೆ ಎಂದು ಹೇಳಲಾಗಿದೆ. ಆ ಸಮಿತಿಯಲ್ಲಿ ರಾಜ್ಯದ ಸಂಸತ್ತಿನ ಸದಸ್ಯರು, ಹಾಗೂ ರಾಜ್ಯ ವಿಧಾನಮಂಡಲದ ಸದಸ್ಯರುಗಳನ್ನು ಸಹ ಸೇರಿಸಲಾಗಿದೆ. ಅದು balance ಆಗಬೇಕಾದರೆ ಯಾವ ರೀತಿಯಲ್ಲಿ ಸಂಸತ್ತಿನ ಸದಸ್ಯರು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನಮಂಡಲದ ಸದಸ್ಯರುಗಳನ್ನು ನೇಮಕ ಮಾಡಬೇಕು ಎನ್ನುವುದಕ್ಕೆ ನಿಯಮಗಳನ್ನು ಅಳವಡಿಸಬೇಕಾಗುತ್ತದೆ.

ಇನ್ನು ಅಧ್ಯಾಯ 4ರ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು, ಸಬ್‌ಕ್ಲಾಸ್ 9 ರಲ್ಲಿ "ಪಾರಂಪರಿಕ ಪ್ರದೇಶದ ಪರಿಮಿತಿಯೊಳಗೆ ಅಧಿಕಾರ ವ್ಯಾಪ್ತಿ ಚಲಾಯಿಸುವ ಸ್ಥಳೀಯ ಪ್ರಾಧಿಕಾರಗಳು ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರವು, ಯಾವುದಾದರೂ ಇದ್ದರೆ, ಅವುಗಳ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿ ಮಂಡಳಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಪಾರಂಪರಿಕ ಪ್ರದೇಶ ಅಭಿವೃದ್ಧಿ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಅಂಥ ಇತರ ನಿಕಾಯಗಳ ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸುವುದು" ಎಂದಿದೆ. ಇದರ ಬಗ್ಗೆ ಸ್ವಲ್ಪ ವಿವರಣೆಯನ್ನು ಮಾನ್ಯ ಸಚಿವರು ನೀಡಬೇಕು.

ಹಾಗೆಯೇ ಜಿಲ್ಲಾಮಟ್ಟದ ಸಮಿತಿ ಏನು ರಚಿತವಾಗುತ್ತಿದೆ ಅದರ ನಿರ್ವಹಣೆಯನ್ನು ಜಿಲ್ಲಾಧಿಕಾರಿಗಳಿಗೆ ನಿರ್ವಹಣೆಗೆ ನೀಡಲಾಗಿದೆ. ಆದರೆ ಜಿಲ್ಲಾಧಿಕಾರಿಗಳಿಗೆ ಕೆಲಸದ ಒತ್ತಡ ಹೆಚ್ಚಿರುತ್ತದೆ. ಅವರಿಗೆ ಇದನ್ನೆಲ್ಲ ನಿರ್ವಹಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾದರೆ, ಆಯುಕ್ತರು ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪಾರಂಪರಿಕಾ ಇಲಾಖೆ ಮೈಸೂರು, ಇವರು ಅದರ ಸದಸ್ಯರಾಗಿರುತ್ತಾರೆ. ಅಲ್ಲಿ ಶಿಷ್ಟಾಚಾರವನ್ನು ಯಾವ ರೀತಿಯಲ್ಲಿ ಪಾಲಿಸಲಾಗಿದೆ? ಇದರ ಜೊತೆಗೆ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಬೆಂಗಳೂರು, ಇವರನ್ನು ಕೂಡ ಕರೆಯಲಾಗುತ್ತಿದೆ. ಇವರನ್ನೆಲ್ಲ ಕರೆದರೆ ಬಹುಶಃ ಸಭೆ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ನನಗನಿಸುತ್ತದೆ. ಈ ಅಧಿಕಾರಿಗಳು ಬಂದು delegate ಮಾಡಿ ಕೊಡಬೇಕು, ಇಲ್ಲದಿದ್ದರೆ ಒಂದೇ ಒಂದು ಸಭೆಯನ್ನು ಕೂಡ ಈ ಸಮಿತಿಗೆ ನಡೆಸುವುದಕ್ಕೆ ಆಗುವುದಿಲ್ಲ. ಈ ಸಮಿತಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದರೆ ಅಧಿಕಾರಿಗಳ ಪ್ರತಿನಿಧಿಗಳು ಭಾಗವಹಿಸುವುದಕ್ಕೆ ಅವಕಾಶ ಇರಬೇಕಾಗುತ್ತದೆ. ಇದರ ಬಗ್ಗೆ ಸಚಿವರು ಗಮನ ಹರಿಸಬೇಕೆಂದು ಹೇಳಬಯಸುತ್ತೇನೆ.

**ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರು ಮತ್ತು ಹಿರಿಯ ನಾಗರೀಕರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಗಳೇ, ಈ ಚಾಲುಕ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಾರಂಪರಿಕಾ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕದ ಬಗ್ಗೆ ಹಿರಿಯ ನಾಯಕರಾದಂತಹ ಶ್ರೀ ರಾಮಚಂದ್ರಗೌಡರು, ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಬಾಬುರವರು, ಶ್ರೀ ಮಟ್ಟೂರ್‌ರವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, ಶ್ರೀ ಐವನ್ ಡಿ'ಸೋಜಾರವರು, ಬಹಳ ಉತ್ತಮವಾದ ಸಲಹೆಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರಾಧಿಕಾರಕ್ಕೆ 1 ಕೋಟಿ ರೂಪಾಯಿಗಳನ್ನು ನೀಡಿರುವುದು ಸಾಲುವುದಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಪ್ರಾರಂಭಿಕವಾಗಿ ಈ ಪ್ರಾಧಿಕಾರಕ್ಕೆ ನಾವು ಚಾಲನೆ ನೀಡಬೇಕಾದರೆ ತತಕ್ಷಣಕ್ಕೆ ಒಂದು ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಪ್ರಾಧಿಕಾರಗಳು ರಚನೆ ಆಗಿ ಅಲ್ಲಿ ಚರ್ಚೆಗಳಾಗಿ, ಅಲ್ಲಿ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕು, ಎನ್ನುವುದರ ವಿಚಾರ ಜಿಲ್ಲಾಮಟ್ಟದ ಸಮಿತಿಗೆ ಬರುತ್ತದೆ. ಅಲ್ಲಿ ಕೆಲಸಗಳು ನಡೆಯಬೇಕೆಂದರೆ ಪ್ರತಿ ವರ್ಷ ಕೂಡ ಆಯಾ ಸರ್ಕಾರಗಳು ಪ್ರಾಧಿಕಾರಕ್ಕೆ ಅನುದಾನವನ್ನು ಕೊಟ್ಟುಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ಅನುಗುಣವಾಗಿ ಮುಂದಿನ ದಿನಮಾನಗಳಲ್ಲಿ ಅನುದಾನ ಬಿಡುಗಡೆ ಮಾಡುವುದಕ್ಕೆ ಅವಕಾಶವಿದೆ. ಪ್ರತಿವರ್ಷಕ್ಕೆ 1 ಕೋಟಿ ರೂಪಾಯಿ ಎಂದೇನೂ ಇಲ್ಲ. ತತ್ಕಾಲಿಕವಾಗಿ ಪ್ರಾರಂಭಿಕ ಹಂತಕ್ಕೆ 1 ಕೋಟಿಯನ್ನು ನಾವು ಇಟ್ಟುಕೊಳ್ಳುತ್ತಿದ್ದೇವೆ.

ಹಾಗೆಯೇ ಮಾನ್ಯ ರಮೇಶ್‌ರವರು ಕಲಂ 5ರಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಧಿಕಾರದ ಭದ್ರತಾ ದಳದ ರಚನೆ ಮಾಡಲಾಗಿದೆ, ಅವರಿಗೆ legal sanctity ಏನಿದೆ, ಅವರಿಗೆ ಏನು ಪವರ್ ನೀಡಲಾಗಿದೆ ಎಂದು ಅವರು ಕೇಳಿದ್ದಾರೆ. ಪಾರಂಪರಿಕಾ ಪ್ರದೇಶದ ಒತ್ತುವರಿಯನ್ನು ತಡೆಗಟ್ಟುವುದಾಗಲೀ, ಅಥವಾ ಒತ್ತುವರಿಯನ್ನು ತೆರವುಗೊಳಿಸುವುದಾಗಲೀ ಅದು ಭದ್ರತಾ ದಳದ ಕೆಲಸ ಅಲ್ಲ. ಇನ್ನು ಮುಂದೆ ಯಾರು ಪಾರಂಪರಿಕಾ ಪ್ರದೇಶದ ಒತ್ತುವರಿ ಆಗದಂತೆ ನೋಡಿಕೊಳ್ಳುವುದು ಹಾಗೂ ಆ ಪ್ರದೇಶದ ರಕ್ಷಣೆಯ ಕೆಲಸ ಅವದ್ದಾಗಿರುತ್ತದೆ. ಇನ್ನು ಜಿಲ್ಲಾಧಿಕಾರಿಗಳಿಗೆ ಯಾವ್ಯಾವ ಕೆಲಸಗಳಿಗೆ ಯಾವ ಅಧಿಕಾರಿಗಳನ್ನು ಬಳಕೆ ಮಾಡಿಕೊಳ್ಳಬೇಕು; ಸ್ಥಳೀಯವಾಗಿ ಅಲ್ಲಿನ ಎಸಿ, ತಹಶೀಲ್ದಾರ್‌ರವರು, ಕಂದಾಯ ಇಲಾಖೆಯ ಅಧಿಕಾರಿಗಳು ಹೀಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಕೆಲಸ ಮಾಡಿಸುವುದಕ್ಕೆ ಅವರಿಗೆ ಅಧಿಕಾರವಿರುತ್ತದೆ. ಇದನ್ನೆಲ್ಲ ನಿಯಮಗಳಲ್ಲಿ ಅಳವಡಿಸುವುದಕ್ಕೆ ಅವಕಾಶ ಇರುವುದರಿಂದ ಆ ಪ್ರಯತ್ನವನ್ನು ಕೂಡ ಮಾಡುತ್ತೇವೆ. ಪ್ರಾಧಿಕಾರದ ಅಧ್ಯಕ್ಷರು ಮಾತ್ರ ಅಧಿಕಾರವನ್ನು ಚಲಾಯಿಸುತ್ತಾರೆ. ನೋಟಿಸ್ ನೀಡುವುದು, ಒತ್ತುವರಿ ಪ್ರದೇಶವನ್ನು ತೆರವುಗೊಳಿಸುವುದು, ಒತ್ತುವರಿ ಮಾಡದಂತೆ ತಾಕೀತು ಮಾಡುವ ಕೆಲಸವನ್ನು ಬೇರೆ ಬೇರೆ ಇಲಾಖೆಯವರು ಮಾಡುತ್ತಾರೆ.

ಕಲಂ 7ರಲ್ಲಿ ಆಯುಕ್ತರ ನೇಮಕಾತಿಯ ಬಗ್ಗೆ ಉಲ್ಲೇಖಿತವಾಗಿದೆ, ಆ ಬಗ್ಗೆ ಕೂಡ ಮಾನ್ಯ ಸದಸ್ಯರು ಕೇಳಿದರು., ನನ್ನ ಪ್ರಕಾರ ಇದರಲ್ಲಿ ಸ್ಪಷ್ಟವಾಗಿದೆ ಎಂದು ನಾನು ಭಾವಿಸಿದ್ದೇವೆ. "ರಾಜ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು, ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಬಗ್ಗೆ ಪರಿಜ್ಞಾನವಿರುವ ರಾಜ್ಯ ಸಿವಿಲ್ ಸೇವೆಯ ಗ್ರೂಪ್-ಎ(ಹಿರಿಯ ಶ್ರೇಣಿ) ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು, ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಮುಖ್ಯಸ್ಥನನ್ನು ಅಥವಾ ಪ್ರಾಧ್ಯಾಪಕನ ಹುದ್ದೆಗಿಂತ ಕಡಿಮೆಯಿರದ ಹುದ್ದೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬ ವ್ಯಕ್ತಿಯನ್ನು ಪ್ರಾಧಿಕಾರದ ಆಯುಕ್ತನನ್ನಾಗಿ ನೇಮಿಸತಕ್ಕದ್ದು". It sounds that, ಈ ಪ್ರಾಧಿಕಾರಕ್ಕೆ ನೇಮಕ ಮಾಡುವ ವ್ಯಕ್ತಿ, ಪ್ರಾಧ್ಯಾಪಕ ಆಗಲೀ ಅಥವಾ ಯಾವುದೇ ಹಿರಿಯ ಶ್ರೇಣಿಯ ಹುದ್ದೆಯಲ್ಲಿರಬೇಕು. ಅಂತಹವರನ್ನೇ ಈ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕ ಮಾಡಲಾಗುವುದು ಎನ್ನುವುದನ್ನು ನಾನು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ.

ಆನಂತರದಲ್ಲಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ ಲೆಕ್ಕಪತ್ರಗಳ ಪರಿಶೋಧನೆಯ ಬಗ್ಗೆ ಕೇಳಿದರು. ಪ್ರಾಧಿಕಾರದಲ್ಲಿ ಯಾವುದೇ ಲೆಕ್ಕಪತ್ರಗಳಾದರೂ ಸಹ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಯಲ್ಲಿ ಮಂಜೂರಾತಿಯನ್ನು ಪಡೆದು, ಅಲ್ಲಿಂದ ರಾಜ್ಯಮಟ್ಟದಲ್ಲಿ ಅದು ಸರ್ಕಾರಕ್ಕೆ ಬರುತ್ತದೆ. ಅವು ನಂತರ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಸಹ ಹಂಚಿಕೆ ಆಗುವುದನ್ನು ತಾವೆಲ್ಲರೂ ನೋಡಿದ್ದೀರಿ. ಈ ವಿಚಾರವನ್ನು ಮತ್ತೊಮ್ಮೆ ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಗಣೇಶ್ ಕಾರ್ಣಿಕ್‌ರವರು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ recognised areas or recognised monuments ಬಗ್ಗೆ ಹೇಳಿದರು. ಅದರ ಬಗ್ಗೆ ನಾನು ಚರ್ಚೆಯನ್ನು ಮಾಡಿದ್ದೇನೆ. ಕೇಂದ್ರ ಸರ್ಕಾರ ಗುರುತಿಸಿರುವ ಸ್ಮಾರಕಗಳೇನಿವೆ, ಮತ್ತು ರಾಜ್ಯ ಸರ್ಕಾರ ಈಗಾಗಲೇ ಮಾಡಿರುವ ಮತ್ತು ಮುಂದೆ ಮಾಡುವ ಸ್ಮಾರಕಗಳೇನಿವೆ, ಅದರ ಬಗ್ಗೆ ಅವಶ್ಯವಿದ್ದಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿಯೇ ನಾನು ಮುಂದಿನ ಕ್ರಮಗಳನ್ನು ಕೈಗೊಳ್ಳುವುದು. ಹಾಗಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ಯಾವುದೇ ಸಂಘರ್ಷಗಳಿಗೆ ಆಸ್ಪದವಿರುವುದಿಲ್ಲ.

ಇನ್ನು ಬೇರೆ ಬೇರೆ ರಾಜರು ಆಳಿದಂತಹ ಪ್ರದೇಶಗಳು ಇನ್ನೂ ಇವೆ, ಅವುಗಳಿಗೂ ಸಹ ಇನ್ನಷ್ಟು ಪ್ರಾಧಿಕಾರಿಗಳನ್ನು ರಚನೆ ಮಾಡಬಹುದು ಎನ್ನುವ ಸಲಹೆಗಳು ಬಂದವು. ಅವು ಕೂಡ ಉತ್ತಮವಾದ ಸಲಹೆಗಳಾಗಿದ್ದು, ಅವುಗಳನ್ನು ಕೂಡ ಬಹಳ ಗೌರವದಿಂದ ಸ್ವೀಕಾರ ಮಾಡುತ್ತೇನೆ.

(ಮುಂದು)

ಶ್ರೀಮತಿ ಉಮಾಶ್ರೀ (ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಕಾರಣದಿಂದ ಮತ್ತು ನಿರ್ದೇಶನಗಳನ್ನು ಪಾಲನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಇರುವ ಉನ್ನತ ಮಟ್ಟದ ಸಮಿತಿಯ ನಿರ್ದೇಶನವನ್ನು ಅಧಿಕಾರಿಗಳು ಪಾಲನೆ ಮಾಡಬೇಕಾಗುತ್ತದೆ. ಹಾಗಾಗಿ ಈ ಆರ್ಥದಲ್ಲಿ ನಾವು ವಿಧೇಯಕವನ್ನು ಮಾಡಿದ್ದೇವೆ.

ಶ್ರೀ ಡಿ.ಎಸ್. ವೀರಯ್ಯಃ- ಮಾನ್ಯ ಸಭಾಪತಿಯವರೇ, ಜನ ಪ್ರತಿನಿಧಿಗಳನ್ನು ಹಾಕಿಕೊಳ್ಳುವ ಬಗ್ಗೆ ಹೇಳಲಿಲ್ಲ.

ಸಭಾಪತಿಯವರುಃ- ಅವರು D.C. (Deputy Commissioner) ಯವರಿಗೆ ಸಂಬಂಧಪಟ್ಟಂತೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ. ಜನ ಪ್ರತಿನಿಧಿಗಳ ಬಗ್ಗೆ ಹೇಳುತ್ತಾರೆ. ಅವರು ಡಿ.ಸಿ. ಯವರಿಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದಾರೆ. ಅದು ಮುಕ್ತಾಯವಾಗಲಿ, ನಂತರ ನೋಡೋಣ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ತಮ್ಮ ಮಾತನ್ನು ಮುಂದುವರಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮುಂದುವರಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಚಿವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೆ ಉತ್ತರವನ್ನು ಕೊಡಲೇಬೇಕಾಗುತ್ತದೆ. ಒಟ್ಟು 6,221 ಹತ್ಯೆಗಳು ಆಗಿವೆ. ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪಾಲನೆ ಬಹಳ ಚೆನ್ನಾಗಿ ಇದೆಯಲ್ಲವೇ? ನಮ್ಮ ರಾಜ್ಯದಲ್ಲಿ ನೆಮ್ಮದಿ ಇದೆಯಲ್ಲವೇ? ನಮ್ಮ ರಾಜ್ಯದಲ್ಲಿ 2,534 ಮಹಿಳೆಯರ ಕೊಲೆಯಾಗಿದೆ. ಇದನ್ನು ನಾವು ಯಾರಿಗೆ ಹೇಳೋಣ? ಇಲ್ಲಿಯವರೆಗೆ ನೋಂದಣಿಯಾದ ನೂರಾರು ಪ್ರಕರಣಗಳಲ್ಲಿನ ಸಂಬಂಧಪಟ್ಟ ಅಪರಾಧಿಗಳನ್ನು ಬಂಧಿಸಲು ಆಗಲಿಲ್ಲ. ಕಲಬುರ್ಗಿಯವರ ಹತ್ಯೆ ಪ್ರಕರಣ ಎಲ್ಲಿಗೆ ಹೋಯಿತು? ಅದನ್ನು ಏನು ಮಾಡಿದ್ದಾರೆ? ಅದರಲ್ಲಿನ ಅಪರಾಧಿಗಳನ್ನು ದಸ್ತಗಿರಿ ಮಾಡಿದ್ದಾರೆಯೇ? ಗೌರಿ ಲಂಕೇಶ್ ಹತ್ಯೆ ಪ್ರಕರಣ ಎಲ್ಲಿಗೆ ಬಂದು ನಿಂತಿದೆ? ಇನ್ನೇನು ಅಪರಾಧಿಗಳನ್ನು ದಸ್ತಗಿರಿ ಮಾಡಿ ಬಿಟ್ಟೆವು ಎಂದು ಹೇಳಿದರು. ಆದರೆ, ಎಲ್ಲಿ ದಸ್ತಗಿರಿ ಮಾಡಿದ್ದಾರೆ? ಇವತ್ತು ಅಧಿಕಾರಿಗಳು ನೆಮ್ಮದಿಯಾಗಿ ಕೆಲಸ ಮಾಡಲು ಸಾಧ್ಯ ಇದೆಯೇ? ಪರಿಸ್ಥಿತಿ ಎಲ್ಲಿಗೆ ಹೋಗಿ ನಿಂತಿದೆ? ನಾನು ಯಾವುದನ್ನು ಹೇಳಲಿ? ನಾನು ಕಲ್ಲಪ್ಪ ಹಂಡಿಬಾಗ್ ಆತ್ಮಹತ್ಯೆ ಬಗ್ಗೆ ಮಾತನಾಡಲೇ, ಎಂ.ಕೆ.ಗಣಪತಿ ಆತ್ಮಹತ್ಯೆಯ ಬಗ್ಗೆ ಮಾತನಾಡಲೇ, ದಿನಾಂಕ 19.10.2016 ರಂದು ಮಾಲೂರಿನ ಪೋಲೀಸ್ ಠಾಣೆಯಲ್ಲಿ ರಾಘವೇಂದ್ರ ಎಂಬ ಒಬ್ಬ ಪೋಲಿಸ್ ಅಧಿಕಾರಿ ತಾನೇ ಗುಂಡು ಹಾರಿಸಿಕೊಂಡು ಸತ್ತಿದ್ದಾನೆ. ಶ್ರೀಮತಿ ರಶ್ಮಿ ಎನ್ನುವ ನಿಷ್ಠಾವಂತ ಅಧಿಕಾರಿ ಭ್ರಷ್ಟಾಚಾರದ ಬಗ್ಗೆ ವರದಿಯನ್ನು ಕೊಟ್ಟರೆ, ಅವರನ್ನು ವರ್ಗಾವಣೆ ಮಾಡಿದ್ದಾರೆ. ಇವತ್ತು ಶ್ರೀಮತಿ ರಶ್ಮಿರವರು ಎಲ್ಲಿ ಕೆಲಸ ಮಾಡುತ್ತಿದ್ದಾರೆಂದು ನಮಗೆ ಗೊತ್ತಿಲ್ಲ. ಅಂತಹ ಜವಾಬ್ದಾರಿಯುತ, ನಿಷ್ಠೆ ಪ್ರಾಮಾಣಿಕತೆಗೆ ಹೆಸರಾದಂತಹವರ ಕಥೆ ಏನಾಗಿದೆ? ಶ್ರೀಮತಿ ಶಿಖಾರವರ ಪರಿಸ್ಥಿತಿ ಮೈಸೂರಿನಲ್ಲಿ ಏನಾಯಿತೆಂದು ಎಲ್ಲರಿಗೂ ಗೊತ್ತಿದೆ ಅಲ್ಲವೇ? ಅದು ಮಾನ್ಯ ಮುಖ್ಯ ಮಂತ್ರಿಯವರ ತವರೂರು.

(ಮುಂದು...)

(095)08.02.2018-05.00-ಎಂವಿ-ಎಂಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಅದನ್ನು ನಾನು ನೆನಪು ಮಾಡಬೇಕಾಗಿಲ್ಲ. ಈಗ ನಾನು ಅನುಪಮಾ ಶೆಣೈರವರ ವಿಚಾರವನ್ನು ಮಾತನಾಡುವ ಅಗತ್ಯವಿದೆಯಾ? ಇವತ್ತಿನ ದಿವಸ ಅಧಿಕಾರಿಗಳು ನೆಮ್ಮದಿಯಾಗಿ ಕೆಲಸ ಮಾಡುವಂತಹ ಸಂದರ್ಭ ಇದೆಯಾ? ಹಾಸನದ ಜಿಲ್ಲಾಧಿಕಾರಿಯಾದ ಶ್ರೀಮತಿ ರೋಹಿಣಿ ಸಿಂಧೂರಿರವರ ನೆರವಿಗೆ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಮತ್ತು ಚುನಾವಣೆ ಆಯೋಗ ಬಂತು. ನಿನ್ನೆಯ ದಿವಸ ಶ್ರವಣಬೆಳಗೊಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೆವು. ಅಲ್ಲಿ ಭಾರತದ ಘನತೆವೆತ್ತ ರಾಷ್ಟ್ರಪತಿಗಳು, ಕರ್ನಾಟಕದ ಘನತೆವೆತ್ತ ರಾಜ್ಯಪಾಲರು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಾಸಕರು ಸಹ ಇದ್ದರು. ದಯಮಾಡಿ ಮಾನ್ಯ ಸಚಿವರು ಸ್ವಲ್ಪ ಕುಳಿತುಕೊಳ್ಳಬೇಕು. ಏಕೆಂದರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಹಾಗೂ ಶ್ರೀಮತಿ ಜಯಮಾಲ ರಾಮಚಂದ್ರರವರು ಮಾತನಾಡುವವರೆಗೂ ಕಾದು ಕುಳಿತುಕೊಂಡು ಆಮೇಲೆ ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರ ಹೇಳಿಕೆಗಳನ್ನು ಗುರುತು ಮಾಡಿಕೊಂಡು, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಾಳ್ಮೆಯಿಂದ ಕುಳಿತುಕೊಂಡು ನಮ್ಮ ಮಾತನ್ನು ಕೇಳಲಿ, ನಾವೆಲ್ಲರೂ ಮಾತನಾಡಿದ ಮೇಲೆ ಅವರು ಏನು ಬೇಕಾದರೂ ಟೀಕೆ ಮಾಡಲಿ, ನಾವು ಅವರ ಟೀಕೆಗಳನ್ನು ಸ್ವೀಕರಿಸುವುದಕ್ಕೆ ತಯಾರಿದ್ದೇವೆ. ಆದರೆ, ಸುಮ್ಮನೆ ಸರ್ಕಾರದ ದುಡ್ಡಿನಲ್ಲಿ ನೀವು ಹೇಳಿಕೊಂಡು ಹೋಗುತ್ತಿದ್ದಾರಲ್ಲ, ಎಲ್ಲ ಒಪ್ಪಿಕೊಳ್ಳಬೇಕೆಂದು. ನೀವು ನಮಗೆ ಎಷ್ಟು ದಿವಸ ಕಿವಿಗೆ ಹೂವು ಮುಡಿಸುತ್ತೀರಿ? ಮಾನ್ಯ ಸಚಿವರು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಂಡು ನಮ್ಮ ಮಾತನು ಕೇಳಲಿ. ನಾನು ಏನು ತಪ್ಪು ಮಾತನಾಡಿದ್ದೇನೆ ಎಂದು ಅವರು ನನಗೆ ಪ್ರಶ್ನೆ ಮಾಡಲಿ. ನಾನು ತಪ್ಪು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ರಾಜಕೀಯ ಲೇಪದಲ್ಲಿ ನಾನು ಮಾನ್ಯ ಸಚಿವರಾದ ಟಿ.ಬಿ.ಜಯಚಂದ್ರ ರವರ ಮಾತನ್ನು ನಾನು ಕೇಳುತ್ತಿದ್ದೇನೆ. ನೀವು ಆಪರೇಷನ್ ಕಮಲವನ್ನು ಬಿಟ್ಟಿಲ, ಅದನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಏನೆಲ್ಲಾ ಸಾಧ್ಯವಿದೆ, ಅದನ್ನೆಲ್ಲಾ ಮಾತನಾಡಬಹುದು. Sky is the limit. ಈಗ ಈ ರಾಜ್ಯದ ಸಾಮಾಜಿಕ ಪರಿಸ್ಥಿತಿಯ ಪ್ರಕ್ಷುಬ್ಧತೆ ಇರಲಿ. ಈಗ ರಾಜಕೀಯ ಪ್ರಕ್ಷುಬ್ಧತೆ ಎಲ್ಲಿಗೆ ಬಂದು ನಿಂತಿದೆ, ನೀವು ಅದನ್ನು ಎಲ್ಲಗೆ ತೆಗೆದುಕೊಂಡು ಹೋಗಿಬಿಟ್ಟಿದ್ದೀರಿ. ನಾನು ಕಪ್ಪದ ಹಗರಣದ ಬಗ್ಗೆ ಹೇಳಬೇಕೆ? ನಿಮ್ಮ ಟೇಪ್‌ರೇಕಾರ್ಡರ್ ಮತ್ತು ಡೈರಿಯ ಹಗರಣವನ್ನು ಹೇಳಬೇಕೆ? ಇವತ್ತಿನ ದಿವಸ ಒಬ್ಬರಿಗೊಬ್ಬರ ಕೆಸರೆರಚಾಟದಿಂದ ದೆಹಲಿ ಮತ್ತು ಪಾರ್ಲಿಮೆಂಟಿನವರೆವಿಗೂ ನಡೆದಿರುವುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬೇಕೆ? ಈಗ ಪರಿಸ್ಥಿತಿ ಎಲ್ಲಿಗೆ ಹೋಗುತ್ತಿದೆ, ಒಂದು ಕಡೆ ರಾಜಕೀಯ ಪ್ರಕ್ಷುಬ್ಧತೆ ಪ್ರಾರಂಭವಾಗಿದೆ. ಸಾಮಾಜಿಕ ಶಾಂತಿ ಮತ್ತು ನೆಮ್ಮದಿ ಹಾಗೂ ಆಡಳಿತವನ್ನು ಸರಿ ಮಾಡುವುದು ಇರಲಿ, ಈಗ ಅವರು ಎಲ್ಲಿಗೆ ಹೋಗಿ ನಿಂತಿದ್ದಾರೆ. ಅವೋತ್ತಿನ ದಿವಸ ಅವರು ವಿರೋಧ ಪಕ್ಷದಲ್ಲಿ ಇದ್ದಾಗ ಬಹಳ ಟೀಕೆ ಮಾಡಿದ್ದಾರೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಸುಮಾರು 50,653 ಕೋಟಿ ರೂಪಾಯಿಗಳ ಸಾಲವನ್ನು ಮಾಡಿಬಿಟ್ಟಿದ್ದಾರೆ. ಆದುದರಿಂದ ಬಜೆಟ್‌ನ ಗಾತ್ರ ವಿಸ್ತಾರವಾಗಿದೆ, ಇದು ಸಹಜವಾದ ಬೆಳವಣಿಗೆಯಲ್ಲ, ‘ಸಾಲ ತಂದು ಮಾಡುವುದಕ್ಕೆ ಇವರೇ ಬೇಕೆ’ ಎಂದು ಹೇಳಿದರು. ನಾನು ನಿಮಗೆ ಹೇಳುತ್ತೇನೆ, ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಇದ್ದಾಗ, ಅವರು 20 ತಿಂಗಳಿನಲ್ಲಿ ಕೊಟ್ಟಂತಹ ಆಡಳಿತ ಇದೆಯಲ್ಲಾ, ನಾವು ಅದನ್ನು ಇನ್ನು ಮೆಲುಕು ಹಾಕಬೇಕು. ಅವರು ಮಾಡಿದ ಸಾಲ ಕೇವಲ 545 ಕೋಟಿ ರೂಪಾಯಿಗಳು, ಅವರು ಸಾರಾಯಿ ನಿಷೇಧ ಮಾಡಿದರು, ಲಾಟರಿಯನ್ನು ಸಹ ನಿಷೇಧ ಮಾಡಿದರು, ಅದರ ಜೊತೆಗೆ ಆವೋತ್ತಿನ ದಿವಸ ಅವರು ಏನ್ನೆಲ್ಲಾ ಕೆಲಸವನ್ನು ಮಾಡಿದರು ಎಂದರೆ, ವಿಧವಾ ವೇತನ, ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನವನ್ನು ದುಪ್ಪಟು ಮಾಡಿದರು. ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರು ಸಹ, ಅನುದಾನಿತ ಮತ್ತು ಖಾಸಗಿ ಶಾಲೆಗಳ ಮಕ್ಕಳಿಗೆ ಬಿಸಿಯೂಟದ ವಿಸ್ತರಣೆಯನ್ನು ಮಾಡಿದರು. ಸಾವಿರಾರು ಶಾಲಾ-ಕಾಲೇಜುಗಳನ್ನು ಕಟ್ಟಡ ಮತ್ತು ಹುದ್ದೆಗಳ ಸಮೇತ ಪ್ರಾರಂಭ ಮಾಡಿದರು. ಈ ರೀತಿ ಹೇಳುತ್ತಾ ಹೋದರೆ ದೊಡ್ಡ ಪಟ್ಟಿ ಬೆಳೆಯುತ್ತದೆ. ಮಾನ್ಯ ಸಚಿವರೇ, ತಮ್ಮ ಸರ್ಕಾರ ಮಾಡಿರುವಂತಹ ಸಾಲ ಎಷ್ಟು ಎಂದು ತಮಗೆ ಗೊತ್ತಿದೆಯಾ? ನಿಮ್ಮ ಸರ್ಕಾರ ನಾಲ್ಕು ವರ್ಷದಲ್ಲಿ ಸುಮಾರು 2,50,420 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದೆ.

ಮಾನ್ಯ ಸಭಾಪತಿಯವರೇ, ಅಂದಿನ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಕೇವಲ 545 ಕೋಟಿ ರೂಪಾಯಿಗಳ ಸಾಲವನ್ನು ಮಾಡಿ, ಆ 20 ತಿಂಗಳಿನಲ್ಲಿ ಈ ರಾಜ್ಯ ಮೆಚ್ಚುವಂತಹ ಕೆಲಸವನ್ನು ಮಾಡಿದ್ದಾರೆ. ಎಲ್ಲಾ ಜನಪರ ಮತ್ತು ಅಭಿವೃದ್ಧಿ ಕೆಲಸಗಳನ್ನು ಅವರು ಮಾಡಿದ್ದಾರೆ. ಮಾನ್ಯ ಸಚಿವರಾದ ಟಿ.ಬಿ.ಜಯಚಂದ್ರರವರು ಬಜೆಟ್ ಅನ್ನು ಮೀರಿ ಕಾಮಗಾರಿಗಳನ್ನು ಮಾಡುತ್ತಿದ್ದಾರೆಂದು ಹೇಳಿದರು. ಆದರೆ, ಇವತ್ತಿನ ದಿವಸ ಸಮಾವೇಶಗಳು ಮತ್ತು ಸಾಧನೆ ಎಂದು ಹೋಗುತ್ತಿದ್ದಾರೆ, ಅವರು ಏನು ಮಾಡುತ್ತಿದ್ದಾರೆ ಸ್ವಾಮಿ? ಈಗ ಚುನಾವಣೆಗೆ ಒಂದು ತಿಂಗಳು ಇದೆ. ಎಲ್ಲಾ ಕಡೆ ಶಂಕುಸ್ಥಾಪನೆ ಮತ್ತು ಕೋಟಿಗಟ್ಟಲೆ ಹಣ ಮಂಜೂರಾತಿ, ಇದಕ್ಕೆ ಯಾವ ಬಜೆಟ್‌ನಲ್ಲಿ allocation ಇದೆ. ಈ ಭಾಷಣವನ್ನು ಮಾರ್ಚ್, 2013ರವರೆಗೂ ಕೇಳಿದ್ದೀರಿ. ಈಗ ಹೋದ ಕಡೆಯಲ್ಲಾ ಶಂಕುಸ್ಥಾಪನೆ;

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅದಕ್ಕೆ ಹಣ ಕೊಡುವುದು ಯಾವಾಗ? ಅದನ್ನು ಬಜೆಟ್‌ಗೆ ಸೇರಿಸುವುದು ಯಾವಾಗ? ಅನುದಾನವನ್ನು ತಂದು ಈ ಪ್ರಕ್ರಿಯೆಯನ್ನು ಮಾಡುವುದು ಯಾವಾಗ? ಮತ್ತು ಏನು ಕೆಲಸಗಳು ಆಗುತ್ತಿವೆ ಮತ್ತು ನಿಮ್ಮ ಬಜೆಟ್ ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ಕೂಡ ನಾನು ಲೆಕ್ಕ ಹಾಕುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಜಾಹೀರಾತಿಗೆ ಎಷ್ಟು ಖರ್ಚಾಗಿದೆ ಎಂದು ನನ್ನ ಪ್ರಶ್ನೆಗೆ ಉತ್ತರವನ್ನು ಪಡೆದುಕೊಂಡಿದ್ದೇನೆ. ಏನಾದರೂ ಜಾಹೀರಾತಿನ ವಿವರಣೆಯನ್ನು ಕೇಳಬಿಟ್ಟರೆ, ನಾವು ಮತ್ತು ನೀವು ಬೆಚ್ಚಿ ಬೀಳುವಂತಹ ಸಂದರ್ಭ ನಮ್ಮ ಎದುರಿಗೆ ಸೃಷ್ಟಿಯಾಗುತ್ತಿದೆ. ಸರ್ಕಾರದ ಜಾಹೀರಾತಿನ ಖರ್ಚು ಎಲ್ಲಿಯವರೆವಿಗೂ ಹೋಗಿದೆ ಎಂದರೆ, ಇಲ್ಲಿಯವರೆವಿಗೂ ಸುಮಾರು 20 ರಿಂದ 30 ಕೋಟಿ ರೂಪಾಯಿಗಳಿಗೆ ಖರ್ಚು ಮತ್ತು ವೆಚ್ಚವನ್ನು ಮಾಡುವಂತಹ ಸಂದರ್ಭಗಳು ನಮ್ಮ ಎದುರಿಗೆ ಇತ್ತು. ಆದರೆ, ಜಾಹೀರಾತಿಗೆ ಸಂಬಂಧಪಟ್ಟಂತೆ ನಿಮ್ಮ ಸರ್ಕಾರದ ಖರ್ಚು ಎಷ್ಟು ಎಂದರೆ, 2013-14ನೇ ಸಾಲಿನಲ್ಲಿ 13 ಕೋಟಿ ರೂಪಾಯಿಗಳು, 2014-15ನೇ ಸಾಲಿನಲ್ಲಿ 14 ಕೋಟಿ ರೂಪಾಯಿಗಳು, 2015-16ನೇ ಸಾಲಿನಲ್ಲಿ 27 ಕೋಟಿ ರೂಪಾಯಿಗಳು, 2016-17ನೇ ಸಾಲಿನಲ್ಲಿ 34 ಕೋಟಿ ರೂಪಾಯಿಗಳು ಮತ್ತು 2017-18ನೇ ಸಾಲಿನಲ್ಲಿ 123 ಕೋಟಿ ರೂಪಾಯಿಗಳು. ನೀವು ವಾರ್ತಾ ಮತ್ತು ಸಂಪರ್ಕ ಇಲಾಖೆಗೆ ಕೊಟ್ಟಿರುವುದನ್ನು ಲೆಕ್ಕ ಹಾಕಬೇಕಲ್ಲವೆ? ಈ ಹಿಂದೆಯೆಲ್ಲಾ ಸುಮಾರು 8 ರಿಂದ 9 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಆದರೆ, ಈ ವರ್ಷ ಅವರಿಗೆ ಸುಮಾರು 15,578 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 'ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ.' ಸಾಧನಾ ಸಮಾವೇಶ ಮತ್ತು ಕಾಂಗ್ರೆಸ್ ಪಕ್ಷದ ಪ್ರಚಾರ, ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಸಮಾಜವಾದಿ ಹಿನ್ನೆಲೆಯಿಂದ ಬಂದಂತಹ ರಾಜಕಾರಣಿಯಿಂದ ನಾವು ಈ ರೀತಿಯ ನಡೆವಳಿಕೆಯ ನಿರೀಕ್ಷೆಯನ್ನು ಮಾಡಿರಲಿಲ್ಲ. ನಾನು ಅವರನ್ನು ಚಿಕ್ಕ ವಯಸ್ಸಿನಿಂದ ನೋಡಿಕೊಂಡು ಬಂದಿದ್ದೇನೆ. ಸಾಧನಾ ಸಮಾವೇಶ ಸರ್ಕಾರದ ಹೆಸರಿನ ಖರ್ಚಿನಲ್ಲಿ ಕೆಲಸ ಆಗುತ್ತಿದೆ. ಈಗ ನಾವು ಎಲ್ಲಿಗೆ ಹೋಗಿ ನಿಂತಿದ್ದೇವೆ.

ಮಾನ್ಯ ಸಭಾಪತಿಯವರೇ, ಶಾಂತಿ ಸುವ್ಯವಸ್ಥೆಯ ಜೊತೆಗೆ ಮಹದಾಯಿ ಬಗ್ಗೆ ನಮಗೆ ಬದ್ಧತೆ ಇದೆ, ಕಾವೇರಿ ಬಗ್ಗೆ ನಮಗೆ ಬದ್ಧತೆ ಇದೆ, ಕೃಷ್ಣಾ ಬಗ್ಗೆ ನಮಗೆ ಬದ್ಧತೆ ಇದೆ ಎನ್ನುತ್ತಾರೆ. ಹಾಗಾದರೆ ಮಹದಾಯಿ ಬಗ್ಗೆ ಏನು ಮಾಡಿದರು ಸ್ವಾಮಿ. ಈಗ ಮೂರು ವರ್ಷವಾಯಿತು, ಮೂರು ವರ್ಷ ಕಳೆದಿದೆ, ಅಲ್ಲಿ ರೈತರು ಧರಣಿ ಕುಳಿತು, ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಸರ್ಕಾರ ಏನು ಪರಿಹಾರ ಕೊಟ್ಟಿದೆ. ನಿಮ್ಮ ಮೇಲೆ ಅವರು ಅವರ ಮೇಲೆ ನೀವು ಹೇಳುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಾನು ನಿನ್ನೆಯ ದಿವಸ ಪ್ರಜಾವಾಣಿ ಪತ್ರಿಕೆಯಲ್ಲಿ ಈ ವಿಚಾರವಾಗಿ ಒಂದು ಲೇಖನವನ್ನು ಓದುತ್ತಿದ್ದೆ, ಅವರು ಬಹಳ ಚೆನ್ನಾಗಿ ವಿಶ್ಲೇಷಣೆಯನ್ನು ಮಾಡಿದ್ದಾರೆ 'ಪ್ರಧಾನಿ ಮಧ್ಯಸ್ಥಿಕೆ ಅಡ್ಡಿಯಲ್ಲದೆ' ಎಂದು. 1995ನೇ ಇಸವಿಯಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದರು. ತಮಿಳುನಾಡು ರಾಜ್ಯದವರು ಕಾವೇರಿ ನೀರನ್ನು ಬಿಡಬೇಕೆಂದು Tribunal ಗೆ ಅರ್ಜಿಯನ್ನು ಹಾಕಿಕೊಂಡರು. ಆದರೆ, Tribunal ಏನು ಉತ್ತರವನ್ನು ಕೊಡಲಿಲ್ಲ. ಆಗ ಅವರು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದರು. ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತೆ Tribunal ಗೆ ಹೋಗಿ ಎಂದು ಹೇಳಿತು. ತಮಿಳುನಾಡು ರಾಜ್ಯದವರು ಸುಮಾರು 30 ಟಿಎಂಸಿ ನೀರು ಬೇಕೆಂದು ಕೇಳಿದರು, Tribunal ತಮಿಳುನಾಡಿಗೆ 11 ಟಿಎಂಸಿ ನೀರನ್ನು ಬಿಡುವಂತೆ ಶಿಫಾರಸ್ಸು ಮಾಡುತ್ತದೆ. ಅಂತಹ ಸಂದರ್ಭದಲ್ಲಿ ನಮ್ಮ ರಾಜ್ಯದ ಪರಿಸ್ಥಿತಿ ಸರಿ ಇರಲಿಲ್ಲ. ಈ ಪ್ರಕರಣ Tribunal ಮುಂದೆ ಇದ್ದೆ ಮತ್ತು ತಮಿಳುನಾಡಿನವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಅಂತಹ ಸಂದರ್ಭದಲ್ಲಿ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳ ವಿಶೇಷ ಮಧ್ಯಸ್ಥಿಕೆಗೆ ಮನವಿ ಮಾಡಿದರು. ಆಗ ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾಗಿದ್ದರು. ಅವರು ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗಿದ್ದಂತಹ ಶ್ರೀ ವೈ.ಕೆ.ಅಲಘ್‌ರವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ನೀರಿನ ಪರಿಸ್ಥಿಯನ್ನು ಅಧ್ಯಯನ ಮಾಡುವುದಕ್ಕೆ ಒಂದು ನಿಯೋಗವನ್ನು ಕಳುಹಿಸಿಕೊಟ್ಟರು. ತಮಿಳುನಾಡಿನ 30 ಟಿಎಂಸಿ ನೀರಿನ ಕೋರಿಕೆಗೆ, ಮಾನ್ಯ ಪ್ರಧಾನ ಮಂತ್ರಿಗಳು ನಾಲ್ಕು ರಾಜ್ಯದವರನ್ನು ಕರೆದು, ತಮಿಳುನಾಡಿಗೆ ಐದು ಟಿಎಂಸಿ ನೀರು ಬಿಡುವಂತೆ ತಮ್ಮ ತೀರ್ಮಾನವನ್ನು ನೀಡಿದರು. ಆಗ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕುಮಾರಿ ಜಯಲಲಿತಾ ರವರು boycott ಮಾಡಿ ವಿಮಾನವನ್ನು ಏರಿದರು.

ಮಾನ್ಯ ಸಭಾಪತಿಯವರೇ, ನಾನು ಏತಕೆ ಈ ಪ್ರಸ್ತಾಪವನ್ನು ಮಾಡುತ್ತಿದ್ದೇನೆಂದರೆ, ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ನಾಲ್ಕು ರಾಜ್ಯದವರನ್ನು ಕರೆದು ನರ್ಮದಾ ನದಿ ನೀರಿನ ವಿಚಾರವನ್ನು ತೀರ್ಮಾನ ಮಾಡಿದರು. ಇವತ್ತಿನ ದಿವಸ ಆ credit ಅನ್ನು ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ತೆಗೆದುಕೊಂಡಿದ್ದಾರೆ. ಆದರೆ ಅದರ ಬಗ್ಗೆ ಚಿಂತೆಯಿಲ್ಲ. ಈ ತರಹ ನೂರಾರು ಪ್ರಕರಣಗಳಿವೆ. ಮಾನ್ಯ ಪ್ರಧಾನ ಮಂತ್ರಿಗಳು, ಪ್ರಕರಣಗಳು Tribunal ಮತ್ತು ಕೋರ್ಟ್ ಮುಂದೆ ಇದ್ದಾಗ, ಆ ರಾಜ್ಯದವರನ್ನು ಕರೆಯಿಸಿ ಪ್ರಕರಣವನ್ನು ಇತ್ಯರ್ಥಪಡಿಸಿದಂತಹ ಸಂದರ್ಭಗಳು ಇವೆ. ಒಂದು ಕಾಲದಲ್ಲಿ ಶ್ರೀಮತಿ ಸೋನಿಯಾಗಾಂಧಿಯವರು ಯಾವುದೇ ಕಾರಣಕ್ಕೂ ನಾವು ಗೋವಾದವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಟ್ಟುಕೊಡುವುದಿಲ್ಲ ಮತ್ತು ನೀರನ್ನು ಕೊಡುವುದಿಲ್ಲ ಎನ್ನುವಂತಹ ಮಾತನು ಹೇಳುತ್ತಿದ್ದರು. ಗೋವಾದ ಕಾಂಗ್ರೆಸ್ ಪಕ್ಷದವರನ್ನು ಒಪ್ಪಿಸಿ ಎಂದು ಬಿಜೆಪಿ ಪಕ್ಷದವರು ಹೇಳುತ್ತಿದ್ದಾರೆ. ಆದರೆ, ಅದರ ಜವಾಬ್ದಾರಿ ಮಾನ್ಯ ಪ್ರಧಾನ ಮಂತ್ರಿಗಳ ಮೇಲೆ ಇದೆ. ಈ ಒಕ್ಕೂಟ ವ್ಯವಸ್ಥೆಯಲ್ಲಿ ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ಈ ಮೂರು ರಾಜ್ಯದವರನ್ನು ಕರೆದು ಮಾತನಾಡಬೇಕು. ಈ ನದಿ ನಮ್ಮ ರಾಜ್ಯದಲ್ಲಿ ಹುಟ್ಟುವುದಿಲ್ಲವಾದರೂ ನಮ್ಮ ರಾಜ್ಯದಲ್ಲಿ ಸುಮಾರು 1035 ಕಿಲೋಮೀಟರ್ ದೂರ ಹರಿಯುತ್ತದೆ. ನಮಗೆ ಅದರ ಮೇಲೆ ಸುಮಾರು 60 ರಿಂದ 69 ಟಿಎಂಸಿಯಷ್ಟು claim ಇದೆ. ಆದರೆ, ನಾವು ಕುಡಿಯುವುದಕ್ಕೆ ಏಳೂವರೆ ಟಿಎಂಸಿ ನೀರನ್ನು ಮಾತ್ರ ಕೇಳುತ್ತಿದ್ದೇವೆ. ಇವತ್ತಿನ ದಿವಸ ಕರ್ನಾಟಕದ ಬಗ್ಗೆ ಟೀಕೆ ಮಾಡುವ ಮತ್ತು ಉಳಿದೆಲ್ಲದರ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಈ ವಿಚಾರದ ಜವಾಬ್ದಾರಿಯನ್ನು ಮೆರೆಯುವಂತಹ ಒಂದು ಇಚ್ಛಾಶಕ್ತಿಯನ್ನು ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರವು ತೋರಿಸುತ್ತಿಲ್ಲ ಮತ್ತು ರಾಜ್ಯ ಸರ್ಕಾರವು ಸಹ ತೋರಿಸುತ್ತಿಲ್ಲ. ಒಬ್ಬರ ಮೇಲೆ ಒಬ್ಬರು ಕೆಸರೆರಚಾಟ ಮಾಡಿ, ವರ್ಷಗಟ್ಟಲೆ ಚಳುವಳಿ ಮತ್ತು ಹೋರಾಟ, ಯಾವುದಕ್ಕೆ ಎಂದರೆ ಕುಡಿಯುವ ನೀರಿಗಾಗಿ. ಈಗ ಮಹಾರಾಷ್ಟ್ರದ ಸಚಿವರು ಬರುತ್ತಾರೆ.

(ಗೊಂದಲ)

ಕಳೆದ ಹತ್ತು ವರ್ಷಗಳಲ್ಲಿ, ಅವರ ಐದು ವರ್ಷದ ಅಧಿಕಾರ ಮತ್ತು ನಿಮ್ಮ ಐದು ವರ್ಷದ ಅಧಿಕಾರ ಎಲ್ಲವೂ ಸಹ ನನಗೆ ಗೊತ್ತಿದೆ, ಹತ್ತು ವರ್ಷಗಳ ಪರಿಚಯ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮೋಟಮ್ಮನವರೇ, ಅದು ಅಲ್ಲಿಗೆ ತಲುಪುತ್ತದೆ ಬಿಡಿ, ನೀವು ಏತಕೆ ಗಾಬರಿಯಾಗುತ್ತೀರಿ. ಶ್ರೀಮತಿ ಸೋನಿಯಾಗಾಂಧಿಯವರ ಪರ ಹೇಳಿಕೆ ಕೊಟ್ಟಾಗ, ನಿಮ್ಮ ಕಡೆ ತಿರುಗಿಕೊಳ್ಳಿ ಎಂದು ಹೇಳುತ್ತಾರೆ. ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಪರ ಹೇಳಿಕೆ ಕೊಟ್ಟಾಗ ನೀವು ಅವರ ಕಡೆ ತಿರುಗಿಕೊಳ್ಳಿ ಎಂದು ಹೇಳುತ್ತೀರಿ. ಈ ಇಬ್ಬರಿಂದ ಕರ್ನಾಟಕದ ಜನ ಹೈರಾಣಾಗಬೇಕೆ? ಕರ್ನಾಟಕದ ಜನ ನೀರನ್ನು ಕುಡಿದು, ಬದುಕುವುದು ಬೇಡವೆ? ಈ ನೆಲದ ಮತ್ತು ಈ ಜಗತ್ತಿನ ಕಾನೂನು ಹೇಳುತ್ತದೆ, ಕುಡಿಯುವ ನೀರಿಗೆ ಅಡ್ಡಿಯಿಲ್ಲವೆಂದು. ಆದರೆ, ಕುಡಿಯುವ ನೀರಿಗೆ ಏತಕ್ಕೆ ಅಡ್ಡಿಯಾಗುತ್ತಿದೆ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮಾತು ನಿಲ್ಲಬೇಕು, ಜವಾಬ್ದಾರಿ ಇರುವವರು ಅದನ್ನು ನಿರ್ವಹಣೆ ಮಾಡಬೇಕು. ಅದರ ಜವಾಬ್ದಾರಿಯನ್ನು ಹೊತ್ತಿರುವಂತಹವರು ಅದರ ನಿರ್ವಹಣೆ ಮಾಡಬೇಕು. ಅವರ duty ಯನ್ನು discharge ಮಾಡಬೇಕಾದಂತಹ ಅಗತ್ಯತೆ ಇದೆ. ಇನ್ನು ಎಷ್ಟು ದಿನ ಆ ರೈತರನ್ನು ಬೀದಿಯಲ್ಲಿ ಬಿಡೋಣ. ಈಗಾಗಲೇ ಕಾವೇರಿ ವಿವಾದ ಬರುತ್ತಿದೆ ಮತ್ತು ಅದರ judgment ಬರುತ್ತಿದೆ. ನೀವು ಹೊಸದಾಗಿ ಅಧಿಕಾರಕ್ಕೆ ಬಂದಾಗ ಮೇಕೆದಾಟಿಗೆ ಸಂಬಂಧಪಟ್ಟಂತೆ ಹೇಳಿದ್ದಿರಿ, ಅದು ಎಲ್ಲಿಗೆ ಬಂತು? 'ಈಗ ಯಾರು ಮೇಕೆ ದಾಟಿದರು' ಎಂದು ನನಗೆ ಅರ್ಥವಾಗುತ್ತಿಲ್ಲ. ಈ ಯೋಜನೆಯನ್ನು ಎಲ್ಲಿಗೆ ತಂದಿದ್ದಾರೆ. ಅದಕ್ಕೆ ಪರ್ಯಾಯವಾಗಿ ಏನು ಮಾಡಿಕೊಂಡಿದ್ದಾರೆ, ಈಗ ನೂರಕ್ಕೆ ನೂರರಷ್ಟು ಬರಸಿಡಿಲಿನ ತೀರ್ಮಾನ ಬರುತ್ತದೆ.

ಮಾನ್ಯ ಸಭಾಪತಿಯವರೇ, ನಾನು ತಮಗೆ ಒಂದು ಸತ್ಯವನ್ನು ಹೇಳುತ್ತೇನೆ. ರಾಜ್ಯದಲ್ಲಿ ಸುಮಾರು 3,515 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ತಿಂಗಳ ಹಿಂದಿನ ಲೆಕ್ಕಾಚಾರಕ್ಕೆ, ನೀವು ಅಧಿಕಾರಕ್ಕೆ ಬಂದ ಮೇಲೆ. ಅದಕ್ಕೆ ಇನ್ನೂ ಸೇರಿಸಿದರೆ ಹತ್ತಿರ ಹತ್ತಿರ ಸುಮಾರು ನಾಲ್ಕು ಸಾವಿರ ಆಗಬಹುದು. ಕೃಷಿ ಇಲಾಖೆಯವರು ಹೇಳುವ ಪ್ರಕಾರ ಸುಮಾರು 2,963 ಜನ ರೈತರು ಬೆಳೆ ನಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾನು ಕಾವೇರಿ ಜಲಾನಯನ ಪ್ರದೇಶದಿಂದ ಬಂದಿದ್ದೇನೆ, ನಾವು ಕಳೆದ ಮೂರು ವರ್ಷಗಳಿಂದ ಬೆಳೆಯನ್ನು ಬೆಳೆಯುವುದಕ್ಕೆ ಆಗಲಿಲ್ಲ. ಅಷ್ಟೋ, ಇಷ್ಟೋ ಮಳೆ ಬಂದು ನದಿ ತುಂಬಿತ್ತು. ನೀವು ನೀರನ್ನು ಕೊಡುವುದರಲ್ಲಿ ಮತ್ತು ಅದರ ನಿರ್ವಹಣೆ ಮಾಡುವ ವಿಚಾರದಲ್ಲಿ ತೋರಿಸಿದಂತಹ ದಡ್ಡತನ ಇದೆಯಲ್ಲಾ, ಅದರಿಂದ ನಾವು ಬೆಳೆಯನ್ನು ಬೆಳೆಯುವುದಕ್ಕೆ ಆಗಲಿಲ್ಲ. ನಾವು ಇನ್ನೇನು ಬೆಳೆ ತೆಗೆದುಕೊಳ್ಳಬೇಕು, ಬೆಳೆಗೆ ಇನ್ನು ಒಂದು ಬಾರಿ ನೀರು ಕೊಡಬೇಕು ಅನ್ನುವಷ್ಟರಲ್ಲಿ, ನೀರನ್ನು ಕೊಡಲಿಲ್ಲ. ಇನ್ನೊಂದು ಹಂತದಲ್ಲಿ 20 ದಿವಸಕ್ಕೆ ಮುಂಚೆ ನೀರನ್ನು ಕೊಡಬೇಕಾಗಿತ್ತು ಅದನ್ನು ಕೊಡಲಿಲ್ಲ. ಆದುದರಿಂದ ಇವತ್ತಿನ ದಿವಸ ನಮ್ಮಲ್ಲಿ ಊಟದ ಹಾಹಾಕಾರವೂ ಇದೆ ಹಾಗೂ ಆಹಾರದ ಹಾಹಾಕಾರವೂ ಸಹ ಇದೆ. ಈಗ ಅಲ್ಲಿನ ಜನರು ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ದೊಡ್ಡ ಪ್ರಮಾಣದಲ್ಲಿ ಗುಳೆ ಹೋಗುತ್ತಿದ್ದಾರೆ.

**(ಮುಂದು...)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನನ್ನ ಸಹ ಮಿತ್ರರಾದಂತಹ ಎಸ್.ರವಿರವರು ಚಾಲನೆಯನ್ನು ಕೊಟ್ಟು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಎಸ್.ರವಿರವರು ವಾಸ್ತವವಾಗಿ ಮಾತುಗಾರರಲ್ಲ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ಹಾಗೆಯೇ, ಅವರ ಕರ್ತವ್ಯವನ್ನು ಸಹ ಚೆನ್ನಾಗಿ ಮಾಡಿದ್ದಾರೆ.

**VICE CHAIRMAN:-** Although he is not a professional speaker, he spoke very well.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹೌದು, 100% ನಿಜ. ಹಾಗೆಯೇ, ಮಾನ್ಯ ಸದಸ್ಯರಾದಂತಹ ಶ್ರೀಮತಿ ಜಯಮಾಲರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರಿಬ್ಬರು ಈಗ ಸದನದಲ್ಲಿ ಇರಬೇಕಾಗಿತ್ತು. ಅವರಿಬ್ಬರು ಎಲ್ಲಾದರೂ ಇದ್ದರೆ, ಸದನಕ್ಕೆ ಬರಬೇಕೆಂದು ನಾನು ಬಯಸುತ್ತೇನೆ. ಮಾನ್ಯ ಸದಸ್ಯರಾದಂತಹ ಶ್ರೀ ಬಿ.ಜೆ.ಪುಟ್ಟಸ್ವಾಮಿಯವರು ಸಹ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾವು ಮಾನ್ಯ ರಾಜ್ಯಪಾಲರ ಭಾಷಣವೆಂದು ಹೇಳುತ್ತೇವೆ. ಆದರೆ, ಅದು ಅವರದ್ದು ಅಲ್ಲ. ನಮ್ಮ ಸಂವಿಧಾನದ ಸಂಪ್ರದಾಯದ ಪ್ರಕಾರ, ಸರ್ಕಾರ ಸಿದ್ಧಪಡಿಸಿದ ಮತ್ತು ಕ್ಯಾಬಿನೆಟ್ ಅನುಮೋದಿಸಿದ ಭಾಷಣವನ್ನು ರಾಜ್ಯಪಾಲರು ಓದುತ್ತಾರೆ. ಅದನ್ನು ಪೂರ್ಣವಾಗಿ ಓದಬೇಕೆಂದು ಇಲ್ಲ. ನಮ್ಮ ದೇಶದ ಕೆಲವು ರಾಜ್ಯಗಳಲ್ಲಿ ಕೆಲವು ಸಂದರ್ಭಗಳಲ್ಲಿ ಕೆಲವು ಪುಟಗಳನ್ನು ಮತ್ತು ಕೆಲವು ಪ್ಯಾರಗಳನ್ನು ಬಿಟ್ಟು ಓದಿರುವಂತಹ ಸಂಗತಿಯೂ ಇದೆ. ಆದರೆ, ಇಲ್ಲಿ ಮಾನ್ಯ ರಾಜ್ಯಪಾಲರು ಓದಿದ್ದಾರೆ. ಆದರೆ, ಎಲ್ಲೂ ಒಂದು ಕಡೆ ನಮಗೆ ನೋವಾಗಿದೆ. ಮಾನ್ಯ ರಾಜ್ಯಪಾಲರು ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ಕನ್ನಡ ಭಾಷೆಯನ್ನು ಬಿಟ್ಟು ಹಿಂದಿ ಭಾಷೆಯಲ್ಲಿ ಓದಿದರಲ್ಲ ಎನ್ನುವಂಥದ್ದು ನಮ್ಮನ್ನು ತೀವ್ರವಾಗಿ ಕಾಡುತ್ತಿದೆ. ಅದರ ಅಗತ್ಯ ಇರಲಿಲ್ಲ ಎನ್ನುವ ಅಭಿಪ್ರಾಯವನ್ನು ನಾನು ಸ್ಪಷ್ಟವಾಗಿ ಈ ನಾಡಿನ ಕನ್ನಡದ ಪ್ರಜೆಯಾಗಿ ಹೇಳಲೇಬೇಕಾಗಿದೆ. ಮಾನ್ಯ ರಾಜಪ್ಯಾಲರ ಭಾಷಣವನ್ನು ನೋಡಿದರೆ, ಅದು ಬಹಳ ನೀರಸ ಮತ್ತು ಇದು ನಮ್ಮದು ಕೊನೆಯ ಭಾಷಣ ಏನೋ ಎನ್ನುವಂತಹ ಮಟ್ಟಕ್ಕೆ ಹೇಳಿಸುವಂತಹ ಕೆಲಸ ನಡೆದಿದೆ. ಏಕೆಂದರೆ, ತಾವು ಈ ಹಿಂದೆ ಮಾಡಿದಂತಹ ಕೆಲಸಗಳನ್ನು ಮೇಲುಕು ಹಾಕುವಂತಹ ವಿಚಾರದ ಪ್ರಸ್ತಾಪವನ್ನು ಬಿಟ್ಟರೆ, ಮುಂದಿನ ಆಲೋಚನೆಗಳು, ಮಂದಿನ ಗುರಿಗಳು, ವಿಚಾರಗಳು ಮತ್ತು ಕಾರ್ಯಕ್ರಮಗಳು ಇಲ್ಲಿ ಏನೂ ಚರ್ಚೆಯಾದಂತೆ ಇಲ್ಲ. ಆ ಪ್ರಸ್ತಾಪವೇ ಇಲ್ಲಿ ಇಲ್ಲ. ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರರವರು ಎಲ್ಲವೂ ಮುಗಿದು ಹೋಗಿದೆ ಎಂದು ಭಾವಿಸಿಕೊಂಡಿದ್ದಾರೆ. ನಾನು ನಿನ್ನೆ ದಿವಸ 2013 ನೇ ಸಾಲಿನಲ್ಲಿ ಇಂತಹದ್ದೇ ಸಂದರ್ಭದಲ್ಲಿ ಇವತ್ತಿನ ಮಾನ್ಯ ಕಾನೂನು ಸಚಿವರಾದಂತಹ ಶ್ರೀ ಟಿ.ಬಿ.ಜಯಚಂದ್ರ ರವರು ಮತ್ತು ಅವತ್ತು ವಿರೋಧ ಪಕ್ಷದಲ್ಲಿ ಇದ್ದಂತಹವರು. ಅವರು ಅಂದು ಮಾತನಾಡಿದಂತಹ ಎಲ್ಲಾ ವಿಚಾರಗಳ ದಾಖಲೆಗಳನ್ನು ಓದುತ್ತಿದ್ದೆ. ಅವರು ಎಲ್ಲಿಂದ ಎಂದರೆ, 325 ಕೀಲೋಮೀಟರ್ ದೂರದಲ್ಲಿರುವ ಬಳ್ಳಾರಿಯಿಂದ ಬೆಂಗಳೂರಿಗೆ ಬಂದರು. ಆಗ ಬಹಳ ವೀರಾವೇಷದ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಗಳು ಎಷ್ಟೊಂದು ಅದ್ಭುತವಾಗಿವೆ ಎಂದರೆ, ಆಗ ಮಾನ್ಯ ಟಿ.ಬಿ.ಜಯಚಂದ್ರರವರು ಏನು ಹೇಳಿದ್ದಾರೆಂದರೆ, "ನಿಮ್ಮ ಕೈಯಲ್ಲಿ ಮಾನ್ಯ ಲೋಕಾಯುಕ್ತರಾದ ಸಂತೋಷ ಹೆಗಡೆಯವರು ಕೊಟ್ಟಿರುವ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಆಗಲಿಲ್ಲ. ಕಬ್ಬಿಣದ ಅದಿರಿನಿಂದ ರೂ.60 ಸಾವಿರ ಕೋಟಿ ರೂಪಾಯಿಗಳು ವಸೂಲಿ ಆಗಬೇಕಾಗಿತ್ತು, ಅದಕ್ಕೆ ಕಾನೂನನ್ನು ಮಾಡುವಂತಹ ಕೆಲಸವನ್ನು ಮಾಡಬೇಕಾಗಿತ್ತು ಎಂದು ಹೇಳಿದ್ದರು. ಅದನ್ನು ನಿಮ್ಮ ಕೈಯಲ್ಲಿ ಮಾಡಲಿಕ್ಕೆ ಆಗಲಿಲ್ಲ. ನಾವು ಮುಂದಕ್ಕೆ ಬರುತ್ತೇವೆ. ಆ ಮೇಲೆ ಮೂರು ತಿಂಗಳ ನಂತರ ಬಂದು ಪುನಃ ಮಾತನಾಡುತ್ತಾರೆ ಬಿಡಿ. ನಾವು ಬಂದು ಆ ಕೆಲಸ ಮಾಡುತ್ತೇವೆ ಎನ್ನುವಂತಹ ಮಾತಿದೆ. ಅದಕ್ಕೆ ಆಮೇಲೆ ಉತ್ತರ ಕೊಡುತ್ತೇನೆ. ಮೊದಲನೆ ಪ್ಯಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಬಹಳ ಚೆನ್ನಾಗಿ ಇದೆ. ನಮ್ಮಲ್ಲಿ ಏನೂ ತೊಂದರೆ ಇಲ್ಲ. ಸೌಹಾರ್ದಯುತವಾಗಿದೆ ಮತ್ತು 2013ರಲ್ಲಿ ಇವರು ಅಧಿಕಾರಕ್ಕೆ ಬಂದ ಮೇಲೂ ಸಹ ಇದನ್ನೇ ಮಾತನಾಡಿದ್ದಾರೆ. ನಮ್ಮ ರಾಜ್ಯ ಬಹು ಭಾಷೆಗಳ ಸಂಸ್ಕೃತಿ, ಧರ್ಮಗಳ ನೆಲೆಬೀಡು, ಸೌಹಾರ್ದಯುತವಾದ ಬಾಳ್ವೆ ಸಹಜವಾದ ಜೀವನ ಕ್ರಮವೆಂದು ಹೇಳುತ್ತಾ ಹೋಗಿ ಇಲ್ಲಿ ಪರಸ್ಪರ ದೋಷಾರೋಪಗಳನ್ನು ಮಾಡುವುದನ್ನು ಬಿಟ್ಟು ಇತರರನ್ನು ನೋಡಿ ಹೆಮ್ಮೆ ಪಡುವಂತಹ ನಮ್ಮ ರಾಜ್ಯದ ಅಸ್ಮಿತೆಯನ್ನು ಪುನಃ ಸ್ಥಾಪನೆ ಮಾಡಬೇಕಾಗಿದೆ. ನಮ್ಮ ರಾಜ್ಯದ ಜನತೆ ನೆಮ್ಮದಿ ಮತ್ತು ಶಾಂತಿಯಿಂದ ಬಾಳುವಂತಹ ಸಾಮಾಜಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ ಎಂದು 2013ರಲ್ಲಿಯೇ ಹೇಳಿದ್ದಾರೆ. ಹಾಗಾದರೆ, ನಾವು ನಿನ್ನೆ ಮತ್ತು ಮೊನ್ನೆಯಿಂದ ಈ ಸದನದಲ್ಲಿ ಏನು ಚರ್ಚೆ ಮಾಡಿದ್ದೇವೆ? ಕಾನೂನು ವ್ಯವಸ್ಥೆ ಎಲ್ಲಿಗೆ ಹೋಗಿದೆ ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ ಅಲ್ಲವೇ? ಪ್ರಜಾವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಉದಯವಾಣಿ ಮತ್ತು ವಿಶ್ವವಾಣಿ ಈ ಎಲ್ಲಾ ದಿನಪತ್ರಿಕೆಗಳು ನನ್ನ ಬಳಿ ಇವೆ. "ಕಲಿಕಾ ಹಂತದಲ್ಲಿ ವಿಭಜನೆ – ಮತಾಂತರ ಭಾವನೆಗೆ ನಾಂದಿ" ಎಂದು ಬಂದಿದೆ.

ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿಸೋಜಾರವರ ನೆಲದಲ್ಲಿ ಇಬ್ಬರು ಹಿಂದೂ ಧರ್ಮದ ಮಕ್ಕಳು ಮತ್ತು ಮತ್ತಿಬ್ಬರು ಅಲ್ಪಸಂಖ್ಯಾತರ ಮಕ್ಕಳು ಸಹವಾಗಿ ಎಲ್ಲಿಗಾದರೇ ಹೋದರೆ, ಒಂದು ಗುಂಪಿನ ಮಕ್ಕಳು ಬಂದು ಹಿಂದೂ ಗುಂಪಿನ ಮಕ್ಕಳನ್ನು ಥಳಿಸುತ್ತಾರೆ. ಇನ್ನೊಂದು ಗುಂಪಿನ ಮಕ್ಕಳು ಬಂದು ಅಲ್ಪಸಂಖ್ಯಾತರ ಮಕ್ಕಳನ್ನು ಥಳಿಸುತ್ತಾರೆ. ಅಧ್ಯಾಪಕರ ಜೊತೆಗೆ ಒಬ್ಬ ಅಲ್ಪಸಂಖ್ಯಾತರ ಮಗು ಪುಸ್ತಕವನ್ನು ಖರೀದಿ ಮಾಡಲು ಹೋದರೆ, ಆ ಪುಸ್ತಕ ಅಂಗಡಿಗೆ ಹೋಗಿ ಆ ಅಲ್ಪಸಂಖ್ಯಾತರ ಮಗವನ್ನು ಥಳಿಸುತ್ತಾರೆ. ಎಲ್ಲೋ ಒಂದು ಕಡೆ, ಹಿಂದೂ ಮತ್ತು ಮುಸಲ್ಮಾನರ co-education ಶಿಕ್ಷಣದ ವ್ಯವಸ್ಥೆ ಕುಸಿದು ಹೋಗಿದೆ. ಎಲ್ಲಾ ಜಾತಿಯ ಧರ್ಮದ ಜನರ ಭಾವನೆಗಳು ಅಲ್ಲಿ ಉಳಿದಿಲ್ಲ. ಆಯಾಯ ಧರ್ಮವರೇ ಶಿಕ್ಷಣ ಸಂಸ್ಥೆಯನ್ನು ನಡೆಸುವಂತಹ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲಿಸುವಂತಹ ವ್ಯವಸ್ಥೆ ಆರಂಭವಾಗಿದೆ. ಮತ್ತೊಂದು ಕಡೆ ಪರಸ್ಪರ ಒಬ್ಬರಿಗೊಬ್ಬರು ಮುಖ ನೋಡುವಂತಹ ಮತ್ತು ಒಡನಾಡಕ್ಕೆ ಆಸ್ಪದ ಕೊಡುವಂತಹ ಸಂದರ್ಭ ಅಲ್ಲಿ ಇಲ್ಲ. ಧರ್ಮ ಭೋದನೆಯ ಶಿಕ್ಷಣ ಅದಕ್ಕಾಗಿಯೇ ಸಂಸ್ಥೆಗಳು ಹುಟ್ಟಿಕೊಳ್ಳುವಂತಹ ಮತ್ತು ಇಡೀ ಪರಿಸ್ಥಿತಿ ಕುಲುಷಿತಗೊಳ್ಳುವಂತಹ ಸಂದರ್ಭ ಅಲ್ಲಿ ಸೃಷ್ಟಿಯಾಗಿ ಹೋಗಿದೆ.

**ಶ್ರೀ ಯು.ಟಿ.ಖಾದರ್ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅವರ ಪರವಾಗಿಯೂ ಮಾತನಾಡುತ್ತೇನೆ. ಇವರ ಪರವಾಗಿಯೂ ಮಾತನಾಡುತ್ತೇನೆ. ಮಾನ್ಯ ಸಚಿವರು ಏನು ಹೇಳುತ್ತಾರೆಂದು ನನಗೆ ಗೊತ್ತಿದೆ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವಂತಹ ಪರಿಸ್ಥಿತಿ ಇಲ್ಲ. 95% ಸೌಹಾರ್ದತೆ ಇದೆ. ಕೆಲವೊಂದರಲ್ಲಿ ಸಮಸ್ಯೆಗಳು ಇವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಓದುವಾಗ ಇಡೀ ಜಿಲ್ಲೆ ಹಾಳದಂತಹ ವಿಚಾರ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹಾಗೆಯೇ ಇರುವುದಾದರೆ ಸಂತೋಷ. ಅದೇರೀತಿ ಇರಲಿ. ಆದರೆ, ನಾವು ಇವತ್ತು ಕೊಲೆ ಸುಲಿಗೆಗಳನ್ನು ನೋಡುತ್ತಿದ್ದೇವೆ. ಅವುಗಳ ಪಟ್ಟಿಗಳನ್ನು ಕೊಡುತ್ತೇನೆ. ಇವತ್ತು ಏನಾಗಿದೆ. . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ತಮ್ಮ ಮಾತನ್ನು ಮುಂದುವರಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮುಂದುವರಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಚಿವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೆ ಉತ್ತರವನ್ನು ಕೊಡಲೇಬೇಕಾಗುತ್ತದೆ. ಒಟ್ಟು 6,221 ಹತ್ಯೆಗಳು ಆಗಿವೆ. ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪಾಲನೆ ಬಹಳ ಚೆನ್ನಾಗಿ ಇದೆಯಲ್ಲವೇ? ನಮ್ಮ ರಾಜ್ಯದಲ್ಲಿ ನೆಮ್ಮದಿ ಇದೆಯಲ್ಲವೇ? ನಮ್ಮ ರಾಜ್ಯದಲ್ಲಿ 2,534 ಮಹಿಳೆಯರ ಕೊಲೆಯಾಗಿದೆ. ಇದನ್ನು ನಾವು ಯಾರಿಗೆ ಹೇಳೋಣ? ಇಲ್ಲಿಯವರೆಗೆ ನೋಂದಣಿಯಾದ ನೂರಾರು ಪ್ರಕರಣಗಳಲ್ಲಿನ ಸಂಬಂಧಪಟ್ಟ ಅಪರಾಧಿಗಳನ್ನು ಬಂಧಿಸಲು ಆಗಲಿಲ್ಲ. ಕಲಬುರ್ಗಿಯವರ ಹತ್ಯೆ ಪ್ರಕರಣ ಎಲ್ಲಿಗೆ ಹೋಯಿತು? ಅದನ್ನು ಏನು ಮಾಡಿದ್ದಾರೆ? ಅದರಲ್ಲಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪರಾಧಿಗಳನ್ನು ದಸ್ತಗಿರಿ ಮಾಡಿದ್ದಾರೆಯೇ? ಗೌರಿ ಲಂಕೇಶ್ ಹತ್ಯೆ ಪ್ರಕರಣ ಎಲ್ಲಿಗೆ ಬಂದು ನಿಂತಿದೆ? ಇನ್ನೇನು ಅಪರಾಧಿಗಳನ್ನು ದಸ್ತಗಿರಿ ಮಾಡಿ ಬಿಟ್ಟೆವು ಎಂದು ಹೇಳಿದರು. ಆದರೆ, ಎಲ್ಲಿ ದಸ್ತಗಿರಿ ಮಾಡಿದ್ದಾರೆ? ಇವತ್ತು ಅಧಿಕಾರಿಗಳು ನೆಮ್ಮದಿಯಾಗಿ ಕೆಲಸ ಮಾಡಲು ಸಾಧ್ಯ ಇದೆಯೇ? ಪರಿಸ್ಥಿತಿ ಎಲ್ಲಿಗೆ ಹೋಗಿ ನಿಂತಿದೆ? ನಾನು ಯಾವುದನ್ನು ಹೇಳಲಿ? ನಾನು ಕಲ್ಲಪ್ಪ ಹಂಡಿಬಾಗ್ ಆತ್ಮಹತ್ಯೆ ಬಗ್ಗೆ ಮಾತನಾಡಲೇ, ಎಂ.ಕೆ.ಗಣಪತಿ ಆತ್ಮಹತ್ಯೆಯ ಬಗ್ಗೆ ಮಾತನಾಡಲೇ, ದಿನಾಂಕ 19.10.2016 ರಂದು ಮಾಲೂರಿನ ಪೋಲೀಸ್ ಠಾಣೆಯಲ್ಲಿ ರಾಘವೇಂದ್ರ ಎಂಬ ಒಬ್ಬ ಪೋಲಿಸ್ ಅಧಿಕಾರಿ ತಾನೇ ಗುಂಡು ಹಾರಿಸಿಕೊಂಡು ಸತ್ತಿದ್ದಾನೆ. ಶ್ರೀಮತಿ ರಶ್ಮಿ ಎನ್ನುವ ನಿಷ್ಠಾವಂತ ಅಧಿಕಾರಿ ಭ್ರಷ್ಟಾಚಾರದ ಬಗ್ಗೆ ವರದಿಯನ್ನು ಕೊಟ್ಟರೆ, ಅವರನ್ನು ವರ್ಗಾವಣೆ ಮಾಡಿದ್ದಾರೆ. ಇವತ್ತು ಶ್ರೀಮತಿ ರಶ್ಮಿರವರು ಎಲ್ಲಿ ಕೆಲಸ ಮಾಡುತ್ತಿದ್ದಾರೆಂದು ನಮಗೆ ಗೊತ್ತಿಲ್ಲ. ಅಂತಹ ಜವಾಬ್ದಾರಿಯುತ, ನಿಷ್ಠೆ ಪ್ರಾಮಾಣಿಕತೆಗೆ ಹೆಸರಾದಂತಹವರ ಕಥೆ ಏನಾಗಿದೆ? ಶ್ರೀಮತಿ ಶಿಖಾರವರ ಪರಿಸ್ಥಿತಿ ಮೈಸೂರಿನಲ್ಲಿ ಏನಾಯಿತೆಂದು ಎಲ್ಲರಿಗೂ ಗೊತ್ತಿದೆ ಅಲ್ಲವೇ? ಅದು ಮಾನ್ಯ ಮುಖ್ಯ ಮಂತ್ರಿಯವರ ತವರೂರು.

(097) 08.02.2018 5.20 ವೈಎಲ್-ಎಕೆ

ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-

ಕೃಷಿ ಹೊಂಡ ಬಗ್ಗೆಯೂ ಹೇಳುತ್ತಿದ್ದರು. ಕೃಷಿ ಹೊಂಡದ ಕರ್ಮಕಾಂಡದ ಬಗ್ಗೆಯೂ ಮಾಹಿತಿ ತಂದಿದ್ದೇನೆ. ಕೃಷಿ ಭಾಗ್ಯ ಯೋಜನೆಯು ಶೇಕಡಾ 90 ರಷ್ಟು ಹೇಗೆ ನೆಲಕಚ್ಚಿ ಹೋಗಿದೆ ಎಂದರೆ, ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಬೇನಾಮಿ ಹೆಸರಿನಲ್ಲಿ ಪಡೆದು, ಲಕ್ಷಾಂತರ ರೂಪಾಯಿಗಳನ್ನು ಅಧಿಕಾರಿಗಳು ಲೂಟಿ ಮಾಡಿರುವ ಮಾಹಿತಿಯು ನನ್ನ ಹತ್ತಿರ ಇದೆ. ಎಲ್ಲಾ ಯೋಜನೆಯು ಎಷ್ಟರಮಟ್ಟಿಗೆ ನೆಲಕಚ್ಚಿ ಹೋಗಿದೆ ಎಂದರೆ, ಎಲ್ಲೋ ಒಂದು ಕಡೆ ಸಂಪೂರ್ಣವಾಗಿ ಸೋರಿಕೆಯಾಗುತ್ತಿರುವಂತಹ ಇಡೀ ಮಾಹಿತಿ ನನ್ನ ಹತ್ತಿರ ಇದೆ. ಹಾಗಾಗಿ ಈ ರಾಜ್ಯದ ಜನರ ಬದುಕಿನ ಬಗ್ಗೆ ಮತ್ತು ಭವಿಷ್ಯದ ಬಗ್ಗೆ ಚೆಲ್ಲಾಟವಾಡದೇ ಒಂದು ಹೊಸ ದೃಷ್ಟಿಕೋನದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಅಥವಾ ಯೋಜನೆಯನ್ನು ರೂಪಿಸುವಂತಹ ಕೆಲಸವನ್ನು ಕಡೆಯ ಬಜೆಟ್‌ನಲ್ಲಿಯಾದರೂ ಮಾಡಲಿ. ಮುಂದೆ ಬರತಕ್ಕಂಥ ಸರ್ಕಾರದಿಂದಾದರೂ ಪರಿಹಾರ ಕೊಡುವ ಪ್ರಯತ್ನ ಮಾಡಲಿ ಎಂಬುದು ಜನಾಭಿಪ್ರಾಯವಾಗಿದೆ. ನಾವು ಹೇಳುವ ಹಾಗೆ ಯಾವ ಜನರು ಕೇಳುವುದಿಲ್ಲ. ಕರ್ನಾಟಕದ ಜನ ರಾಜಕೀಯ ಜಾಣ್ಮೆಗೆ ಹಾಗೂ ರಾಜಕೀಯ ಪ್ರಜ್ಞೆಗೆ ಹೆಸರಾದವರು. ಯಾವ ಸರ್ಕಾರವನ್ನು ಯಾವಾಗ ತಂದು ಕೂರಿಸಬೇಕೆಂದು ಜನರು ತೀರ್ಮಾನ ಮಾಡುತ್ತಾರೆ. ನಮ್ಮ ಪಕ್ಷವನ್ನು ಬೆಂಬಲಿಸಿ ಎಂದು ನಾವು ಜನರನ್ನು ಕೇಳುತ್ತೇವೆ. ಆದರೆ, ಅಂತಿಮವಾಗಿ ಆಯ್ಕೆ ಮಾಡುವುದು ಜನರಿಗೆ ಬಿಟ್ಟ ವಿಚಾರ. ಏಕೆಂದರೆ ಎಲ್ಲಾ ರಾಜಕೀಯ ಮೇಲಾಟಗಳನ್ನು, ಪರಸ್ಪರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಸರೆರೆಚಾಟವನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ರಾಜಕಾರಣದ ಪ್ರಕ್ಷುಬ್ಧದ ಪರಿಸ್ಥಿತಿ ಇವತ್ತಿನಷ್ಟು ಯಾವತ್ತು ಬಂದಿಲ್ಲ. ಎಲ್ಲೋ ಒಂದು ಕಡೆ ಮಂಥನವಾಗುತ್ತಿದೆ. ಆ ಮಂಥನದಿಂದ ಹೊಸ ಆವಿಷ್ಕಾರವೊಂದು ಆಗುತ್ತದೆ ಎಂಬ ವಿಶ್ವಾಸ, ನಂಬಿಕೆಗಳಿವೆ. ಎಲ್ಲಿಯೋ ಒಂದು ಕಡೆ ಪ್ರಾದೇಶಿಕ ಸಮಸ್ಯೆ ಇದೆ. ನೆಲ, ಜಲ, ಭಾಷೆ, ಸಂಸ್ಕೃತಿ ನೋಡಿದಾಗ ಇನ್ನೂ ಎಷ್ಟು ದಿವಸ ಗೋವಾ ನೀರಾವರಿ ಸಚಿವರ ಹತ್ತಿರ ನಾವು ಬೈಯಿಸಿಕೊಳ್ಳಬೇಕೋ ಗೊತ್ತಿಲ್ಲ. ನಮ್ಮ ತಂದೆಯ ಮಕ್ಕಳಲ್ಲ ಎನ್ನುವ ರೀತಿ ಅವರ ಹತ್ತಿರ ಬೈಯಿಸಿಕೊಳ್ಳಬೇಕಾಗಿದೆ. ಆವತ್ತಿನ ದಿವಸ ದಿವಂಗತ ಎಸ್.ಆರ್.ಬೊಮ್ಮಾಯಿಯವರು ಕಂಡುಕೊಂಡ ಪರಿಹಾರದಿಂದ ಎಲ್ಲೋ ಒಂದು ಕಡೆ ಮಹದಾಯಿ ವಿಚಾರದಲ್ಲಿ ಗೋವಾ ಸರ್ಕಾರವನ್ನು ಒಪ್ಪಿಸಿದ್ದರು. ಆದರೆ, ರಾಜಕೀಯವನ್ನು ಮರೆತು ಅದನ್ನು ಅನುಷ್ಠಾನಕ್ಕೆ ತರುವಂತಹ ಪ್ರಯತ್ನ ನಮ್ಮಿಂದಾಗಲಿಲ್ಲ. ಅವರು-ಇವರು ಎಂದು ಕಾರಣ ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಹದಾಯಿ ಸಮಸ್ಯೆಯನ್ನು ಬಗೆಹರಿಸಬೇಕಾಗಿರುವುದು ಜಂಟಿ ಜವಾಬ್ದಾರಿಯಾಗಿದೆ. ಇವತ್ತು ರೈತರನ್ನು ಬೀದಿಗೆ ಬಿಟ್ಟು ಕುಡಿಯುವ ನೀರಿಗಾಗಿ ಇನ್ನೂ ಸಮಾಧಾನವಾಗಿದ್ದೇವೆಯೇ? ಇದು ಎಲ್ಲಾದರೂ ಉಂಟೆ? ಹೀಗಾದರೆ ಹೊಸ ಆಲೋಚನೆ, ಹೊಸ ದೃಷ್ಟಿಕೋನದ ಹಿನ್ನೆಲೆಯಲ್ಲಿ ನಾವೆಲ್ಲ ಆಲೋಚನೆ ಮಾಡಿ, ಈ ನಾಡಿನ ಜನರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ವಸ್ತುನಿಷ್ಠ, ತಳಸ್ಪರ್ಶ ನೆಲೆಗಳಲ್ಲಿ ನಿಂತು ಮಾಡೋಣ. ಬಹುಶಃ ಆಗಲಾದರೂ ಈ ನಾಡಿನ ಜನರು ಮತ್ತು ದೇವರು ಮೆಚ್ಚುತ್ತಾನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮಧ್ಯಾಹ್ನದ ನಂತರ ಮಾನ್ಯ ಹಿರಿಯ ಸದಸ್ಯರುಗಳಾದ ಕೆ.ಟಿ.ಕಂಠೇಗೌಡರು ಮತ್ತು ಬಿ.ಜೆ.ಪುಟ್ಟಸ್ವಾಮಿಯವರು ವಿಚಾರಪೂರ್ಣವಾದ ಮಾತನ್ನು ತಿಳಿಸಿದ್ದಾರೆ. ಇದಕ್ಕೆ ಮಾನ್ಯ ಸಭಾನಾಯಕರು ಮತ್ತು ಅವರ ತಂಡದವರು ಈಗಾಗಲೇ ಹೇಳಿರತಕ್ಕಂಥ ವಿಚಾರವನ್ನು ಟಿಪ್ಪಣಿ ಮಾಡಿಕೊಂಡು ನಾಳೆ ಸದನದಲ್ಲಿ ಉತ್ತರ ನೀಡುತ್ತಾರೆ ಎಂದು ಭಾವಿಸುತ್ತೇನೆ. ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲವನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿಯಲ್ಲಿ 32 ಪುಟಗಳಿದ್ದು, 29 ವಿಷಯಗಳನ್ನು ಉಲ್ಲೇಖಿಸಲಾಗಿದೆ. ಒಂದು ಹಂತದಲ್ಲಿ ರಾಜ್ಯಪಾಲರು ತನ್ನ ನೇತೃತ್ವದ ಸರ್ಕಾರದ ಸಾಧನೆಯನ್ನು ಮತ್ತು ಅಭಿವೃದ್ಧಿ ಆಶಯಗಳನ್ನು ಸಮರ್ಥಿಸುವುದೇ ಅವರ ಭಾಷಣದ ಆಶಯವೆಂದು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಆದರೆ, ಈ ಸಾರಿ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ 33 ಸಲ 'ನನ್ನ ಸರ್ಕಾರ' ಎಂದು ಉಲ್ಲೇಖ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರು ಸೇರಿದಂತೆ ಏಕೆ 'ನನ್ನ ಸರ್ಕಾರ' ಎಂದು ಹೇಳಿದ್ದಾರೆ ಎಂದು ನಮಗೆ ಯಾರಿಗೂ ಅನುಮಾನವಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಭಾಷಣದ ಸಂದರ್ಭದಲ್ಲಿ ನಾನು ಬರೆದ ಪುಸ್ತಕವಲ್ಲ, ಸರ್ಕಾರ ಬರೆದ ಪುಸ್ತಕ ಎಂದು ಹೇಳಿದ್ದಾರೆಯೇ ಎಂದು ನಮಗೆ ಅನ್ನಿಸಿತ್ತು. 1ನೇ ಪುಟದಲ್ಲಿ ಅವರ ಉಲ್ಲೇಖ ಇರುವುದು "ಸಮಾಜದ ಎಲ್ಲಾ ವರ್ಗದವರಿಗೆ ಸಮಪಾಲು, ಸಮಬಾಳು. ಸಾಮಾಜಿಕ ನ್ಯಾಯ ಹಾಗೂ ಕಲ್ಯಾಣ ದೊರಕಿಸುವುದರಲ್ಲಿ ನನ್ನ ಸರ್ಕಾರ ಮುಂದಿದ್ದು, ಹಸಿವು ಮುಕ್ತ ಕರ್ನಾಟಕ ಗುರಿ ತಲುಪುವುದರಲ್ಲಿ ನಾವು ಪ್ರಥಮ ಹೆಜ್ಜೆ ಇಟ್ಟಿದ್ದೇವೆ" ಎಂದು ಹೇಳಿದ್ದಾರೆ. ನಾನು ಈ ಪ್ಯಾರಾವನ್ನು ಬಿಡಬೇಕೆಂದು ತೀರ್ಮಾನಿಸಿದೆ. ಆದರೆ, ನಮ್ಮ ಜಿಲ್ಲೆಯವರು ಹಾಗೂ ಸ್ನೇಹಿತರಾದ ಮಾನ್ಯ ಯು.ಟಿ.ಖಾದರ್‌ರವರು ಸದನದಲ್ಲಿಯೇ ಇದ್ದಾರೆ.

**ವೈಸ್ ಛೇರ್ಮನ್**:- ಯಾವಾಗಲೂ ಮಾನ್ಯ ರಾಜ್ಯಪಾಲರು ಮಾತನಾಡಬೇಕಾದರೆ ನನ್ನ ಸರ್ಕಾರ ಎಂದು ಹೇಳಿ ಮಾತನಾಡುವುದು ಒಂದು ಪದ್ಧತಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಸಿವು ಮುಕ್ತ ಕರ್ನಾಟಕ ಎಂದು ಅನ್ನ ಭಾಗ್ಯ ಯೋಜನೆಯನ್ನು ಜಾರಿಗೆ ತಂದಾಗ ಇದೇ ಸದನದಲ್ಲಿ ವಿರೋಧ ಪಕ್ಷದ ಕಡೆಯಲ್ಲಿಯೇ ಕುಳಿತುಕೊಂಡು ಪ್ರಥಮ ಬಾರಿಗೆ ನಾನು ಸರ್ಕಾರವನ್ನು ಸಮರ್ಥಣೆ ಮಾಡಿದ್ದೆ. ಕರ್ನಾಟಕ ರಾಜ್ಯದಲ್ಲಿ ಬಡವರಿಗೆ ಉಚಿತವಾಗಿ ಅಕ್ಕಿ ಕೊಡುವುದಾದರೆ, ಯಾವುದೋ ಸಾಮಾನ್ಯ ಕಡೆಗಳಲ್ಲಿರುವ ಬಡವರು ನೆಮ್ಮದಿಯಿಂದ ಊಟ ಮಾಡುತ್ತಾರೆ ಎಂದಾದರೆ, ಎಲ್ಲಾ ಯೋಜನೆಗಳಲ್ಲಿಯೂ ಅನ್ನ ಭಾಗ್ಯ ಎಂಬ ಯೋಜನೆ ಸರ್ವಶ್ರೇಷ್ಠವಾದ ಯೋಜನೆಯಾಗಿರುವುದರಿಂದ ಸರ್ಕಾರವನ್ನು ಅಭಿನಂದಿಸುತ್ತೇನೆ ಎನ್ನುವ ಮಾತನ್ನು ಆ ಸಮಯದಲ್ಲಿ ಹೇಳುದ್ದೆನು. ಆದರೆ, ನನಗೆ ಒಂದು ನೆನಪು ಬರುತ್ತಿದೆ. ನಿನ್ನೆ ದಿವಸ ಪ್ರಶ್ನೋತ್ತರ ಅವಧಿಯಲ್ಲಿ ಮಾನ್ಯ ಸಚಿವರು ಒಂದು ಉತ್ತರವನ್ನು ನೀಡಿದ್ದಾರೆ. ಅದೇನೆಂದರೆ, ಅನ್ನ ಭಾಗ್ಯ ಯೋಜನೆ ಎಂದು 1 ಕೆ.ಜಿ. ಅಕ್ಕಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಭರಿಸಲಾಗುತ್ತದೆ ಎಂಬುವ ಪ್ರಶ್ನೆಗೆ ಕೇಂದ್ರ ಸರ್ಕಾರ ೨೮.೦೦ ರೂಪಾಯಿಯನ್ನು ಮತ್ತು ರಾಜ್ಯ ಸರ್ಕಾರ ೩.೦೦ ರೂಪಾಯಿಯನ್ನು ಕೊಡುವುದರಿಂದ ಎರಡು ಒಟ್ಟಾರೆಯಾಗಿ ಸೇರಿಸಿ ಅನ್ನಭಾಗ್ಯ ಯೋಜನೆ ಎಂದು ಕೊಡುತ್ತಿದ್ದಾರೆ. ನಾನು ದೂರದರ್ಶನದಲ್ಲಿ ಜಾಹೀರಾತನ್ನು ನೋಡುವಾಗ ಯಾವುದೋ ಒಂದು ಮಗು ಊಟ ಮಾಡುತ್ತಿರುವಾಗ ಆ ಮಗುವಿನ ತಾಯಿ ಬಂದು ಎತ್ತಿಕೊಂಡು 'ಹಸಿವು ಮುಕ್ತ ಕರ್ನಾಟಕ' ಎಂದು ನಮ್ಮ ರಾಜ್ಯ ಸರ್ಕಾರ ನಿರ್ಮಾಣ ಮಾಡಿದೆ, ಬಡವರ ಅಭಿವೃದ್ಧಿಗೆ ಸಿದ್ಧ ಸರ್ಕಾರ ಎಂದು ಆ ತಾಯಿ ಹೇಳುತ್ತಾಳೆ.

**ಶ್ರೀ ಐವನ್ ಡಿ'ಸೋಜಾ**:- ಅದು ಸದಾ ಸಿದ್ಧ ಸರ್ಕಾರ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಟಿ.ಖಾದರ್(ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರು):-** ಅದು ಸಿದ್ಧ ಸರ್ಕಾರ ಎಂದಲ್ಲ, ಸದಾ ಸಿದ್ಧ ಸರ್ಕಾರ ಎಂದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹೌದು ಸದಾ ಸಿದ್ಧ ಸರ್ಕಾರ ಎಂದು ಮಾನ್ಯ ಸಚಿವರೇ ಬರೆದುಕೊಟ್ಟಿರುವುದು. ಇಲ್ಲವೆಂದು ಹೇಳಲಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಕೇಂದ್ರ ಸರ್ಕಾರ ರೂ.28.00 ಗಳನ್ನು ಕೊಡುತ್ತದೆ ಎಂದು ಮಾನ್ಯ ಸಚಿವರೆ ಲಿಖಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ರೂ.3.00 ಗಳನ್ನು ಕೊಡುತ್ತದೆ. ಕೇಂದ್ರ ಸರ್ಕಾರದ ನೆರವಿನಲ್ಲಿರುವ ಅನ್ನ ಭಾಗ್ಯ ಯೋಜನೆಯ ಜಾಹೀರಾತಿನಲ್ಲಿ ಮಾನ್ಯ ಪ್ರಧಾನ ಮಂತ್ರಿ, ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಸಚಿವರ ಫೋಟೋಗಳನ್ನು ಪ್ರಕಟಿಸಿದ್ದರೆ ಏನಾದರೂ ನಷ್ಟವಾಗುತ್ತಿತ್ತೇ? ಫೋಟೋವನ್ನು ಹಾಕಬಹುದಾಗಿತ್ತಲ್ಲವೇ? ಏಕೆ ಫೋಟೋವನ್ನು ಹಾಕಲಿಲ್ಲವೆಂದು ಸಹ ನಾನು ಕೇಳುವುದಿಲ್ಲ. ಏಕೆಂದರೆ, ನಾನು ಏನಾದರೂ ಆ ರೀತಿ ಕೇಳಿದರೆ ಅದಕ್ಕೆ ಕಥೆ ಹೇಳುತ್ತಾರೆ. ಕಥೆ ಹೇಳುವುದರಲ್ಲಿ ಮಾನ್ಯ ಸಚಿವರು ಬಹಳ ಬುದ್ಧಿವಂತರು. ಮಾನ್ಯ ಐವನ್ ಡಿ'ಸೋಜಾರವರಿಗಿಂತ ಮಾನ್ಯ ಯು.ಟಿ.ಖಾದರ್‌ರವರು ಬಹಳ ಬುದ್ಧಿವಂತರು. ಶ್ರೀ ಬಸವರಾಜ ಎಸ್.ಹೊರಟ್ಟಿಯವರು ಒಂದು ಮಾತನ್ನು ಹೇಳುತ್ತಿದ್ದರು. ಅದೇನೆಂದರೆ, 'ಒಬ್ಬ ವ್ಯಕ್ತಿ ಕೆಳಗೆ ಕುಳಿತುಕೊಂಡು ಮರದ ಮೇಲಿರುವ ಮಂಗಕ್ಕೆ ನೀನು ಎಷ್ಟು ಚೆನ್ನಾಗಿದ್ದೀಯಾ' ಎಂದು ಹೇಳುತ್ತಾನೆ. ಆಗ ಆ ಮಂಗ ಖುಷಿಯಿಂದ ಕೈಯನ್ನು ಕೆಳಗೆ ಬಿಟ್ಟು ನೆಲಕ್ಕೆ ಬೀಳುತ್ತದೆ. ಮಾನ್ಯ ಸಚಿವರು ಸಹ ಹಾಗೆ. ಮಾತಿನಲ್ಲಿಯೇ ಎಂಥವರನ್ನೂ ಸಹ ಸೆಳೆಯುವ ಬುದ್ಧಿವಂತರು. ಅದಕ್ಕಾಗಿ ನಾನು ಹೇಳುತ್ತಿರುವುದು. ಕೇಂದ್ರ ಸರ್ಕಾರ ರೂ.28.00 ಗಳನ್ನು ಕೊಡುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಹೊಗಳಿದ್ದಾಗ ನೀವು ಯಾವಾಗಲಾದರೂ ಕೆಳಗೆ ಬಿದ್ದಿದ್ದೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲ. ಮಾನ್ಯ ಸಚಿವರು ಬೇರೆಯವರನ್ನು ಕೆಳಗೆ ಬೀಳಿಸುತ್ತಾರೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರೆ ಕೊಟ್ಟಿರತಕ್ಕಂಥ ಲಿಖಿತ ಉತ್ತರದ ಪ್ರಕಾರ ಕೇಂದ್ರ ಸರ್ಕಾರ ರೂ.28.00 ಗಳನ್ನು ಮತ್ತು ರಾಜ್ಯ ಸರ್ಕಾರ ರೂ.3.00 ಗಳನ್ನು ಕೊಡುವುದರಿಂದ ಅನ್ನ ಭಾಗ್ಯವನ್ನು ಉಚಿತವಾಗಿ ನೀಡಲಾಗುತ್ತದೆ. ನಿಮ್ಮದೇ ಆದಂತಹ ದೃಷ್ಟಿಕೋನವಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮುಂದೆಯಾದರೂ ಗಟ್ಟಿಯಾಗಬೇಕೆಂದು ಹೇಳುತ್ತಿದ್ದೇನೆ. ಎಲ್ಲರೂ ಮಾತನಾಡಿದರೆ ಮತ್ತೊಮ್ಮೆ ಮಾತನಾಡಬೇಕೆಂದು ಅನ್ನಿಸುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಮೊದಲು ನನ್ನ ಮಾತನ್ನು ಮುಗಿಸುತ್ತೇನೆ. ನಂತರ ಸಚಿವರು ಮಾತನಾಡಲಿ. ಇವತ್ತಿನ ವ್ಯವಸ್ಥೆ ಹೇಗಿದೆ ಎಂದರೆ, ಕೇಂದ್ರ ಸರ್ಕಾರದ ಹಣ ರಾಜ್ಯ ಸರ್ಕಾರದ ಮೆರವಣಿಗೆ ಎನ್ನುವ ಮಟ್ಟಕ್ಕೆ ವ್ಯಾಪಕವಾದ ಭಾವನೆ ಇದೆ. ಆದರೆ, ಆ ರೀತಿ ಏನಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ನೀಡಬಹುದೆಂದು ಸಹ ನನಗನಿಸುತ್ತದೆ. ಯಾವುದೇ ಕಾರಣಕ್ಕೂ ಕೂಡ ಆ ಜಿಗುಟುತನವನ್ನು ಪ್ರದರ್ಶನ ಮಾಡಬಾರದೆಂದು ನಾನು ಹೇಳುತ್ತೇನೆ. ಹಾಗೆಯೇ 2ನೇ ಪುಟದಲ್ಲಿ ಗೃಹ ಇಲಾಖೆಗೆ ಸಂಬಂಧಪಟ್ಟ ವಿಚಾರವನ್ನು ನಮೂದಿಸಲಾಗಿದೆ. ಪೋಲೀಸ್ ಇಲಾಖೆಯ ಉನ್ನತೀಕರಣದ ಬಗ್ಗೆ ಅತ್ಯಂತ ವ್ಯವಸ್ಥಿತವಾಗಿ ಮತ್ತು ಕಲ್ಯಾಣ ಕಾರ್ಯಕ್ರಮದ ಬಗ್ಗೆ.....

**ವೈಸ್ ಛೇರ್ಮನ್:-** ಕೋಟ ಶ್ರೀನಿವಾಸ ಪೂಜಾರಿಯವರೆ, ನಾನು ಹೇಳುವುದೇನೆಂದರೆ, ಹೊಟೇಲ್‌ನಲ್ಲಿ ಅಡುಗೆ ಮಾಡುವವರು ಬೇರೆ. ಆದರೆ, ಮಾಡಿದ ಅಡುಗೆಯನ್ನು ಸರ್ವರ್ ಬಡಿಸುತ್ತಾರೆ. ಆದರೆ, ನಾವುಗಳು ಭಕ್ಷೀಸ್ ಕೊಡುವುದು ಸರ್ವರ್‌ಗೆ ವಿನಾ ಅಡುಗೆ ಮಾಡಿದವನಿಗೆ ಅಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಕೊಟ್ಟಿರುವ ಉದಾಹರಣೆ ಸರಿ ಇದೆ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ನನಗೆ 5 ನಿಮಿಷ ಮಾತನಾಡಲು ಅವಕಾಶವನ್ನು ನೀಡಿ, ಎಲ್ಲಾ ವಿಚಾರದ ಬಗ್ಗೆ ಸರಿಯಾಗಿ ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾಗಿಯೇ ಹೇಳುತ್ತಾರೆ. ಮಂಗ ಮರದಿಂದ ಕೈ ಬಿಟ್ಟಿತ್ತು ಎಂದು ನಾನು ಈಗಾಗಲೇ ಹೇಳಿದ್ದೇನೆ ಅಲ್ಲವೇ?

(ಗೊಂದಲ)

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಗೃಹ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ನಾವು ಕಳೆದ 2-3 ಅಧಿವೇಶನದಿಂದ ಹೇಳುತ್ತಾ ಬರುತ್ತಿದ್ದೇವೆ. ಪೋಲೀಸ್ ಇಲಾಖೆಯಲ್ಲಿ ಒಂದು ರೀತಿಯ orderly ಪದ್ಧತಿ ಇದೆ. ಪೋಲೀಸ್ ಇಲಾಖೆಯಲ್ಲಿರತಕ್ಕಂಥ ಅತ್ಯಂತ ಕಿರಿಯ ಸಿಬ್ಬಂದಿಗಳಾದ P.C. (Police Constable) ಗಳು ನಿಮ್ಮ ಉನ್ನತ ಪೋಲೀಸ್ ಅಧಿಕಾರಿಗಳ ಮನೆಯಲ್ಲಿ ಅವರ ಕೆಲಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಈ ರೀತಿಯ ಪದ್ಧತಿಯನ್ನು ಕೈ ಬಿಡಬೇಕು. ಉನ್ನತ್ತ ಪೋಲೀಸ್ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡುವುದಕ್ಕೆ ಬೇಕಾದರೆ 'ಡಿ' ದರ್ಜೆ ನೌಕರರನ್ನು ತೆಗೆದುಕೊಂಡು, ಸರ್ಕಾರದಿಂದ ಸಂಬಳವನ್ನು ಕೊಡಿಸುವಂತೆ ಮಾಡಿ ಎಂದು 3, 4 ಬಾರಿ ಹೇಳಿದ್ದೇವೆ. ನಮ್ಮಲ್ಲಿರುವುದು ಎಂತಹ ಅಮಾನವೀಯ ವ್ಯವಸ್ಥೆ ಎಂದರೆ, ಅವರ ಹುದ್ದೆ Police Constable ಆಗಿದ್ದು, ಆತ ಉನ್ನತ್ತ ಪೋಲೀಸ್ ಅಧಿಕಾರಿಗಳ ಮನೆಯಲ್ಲಿ ಹೋಗಿ ಜೀತ ಮಾಡುವಂಥ, ಮನೆ ಕೆಲಸ ಮಾಡುವಂಥ ಪರಿಸ್ಥಿತಿ ಇದೆ. ಇದನ್ನು ನಿಲ್ಲಿಸಬೇಕೆಂದು ಒಂದು ಕಡೆ ಸಾಮಾಜಿಕ ನ್ಯಾಯ ಸಮಾಜಕ್ಕೆ ಪೂರಕವಾಗಿ ಬದ್ಧವಾಗಿದೆ, ಎಲ್ಲರನ್ನೂ ಸಮಾನತೆಯಿಂದ ನೋಡಿ ಗೌರವವನ್ನು ಕೋಡುತ್ತೇವೆ ಎಂದು ಆಡಳಿತ ಪಕ್ಷದವರು ಹೇಳುತ್ತಾರೆ. ಇವತ್ತಿನವರೆಗೂ ಒಂದು ಹೆಜ್ಜೆಯೂ ಮುಂದೆ ಹೋಗಿಲ್ಲ, ಏಕೆ? ಇಂತಹ orderly ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗದಿದ್ದ ಮೇಲೆ ಎಂತಹ ಸಾಮಾಜಿಕ ನ್ಯಾಯವನ್ನು ಒದಗಿಸುತ್ತಾರೆ ಎಂದು ಉತ್ತರವನ್ನು ನೀಡಬೇಕೆಂಬುದು ನನ್ನ ಅಗ್ರಹ. ಪೋಲೀಸ್ ಇಲಾಖೆ ಬಗ್ಗೆ ಮಾತನಾಡಲೇಬಾರದೆಂದು ತೀರ್ಮಾನಿಸಿದ್ದೆ. ಏಕೆಂದರೆ, ಮಾನ್ಯ ಸದಸ್ಯರುಗಳಾದ ಐವನ್ ಡಿ'ಸೋಜಾ ಮತ್ತು ಯು.ಟಿ.ಖಾದರ್ ನಾವೆಲ್ಲರೂ ಒಂದೇ ಜಿಲ್ಲೆಯವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನನಿತ್ಯ ಸಾವು-ನೋವುಗಳು ಸಂಭವಿಸುತ್ತದೆ. ನಿಮ್ಮ ಮನಸ್ಸಿನಲ್ಲಿ ಒಂದು ಸ್ಪಷ್ಟನೆ ಇರಲಿ.

(ಮುಂದು) . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದುವರೆದಿದ್ದು):-**

ಯಾರಿಗೂ ಹೇಳಿಕೊಳ್ಳಲಾಗದಂತಹ ಸ್ಥಿತಿಗೆ ನಾವು ಇಂದು ಮುಟ್ಟಿದ್ದೇವೆ. ಬಹುಶಃ ಅಷ್ಟೋ ಇಷ್ಟೋ ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಉಸ್ತುವಾರಿ ಸಚಿವರು ಒಂದು ದೊಡ್ಡ ಪ್ರಯತ್ನವನ್ನು ಮಾಡಿ, ಕುಡಿಯುವ ನೀರನ್ನು ಉಳಿಸುವಂತಹ ಪ್ರಯತ್ನಕ್ಕೆ ಮುಂದಾಗುತ್ತಿದ್ದಾರೆ. ಒಟ್ಟಾರೆ ಕಾವೇರಿ ಜಲಾನಯನ ಭಾಗದ ರೈತರ ಸ್ಥಿತಿಯನ್ನು ಕೇಳಿದರೆ ನಾವು ಎಲ್ಲಿಯೋ ಒಂದು ರೀತಿ ಆತಂಕಕ್ಕೆ ಒಳಗಾಗುವಂತಹ ಸಂದರ್ಭ ಇದೆ. ಸರ್ಕಾರದವರು ರೈತರ ರಕ್ಷಣೆ ಬಗ್ಗೆ ಮಾತನಾಡಿ, 8,165 ಕೋಟಿ ರೂಪಾಯಿಯ ರೈತರ ಸಾಲ ಮನ್ನಾ ಮಾಡಲಿಕ್ಕೆ ಹಣ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮುತ್ತೂಟ್ ಫೈನಾನ್ಸ್ ಮತ್ತು ಮಣಪ್ಪುರಂ ಗೋಲ್ಡ್ ಎಂಬ 3-4 ಫೈನಾನ್ಸ್ ಕಂಪನಿಗಳ ವಿವರಗಳನ್ನು ತಂದಿದ್ದೇನೆ. ಇವುಗಳನ್ನು ತಾವು ಒಮ್ಮೆ ನೋಡಿ, ಇದರಲ್ಲಿರುವ ಅಕ್ಷರಗಳು ಯಾರಿಗಾದರೂ ಕಾಣಿಸುತ್ತವೆಯೇ?

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡರು ಫೈನಾನ್ಸ್ ಕಂಪನಿಗಳು ರೈತರು ಅಡವಿಟ್ಟ ಚಿನ್ನವನ್ನು ಹರಾಜು ಹಾಕಲು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಪ್ರತಿಯನ್ನು ಸದನದಲ್ಲಿ ಪ್ರದರ್ಶಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರು ಅಡವಿಟ್ಟ ಚಿನ್ನದ ಹರಾಜನ್ನು ಈ ರೀತಿ ತೋರಿಸುತ್ತಾರೆ. ಇದನ್ನು ನಾವುಗಳೇ ಡಬಲ್ ಕನ್ನಡಕ ಹಾಕಿಕೊಂಡು ಹುಡುಕಿದರೂ ಸಿಗುವುದಿಲ್ಲ. ರೈತರಿಗೆ ಸೊಸೈಟಿಗಳಲ್ಲಿ ಪುನಃ ಸಾಲ ಕೊಡುತ್ತಿಲ್ಲ, ಬ್ಯಾಂಕುಗಳಲ್ಲಿಯೂ ಸಹ ಸಾಲ ಕೊಡುತ್ತಿಲ್ಲ, ಅವರು ತಮ್ಮ ಒಡವೆಗಳನ್ನು ಮುತ್ತೂಟ್ ಫೈನಾನ್ಸ್ ಅಥವಾ ಇನ್ನಿತರ ಫೈನಾನ್ಸ್ ಕಂಪನಿಗಳಲ್ಲಿಯೇ ಅಡವಿಟ್ಟು ಸಾಲ ತೆಗೆದುಕೊಳ್ಳಬೇಕು. ಈ ಫೈನಾನ್ಸ್ ಕಂಪನಿಗಳು ರೈತರು ಅಡವಿಟ್ಟ ಒಡವೆಗಳನ್ನು ಅವರಿಗೆ ಅರಿವಿಲ್ಲದಂತೆಯೇ ಹರಾಜು ಹಾಕುವಂತಹ ಪ್ರಕ್ರಿಯೆ ಇವತ್ತಿನ ದಿವಸ ನಡೆಯುತ್ತಿದೆ. ಇದನ್ನು ನಿಲ್ಲಿಸುವ ಪ್ರಯತ್ನ ಸರ್ಕಾರದವರು ಮಾಡಿದ್ದಾರೆಯೇ? ಇದರಿಂದಾಗಿ, ರೈತ ಹೇಗೆ ಉಳಿಯುತ್ತಾನೆ? ಹೇಗೆ ಬದುಕುತ್ತಾನೆ? ಸರ್ಕಾರ ರೈತರ ಸಾಲ ಮನ್ನಾ ಮಾಡಿದೆ ಎಂದು ಘೋಷಣೆ ಮಾಡಿದೆ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರವಿಯವರು ಮಾತನಾಡಿ, ಅವರ ಊರಿನ ರೈತರಿಗೆ ಸ್ವಲ್ಪ ಹಣ ಬಂದುಬಿಟ್ಟಿದೆಯೆಂದು ಹೇಳಿದ್ದಾರೆ. ಈ ಬಗ್ಗೆ ನಾವೆಲ್ಲರೂ ನಾಲ್ಕಾರು ಪ್ರಶ್ನೆಗಳನ್ನು ಕೇಳಿದ್ದೇವೆ. ಅದಕ್ಕೆ ಸರ್ಕಾರದವರು ಎಲ್ಲಿ ಉತ್ತರ ಕೊಟ್ಟಿದ್ದಾರೆ? ಯಾವ ಬ್ಯಾಂಕ್‌ಗೆ, ಎಷ್ಟು ಹಣ ಬಂದು ತಲುಪಿದೆ? ರೈತರು ಮತ್ತೆ ಮರು ಸಾಲ ಎತ್ತುವುದು ಹೇಗೆ? ಅವನು ಬದುಕುವುದು ಹೇಗೆ? ಬೇಸಾಯ ಮಾಡುವುದು ಹೇಗೆ?

ಮಾನ್ಯ ಸದಸ್ಯರಾದ ಶ್ರೀ ರವಿಯವರು ನಿನ್ನೆಯ ದಿವಸ ಈ ಸದನದಲ್ಲಿ ಮಾತನಾಡುತ್ತಾ, ಹಾಲಿನ ವಿಚಾರದಲ್ಲಿ ನಮ್ಮ ಸರ್ಕಾರ ಹಾಲಿನ ಬೆಲೆಯನ್ನು ಬಹಳ ಚೆನ್ನಾಗಿ ಕೊಡುತ್ತಿದ್ದೇವೆಂದು, ಆ ಬೆಲೆ ಇವತ್ತಿನ ದಿವಸ ಎಲ್ಲರೂ ಮೆಚ್ಚುವಂತಹ ರೀತಿಯಲ್ಲಿದೆ ಎನ್ನುವಂತಹ ಮಾತನ್ನು ಹೇಳಿದರು. ಜೊತೆಗೆ ನಾವು ಪ್ರತಿ ಲೀಟರ್ ಹಾಲಿಗೆ 5 ರೂಪಾಯಿ ಪ್ರೋತ್ಸಾಹಧನವನ್ನು ಸೇರಿಸಿ ಕೊಡುತ್ತಿದ್ದೇವೆಂದು ಹೇಳಿದರು. ತಮಿಳುನಾಡಿನಲ್ಲಿ ಒಂದು ಲೀಟರ್ ಹಾಲಿಗೆ 24.50 ರೂಪಾಯಿ, ಆಂಧ್ರಪ್ರದೇಶದಲ್ಲಿ 25.75 ರೂಪಾಯಿ ರೈತನಿಗೆ ತಲುಪುತ್ತಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಆದರೆ, ಕರ್ನಾಟಕದಲ್ಲಿ ಕೇವಲ 21 ರೂಪಾಯಿ ಕೊಡುತ್ತಿದ್ದಾರೆ. ಇದರ ಜೊತೆಗೆ ಸರ್ಕಾರ 5 ರೂಪಾಯಿ ಪ್ರೋತ್ಸಾಹಧನ ಕೊಡುತ್ತಿದ್ದಾರೆ. ಆ ಪ್ರೋತ್ಸಾಹಧನ ತಲುಪಿದಾಗಲೇ ತಲುಪಿತು. ಈ ಬಗ್ಗೆ ನಾನು ನಿನ್ನೆಯ ದಿವಸ ಫೋನ್ ಮಾಡಿ ಕೇಳಿದೆ, ಅದಕ್ಕೆ ಅವರು ಕಳೆದ 5 ತಿಂಗಳಿನಿಂದ ಬಂದಿಲ್ಲವೆಂದು ಉತ್ತರ ನೀಡಿದ್ದಾರೆ. ಆದರೆ, ಸರ್ಕಾರದವರು ಆನ್‌ಲೈನ್‌ನಿಂದ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಹಣ ಹೋಗುತ್ತದೆ ಎಂದು ಹೇಳಿದ್ದಾರೆ. ಕಳೆದ 5 ತಿಂಗಳಿನಿಂದ ಇನ್ನೂ ಪೇಮೆಂಟ್ ಆಗಿರುವುದಿಲ್ಲ. ಮಂಗಳೂರಿನಲ್ಲಿ ಮಾತ್ರ ಸರ್ಕಾರ ಒಂದು ಲೀಟರ್ ಹಾಲಿಗೆ 26 ರೂಪಾಯಿ ನೀಡುತ್ತದೆ.

ಇವತ್ತಿನ ದಿವಸ ಕಚ್ಚಾ ವಸ್ತುಗಳ ಬೆಲೆ, ಫೀಡ್ಸ್ ಬೆಲೆ ಬಹಳ ಹೆಚ್ಚಾಗಿದೆ. ಒಂದು ಟನ್ ಫೀಡ್‌ಗೆ 17,890 ರೂಪಾಯಿ, 50 ಕೆ.ಜಿ. ಬ್ಯಾಗ್‌ಗೆ 790 ರೂಪಾಯಿ ಬೆಲೆ ಇದೆ. ತಮಿಳುನಾಡಿನಲ್ಲಿ ಏಕರೂಪದ ದರ ನಿಗದಿ ಮಾಡಿದ್ದಾರೆ. ಆದರೆ, ಆ ಫೆಡರೇಷನ್‌ಗಳು ನಮ್ಮ ರಾಜ್ಯದಲ್ಲಿ ಇಲ್ಲ. ಹೌದು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುರಿಯನ್, ಗುಜರಾತ್ ಬಿಟ್ಟರೆ ಆ ನಂತರ ಶ್ರೀ ಹೆಚ್.ಡಿ. ರೇವಣ್ಣನವರ ನೇತೃತ್ವದಲ್ಲಿ ದೊಡ್ಡ ಕ್ಷೀರ ಕ್ರಾಂತಿ ಆಗಿದ್ದು ಕರ್ನಾಟಕದಲ್ಲಿಯೇ. ಆದರೆ, ಅದರ ಮುಂದುವರೆದ ಪರಿಣಾಮ ಏನಾಯಿತು? ರೈತರಿಗೆ ಸರಿಯಾದ ಬೆಲೆಯನ್ನು ಕೊಡುವ ಬದಲಾಗಿ ಎಲ್ಲಾ ಫೆಡರೇಷನ್‌ಗಳು ಬೆಲೆಗಳನ್ನು ಇಳಿಸುತ್ತಿವೆ. ಸರ್ಕಾರ ಕೊಡುವಂತಹ ಪ್ರೋತ್ಸಾಹಧನದಲ್ಲಿ ರೈತರು ಏನೋ ಮ್ಯಾನೇಜ್ ಮಾಡುವುದಕ್ಕೆ ಹೋಗುತ್ತಿದ್ದಾರೆ. ಉದಾಹರಣೆಗೆ, ಕಬ್ಬಿನ ಬೆಲೆ ನೋಡಿ. ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಗುತ್ತಿದೆ. ಮೊಬೈಲ್ ರೇಟ್, ಡೀಸೆಲ್ ರೇಟ್, ಪೆಟ್ರೋಲ್ ರೇಟ್, ಮಾರ್ಕೆಟ್ಟುಗಳಲ್ಲಿ ಯಾವ ಪದಾರ್ಥಗಳನ್ನು ತೆಗೆದುಕೊಂಡರೂ ಸಹ ಎಲ್ಲದರ ದರವೂ ಹೆಚ್ಚಾಗುತ್ತಿದೆ. ರೈತರ ಉತ್ಪನ್ನಗಳನ್ನು ಬಿಟ್ಟು ಉಳಿದೆಲ್ಲ ವಸ್ತುಗಳ ದರ ಆಕಾಶಕ್ಕೆ ಹೋಗುತ್ತಿದೆ. ನಮ್ಮ ವೇತನ ಹಾಗೂ ನೌಕರರ ವೇತನ ಸೇರಿದ ಹಾಗೆ. ಆದರೆ, ರೈತನ ಸಕ್ಕರೆ ಬೆಲೆ, ಭತ್ತದ ಬೆಲೆ, ರಾಗಿ ಬೆಲೆ, ಅವನು ಉತ್ಪತ್ತಿ ಮಾಡುವ ತರಕಾರಿಗಳ ಬೆಲೆ ಇವತ್ತಿನ ದಿವಸ ಎಲ್ಲಿ ನಿಂತಿದೆ? ಅದು, ಇನ್ನು ಕೆಳಹಂತಕ್ಕೆ ಕುಸಿಯುತ್ತಿದೆ.  ರೈತ ಹಾಕಿದ ಬೆಳೆಗೆ ಖಾತ್ರಿಯಿಲ್ಲ. ಅವನು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಇಲ್ಲ, ಅವನ ಉತ್ಪನ್ನಗಳನ್ನು ಮಾರಾಟ ಮಾಡಲು ಸೂಕ್ತ ಮಾರುಕಟ್ಟೆ ಇಲ್ಲ. ಅವನ ಬೆಳೆ ರಕ್ಷಣೆ ಮಾಡುವುದಕ್ಕೆ ವ್ಯವಸ್ಥೆ ಇಲ್ಲ. ಅಲ್ಲದೇ ಅದರಲ್ಲಿ ಲಾಭದಾಯಕ ಬೆಲೆ ಮೊದಲೇ ಇಲ್ಲ. ಶ್ರೀ ಸ್ವಾಮಿನಾಥನ್ ವರದಿ ಜಾರಿಗೆ ಕೊಡುವಂತಹ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಆಗಲಿಲ್ಲ. ಇಂತಹ ಪರಿಸ್ಥಿತಿ ಇರುವಾಗ ರೈತ ಬದುಕು ಎಂದು ಹೇಳಿದರೆ ಹೇಗೆ ಬದುಕುತ್ತಾನೆ? ಕೃಷಿ ತನ್ನೆಲ್ಲಾ ಆಕರ್ಷಣೆಗಳನ್ನು ಇವತ್ತಿನ ದಿವಸ ಕಳೆದುಕೊಂಡಿದೆ. ಅದು ಒಂದು ಲಾಭದಾಯಕ ಹುದ್ದೆಯಾಗಿ ಉಳಿದಿಲ್ಲ. ಉದಾಹರಣೆಗೆ, ನಮ್ಮ ಮದ್ದೂರಿನಲ್ಲಿ ಮಗ ಅಪ್ಪನ ಹತ್ತಿರ ಗಲಾಟೆ ಮಾಡಿಕೊಂಡು ಯಜಮಾನಿಕೆ ತೆಗೆದುಕೊಂಡ. ಅಪ್ಪ ಕೊಡುವುದಿಲ್ಲ, ಆದರೆ ಮಗ ಬಿಡುವುದಿಲ್ಲ. ಅಪ್ಪ ಕಷ್ಟಪಟ್ಟು ಬೇಸಾಯ ಮಾಡುತ್ತಿದ್ದ, ಅವನು ಮಗನಿಗೆ "ನಿನ್ನ ಕೈಯಲ್ಲಿ ಆಗುವುದಿಲ್ಲ" ಎಂದು ಹೇಳುತ್ತಿದ್ದ. ಕೊನೆಗೆ ಮಗ ಬೇಸಾಯ ಮಾಡಿ ತೋರಿಸಿದ. ಬಹಳ ಚೆನ್ನಾಗಿ ಬೇಸಾಯ ಮಾಡಿದ. ದೊಡ್ಡ ಮೆದೆ ಹಾಕಿದ. ಭತ್ತ ತೆಗೆದುಕೊಂಡು ಕಣಜದಲ್ಲಿ ತುಂಬಿದ. ಅವನು ತನ್ನ ಅಪ್ಪನನ್ನು ಕರೆದು, ಹುಲ್ಲು ಮೆದೆ ಮತ್ತು ಕಣಜದಲ್ಲಿರುವ ಭತ್ತವನ್ನು ತೋರಿಸಿ, ಬಹಳ ಚೆನ್ನಾಗಿ ನಾನು ಬೆಳೆಯನ್ನು ಬೆಳೆದಿದ್ದೇನೆ ಆದರೆ ನೀನು ನನಗೆ ಯಜಮಾನಿಕೆ ಕೊಡಲಿಲ್ಲವೆಂದು ಹೇಳುತ್ತಾನೆ. ಅಪ್ಪ ತನ್ನ ಮಗನನ್ನು ಕರೆದು, ನೀನು ಇಲ್ಲಿ ಬೆಳೆದಿರುವ ಭತ್ತ ಇದೆಯಲ್ಲ ಅದು ಬೆಂಗಳೂರಿನ ಯಾವುದೋ ಒಂದು ಮೂಲೆಗೆ ಒಂದಿಷ್ಟು ಜನ ಊಟ ಮಾಡುವುದಕ್ಕೆ ಸಾಕಾಗುವುದಿಲ್ಲ ಎಂದು ಹೇಳಿದನು. ಅಂದರೆ, ರೈತ ನಾವು ಬೆಳೆಯುವ ಭತ್ತ ನಾವು ಊಟ ಮಾಡುವುದಕ್ಕಲ್ಲ ಅದು ಜನರಿಗೆ ಎನ್ನುವಂತಹ ಭಾವನೆ ರೈತನಲ್ಲಿದೆ. ಆದರೆ, ರೈತನನ್ನು ಉಳಿಸಿಕೊಳ್ಳುವ ಪ್ರಯತ್ನ ಎಲ್ಲಿದೆ? ಸಣ್ಣ ಸಾಲ ಮನ್ನಾ ಅವನಿಗೆ ಪರಿಹಾರ ಅಲ್ಲ. ಆ ನಂತರದ ಕೃಷಿ ಬದುಕಿಗೆ ಹೊಸ ಆಯಾಮವನ್ನು ತೆಗೆದುಕೊಡಬೇಕಲ್ಲವೇ? ಅವನು ಖುಷಿಯಿಂದ ಕೃಷಿಯನ್ನು ಮಾಡುವ ಹಾಗೆ ನೋಡಿಕೊಳ್ಳಬೇಕಲ್ಲವೇ? ಈಗಾಗಲೇ ಎಲ್ಲಾ ಹಳ್ಳಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೃದ್ಧಾಶ್ರಮಗಳಾಗಿ ಬೆಳೆದು ನಿಂತಿದ್ದಾವೆ. ಬೇಸಾಯವನ್ನು ಮಾಡುವಂತಹ ದಿಸೆಯಲ್ಲಿ ಯಾವ ಯುವಕನಿಗೂ ಆಕರ್ಷಣೆ ಉಳಿದಿರುವುದಿಲ್ಲ. ಇನ್ನು ಮುಂದೆ ಬೇಸಾಯ ಮಾಡುವವರು ಯಾರು? ನಮಗೆ ಆಹಾರ ಉತ್ಪತ್ತಿ ಮಾಡಿಕೊಡುವವರು ಯಾರು? ಹಳ್ಳಿಗಳನ್ನು ಉಳಿಸಿಕೊಳ್ಳುವವರು ಯಾರು? ಕೃಷಿ ಬದುಕನ್ನು ಉಳಿಸಿಕೊಳ್ಳುವವರು ಯಾರು? ಅದಕ್ಕೆ ಸರ್ಕಾರ ಕೊಟ್ಟಂತಹ ಕಾರ್ಯಕ್ರಮಗಳೇನು? ಸಾಲ ಮನ್ನಾ ಮಾಡಿದೆ, ಜೊತೆಗೆ ನಾಲ್ಕಾರು ಜನಪ್ರಿಯ ಕಾರ್ಯಕ್ರಮಗಳಿವೆ. ಆದರೆ, ಒಂದು ನಾಗರಿಕ ಸರ್ಕಾರದ ಜವಾಬ್ದಾರಿ ಅದು ಅಲ್ಲ. ಈ ರಾಜ್ಯದ ರಚನಾತ್ಮಕ ಕಾರ್ಯಕ್ರಮಗಳು ಬೇರೆ. ಈ ಜನರಿಗೆ ಬಾಳು, ಬದುಕು, ಭವಿಷ್ಯ ಕೊಡುವಂತಹ ವಿಚಾರಗಳೇ ಬೇರೆ. ಆ ದಿಸೆಯಲ್ಲಿ ಸರ್ಕಾರದ ಕಾರ್ಯಕ್ರಮಗಳೇನು? ನೀರಾವರಿ ವಿಚಾರದಲ್ಲಿ ಸರ್ಕಾರದ ಕಾರ್ಯಕ್ರಮಗಳೇನು? ಕೃಷ್ಣಾ 'ಬಿ' ಸ್ಕೀಮ್‌ನಲ್ಲಿ 177 ಟಿಎಂಸಿ ನೀರು ಉಳಿಸಿಕೊಳ್ಳಬೇಕು ಮತ್ತು ಅದನ್ನು ಬಳಕೆ ಮಾಡಿಕೊಳ್ಳಬೇಕು. ಇದರಲ್ಲಿ ಸರ್ಕಾರದ ದಾಪುಗಾಲು ಅಥವಾ ಪ್ರಗತಿ ಏನು? ಅದನ್ನು ತಿಳಿಸಲಿ. ಕೃಷ್ಣಾ 'ಬಿ' ಸ್ಕೀಮ್‌ನ 177 ಟಿಎಂಸಿ ನೀರನ್ನು ಬಳಸಿಕೊಳ್ಳುವಂತಹ ವಿಚಾರದಲ್ಲಿ ಸರ್ಕಾರದ ಕಾಲಬದ್ಧ ಕಾರ್ಯಕ್ರಮಗಳೇನು? ಕಾವೇರಿ ನೀರಿಗೆ ಮತ್ತು ಮಹದಾಯಿ ನೀರಿಗೆ ಪರ್ಯಾಯ ವ್ಯವಸ್ಥೆ ಏನು?

ಇವತ್ತಿನ ದಿವಸ ನಮ್ಮ ಕಡೆ 38-40 ಏತ ನೀರಾವರಿಗಳಿದ್ದು, ಅವೆಲ್ಲವೂ ಕೆಟ್ಟು ನಿಂತಿವೆ. ಅವುಗಳನ್ನು ನೋಡುವವರು ಕೇಳುವವರು ಒಬ್ಬರೂ ಇಲ್ಲ. ಒಟ್ಟಾರೆಯಾಗಿ ಇವತ್ತಿನ ದಿವಸ ರೈತನ ಸ್ಥಿತಿ, ಈ ನಾಡಿನ ಜನರ ಸ್ಥಿತಿ ಬಹಳ ಶೋಚನೀಯವಾಗಿದೆ. ನಾನು ಈ ಬಗ್ಗೆ ಇಂದು ಬೆಳಗ್ಗೆ ಹೇಳುತ್ತಿದ್ದೆನು. ಜನಸಂಖ್ಯೆ ಹೆಚ್ಚಾಗಿದೆ, ವಿಸ್ತಾರವಾಗಿದೆ, ಜವಾಬ್ದಾರಿ ಹೆಚ್ಚಾಗಿದೆ. ನಮ್ಮಲ್ಲಿ 2,52,000 ಹುದ್ದೆಗಳು ಖಾಲಿ ಇವೆ. ಅಂದರೆ, ಶೇಕಡ 33 ರಷ್ಟು ಭಾಗ ಖಾಲಿ ಹುದ್ದೆಗಳಿವೆ. ಹುದ್ದೆಗಳನ್ನು ಹೆಚ್ಚು ಮಾಡುವುದರ ಜೊತೆಗೆ ಸರ್ಕಾರ ಅದನ್ನು ತುಂಬಬೇಕು. ಆದರೆ, ಸರ್ಕಾರ ಅದನ್ನು ಮಾಡಿರುವುದಿಲ್ಲ.

ಇನ್ನು ಶಿಕ್ಷಣ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ನಮ್ಮ ಸಚಿವರು ಈ ಸದನದಲ್ಲಿ ಹಾಜರಿದ್ದಾರೆ. ಈ ಹಿಂದೆ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಶೇಕಡ 85-90 ರಷ್ಟು ಅನುದಾನ ವಿಸ್ತರಣೆ ಮಾಡಿತ್ತು. ನಂತರ 12 ವರ್ಷಗಳು ಕಳೆದಿವೆ. ಇನ್ನೂ ನೂರಾರು ಶಾಲಾ-ಕಾಲೇಜುಗಳಿಗೆ ಈ ಸರ್ಕಾರದಿಂದ ಅನುದಾನ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಅವರ ಜೊತೆಗೆ ಕೆಲವರು ಅನುದಾನ ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಅದರಲ್ಲಿ ಶೇಕಡ 80 ಭಾಗ ಅನುದಾನ ಪಡೆಯುವ, ಸಂಬಳ ಪಡೆಯುವ ಸ್ಥಿತಿಯಲ್ಲಿಲ್ಲ. ಈ ಬಗ್ಗೆ ಶಾಲಾ ಆಡಳಿತ ಮಂಡಳಿಯವರನ್ನು ಕೇಳಿದರೆ, "ನಿಮಗೆ ಯಾರು ಕೊಡುತ್ತಾರೆ, ಹೋಗಿ" ಎಂದು ಹೇಳುತ್ತಾರೆ. ಅದನ್ನು ಇಲ್ಲಿಗೆ ಬಂದು ಕೇಳಿದರೆ ಇವರು, "ತಡೆಯಿರಿ, ಜಿಲ್ಲಾವಾರು ಪರೀಕ್ಷಾ ಫಲಿತಾಂಶ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಆ ಶಿಕ್ಷಕರುಗಳಿಗೆ ಶಾಲಾ ಆಡಳಿತ ಮಂಡಳಿಯಿಂದಲೂ ವೇತನವಿಲ್ಲ, ಈ ಕಡೆ ಸರ್ಕಾರದಿಂದಲೂ ವೇತನ ನೀಡುವುದಿಲ್ಲ. ಇದರಿಂದಾಗಿ, ಶಿಕ್ಷಕರುಗಳು ಸಾಲ ಮಾಡಿ ಅಥವಾ ತನ್ನ ಹೆಂಡತಿಯ ಒಡವೆಗಳನ್ನು ಅಡವಿಟ್ಟು ಪಾಠ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಯಾರಿಗೆ ಹೇಳುವುದು? ಶಿಕ್ಷಕರ ನೇಮಕಾತಿಯಾಗಿರುವುದಿಲ್ಲ. 2013 ರಲ್ಲಿ ಈ ಬಗ್ಗೆ ಭಾಷಣ ಮಾಡಿದ್ದಾರೆ. ವಿಶ್ವವಿದ್ಯಾಲಯ, ಪದವಿ ಕಾಲೇಜುಗಳು, ಪ್ರಾಥಮಿಕ ಶಾಲೆಗಳು...

ಶ್ರೀ ತನ್ವೀರ್ ಸೇಠ್:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

ಶ್ರೀ ಕೆ.ಟಿ. ಶ್ರೀಕಂಠೇಗೌಡ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯಮಾಡಿ ನಾನು ಮಾತನಾಡಿದ ನಂತರ ಮಾತನಾಡಲಿ. ಖಾಲಿ ಇರುವ ಎಲ್ಲಾ ಶಿಕ್ಷಕರ ಹುದ್ದೆಗಳನ್ನು ತುಂಬುತ್ತೇವೆಂದು ಹೇಳುತ್ತಾರೆ. ಎಲ್ಲಿ ತುಂಬಿದ್ದಾರೆ? ಎಲ್ಲಾ ನಿರೋದ್ಯೋಗಿ ಯುವಕರಿಗೆ ಕೆಲಸ ಕೊಡುತ್ತೇನೆಂದು ಶ್ರೀ ನರೇಂದ್ರ ಮೋದಿಯವರು ಮತ್ತು ರಾಜ್ಯ ಸರ್ಕಾರದವರು ಹೇಳಿದ್ದಾರೆ. ಆದರೆ, ಕೆಲಸವನ್ನು ಶ್ರೀ ನರೇಂದ್ರ ಮೋದಿಯವರು ಕೊಟ್ಟಿರುವುದಿಲ್ಲ, ರಾಜ್ಯ ಸರ್ಕಾರದವರೂ ಕೊಟ್ಟಿರುವುದಿಲ್ಲ. ಶ್ರೀ ನರೇಂದ್ರ ಮೋದಿಯವರು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಆ ಉದ್ಯೋಗ ಸೃಷ್ಟಿಯಾಗಿದೆಯೇ? ಇನ್ನು ಕಡಿತ ಮಾಡುತ್ತಿದ್ದಾರೆ. ಯಾವ ಹುದ್ದೆಗಳನ್ನು ತುಂಬಿರುವುದಿಲ್ಲ. 1995 ರಲ್ಲಿ ಅವತ್ತು ನಾವು ಅನುದಾನಕ್ಕೆ ಕೊಟ್ಟಿದ್ದು ಅಷ್ಟೇ, ಅದರ ವಿಸ್ತರಣೆಯ ಪ್ರಯತ್ನ ಈ ಸರ್ಕಾರದಿಂದ ಆಗಿರುವುದಿಲ್ಲ. ನಾವು ಶಾಸಕರು, 10 ದಿನ ಆಹೋರಾತ್ರಿ ಧರಣಿ ಮಾಡುತ್ತೇವೆ, ಸುಮಾರು 7 ತಾಸು ಮಾನ್ಯ ಮುಖ್ಯಮಂತ್ರಿಗಳು ಸಭೆ ನಡೆಸಿದರು. ಆದರೆ, ಸಮಸ್ಯೆಗಳಿಗೆ ಪರಿಹಾರ ಸಿಕ್ಕಿರುವುದಿಲ್ಲ.

ಇನ್ನು ಸ್ಥಳೀಯ ಸಂಸ್ಥೆಗಳ ಪರಿಸ್ಥಿತಿ ಯಾರಿಗೆ ಹೇಳಬೇಕು? ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳ ಕತ್ತು ಹಿಸುಕುವಂತಹ ಒಂದು ದೊಡ್ಡ ಪ್ರಯತ್ನ ಇಂದು ನಡೆಯುತ್ತಿದೆ. ಆ ಪಂಚಾಯತಿಗಳಲ್ಲಿ ನೌಕರರಿರುವುದಿಲ್ಲ. ಒಬ್ಬ ಪಿಡಿಓ ಗೆ 4-5 ಪಂಚಾಯತಿ ಇನ್‌ಚಾರ್ಜ್ ಇರುತ್ತಾನೆ. ಅವನು ಒಂದು ದಿನ ಬೆಳಗ್ಗೆ ಒಂದು ಪಂಚಾಯತಿ, ಮಧ್ಯಾಹ್ನ ಮತ್ತೊಂದು ಪಂಚಾಯತಿ, ಸಂಜೆ ಮತ್ತೊಂದು ಪಂಚಾಯತಿಯಲ್ಲಿ ಇನ್‌ಚಾರ್ಜ್ ಇರುತ್ತಾನೆ. ಫೋನ್ ಮಾಡಿ ಕೇಳಿದರೆ ನಾನು ಅಲ್ಲಿದ್ದೇನೆಂದು, ಇಲ್ಲಿದ್ದೇನೆಂದು ಸುಳ್ಳು ಹೇಳುತ್ತಾನೆ. ಈ ರೀತಿಯಾದರೆ ಕಾರ್ಯಕ್ರಮಗಳ ಅನುಷ್ಠಾನ ಹೇಗೆ? ಅನುದಾನ ಎಲ್ಲಿ ಕೊಡುತ್ತಿದೆ? ನೌಕರರ ನೇಮಕಾತಿ ಎಲ್ಲಿ ಆಗುತ್ತಿದೆ? ಸ್ಥಳೀಯ ಸಂಸ್ಥೆಗಳ ಮೂಲಕ ರಾಮರಾಜ್ಯ ಕಾಣುವ ಕನಸು ಎಲ್ಲದೆ? ಇವತ್ತಿನ ದಿವಸದ ಸಮಸ್ಯೆಗಳನ್ನು ಹೇಳುತ್ತಾ ಹೋದರೆ ಅವು ಬೆಟ್ಟದಷ್ಟು ಇವೆ. ಆ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವಂತಹ ದಿಸೆಯಲ್ಲಿ ನಾನು ಮೊನ್ನೆಯ ದಿವಸ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿದೆವು. ಗ್ರಾಮ ಪಂಚಾಯತಿ ಸದಸ್ಯರಿಗೆ ಗೌರವ ಕೊಡಿ, ಅಧ್ಯಕ್ಷರಿಗೆ ಕಾರ್ಯಕ್ರಮಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿ, ಆ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಂತಹ ಸ್ಥಳೀಯ ಯೋಜನೆಗಳ ಮೇಲೆ ನಮ್ಮ ಬಜೆಟ್ ಆಗಬೇಕು, ನಮ್ಮ ಕಾರ್ಯಕ್ರಮಗಳ ರೂಪುರೇಷೆ ಆಗಬೇಕು. ಆದರೆ, ಅದು ಎಲ್ಲಿ ಆಗುತ್ತಿದೆ? ಆಯಾ ಸಮಸ್ಯೆಗಳನ್ನು ಸ್ಥಳೀಯರಿಂದಲೇ ಸ್ಥಳೀಯ ಸಂಸ್ಥೆಗಳು ಪರಿಹಾರ ಕೊಡಬೇಕು. ಅವರೇ ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಅವರಿಂದ ಎಲ್ಲವನ್ನೂ ಪಡೆದು ಇಲ್ಲಿಂದ ಕೊಡುವಂತಹ ಕಾರ್ಯಕ್ರಮಗಳ ಯೋಚನೆ ನಮ್ಮ ಮುಂದೆ ಎಲ್ಲಿದೆ? ಹಾಗಾಗಿ, ಎಲ್ಲಿಯೋ ಒಂದು ಕಡೆ ಘನತೆವೆತ್ತ ರಾಜ್ಯಪಾಲರ ಮೂಲಕ ಸರ್ಕಾರ ಬೆನ್ನು ತಟ್ಟಿಸಿಕೊಂಡಿದೆ. ಆದರೂ ಚಿಂತೆಯಿಲ್ಲ. ಆದರೆ, ಒಂದು ಸಮಾಧಾನವೆಂದರೆ, ಶ್ರೀ ರವಿಯವರು ಮುಂದಿನ ಬಾರಿ ನಮ್ಮ ಸರ್ಕಾರವೇ ಅಧಿಕಾರಕ್ಕೆ ಬರುತ್ತೇವೆಂದು ಹೇಳಿದರು. ಆದರೆ, ಈ ಮಾತನ್ನು ಘನತೆವೆತ್ತ ರಾಜ್ಯಪಾಲರ ಮೂಲಕ ಅವರು ಹೇಳಿಸಿರುವುದಿಲ್ಲ. ಇದರಿಂದಾಗಿ, ಈ ಸರ್ಕಾರ ಮುಂದೆ ಅಧಿಕಾರಕ್ಕೆ ಬರುವುದಿಲ್ಲವೆಂದು ಅವರಿಗೆ ಖಾತ್ರಿಯಾಗಿದೆಯೆಂಬ ಅನುಮಾನ ನನ್ನನ್ನು ಕಾಡುತ್ತಿದೆ. ಈ ನಾಡಿನ ಜನರ ಜ್ವಲಂತ ಸಮಸ್ಯೆಗಳ ಬಗೆಗೆ, ಅದು ನೀರಾವರಿ, ಶಿಕ್ಷಣ, ಸಾಮಾಜಿಕ ಬದ್ಧತೆ ಅಥವಾ ಅಭಿವೃದ್ಧಿ ಬಗ್ಗೆ ಇರಲಿ, ಇವೆಲ್ಲದರ ಬಗ್ಗೆ ಇವತ್ತಿನ ದಿವಸ ನಾವು ನೀವೆಲ್ಲರೂ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ.

(ಮುಂದುವರೆದಿದೆ...)

(098)/08.02.2018/5.30/ಎಸ್‌ಕೆ-ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**:- ಮಾನ್ಯ ಸಭಾಪತಿಯವರೇ, ದೀಪಕ್‌ರಾವ್ ಕೊಲೆಯಾದಾಗ ಎಷ್ಟು ನೋವು ಆಯಿತೋ, ಬಷೀರ್ ಕೊಲೆಯಾದಾಗ ಕೂಡ ಅಷ್ಟೇ ನೋವಾಯಿತು. ವೈಯಕ್ತಿಕವಾಗಿ ನನ್ನ ದೃಷ್ಟಿ ಒಂದೇ. ಅವೆರಡು ಕೊಲೆಗಳನ್ನು ನಾನು ವೈಭವೀಕರಿಸುತ್ತಿಲ್ಲ. ಆದರೆ ಪರಿಸ್ಥಿತಿಗಳು ಯಾವ ರೀತಿ ಇದೆ ಎಂದರೆ, ಪೋಲೀಸ್ ಇಲಾಖೆಯಲ್ಲಿ ಇಂತಹ ಕೇಸ್‌ಗಳನ್ನು ದಾಖಲಿಸುತ್ತಾರೆ. ಮಾನ್ಯ ಶಾಸಕರಾದ ಸುನೀಲ್ ಕುಮಾರ್‌ರವರು ಒಂದು ಸಭೆಯಲ್ಲಿ ಭಾಷಣ ಮಾಡುತ್ತಾರೆ. ಈಗ ನಾನು ಹೇಳುತ್ತಿರುವ ವಿಚಾರಗಳಿಗೆ ಮಾನ್ಯ ಐವನ್ ಡಿ'ಸೋಜಾರವರು ಉತ್ತರ ಕೊಡುವುದರಲ್ಲಿ ಬಹಳ ಬುದ್ಧಿವಂತರು. ಮಾನ್ಯ ಸುನೀಲ್ ಕುಮಾರ್‌ರವರು ಭಾಷಣ ಮಾಡುವಾಗ, ಅವರ ಮೇಲೆ ಕೇಸ್ ದಾಖಲಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಏನು ಭಾಷಣ ಮಾಡಿದರು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಬಂಟ್ವಾಳದಲ್ಲಿ ಅವರು ಏನು ಭಾಷಣ ಮಾಡಿದರು ನೀವೇ ಹೇಳಿ.

**ಶ್ರೀ ಐವನ್ ಡಿ'ಸೋಜಾ**:- ನಿಮ್ಮ ಬಾಯಿಯಲ್ಲಿ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಉಸ್ತುವಾರಿ ಮಂತ್ರಿಯಾದ ರಮನಾಥ್ ರೈರವರು ಒಂದು ಸಾರ್ವಜನಿಕ ಭಾಷಣದಲ್ಲಿ 'ಅಲ್ಲಾಹುನ ಅನುಗ್ರಹದಿಂದ ಆರು ಬಾರಿ ಶಾಸಕನಾದೆ' ಎಂದು ಹೇಳಿದರು. ನಾನು ತಪ್ಪು ಎಂದು ಹೇಳಲಿಲ್ಲ, ಅದು ಸರಿಯಿದೆ ಎಂದು ಹೇಳಿದೆ. ಅವರಿಗೆ ಅಲ್ಲಾಹುವಿನ ಆಶೀರ್ವಾದ ಮಾಡಿದ್ದಾರೆ ಎಂದು ಹೇಳಿದೆ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಮಗೆ ಸಮಯ ನಿಗದಿ ಮಾಡಿದ್ದಾರೆ. ನೀವು ನಂತರ ಮಾತನಾಡಿ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ನಾನೂ ಸಹ ಭಾಷಣದಲ್ಲಿ ಗಣೇಶನ ಆಶೀರ್ವಾದದಿಂದ ಸುಮಾರು ನಾಲ್ಕು ಲಕ್ಷ ಚಿಲ್ಲರೆ ಮತಗಳನ್ನು ಪಡೆದಿದ್ದೇನೆಂದು ಹೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸರಿ ಇದೆ.

**ಶ್ರೀ ರಿಜ್ವಾನ್ ಅರ್ಷದ್:-** ಹಾಗಾದರೆ ಗಣೇಶನ ಆಶೀರ್ವಾದ ಪಡೆದುಕೊಳ್ಳಲಿಲ್ಲವೆಂದರೆ, ಅಲ್ಲಾಹುವಿನ ಆಶೀರ್ವಾದ ಬೇಡ ಎಂದ ಹಾಗೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನೀವು ಅವರಿಗೆ ಅವಕಾಶ ಕೊಡುತ್ತೀರಾ?

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ಕುಮಾರ್ ಮಾತನಾಡಿದ್ದಕ್ಕೆ, ನಮ್ಮ ಹತ್ತಿರ ಮಾತನಾಡುವುದಕ್ಕೆ ವ್ಯತ್ಯಾಸವಿರಲಿ. ನೀವು ಬಹಳ ಜಾಣತನದಿಂದ ಮಾತನಾಡುತ್ತಿದ್ದೀರಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದನ್ನೇ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಿಜ್ವಾನ್ ಅರ್ಷದ್:–** ನೀವೇ ಇಲ್ಲಿ ಬಂದು ಮಾತನಾಡುವುದು. ನೀವು ಅಲ್ಲಿ ಹೋಗಿ ಬೆಂಕಿ ಹಚ್ಚುತ್ತೀರಿ. ನೀವು ಸದನದಲ್ಲಿ ಬಂದು ಏನು ಮಾತನಾಡುತ್ತೀದ್ದಾರೆ. Law & Order ಸರಿಯಿಲ್ಲ ಎಂದು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ನಾವು ಬೆಂಕಿ ಹಚ್ಚುತ್ತೀವೋ ಅದು ಗೊತ್ತಿಲ್ಲ.

**ಶ್ರೀ ರಿಜ್ವಾನ್ ಅರ್ಷದ್:–** ನೀವು ಕರಾವಳಿಯಲ್ಲಿ ಬೆಂಕಿ ಹಚ್ಚುತ್ತಿರುವವರು ನೀವು. ನಿಮ್ಮ ಜೊತೆಗೆ ಬೇರೆ ಅಲ್ಪ ಸಂಖ್ಯಾತ extremist organizations. ಸದನದಲ್ಲಿ ಬಂದು Law & Order ಸರಿಯಿಲ್ಲ ಎಂದು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇಲ್ಲಿ ಯಾರು ಬೆಂಕಿ ಹಚ್ಚುತ್ತಾರೆಂಬ ಪ್ರಶ್ನೆಯಲ್ಲ. ಪೆಟ್ರೋಲ್ ಹಾಕುವವರು ಮಾತ್ರ ನೀವೇ ಹಾಕುವುದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಹೇಳುತ್ತಿರುವುದನ್ನು ಕೇಳಿ.

**ಶ್ರೀ ರಿಜ್ವಾನ್ ಅರ್ಷದ್:–** ಗಲಾಟೆಯನ್ನು ಮಾಡಿಸುವರು ನೀವೇ. ನೀವು ಅಲ್ಲಾಹುವಿನ ಮತ್ತು ರಾಮನ ಹೆಸರು ಹೇಳಿದ್ದೀರಲ್ಲ. ರಾಜಕಾರಣಕ್ಕೋಸ್ಕರ ಭಗವಂತನ ಸಮೇತ ಬಿಟ್ಟಿಲ್ಲವಲ್ಲ. ಭಗವಂತನ ಹೆಸರು ಹೇಳಿ ಮನುಷ್ಯರಿಗೆ ಜಗಳ ಆಡಿಸುತ್ತಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಬಹಳ ಬುದ್ಧಿವಂತರು ಕೇಳಿ.

**ವೈಸ್ ಛೇರ್ಮನ್:–** ಮಾನ್ಯ ರಿಜ್ವಾನ್ ಅರ್ಷದ್‌ರವರೇ,

**ಶ್ರೀ ರಿಜ್ವಾನ್ ಅರ್ಷದ್:–** ನಿಮಗೆ ಬಹಳ ಬುದ್ಧಿ ಇರೋದು. ನಮಗೇನು ಅರ್ಥವಾಗುವುದಿಲ್ಲವೆ?

**ವೈಸ್ ಛೇರ್ಮನ್:–** ಮಾನ್ಯ ರಿಜ್ವಾನ್ ಅರ್ಷದ್‌ರವರೇ, ಕುಳಿತುಕೊಳ್ಳಿ. ಅವರು ಹೇಳಲಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಒಂದು ಟಿಪ್ಪಣಿಯನ್ನು ಅವರಿಗೆ ಕೊಡಿ. ಅವರು ಉತ್ತರದಲ್ಲಿ ಹೇಳುತ್ತಾರೆ. ಆಗ ಸರಿ ಹೋಗುತ್ತದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಅವರು ಸಮಾಜಕ್ಕೆ ಏನು ಮಾಡಿದ್ದಾರೆ? ಅಲ್ಲಿ ಗಲಾಟೆ ಮಾಡಿಸುವರು ಅವರೇ, ಇಲ್ಲಿ ಬಂದು ಟೀಕೆ ಮಾಡುವರೇ ಇವರೇ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾನಾಯಕರೇ, ಇನ್ನು ಮೂರು ತಿಂಗಳು ಉಳಿದಿದೆಯಲ್ಲಾ, ಗೃಹಮಂತ್ರಿಯನ್ನಾಗಿ ಇವರನ್ನೇ (ಶ್ರೀ ರಿಜ್ವಾನ್ ಅರ್ಷದ್) ಮಾಡಿ. ಯಾರ ಮೇಲೆ ಪೆಟ್ರೋಲ್ ಹಾಕಲಿ, ಏನು ಬೇಕಾದರೂ ಹಾಕಲಿ ಇವರು.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಮುಖ್ಯಮಂತ್ರಿಗಳಿಗೆ ಮೂರು ತಿಂಗಳು ಅವಕಾಶ ಇದೆ. ನೀವು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಟಿಪ್ಪಣಿ ಕೊಡಿ. ಅವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ...ಪೆಟ್ರೋಲ್ ಹಾಕಲಿ, ಅವರು ಬೇರೆ ಏನಾದರೂ ಹಾಕಲಿ. ನಾನು ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡುವಾಗ ಈ ವಿಚಾರಗಳನ್ನು ಹೇಳಬೇಕಾಯಿತು. ಇದು ವಿಮರ್ಶೆಗೆ, ಚರ್ಚೆಗೆ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಇಲ್ಲ, ನಾವು ಹಾಗೆಯೇ ಮಾಡುವುದು. 'ಅಲ್ಲಾಹುವಿನ ಅನುಗ್ರಹದಿಂದ ನಾನು ಆರು ಬಾರಿ ಶಾಸಕನಾದೆ' ಎಂದು ಸಚಿವರು ಹೇಳುವುದನ್ನು ನಾನು ಸಂತೋಷ ಪಟ್ಟೆ. ಅವರಿಗೆ ಏಕೆ ಬೇಜಾರವಾಯಿತೋ? ನನಗೆ ಅದು ಗೊತ್ತಿಲ್ಲ. ಅವರು ಕೇಳಲಿ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸುನೀಲ್ ಕುಮಾರ್ ಏನು ತಪ್ಪು ಮಾತನಾಡಿದ್ದಾರೆ ಎಂದು ಇಲ್ಲಿ ನೀವು ಹೇಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವರು ಮಾತನಾಡಿದ್ದು ಏನು ಎಂದು ನೀವು ಕೇಳಿ. ಇಲ್ಲಿ ಯಾವ ಜಾತಿ, ವರ್ಗ ಎನ್ನುವ ಪ್ರಶ್ನೆ ಇಲ್ಲ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ನಾನು ಒಬ್ಬ ಮುಸಲ್ಮಾನ. ಚುನಾವಣೆಯ ಸಮಯದಲ್ಲಿ ಗಣೇಶನ ಆಶೀರ್ವಾದ ಪಡೆದುಕೊಂಡಿದ್ದೇನೆಂದು ಹೇಳಿದ್ದೇನೆ ಮತ್ತು ಬೇರೆ ದೇವರ ಆಶೀರ್ವಾದ ಪಡೆದಿದ್ದೇನೆ ಮತ್ತು ದೇವಸ್ಥಾನಕ್ಕೋಗಿ ಬಂದಿದ್ದೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವರು ಏನು ಮಾತನಾಡಿದ್ದಾರೆ ಗೊತ್ತಾ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಅರ್ಷದ್‌ರವರೇ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವರು ಚುನಾವಣೆ ಸಂದರ್ಭದಲ್ಲಿ ಏನೇನು ಮಾತನಾಡಿದ್ದಾರೆಂಬುದು ನಮಗೆ ಗೊತ್ತಿದೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-**ಅದೇ ರೀತಿ ರಮಾನಾಥ ರೈ ರವರು ಹೇಳಿರಬಹುದು.

**(ಗೊಂದಲ)**

**ವೈಸ್ ಛೇರ್ಮನ್:-** ಅವರ ಅನಿಸಿಕೆಗಳನ್ನು ಹೇಳುತ್ತಿದ್ದಾರೆ, ಇಲ್ಲಿ interfere ಆಗುವ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಕೇಳಿ.

**ವೈಸ್ ಛೇರ್ಮನ್:-** ಅವರ ಅನಿಸಿಕೆಗಳನ್ನು ಹೇಳುತ್ತಾರೆ ಬಿಡಿ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ನನ್ನದು ಒಂದು ಮಾತು...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಚರ್ಚೆಗೆ ಬರಲಿ ನನಗೆ ಏನು ತೊಂದರೆ ಇಲ್ಲ.

**ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ..

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 'ಅಲ್ಲಾಹುವಿನ ಅನುಗ್ರಹದಿಂದ ನಾನು ಆರು ಬಾರಿ ಶಾಸಕನಾದೆ' ಎಂದು ರಮಾನಾಥ ರೈ ಹೇಳಿರುವುದನ್ನು ನಾನು ತಪ್ಪು ಎಂದು ಹೇಳಿದೆನೆ? ಅವರು ಸುಮ್ಮನೆ ಗಲಾಟೆ ಮಾಡಿತ್ತಿದ್ದಾರೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ಕುಮಾರ್ ಹೇಳಿದ್ದು ಏನು? ಹಾಗಾದರೆ ಅದು ತಪ್ಪಲ್ಲವೆಂದು ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ತಪ್ಪಾಗಿ ಏನು ಹೇಳಿಲ್ಲ. ಇವರಿಗೆ ಏನಾಯಿತು? ಇದು ಎಂತದ್ದು?...

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ಕುಮಾರ್ ಹೇಳಿದ್ದು ತಪ್ಪು ಎಂದು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೋಟ ಶ್ರೀನಿವಾಸ್ ಪೂಜಾರಿಯವರ ಬಾಯಿಯಿಂದ 'ಅಲ್ಲಾಹು' ಎಂಬ ಶಬ್ಧ ಬರಬಾರದಾ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಮಾನ್ಯ ಸುನೀಲ್ ಕುಮಾರ್‌ರವರು ಹೇಳಿದ್ದು ಸರಿಯೇ ಅಥವಾ ತಪ್ಪಾ ಎಂದು ಹೇಳಿ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವರು ಮಾತನಾಡುವಾಗ ತಪ್ಪಾಗಿ ಏನ್ನನ್ನು ಹೇಳಲಿಲ್ಲಾ. ಹಾಗಿರುವಾಗ, ಅವರು ಮಧ್ಯ ಪ್ರವೇಶ ಮಾತನಾಡಬೇಕಾ?

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸುನೀಲ್ ಕುಮಾರ್‌ರವರು ಹೇಳಿದ್ದು ಸರಿಯೇ ಅಥವಾ ತಪ್ಪಾ ಎಂದು ಹೇಳಿ...

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಈಗ ನೀವು ಏಕೆ ಮಾತನಾಡುತ್ತೀರಿ.

**(ಗೊಂದಲ)**

**ವೈಸ್ ಛೇರ್ಮನ್:-** ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ, ವಿರೋಧ ಪಕ್ಷದವರು ಎಷ್ಟು ಬೇಕಾದರೂ ಮಾತನಾಡಬಹುದು. ನೀವು ಅಡಚಣೆ ಮಾಡಬೇಡಿ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಅವರು ಮುಂದುವರೆಸಿಕೊಂಡು ಹೋಗಲಿ. ಅದನ್ನೇ ಮಾತನಾಡುವುದು ಬೇಡ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ವಾತಾವರಣ ನಿರ್ಮಾಣ ಮಾಡಬೇಕಾದವರು ಆಡಳಿತ ಪಕ್ಷದವರು. ಇಲ್ಲವಾದರೆ, ಅವರು ಜಗಳ ಮಾಡುತ್ತೇವೆಂದರೆ ಜಗಳ ಮಾಡಲಿ. ಶ್ರೀನಿವಾಸ ಪೂಜಾರಿಯವರ ಬಾಯಿಯಿಂದ 'ಅಲ್ಲಾಹು' ಎಂಬ ಶಬ್ಧ ಬರಬಾರದೆ? ನೀವು ಅವರಿಗೆ ಹೇಳಿ.

**(ಗೊಂದಲ)**

**ವೈಸ್ ಛೇರ್ಮನ್:-** ನೀವು ಮುಂದುವರೆಸಿ. ಆ ವಿಚಾರವನ್ನು ಬಿಟ್ಟು ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉಸ್ತುವಾರಿ ಮಂತ್ರಿಯಾದ ರಮನಾಥ್ ರೈರವರು ಸಾರ್ವಜನಿಕ ಭಾಷಣದಲ್ಲಿ 'ಅಲ್ಲಾಹುವಿನ ಅನುಗ್ರಹದಿಂದ ಆರು ಬಾರಿ ಶಾಸಕನಾದೆ' ಎಂದು ಹೇಳಿದಾಗ ನಾನು ಸಂತೋಷಪಟ್ಟೆ. ಇದು ನನ್ನ ವಾದವಲ್ಲ. ಹಾಗೆಯೇ 'ಅಲ್ಲಾಹು'ನ ಹಾದಿ ಎಂದು ಹೇಳಿದಾಗ ಮತ್ತೊಬ್ಬರು ಪ್ರತಿಕ್ರಿಯೆ ಮಾಡಿದರು. ಮಾನ್ಯ ಸುನೀಲ್ ಕುಮಾರ್‌ರವರು ಭಾಷಣ ಮಾಡುವಾಗ ಇದು ರಾಮ್-ರಹೀಂ ಇಬ್ಬರ ಮಧ್ಯೆ ನಡೆಯುವ ಯುದ್ಧವೇ? ಎಂದು ಹೇಳಿದರು. ಅವರ ಮೇಲೆ ಕೇಸ್ ದಾಖಲಿಸಿದ್ದೀರಿ. ಇಷ್ಟಕ್ಕೆ ಕೇಸ್ ಮಾಡಬಹುದು ಎಂಬುದು ನನಗೆ ಗೊತ್ತಿಲ್ಲ. ಇಲ್ಲಿಯವರೆಗೆ ಏನೇನು ನಡೆದಿದೆ ಎಂಬುದು ಗೊತ್ತಿಲ್ಲ. ಒಂದು ಹದಿನೈದು ನಿಮಿಷಗಳ ಕಾಲ ಪೋಲೀಸ್ ವ್ಯವಸ್ಥೆಯನ್ನು ಸ್ಥಗಿತ ಮಾಡಿ, ಒಂದು ಸಮುದಾಯವನ್ನು ಸಂಪೂರ್ಣ ನಾಶ ಮಾಡುತ್ತೇವೆ ಎನ್ನುವವರಿದ್ದಾರೆ. ಇದು ನನಗೆ ಗೊತ್ತಿಲ್ಲ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ ಯವರ ಸ್ನೇಹಿತ Owaisi.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಬುದ್ಧಿ ಇದ್ದವರ ವ್ಯಾಪಾರವಲ್ಲ...

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಯಾವುದೋ ವಿಚಾರಕ್ಕೆ ಏಕೆ ಬಿಜೆಪಿಯವರನ್ನು ಉಲ್ಲೇಖ ಮಾಡುತ್ತಾರೆ. ಗೊಂದಲವನ್ನೇಕೆ ಸೃಷ್ಟಿ ಮಾಡುತ್ತಾರೆ. ಕುಂಬಳ ಕಾಯಿ ಕಳ್ಳ ಎಂದರೆ ಇವರೇಕೆ ನೋಡಿಕೊಳ್ಳುತ್ತಿದ್ದಾರೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, Yes, it is clear. Owaisi ಅವರಿಂದ ಏನಾದರೂ ಭಾಷಣ ಮಾಡಿಸುವುದು. ಇಲ್ಲಿ ಬಂದು ಟೀಕೆ ಮಾಡೋದು. ಕರ್ನಾಟಕದಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆಯುವುದಿಲ್ಲ. ಬಿಜೆಪಿಯವರು ಏನಾಗಿದ್ದಾರೆಂದು ನೀವು ಅರ್ಥಮಾಡಿಕೊಳ್ಳಿ. Owaisi ನವರಿಗೂ ಬಿಡುವುದಿಲ್ಲ ಮತ್ತು ನಿಮಗೂ ಬಿಡುವುದಿಲ್ಲ. Owaisi ಜೊತೆಗೆ ನೀವು understanding ಮಾಡಿಕೊಂಡಿದ್ದೀರಿ. ಮ್ಯಾಚ್ ಫಿಕ್ಸಿಂಗ್ ಮಾಡಿ ಭಾಷಣ ಮಾಡುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಯಾವ ರೀತಿ ಮಾತನಾಡುತ್ತಿದ್ದಾರೆ, ನೋಡಿ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ ಎಲ್ಲಾರಿಗೂ ಗೊತ್ತಿದೆ. ಬಿಜೆಪಿಯವರು ಮತ್ತು Owaisi ಯವರು ರಾಜಕೀಯ brothers ಎಂಬುದು ಗೊತ್ತಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡದಿದ್ದರೆ, ಸದನದ ಬಾವಿಗೆ ಹೋಗಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ನಮ್ಮ ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಈಗ ನಿಮಗೆ ಅವಕಾಶ ಕೊಟ್ಟಿದ್ದೇವಲ್ಲಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವು ಮಾತನಾಡುವ ಹಕ್ಕನ್ನು ತಡೆಯುತ್ತೀರಾ. ನೀವು ಹೀಗೆ ಮಾತನಾಡಬೇಕೆಂದು ಶ್ರೀನಿವಾಸ ಪೂಜಾರಿಯವರಿಗೆ ಹೇಳುತ್ತೀರಾ.

**ಶ್ರೀ ಎಂ.ಆರ್.ಸೀತಾರಾಂ:-** ನಾನು ಮುಂದಕ್ಕೆ ಮಾತನಾಡಿ ಎಂದು ಹೇಳಿದ್ದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವು ಗಲಾಟೆ ಮಾಡಿಸುತ್ತೀರಾ. ನೀವು ದೊಡ್ಡವರು ಇರಬಹುದು. ಅದೇ ಸಮುದಾಯದಲ್ಲಿ ಇರಬಹುದು. ಬೇರೆ ಯಾರು ಮಾತನಾಡಬಾರದಾ. ನಿಮ್ಮದು ಏನು ಕಥೆ? ಮಾನ್ಯ ಸಭಾಪತಿಯವರೇ, ಇದೇ ರಾಜಕೀಯ ಮಾತನಾಡುತ್ತಾ ಬಂದಿದ್ದು. ಈ ಉಡಾಫೆ, ತೋಳ್ಬಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಾದದ ಬಲವಂತ ಇದೆ. ವಾದದ ಬಲವಂತವೆಂದರೆ ವಿಷಯನ್ನು ಮಂಡನೆ ಮಾಡುವುದು. ವಿಚಾರವನ್ನು ವಿಮರ್ಶೆ ಮಾಡುವುದು. ವಿಚಾರಗಳು ಮಂಥನ ಆಗುವುದು. ವಾದ ಮಾಡುವುದು. ಅದರ ಮೂಲಕ ಇನ್ನೊಬ್ಬ ವ್ಯಕ್ತಿಯನ್ನು ಉಚ್ಚಿಸುವುದು. ಇದು ವಾದದ ಬಲ ಎಂದು ಹೇಳುತ್ತಾರೆ. ನಿಮ್ಮ ವಾದ ಏನು ಎಂಬುದು ಗೊತ್ತಿದೆಯೇ? ಇದು ಬಲವಂತದ ವಾದ. ಅಂಗಿ ಕೈ ಮೇಲೆ ಮಾಡುವುದು, ನಾನು ಹೇಳಿದ್ದು ನೀವು ಕೇಳಬೇಕು ಎಂಬುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಜ ಇದೆ. ದಯವಿಟ್ಟು, ನಾನು ಹೇಳುವುದು ‘ಉಡಾಫೆ’ ಮಾತನಾಡುವುದಕ್ಕೆ ಅವಕಾಶ ಇದೆಯೇ?

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ನನ್ನ ಆಕ್ಷೇಪವಿದೆ. ಇದೆ. ಉಡಾಫೆ ಎಂದರೆ ಏನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಕೂಡ ಮಾತನಾಡಿದ್ದಾರೆ. ಈ ಉಡಾಫೆ ಮಾತಿಗೆ ನಾವು ಬಗ್ಗುವುದಿಲ್ಲ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಉಡಾಫೆ ಮಾತು ಇರಲಿ ಬಿಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅವರು ಓ.ವೈ.ಸಿ ಅವರ ಹೆಸರು ಹೇಳಲಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಉಡಾಫೆ ಎಂದರೆ ‘ಅಸಂಬದ್ಧ’ ಎನ್ನುವ ಅರ್ಥ. ಅದರಲ್ಲಿ ಏನೂ ಇಲ್ಲ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ..

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಅವರು 'ಉಡಾಫೆ' ಎಂದು ಹೇಳಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಧರಣಿ ಮಾಡಬೇಕಾಗಿರುವುದು ಅವರಲ್ಲ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಯಾರೂ ಮಧ್ಯೆ ಮಾತನಾಡಬಾರದು ಎಂಬುದು ನಿರ್ಣಯ ಆಗಿದೆ. ನೀವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ಅಸಂಸದೀಯ ಶಬ್ದ. ಆದ್ದರಿಂದ 'ಉಡಾಫೆ' ಪದವನ್ನು ಬಳಸುವ ಹಾಗೆಯೇ ಇಲ್ಲ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಉಡಾಫೆ ಎಂದರೆ ಅದಕ್ಕೆ ಅರ್ಥವೇನು?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾನಾಯಕರೇ, ನಮ್ಮ ಎರಡೂ ಜಿಲ್ಲೆ ಶಾಸಕರು ಏನನ್ನೂ ಹೇಳುತ್ತಿಲ್ಲ. ಇವರು ನಡುವೆ ಮಾತನಾಡುವ ಅಗತ್ಯವೇ ಇಲ್ಲ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, this is an un-parliamentary word. ಅದನ್ನು withdraw ಮಾಡಬೇಕು. ಅದನ್ನು ಕಡತದಿಂದ ತೆಗೆಯಬೇಕು. ಅವರದ್ದು ಉಡಾಫೆ ಭಾಷಣ ಇರಬಹುದು. ನಾನು ಆಕ್ಷೇಪ ಮಾಡಿದ್ದು. ಅದು ಉಡಾಫೆ ಅಲ್ಲ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಚರ್ಚೆಯಾಗುತ್ತಿದೆ. ಅವರು ನಡುವೆ ಮಾತನಾಡುತ್ತಿಲ್ಲ. ಆದರೆ, ಇವರು ಏಕೆ ಮಾತನಾಡಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):–** ಅದು ಅವರ ಜಿಲ್ಲೆಗೆ ಸಂಬಂಧಪಟ್ಟಿದ್ದು.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಉದ್ದೇಶವನ್ನಿಟ್ಟುಕೊಂಡು ಹೇಳಿದ್ದಾರೆ. ಅದಕ್ಕೆ ಆಕ್ಷೇಪ ತೆಗೆದಿದ್ದೇನೆ. ಆದರೆ ಉಡಾಫೆ ಎಂದು ಹೇಗೆ ಹೇಳುತ್ತಾರೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಅವರು ಮಂತ್ರಿಯಾಗಿದ್ದವರು. ಅವರು ಹಿರಿಯರು. ಅವರು ಹೀಗೆ ಏಕೆ ಹೇಳುತ್ತಾರೆ.

**ಶ್ರೀ ಎಂ.ಆರ್. ಸೀತಾರಾಂ:–** ದಯವಿಟ್ಟು, ಈ ರೀತಿಯ ವಾದವನ್ನು ಬಿಡಿ. ಚರ್ಚೆ ಮುಂದುವರೆಯಲಿ.

**(ಗೊಂದಲ)**

**ಶ್ರೀ. ಬಿ.ಜೆ.ಪುಟ್ಟಸ್ವಾಮಿ (ವಿಧಾನ ಸಭಾ ಕ್ಷೇತ್ರ):–** ಚರ್ಚೆ ನಡೆಯುವಾಗ, intervene ಆಗಬಾರದು.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ನಾನು ಒಬ್ಬ ಈ ಸದನದ ಸದಸ್ಯ. ಅವರು ಮಾತನಾಡಿದ್ದು ತಪ್ಪು ಎಂದು ನಾನು ಆಕ್ಷೇಪ ಮಾಡಿದ್ದೇನೆ. ಅವರ ಮಾತನಾಡುವಾಗ ಹೇಗೆ ಬೇಕಾದರೂ ಮಾತನಾಡುತ್ತಾರೆ.

**(ಗೊಂದಲ)**

**ವೈಸ್ ಛೇರ್ಮನ್:–** ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಆಡಳಿತ ಪಕ್ಷದವರು ಸಹಕರಿಸಬೇಕು. It is your responsibility.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಐವನ್ ಡಿ'ಸೋಜಾ ಮತ್ತು ಯು.ಟಿ.ಖಾದರ್ ರವರು ಯಾರೂ ಏನೂ ಮಾತನಾಡಲಿಲ್ಲ. ಆದರೆ ಇವರು ಏಕೆ ಗಲಾಟೆ ಮಾತನಾಡುತ್ತಾರೆ?

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶ್ರೀ ರಿಜ್ವಾನ್ ಅರ್ಷದ್ ರವರು ಕೂಡ ಮಾತನಾಡಿದ್ದಾರೆ ಮತ್ತು ಅವರು ಕೂಡ ಮಾತನಾಡಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈಗ ಆಯಿತು ಬಿಡಿ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ,...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ವಿರೋಧ ಪಕ್ಷದವರು ಮಾತನಾಡಬಾರದೇ?

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಚರ್ಚೆ ಆಗುತ್ತಿದೆ. ಅವರು ಏಕೆ ಮಧ್ಯೆ ಮಾತನಾಡಬೇಕು. ಆ ರೀತಿ ಆಗುತ್ತಿಲ್ಲ.

**ಶ್ರೀ ಕೃಷ್ಣಬೈರೇಗೌಡ, (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಏನೋ ಹೇಳಿದ್ದಾರೆ. ಅದಕ್ಕೆ ತಕರಾರು ತಂದಿದ್ದೇನೆ. ಆದರೆ, ಅವರು "ಉಡಾಫೆ" ಎಂದು ಹೇಗೆ ಹೇಳುತ್ತಾರೆ? ಅವರು ಒಬ್ಬ ಸಚಿವರಾಗಿದ್ದಂತಹವರು ಮತ್ತು ಹಿರಿಯರು ಆಗಿದ್ದಾರೆ. ಅವರು "ಉಡಾಫೆ" ಎಂದು ಹೇಗೆ ಹೇಳುತ್ತಾರೆ.

**(ಗೊಂದಲ)**

ನಾನು ಕೂಡ ಈ ಸದನದ ಸದಸ್ಯನಾಗಿದ್ದೇನೆ. ನೀವು ಮಾತನಾಡಿದ್ದು ತಪ್ಪು ಎಂದು ನಾನು ಎದ್ದುನಿಂತುಕೊಂಡು ತಕರಾರು ಮಾಡಿದ್ದೇನೆ. ಮತ್ತೆ ಮಾತನಾಡುವಾಗ ಏನು ಬೇಕಾದರೂ ಮಾತನಾಡುತ್ತೀರಿ.

**(ಗೊಂದಲ)** **ವೈಸ್ ಛೇರ್ಮನ್:-** ದಯವಿಟ್ಟು ಸಹಕರಿಸಿ. ನೋಡಿ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಆಡಳಿತ ಪಕ್ಷದವರು ಸಹಕರಿಸಬೇಕು. ಇದು ನಿಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜವಾಬ್ದಾರಿ. There is no limit for them. Sky is the limit for Opposition. ನಾನು ಅವರಿಗೆ ಹೇಳುತ್ತೇನೆ, ಸದಸ್ಯರೆಲ್ಲಾ ಸದನದ ಬಾವಿಯಿಂದ ಹೊರಗಡೆ ಬನ್ನಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ದಯವಿಟ್ಟು ಸದನದ ಬಾವಿಯಿಂದ ಹೊರಗಡೆ ಬಂದು ತಮ್ಮ ಮಾತನ್ನು ಮುಂದುವರೆಸಬೇಕೆಂದು ನಾನು ಸಹ ವಿನಂತಿಸುತ್ತೇನೆ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರೇ, ಮಾನ್ಯ ರಮಾನಾಥ್ ರೈ ರವರು ಏನೆಂಬುದು ತಮಗೆ ಗೊತ್ತಿದೆ. ಅವರು ಅದನ್ನು ಉಲ್ಲೇಖ ಮಾಡಿದರು. ನೀವು ಕೇಳಿದ್ದಕ್ಕೆ ಅವರು ಹೇಳಿದರು. ಅವರಾಗಿ. . .

**(ಗೊಂದಲ)**

ನೀವಿಬ್ಬರು ಸುಮ್ಮನೆ ಕುಳಿತುಕೊಂಡಿದ್ದೀರಂತೆ, ನೀವೇನೂ ಮಾತನಾಡದಿದ್ದರೆ, ಅವರೇಕೆ ಮಾತನಾಡಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು, ಅವರಿಗೆ ಅನಿಸಿದ ವಿಚಾರಗಳನ್ನು ಹೇಳುತ್ತಿದ್ದಾರೆ. ಮಾತನಾಡುವಾಗ ಈ ರೀತಿ ಸ್ವಲ್ಪ ಮಾತುಗಳು ಇರುತ್ತವೆ. ಮಾನ್ಯ ಸದಸ್ಯರು ಏರು ಧ್ವನಿಯಲ್ಲಿ ಮಾತನಾಡತಕ್ಕಂಥದ್ದು ಇರುತ್ತದೆ. ದಯವಿಟ್ಟು ಸಹಕರಿಸಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ತಮ್ಮ ಮಾತನ್ನು ಮುಂದುವರೆಸಿ.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಬಿ.ಜೆ.ಪಿ ಸದಸ್ಯರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು.)**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ತಮ್ಮ ಮಾತನ್ನು ಮುಂದುವರೆಸಿ. ದಯವಿಟ್ಟು ಯಾರೂ intervene ಮಾಡಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್**:- ನಾನು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದೇನೆಂದರೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಂಡಿಸಿದಾಗ, ಆಡಳಿತ ಪಕ್ಷದವರು ಸಹನೆಯಿಂದ ಕುಳಿತುಕೊಳ್ಳಬೇಕು ಮತ್ತು ಸಹಕರಿಸಬೇಕು. ಅವರಿಗೆ ನಿಮ್ಮ ಸಹಕಾರ ಬೇಕು. there is no limit. Sky is the limit for the Opposition. ಅವರು ಬೇಕಾದ್ದನ್ನು ಹೇಳಬಹುದು. ಆದರೆ, ಅವರು ಅಪಭ್ರಂಶವಾಗುವಂತಹ ಪದಗಳನ್ನು ಮಾತನಾಡಬಾರದು. "ಉಡಾಫೆ"ಎಂದರೆ ಅದು ಈ ಸದನಕ್ಕೆ ಸಂಬಂಧಪಟ್ಟಿಲ್ಲ.

**ಶ್ರೀ ಕೃಷ್ಣಭೈರೇಗೌಡ**:- ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು "ಉಡಾಫೆ" ಎಂದು ಹೇಳಿದಾಗ, ನಾವು ಸ್ವಲ್ಪ ಮಾತನಾಡಿದ್ದೇವೆ ಅಷ್ಟೆ. ಅವರು above sky ಮಾತನಾಡಿದ್ದಾರೆ ಅಷ್ಟೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೇ, ಕೈ ಮೀರಿ ಮಾತನಾಡಿದ್ದಾರೆ ಅಷ್ಟೆ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕೈ ಮೀರಿ ಮಾತನಾಡಿರುವುದೇ? ಹಾಗಾದರೆ, ಆ ಪೀಠಕ್ಕೆ ಅವರನ್ನೇ ನೇಮಿಸಿ ಬಿಡಿ. ನಾವು ಇಲ್ಲಿ ಇರುವುದು ಆಡಳಿತ ಪಕ್ಷದವರು ಹೇಳಿದ್ದನ್ನೆಲ್ಲಾ ಕೇಳುವುದಕ್ಕಲ್ಲ.

**ವೈಸ್ ಛೇರ್ಮನ್**:- ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಸಾಧ್ಯವಿಲ್ಲ, ಕೇಳಬೇಡಿ. ತಮ್ಮ ಮಾತನ್ನು ತಾವು ಮಾತನಾಡಿ ಮುಗಿಸಿ.

**ಶ್ರೀ ಕೋಟ ಶೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ವಾಸ್ತವಿಕವಾಗಿ ಯಾರೂ ಸರ್ವಜ್ಞರಲ್ಲ. ನಮ್ಮಿಂದ ತಪ್ಪಾಗಿರಬಹುದು, ಅದನ್ನು ತಿದ್ದಿ ಹೇಳಲಿ, ನಾವು ಅದನ್ನು ಸರಿಪಡಿಸಿಕೊಳ್ಳುತ್ತೇವೆ. ಆ ರೀತಿಯಾದರೂ ಮಾಡುತ್ತೀರಾ? ಮಾತನಾಡುವುದಕ್ಕೆ ಅಡ್ಡಿಪಡಿಸುತ್ತೀರಾ? ಉಡಾಫೆ ಮಾಡುತ್ತೀರಾ?

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಈಗಲೂ ಅದೇ ಮಾತನ್ನು ಆಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹೌದು. ಮಾಡುತ್ತಿರುವುದು ಉಡಾಫೆ, ಅದನ್ನು ನೀವು ಕಡತದಿಂದ ತೆಗೆಯಿರಿ, ಅಥವಾ ಏನು ಬೇಕಾದರೂ ಮಾಡಿ. ಅವರು ಮಾಡುತ್ತಿರುವುದು ಉಡಾಫೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅಗತ್ಯವಿಲ್ಲ, ಸಂಬಂಧವಿಲ್ಲ.

**ಶ್ರೀ ಕೋಟ ಶೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಂಬಂಧವಿಲ್ಲದ ವಿಚಾರ. ಮಾನ್ಯ ಸದಸ್ಯರೇ, ಈ ರೀತಿ ಹೇಳಿ ಎಂದು ಹೇಳಿಬಿಡಿ. ನೀವು ಈ ರೀತಿ ಭಾಷಣ ಮಾಡಿ ಎಂದು ಬರೆದುಕೊಡಿ. ನಾವು ಮತ್ತೇನು ಮಾಡುವುದು.

**ವೈಸ್ ಛೇರ್ಮನ್:-** ಶ್ರೀ ಕೋಟ ಶೀನಿವಾಸ ಪೂಜಾರಿಯವರೇ, subject ಮರೆತು ಹೋಗುತ್ತದೆ, ತಾವು ವಿಷಯಕ್ಕೆ ಬನ್ನಿ.

**ಶ್ರೀ ಕೋಟ ಶೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೋಮು ಗಲಭೆಯನ್ನು ತಡೆಗಟ್ಟುವಂತಹ ಪರಿಸ್ಥಿತಿಯಲ್ಲಿ ಸಮಸ್ಯೆಗಳಿವೆ. ಕೆಲವು ಆತಂಕಗಳನ್ನು ನಾವು ನೋಡಿದ್ದೇವೆ. ಇದನ್ನು ನಾವು ವೈಭವೀಕರಿಸುವುದಕ್ಕೋಸ್ಕರ ಹೇಳುತ್ತಿಲ್ಲ. ಶ್ರೀ ರುದ್ರೇಶ್‌ರವರ ಕೊಲೆ ನಡೆದಂತಹ ಪ್ರಕರಣದಲ್ಲಿ, ಆ ಕೊಲೆಗಡುಕರು ಏನು ಮಾಡಿದರೆಂದರೆ, ಬೈಕಿನ ಮೇಲೆ ಕುಳಿತುಕೊಂಡು, ಅವರ ಮಚ್ಚಿನಿಂದ ನಾಯಿಯನ್ನು ಕತ್ತರಿಸಿ ಕೊಂದು training ಪಡೆದುಕೊಂಡಿದ್ದರು. ಆ ರೀತಿ ನಾಯಿಯನ್ನು ಕತ್ತರಿಸಿ, ಅದೇ ರೀತಿ ಒಬ್ಬ ಮನುಷ್ಯನನ್ನು ಕೊಲ್ಲಬೇಕೆಂದು training ಪಡೆದುಕೊಂಡಿದ್ದರು ಎಂದು ಆ ತನಿಖಾ ವರದಿಗಳಲ್ಲಿ ಹೇಳಿದ್ದಾರೆ. ಆ ಆಧಾರದಲ್ಲಿ ನಾನು ಹೇಳಿರುವುದು. ಇದು ಅತ್ಯಂತ ಗಂಭೀರವಾದಂತಹ ವಿಷಯವಾಗಿರುವುದರಿಂದ, ಕೇವಲ ಸ್ಥಳೀಯರೇ, ಇದರಲ್ಲಿ ಪಾಲ್ಗೊಳ್ಳುತ್ತಾರೆ ಎನ್ನುವುದನ್ನು ಮೀರಿ ಕೆಲವು ಘಟನೆಗಳು ನಡೆಯುತ್ತಿರುವುದರಿಂದ, ದಯವಿಟ್ಟು ಅದರ ಮೂಲವೇನು ಎಂದು ನೀವು ತನಿಖೆ ಮಾಡಿದರೆ ಒಂದಷ್ಟು ಒಳ್ಳೆಯದಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹೇಳಿದ್ದು, ಕೇವಲ ಕಾಲ್ಪನಿಕವಲ್ಲ. ಕೇರಳದ ಕಣ್ಣೂರಿನಲ್ಲಿ ರಸ್ತೆ ಬದಿಯಲ್ಲಿ ಈ ರೀತಿ ನಾಯಿಗಳ ಕತ್ತನ್ನು ಕತ್ತರಿಸಿದ್ದುದನ್ನು ನೋಡುತ್ತಿದ್ದರಂತೆ. ಆಗ ಅಲ್ಲಿ ಏಕೆ ಈ ರೀತಿ ನಾಯಿಗಳ ಕತ್ತನ್ನು ಕತ್ತರಿಸಿ ಸಾಯಿಸುತ್ತಿದ್ದಾರೆಂದು ತನಿಖೆ ನಡೆಸಿದರಂತೆ. ಆ ತನಿಖೆ ನಡೆಸಿದ ನಂತರ ವರದಿ ಬಂದಿರುವುದೇನೆಂದರೆ, ದ್ವಿಚಕ್ರ ವಾಹನದ ಮೇಲೆ ಮುಂಭಾಗದಲ್ಲಿ ಒಬ್ಬ ವ್ಯಕ್ತಿ ಸ್ಕೂಟರ್ ಅಥವಾ ಬೈಕ್‌ನ್ನು ಚಲಾಯಿಸುವುದು, ಮತ್ತೊಬ್ಬರು ಹಿಂಭಾಗದಲ್ಲಿ ಕುಳಿತುಕೊಂಡು ತಲ್ವಾರ್‌ನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು ಪ್ರಾಕ್ಟೀಸ್ ಮಾಡಿದ್ದಾರೆ. ಇದು NIA (National Investigation Agency) ವರದಿಯಲ್ಲಿ ಉಲ್ಲೇಖವಾಗಿದೆ. ಕೇರಳದ ಕಣ್ಣೂರಿನಲ್ಲಿ ಈ ರೀತಿ ತರಬೇತಿ ಪಡೆದುಕೊಂಡಂತಹ ಒಂದು ತಂಡ ಇದೆ. ಅವರು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಈ ರೀತಿಯ ಕೃತ್ಯ ಮಾಡುತ್ತಾರೆಂದು ಹೇಳುವ ಸಂಗತಿಗಳನ್ನು ಈಗ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. ಈ ರೀತಿಯ ಅನೇಕ ಘಟನೆಗಳು ನಡೆದಿರುವಂಥದ್ದು. ಶ್ರೀ ಶರತ್ ಮಡಿವಾಳರವರದ್ದು ಸಹ ಅದೇ ರೀತಿ ನೇರವಾಗಿ ಆಗಿರುವಂಥದ್ದು. ಈ ಸಂಗತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದೇ ಇದ್ದಲ್ಲಿ ಕಷ್ಟವಾಗುತ್ತದೆ ಎಂದು ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಗೃಹ ಇಲಾಖೆಯ ಒಟ್ಟು ಕಾರ್ಯವ್ಯವಸ್ಥೆಯ ಬಗ್ಗೆ ಮಾತನಾಡುವಾಗ ರಾಜ್ಯಪಾಲರು, 'ತನ್ನ ಸರ್ಕಾರ ಅತ್ಯಂತ ವ್ಯವಸ್ಥಿತವಾಗಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದೆ' ಎಂದು ಹೇಳಿದ್ದಾರೆ. ನಾವು ಮತ್ತೆ ಮತ್ತೆ ಶ್ರೀಮತಿ ಗೌರಿ ಲಂಕೇಶ್ ಮತ್ತು ಡಾ|| ಎಂ.ಎಂ.ಕಲಬುರ್ಗಿಯರ ಹೆಸರನ್ನು ಹೇಳಬೇಕಾಗುತ್ತದೆ. ನಾನು ಅದನ್ನು ಮತ್ತೆ ಸವಿಸ್ತಾರವಾಗಿ ಬೆಳೆಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅವರಿಬ್ಬರ ಸಾವು ನಮ್ಮೆಲ್ಲರಿಗೂ ನೋವು ತಂದಿದೆ. ಇಲ್ಲಿ ವಿಚಾರಗಳಿರುವುದೇನೆಂದರೆ, ಆ ಸಾವಿನ ನಂತರ ಕೆಲವು ಘಟನೆಗಳು ನಡೆದಿವೆ. ಶ್ರೀಮತಿ ಗೌರಿ ಲಂಕೇಶ್‌ರವರನ್ನು ಕೊಲೆ ಮಾಡಿದ ಹಂತಕರನ್ನು ಬಂಧನ ಮಾಡಿ ಎಂದು ನಾವು ಆಗ್ರಹಪಡಿಸಿದೆವು. ಶ್ರೀಮತಿ ಗೌರಿ ಲಂಕೇಶ್ ರವರ ನೆನಪಿನಲ್ಲಿ ಒಂದು ಕಾರ್ಯಕ್ರಮ ನಡೆಯುತ್ತದೆ. ಆ ಕಾರ್ಯಕ್ರಮ ನಡೆದಾಗ, ನಿಮ್ಮದೇ ಸರ್ಕಾರದ ಮಾನಸಿಕತೆ ಇರುವವರೆಲ್ಲಾ " ಗೌರಿಯ ಸಾವು ನಮಗೆಲ್ಲರಿಗೂ ನೋವು ತಂದಿದೆ, ಗೌರಿಯ ಬೀಜವನ್ನು ಇಡೀ ರಾಜ್ಯದಾದ್ಯಂತ ಬಿತ್ತುತ್ತೇವೆ " ಎಂದು ಹೇಳಿದ್ದೀರಿ. ನಾನು ನಿಮಗೊಂದು ಸಮಜಾಯಿಸಿ ಕೊಟ್ಟಿದ್ದೇವೆ. ನೀವು ಗೌರಿಯ ಬೀಜವನ್ನು ರಾಜ್ಯದಾದ್ಯಂತ ಬಿತ್ತುತ್ತೇವೆಂದು ಹೇಳಿದಾಗ, ಅವರ ಬದುಕಿನ ಬೀಜವೇ ಎಂಬುದಾದರೆ, ಶ್ರೀ ಲಂಕೇಶ್‌ರವರ ಮಗಳು ಗೌರಿ. ಅವರು ನಿಮಗೆಲ್ಲರಿಗೂ ಗೊತ್ತಿರುವುದಕ್ಕಿಂತ ನಮಗೆ ಹೆಚ್ಚು ಗೊತ್ತಿರುತ್ತದೆ. ಆ ಶ್ರೀಮತಿ ಗೌರಿ ಲಂಕೇಶ್‌ರವರ ಮಾನಸಿಕತೆಯ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಬಿತ್ತುತ್ತಿರೋ ಅಥವಾ ಶ್ರೀಮತಿ ಗೌರಿ ಲಂಕೇಶ್‌ರವರು ಪ್ರಗತಿಪರ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದರ ವಿಡಿಯೋ ಸ್ಕ್ರಿಪ್ಟ್‌ನ್ನು ನಾನು ನೋಡಿದೆನು. ಅದರಲ್ಲಿ ಅವರು "ಹಿಂದೂ ಧರ್ಮ ಧರ್ಮವೇ ಅಲ್ಲ, ಹಿಂದೂ ಧರ್ಮಕ್ಕೆ ಅಪ್ಪ ಅಮ್ಮ ಇಲ್ಲ" ಎಂದು ಹೇಳಿದ್ದಾರೆ. ಸತ್ತವರ ಬಗ್ಗೆ ಟೀಕೆ ಮಾಡುವುದಕ್ಕೆ ನನಗೆ ಹಕ್ಕು ಇಲ್ಲ. ಆದರೆ, ಅದನ್ನು ನಿಂಧಿಸುವಂತಹ ಜವಾಬ್ದಾರಿ ನನಗೆ ಇದೆ. ನೀವು ಸಭೆಯಲ್ಲಿ ಕುಳಿತುಕೊಂಡು ಶ್ರೀಮತಿ ಗೌರಿ ಲಂಕೇಶ್‌ರವರ ಬೀಜವನ್ನು ಬಿತ್ತುತ್ತೇವೆಂದು ಹೇಳುತ್ತೀರಲ್ಲ; ಅಂದರೆ, ಅವರ ಸಾಹಿತ್ಯದ ಬೀಜವನ್ನು ಬಿತ್ತುತ್ತೀರೋ ಅಥವಾ ಹಿಂದು ಧರ್ಮದ ವಿರುದ್ಧವಾದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೀಜವನ್ನು ಬಿತ್ತುತ್ತೀರೋ ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಕೊಡಬೇಕು ಎನ್ನುವಂತಹ ಆಗ್ರಹವನ್ನು ನಾನು ತಮ್ಮಲ್ಲಿ ಮಾಡುತ್ತೇನೆ. ಇಷ್ಟು ವಿಚಾರಗಳನ್ನು ಕೇವಲ ಗೃಹ ಇಲಾಖೆಗೆ ಮಾತ್ರ ಸೀಮಿತಗೊಳಿಸಿ, ಘನತೆವೆತ್ತ ರಾಜ್ಯಪಾಲರ ರಾಜ್ಯ ವಿಧಾನ ಮಂಡಲದ ಭಾಷಣದ ಪುಸ್ತಕದಲ್ಲಿ ಪುಟ ಸಂಖ್ಯೆ.13ರಲ್ಲಿ ಘನತೆವೆತ್ತ ರಾಜ್ಯಪಾಲರು " ನನ್ನ ಸರ್ಕಾರ ಶಿಕ್ಷಣದಲ್ಲಿ ಅತ್ಯಂತ ಅಮೂಲಾಗ್ರವಾದಂತಹ ಬದಲಾವಣೆಗಳನ್ನು ಮಾಡುತ್ತಿದೆ. ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಕೂಡ ಶಿಕ್ಷಣ ಕೊಡಬೇಕು ಎನ್ನುವುದು ಸರ್ಕಾರದ ಜವಾಬ್ದಾರಿ" ಎಂದು ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಈಗ ಶಿಕ್ಷಣ ಸಚಿವರಾದ ಮಾನ್ಯ ತನ್ವೀರ್ ಸೇಠ್‌ರವರು ಇದ್ದಾರೆ. ನಾನು ನಿಮಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಇತ್ತೀಚೆಗೆ ತಾವು ಕೂಡ ಅಲ್ಲಿಗೆ ಭೇಟಿ ಮಾಡಿ ಬಂದಿದ್ದೀರಿ. ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ತಯಾರು ಮಾಡುವಂತಹ ಮಹಿಳೆಯರು ಇದ್ದಾರಲ್ಲ, ಅವರ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ನಿಮ್ಮ ಸರ್ಕಾರ ಗಮನಿಸುವುದಿಲ್ಲವೇ?

ಇವತ್ತಿನ ದಿವಸ ಸುಮಾರು 48 ಸಾವಿರ ಸರ್ಕಾರಿ ಶಾಲೆಗಳಿವೆ. ಸುಮಾರು ಒಂದು ಲಕ್ಷದ ಇಪ್ಪತ್ತೈದು ಸಾವಿರ ಬಿಸಿಯೂಟ ತಯಾರು ಮಾಡುವಂತಹ ಮಹಿಳೆಯರು ಇದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಒಂದು ಕೋಟಿ ಮಕ್ಕಳು ಕಲಿಯುತ್ತಿದ್ದಾರೆ. ತರಗತಿಗೆ ಒಬ್ಬರು ಶಿಕ್ಷಕರನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ. ಆದರೆ, ಸರ್ಕಾರಿ ಶಾಲೆಯ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ ಕೂಡ ಇಲ್ಲ. ನಾವು ತರಗತಿಗೆ ಒಬ್ಬರು ಶಿಕ್ಷಕರನ್ನು ಕೊಡಬೇಕೆಂದು ಹೇಳುತ್ತೇವೆ. ಒಂದು ಪರಿಣಾಮಕಾರಿಯಾದ ಶಿಕ್ಷಣ ಬರಬೇಕಾದರೆ, ಒಂದು ತರಗತಿಗೆ ಒಬ್ಬರು ಶಿಕ್ಷಕರನ್ನು ಕೊಡಬೇಕೆಂಬ ಯೋಚನೆ ತಮಗೆ ಇಲ್ಲವೇ? ತಾವು ಒಮ್ಮೆ ಆ 48 ಸಾವಿರ ಸರ್ಕಾರಿ ಶಾಲೆಗಳಿಗೆ ಹೋಗಿ ಸರ್ವೆ ಮಾಡಿ. ಕೆಲವು ಶಾಲೆಗಳಲ್ಲಿ ತರಗತಿಗೆ ಒಂದು ಮಗು ಕೂಡ ಇಲ್ಲದಂತಹ ಪರಿಸ್ಥಿತಿ ಇದೆ. ನನಗೆ ಕೊಟ್ಟಿರುವಂತಹ ಸಮಯಾವಕಾಶವನ್ನು ಬಳಸಿಕೊಂಡು ನಾನು ನಿಮಲ್ಲಿ ಆಗ್ರಹಪಡಿಸುವುದೇನೆಂದರೆ, ಈ ಬಿಸಿಯೂಟ ಅಡಿಗೆ ತಯಾರು ಮಾಡುವಂತಹ ಮಹಿಳೆಯರು ಇದ್ದಾರಲ್ಲ, ಅವರು ಫ್ರೀಡಂ ಪಾರ್ಕ್‌ನಲ್ಲಿ ಕಳೆದ ಮೂರು ದಿವಸಗಳಿಂದ ಹಗಲು ರಾತ್ರಿ ಧರಣಿ ಮಾಡುತ್ತಿದ್ದಾರೆ. ಅವರು, ಏನು ಹೇಳುತ್ತಿದ್ದಾರೆಂದರೆ, ನಮಗೆ ಇಲ್ಲಿ ಊಟ ಮಾಡುವುದಕ್ಕೆ ಅನ್ನ ಇಲ್ಲ, ನಮ್ಮ ಹತ್ತಿರ ಉಡುವುದಕ್ಕೆ ಬಟ್ಟೆ ಇಲ್ಲ; ದಿನನಿತ್ಯ ನಿಮ್ಮ ಮಕ್ಕಳಿಗೆ ಊಟ ಬಡಿಸುವಂತಹ ನಮಗೆ, ಅಲ್ಲಿ ನಮ್ಮ ಮಕ್ಕಳು ಹಸಿವಿನಿಂದ ಇದ್ದಾರೆ ಎಂದು ಹೇಳುತ್ತಿದ್ದಾರೆ. ಇದನ್ನು ಪರಿಹಾರ ಮಾಡಬೇಕೆಂದು ತಮ್ಮ ಸರ್ಕಾರಕ್ಕೆ ಅನಿಸುವುದಿಲ್ಲವೇ? ಇಲ್ಲಿಯವರೆಗೆ ಸುಮಾರು 16 ವರ್ಷಗಳಿಂದ ಕೆಲಸ ಮಾಡುತ್ತಿರುವವರಿಗೆ 1900 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಸುಮಾರು 16 ವರ್ಷಗಳಿಂದ ಕೆಲಸ ಮಾಡುವ ಬಿಸಿಯೂಟ ಮಹಿಳೆಯರಲ್ಲಿ ಇಬ್ಬರು ಇದ್ದಾರೆ, ಅದರಲ್ಲಿ ಒಬ್ಬರು ಪ್ರಮುಖ ಅಡಿಗೆ ತಯಾರು ಮಾಡುವಂತಹವರು. ಮತ್ತೊಬ್ಬರು ಅಡುಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹಾಯಕಿ ಇದ್ದಾರೆ. ಪ್ರಮುಖ ಅಡುಗೆ ತಯಾರು ಮಾಡುವವರಿಗೆ 2,000/-ರೂಪಾಯಿಗಳು ಮತ್ತು ಅಡುಗೆ ಸಹಾಯಕಿಯರಿಗೆ 1900/- ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಈ ಸಂಬಳವನ್ನು ಪಡೆದುಕೊಂಡು ಇವರು ಎಷ್ಟು ದಿವಸ ಬದುಕು ಸಾಧಿಸುವುದಕ್ಕಾಗುತ್ತದೆ? ಅವರಿಗೆ ಕನಿಷ್ಠ ವೇತನವನ್ನು ಕೊಡಿ ಎಂದು ಹೇಳಿದಾಗ, ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದೆಯಲ್ಲ. ನೀವು ಶಿಕ್ಷಣ ಇಲಾಖೆಯಲ್ಲಿ ಕ್ರಾಂತಿಕಾರಿ ಕೆಲಸ ಮಾಡುತ್ತೀರಿ ಎಂದು ನಮಗೆ ನಂಬಿಕೆ ಇದೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ...

**ಶ್ರೀ ಕೋಟ ಶೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನ್ನ ಸಮಯವನ್ನು ಕಡಿತಗೊಳಿಸದಂತೆ, ಮಾನ್ಯ ಶಿಕ್ಷಣ ಸಚಿವರಿಗೆ ಮಾತನಾಡಲು ಸಮಯವನ್ನು ಕೊಡುವುದಾದರೆ ಕೊಡಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಕಡತಕ್ಕೆ ಸೂಕ್ತವಾದಂತಹ ಮಾಹಿತಿ ಹೋಗಬೇಕು. ನಮ್ಮ ರಾಜ್ಯದಲ್ಲಿ ಬಿಸಿಯೂಟ ಕಾರ್ಯಕ್ರಮ 2001 ರಿಂದ ಜಾರಿಯಾದರೂ ಕೂಡ ಇದು ಕೇಂದ್ರ ಸರ್ಕಾರದ ಸಹಭಾಗಿತ್ವದ ಕಾರ್ಯಕ್ರಮವಾಗಿದೆ. ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಕೇಂದ್ರ ಸರ್ಕಾರ ಕೇವಲ 600/- ರೂಪಾಯಿಗಳು ಮಾತ್ರ ಕೊಡುತ್ತಿದೆ. ಆದರೆ, ರಾಜ್ಯ ಸರ್ಕಾರ ಅದಕ್ಕೆ 1600/- ರೂಪಾಯಿಗಳು ಕೊಡುತ್ತದೆ. ಇವೆರಡೂ ಸೇರಿಸಿ ಪೂರ್ಣಪ್ರಮಾಣದ ಕಾರ್ಯಕ್ರಮ ಆಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಈಗ ಶೂನ್ಯವೇಳೆಯಲ್ಲಿ ಎತ್ತಿರತಕ್ಕಂಥದ್ದಕ್ಕೂ ಸಹ ನಾನು ಉತ್ತರ ಕೊಡಬೇಕಾಗುತ್ತದೆ. ಹಾಗಾಗಿ ನೀವು ಮಾಹಿತಿ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ 1600/- ರೂಪಾಯಿಗಳನ್ನು ಕೊಡದಿದ್ದರೆ, ರಾಜ್ಯ ಸರ್ಕಾರದ ಪಾಲಿನ ಹಣವನ್ನು ಕೊಡುವುದಿಲ್ಲವೇ? ಇದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಏನು ಉತ್ತರ ಕೊಡಬೇಕೆಂಬುದನ್ನೂ ಸಹ ಅವರೇ ಹೇಳುತ್ತಿದ್ದಾರೆ. ಆಗಲೇ ತಾವು ಹೇಳಿದ್ದನ್ನು ತಾವೇ ಜ್ಞಾಪಿಸಿಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ವೈಸ್ ಛೇರ್ಮನ್**:- ಮಾನ್ಯ ಸಚಿವರೇ, ಅವರು ಕ್ಲಾರಿಫಿಕೇಷನ್ ಕೊಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಏನು ಎಂಬುದನ್ನು ಹೇಳಬೇಕು.

**ಶ್ರೀ ಕೃಷ್ಣಭೈರೇಗೌಡ(ಕೃಷಿ ಸಚಿವರು)**:- ಮಾನ್ಯ ಸಭಾಪತಿಯವರೇ, ವಿರೋಧಪಕ್ಷದವರು ಏನು ಮಾತನಾಡಬೇಕೆಂದು ನಾವು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಏನು ಹೇಳಬೇಕು ಎನ್ನುವುದನ್ನು ಅವರು dictate ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**(ಮುಂದು... )**

<u>(100)೦೮.೦೨.೨೦೧೮/೫.೫೦/ಎಂಎಂ-ವಿಕೆ</u>

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಅಂದರೆ ಇವರ ಮಾತಿನ ಅರ್ಥವೇನೆಂದರೆ, ಕೇಂದ್ರ ಸರ್ಕಾರ ಕೊಡುವುದಾದರೆ ಮಾತ್ರ ನಾವು ಸಂಬಳ ಕೊಡುತ್ತೇವೆ ಅಂತಲೇ?

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆ ಬಡವರು ಮೂರು ದಿನಗಳಿಂದ ರಸ್ತೆ ಮೇಲೆ ಮಲಗಿದ್ದಾರೆ. . .

**ಶ್ರೀ ತನ್ವೀರ್ ಸೇಠ್**:- ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಎತ್ತಿರುವ ವಿಚಾರಕ್ಕೆ ಮಾಹಿತಿ ಕೊಡಬೇಕಾದುದು ನನ್ನ ಕರ್ತವ್ಯವಾಗಿದೆ. ಹೀಗಾಗಿ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಅಥವಾ ಅಡಿಗೆ ಸಹಾಯಕರಾಗಿರಬಹುದು ಈ ಎಲ್ಲಾ ಕಾರ್ಯಕ್ರಮಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನಡೆಯುತ್ತದೆ. ಶೇ.೯೦ರಷ್ಟು ಕೇಂದ್ರ ಸರ್ಕಾರ ಮತ್ತು ಶೇ.10 ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ಕೊಡಬೇಕೆಂದು ಇದೆ. ಕೇಂದ್ರ ಸರ್ಕಾರವು ಕೇವಲ ೬೦೦ ರೂಪಾಯಿಗಳನ್ನು ಕೊಡುತ್ತಿದೆ. ಅದನ್ನು ಪರಿಷ್ಕರಣೆ ಮಾಡಿ ಎಂದು ನಾವು ಕೇಳಿದ್ದೇವೆ. ರಾಜ್ಯ ಸರ್ಕಾರ 1600 ರೂಪಾಯಿಗಳನ್ನು ಕೊಡುತ್ತಿದೆ. ಅದು ತಮಗೂ ಗೊತ್ತಿದೆ. ಆ ವಿಚಾರದಲ್ಲಿ 2-3 ಸಭೆಗಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಸಿದ್ದೇವೆ, ಇಂದು ಸಂಜೆ ಕೂಡ ಸದನದ ನಂತರ ಅವರ ಜೊತೆ ಸಭೆಯನ್ನು ನಡೆಸುತ್ತಿದ್ದೇನೆ. ಹೀಗಾಗಿ ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಒಂದು ವಿಚಾರದ ಬಗ್ಗೆ ತಾವೇ ಮಾತನಾಡಿದಿರಿ. ನಮ್ಮ ರಾಜ್ಯ ಸರ್ಕಾರವು ಸುಮಾರು ೪೬,೦೦೦ ಸರ್ಕಾರಿ ಶಾಲೆಗಳನ್ನು ನಡೆಸುತ್ತಿದೆ. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಇಲ್ಲದಿರುವಂತಹ ಪರಿಸ್ಥಿತಿ ಇದೆ.

**ವೈಸ್ ಛೇರ್ಮನ್**:- ಮಾನ್ಯ ಸಚಿವರೇ, ಈಗ ಅದೆಲ್ಲಾ ಬೇಡಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಅವರು ಎತ್ತಿರುವ ವಿಚಾರ ಏನಿದೆ ;

(ಗೊಂದಲ)

**ವೈಸ್ ಛೇರ್ಮನ್**:- ಅನ್ನಭಾಗ್ಯ ಯೋಜನೆಯ ಬಗ್ಗೆ ಮಾತ್ರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಎಷ್ಟು ಮಕ್ಕಳಿದ್ದರೆ ಎಷ್ಟು ಅಡಿಗೆಯವರು ಇರಬೇಕು ಎನ್ನುವುದು ಇದೆ.

**VICE CHAIRMAN:-** Don't deviate the subject.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನಾನು ಆಗ್ರಹ ಮಾಡುತ್ತಿದ್ದೇನೆ ಕೇಳಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಸುಮಾರು ೪೩ ಲಕ್ಷ ಮಕ್ಕಳಿದ್ದಾರೆ. ೪೩ ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ,. . .

**ವೈಸ್ ಛೇರ್ಮನ್**:- ನೀವು ಸ್ಪಷ್ಟನೆ ಕೊಟ್ಟಿದ್ದು ಸಾಕು. That clarification is enough.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಿಮ್ಮ ಇಲಾಖೆ ಸುಮಾರು 18 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇರುವ ಇಲಾಖೆಯಾಗಿದೆ. 50 ಕೋಟಿ ರೂಪಾಯಿ ಏನೂ ದೊಡ್ಡದಲ್ಲ ಅವರಿಗೆ ಕೊಟ್ಟು ಬಿಡಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ನಮಗೆ ಗೊತ್ತಿದೆ. ನಿಮ್ಮ ಸಲಹೆಗಳನ್ನು ಬೇಕಾದರೆ ಕೊಡಿ, ಅದನ್ನು ನಾವು ಸ್ವೀಕರಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಸಲಹೆಗಳನ್ನು ಕೊಡುತ್ತೇವೆ. ಅವರು ರಾತ್ರಿಯಿಡೀ ಧರಣಿ ಮಾಡುತ್ತಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಮಂತ್ರಿಯವರೇ, . . .

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ತಮ್ಮ ಜವಾಬ್ದಾರಿ ಸಲಹೆಗಳನ್ನು ಕೊಡುವುದಾಗಿದೆ ಅದನ್ನು ಕೊಡಿ. ಟೀಕೆ ಮಾಡುವಂತಹದ್ದಿದ್ದರೆ ಯಾವ ರೀತಿ ಮಾಡಬೇಕೋ ಅದಕ್ಕೆ ಉತ್ತರ ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಚಿವರೇ, ಕೇವಲ ಸಲಹೆಗೆ ಸೀಮಿತ ಮಾಡುವುದಾದರೆ ಟೀಕೆ ಮಾಡದಿದ್ದರೆ ನಾನು ವಿರೋಧಪಕ್ಷದವನಾಗುವುದಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಕೇಂದ್ರದ ಸಹಕಾರ ಮತ್ತು ರಾಜ್ಯದ ಸಹಕಾರದಿಂದ ನಡೆಯುತ್ತಿದೆ. ನಮ್ಮ ರಾಜ್ಯದ ಮಕ್ಕಳಿಗೋಸ್ಕರ ಇದು ನಡೆಯುತ್ತಿದೆ. ಅವರಿಗೂ ಹೊಟ್ಟೆ ಇದೆ, ನಮಗೂ ಹೊಟ್ಟೆ ಇದೆ. ನೀವು ಕೊಡುವುದು ಸಾಕಾಗುವುದಿಲ್ಲ ಎಂದು ಕೇಳುತ್ತಿದ್ದಾರೆ, ಅದರ ಬಗ್ಗೆ ಅವರು ಹೇಳುತ್ತಿದ್ದಾರೆ, ತಾವು ಅಷ್ಟು ಮಾತ್ರ ಕೇಳಿಸಿಕೊಳ್ಳಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ನಾವು ಪರಿಶೀಲನೆ ಮತ್ತು ಚರ್ಚೆ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ನಾವು ಒತ್ತಾಯವನ್ನು ಮಾತ್ರ ಮಾಡಬಹುದು, ಅಧಿಕಾರ ನಡೆಸುವುದು ಅವರಿಗೆ ಸಂಬಂಧಪಟ್ಟದ್ದಾಗಿದೆ. 16ನೇ ಪುಟದಲ್ಲಿ ಮೀನುಗಾರಿಕೆ ಬಗ್ಗೆ ಮಾನ್ಯ ರಾಜ್ಯಪಾಲರು ಉಲ್ಲೇಖ ಮಾಡಿದ್ದಾರೆ. ಮೀನುಗಾರಿಕೆ ಬಗ್ಗೆ ಹೇಳುವುದಾದರೆ ಜಟ್ಟಿ ನಿರ್ಮಾಣ, ತಡೆಗೋಡೆ ರಚನೆ, ಹೂಳೆತ್ತದಿರುವ ಬಂದರು ಒಂದು ರೀತಿಯ ಮೃತ್ಯುಕೂಪವಾಗುವಂತಹ ಪರಿಸ್ಥಿತಿ ಇದೆ. ಇಲ್ಲಿ ನಮ್ಮ ಸರ್ಕಾರ ಇದ್ದಾಗ ನಿಮ್ಮ ಪಕ್ಷದ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಆಡಳಿತ ನಡೆಸುತ್ತಿತ್ತು. ಕೇಂದ್ರ ಮತ್ತು ರಾಜ್ಯದ ಜಂಟಿ ಯೋಜನೆಯಡಿ ನಬಾರ್ಡ್ ಯೋಜನೆಯನ್ನು ತರಬೇಕೆಂದು ಉಳ್ಳಾಲದಿಂದ ಕಾರವಾರದವರೆಗೆ ಸುಮಾರು ೩೦೦ ಕಿ.ಮೀ.ಗೆ ಶಾಶ್ವತವಾದ ತಡೆಗೋಡೆಯನ್ನು ನಿರ್ಮಾಣ ಮಾಡಬೇಕೆಂದು ಈ ಯೋಜನೆಯನ್ನು ಮಾಡಿದ್ದೆವು. ಅದಕ್ಕೆ ಬೇಕಾದ ಯೋಜನಾ ವರದಿಯನ್ನು ತಯಾರಿಸುವ ಸಂದರ್ಭದಲ್ಲಿ ಸರ್ಕಾರ ಬದಲಾಯಿತು, ನೀವು ಅಧಿಕಾರಕ್ಕೆ ಬಂದಿರಿ. ನೀವು ಒಂದು ಹೆಜ್ಜೆ ಕೆಲಸವನ್ನೂ ಮುಂದುವರೆಸಿಲ್ಲ. ಹೂಳೆತ್ತದಿರುವ ಬಂದರುಗಳು ಮತ್ತು ಮೀನುಗಾರರಿಗೆ ಆಗುವಂತಹ ಅಪಘಾತಗಳು ಇದನ್ನೆಲ್ಲಾ ಗಮನಿಸಿ ಕೂಡ ಮೀನುಗಾರರ ವಿಚಾರದಲ್ಲಿ ಸಮೃದ್ಧವಾದ ಯೋಜನೆಗಳನ್ನು ರೂಪಿಸಿದ್ದೇವೆಂದು ಕಳೆದ ಐದು ವರ್ಷಗಳಿಂದ ಮಾನ್ಯ ರಾಜ್ಯಪಾಲರಿಂದ ಭಾಷಣ ಮಾಡಿಸಿದರೆ ಅಲ್ಲೇನು ತಡೆಗೋಡೆ ರಚನೆಯಾಗುತ್ತದೆಯೇ? ದಯವಿಟ್ಟು ಇದರ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಬೇಕೆಂದು ಆಗ್ರಹ ಮಾಡುತ್ತೇನೆ. 12ನೇ ಪುಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿ ಮತ್ತು ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶನ ಮಾಡಿದೆಯೆಂದು ಹೇಳಿದ್ದಾರೆ. ಪ್ರದರ್ಶನ ಮಾಡಿರುವ ಬಗ್ಗೆ ನನ್ನ ವಾದವೇನೂ ಇಲ್ಲ. ಆದರೆ ವಾಸ್ತವಿಕವಾಗಿ ಒಂದೇ ಉದಾಹರಣೆ ಕೊಡುವುದಾದರೆ, ಹಿಂದೆ ಇದೇ ಸದನದಲ್ಲಿ ಮಾತನಾಡುವಾಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಮೂಲ ಕೊರಗರಿಗೆ ಸಾಮಾನ್ಯವಾಗಿ ಅವರು ಕಟ್ಟಕಡೆಯ ಮನುಷ್ಯರು. ಅವರನ್ನು ಆದಿವಾಸಿಗಳೆಂದು ಕರೆಯುತ್ತಾರೆ, ಇನ್ನೂ ಅಸ್ಪೃಶ್ಯತೆ ಇರುವವರಾಗಿದ್ದಾರೆ. ಅವರು ಯಾರದ್ದಾದರೂ ಬದುಕನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಪರಿಸ್ಥಿತಿಯಲ್ಲಿ ಕಷ್ಟಪಡುವವರಾಗಿದ್ದಾರೆ. ಅವರಲ್ಲಿ ವಿದ್ಯಾವಂತರ ಸಂಖ್ಯೆ ತುಂಬಾ ಕಡಿಮೆ ಇದೆ. ಅವರಿಗೆ ವಸತಿ ಇಲ್ಲವೆಂಬ ಕಾರಣಕ್ಕೋಸ್ಕರ, ಮಾನ್ಯ ಸಮಾಜಕಲ್ಯಾಣ ಸಚಿವರಾದ ಶ್ರೀ ಆಂಜನೇಯರವರು ಭಾಷಣ ಮಾಡುವಾಗ ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿರುವ ಎಲ್ಲಾ ಕೊರಗರಿಗೂ ಕೂಡ ಸರ್ಕಾರ ನಿರ್ಮಿತಿ ಕೇಂದ್ರದ ಮೂಲಕ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಮನೆಗಳನ್ನು ಉಚಿತವಾಗಿ ಕಟ್ಟಿ ಕೊಡುತ್ತೇವೆ. ಎಷ್ಟು ಅರ್ಜಿಗಳನ್ನು ಬೇಕಾದರು ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಅದಕ್ಕೆ ನಾವೆಲ್ಲಾ ಅರ್ಜಿಗಳನ್ನು ಕೊಟ್ಟೆವು. ಆದರೆ ಒಂದು ಮನೆ ಬಿಡಿ, ತಳಹದಿ ಕೂಡ ಆಗಿಲ್ಲ. ನಿವೇಶನ ಕೂಡ ಕೊಟ್ಟಿಲ್ಲ. ಸಮಾಜ ಕಲ್ಯಾಣ ಇಲಾಖೆ ಎಷ್ಟು ವೇಗವಾಗಿ ಹೋಗುತ್ತಿದೆ ಎಂದು ಹೇಳುತ್ತಿದ್ದೇನೆ. ಹಾಗೆಂದು ಮಾನ್ಯ ಸಚಿವರಾದ ಆಂಜನೇಯರವರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೆಲಸ ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಹೊಸ ವರ್ಷದ ಮುಂಚಿನ ದಿವಸ ಮಾನ್ಯ ಆಂಜನೇಯರವರು ಉಡುಪಿ ಜಿಲ್ಲೆಗೆ ಬಂದಿದ್ದರು. ಅದು ಯಾವ ವರ್ಷವೆಂದು ನೆನಪಿಗೆ ಬರುತ್ತಿಲ್ಲ. ಎಲ್ಲರೂ ಹೊಸ ವರ್ಷಾಚರಣೆಯ ಸಂಭ್ರಮದಲ್ಲಿರುವಾಗ ಇವರು ಉಡುಪಿ ಜಿಲ್ಲೆಯ ಬೈಂದೂರಿನಲ್ಲಿರುವ ಯಾವುದೋ ಒಂದು ಗ್ರಾಮದ ಪರಿಶಿಷ್ಟ ಜಾತಿಯ ಕೇರಿಗೆ ಹೋಗಿ ನಿದ್ರೆ ಮಾಡಿದರು. ಸುಮಾರು 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಟ್ಟರು, ಅದು ಘೋಷಣೆಯಾಯಿತು, ಪತ್ರಿಕಾ ಗೋಷ್ಠಿ ಕೂಡ ಮಾಡಿದರು. ನಾನು ಆ ಸಮಾರಂಭಕ್ಕೆ ಹೋಗಿ ‘ಬಡವರ ಬಗ್ಗೆ ಯೋಚನೆ ಮಾಡುವ ಸರ್ಕಾರದ ಮಂತ್ರಿಯಾಗಿ ಬಂದು ಈ ದಟ್ಟಾರಣ್ಯದ ಮಧ್ಯೆ ಇರುವ ಬಡವರ ಕೇರಿಗೆ ಬಂದು, ಈ ಬಡವರಿಗೆ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಅದಕ್ಕಾಗಿ ನಿಮಗೆ ಅಭಿನಂದನೆಗಳು’ ಎಂದು ಹೇಳಿದೆ. ಆದರೆ ಇಂದಿಗೂ ಅಲ್ಲಿ ಒಂದು ಕಲ್ಲು ಕೂಡ ಬಿದ್ದಿಲ್ಲ. ಸರ್ಕಾರದ ಅವಧಿ ಇನ್ನು ಮೂರು ತಿಂಗಳಿದೆ. ಇದು ಹೌದಾದರೆ ಯೋಚನೆ ಮಾಡಿ. ಇದು ನಮ್ಮ ಸರ್ಕಾರ ಎಂದು ಸಂತೋಷ ಪಡಬೇಕು. ಆ ಸರ್ಕಾರಕ್ಕೆ ಇಚ್ಛಾಶಕ್ತಿ ಇದೆ ಎಂದು ಹೇಳುವಾಗ ವ್ಯವಸ್ಥೆಗಳಲ್ಲಿ ಪ್ರಗತಿಯಾದರೂ ಆಗಬೇಕಲ್ಲವೇ. ಅಂತಹ ಸ್ಥಿತಿಗಳ ನಡುವೆ ಕೆಲಸಗಳನ್ನು ಮಾಡುವ ಪರಿಸ್ಥಿತಿ ಇದೆ ಎನ್ನುವುದನ್ನು ನೀವು ಮನಗಾಣಬೇಕು ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಪುಟ 14ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಅದ್ಭುತವಾದ ಪ್ರಗತಿಯಲ್ಲಿದೆ ಎಂದು ಮಾನ್ಯ ರಾಜ್ಯಪಾಲರು ಹೇಳುತ್ತಾರೆ. ಗರ್ಭಿಣಿ ಮತ್ತು ಬಾಣಂತಿಯರಿಗೆ ಮಾತೃಪೂರ್ಣ ಯೋಜನೆ ಎಂಬುದನ್ನು ರೂಪಿಸಿದ್ದೀರಿ. ನನ್ನ ದೃಷ್ಟಿಯಲ್ಲಿ ಇದು ಒಳ್ಳೆಯ ಯೋಜನೆಯಾಗಿದೆ. ದೂರದರ್ಶನದಲ್ಲಿ ಒಂದು ಜಾಹೀರಾತು ಬರುತ್ತದೆ. ಒಬ್ಬಳು ಗರ್ಭಿಣಿ ಮೊಟ್ಟೆಯನ್ನು ತಿನ್ನುತ್ತಿರುತ್ತಾಳೆ, ಅವಳ ಎರಡು ಮಕ್ಕಳು ಮಧ್ಯೆ ಬಂದು ಊಟವನ್ನು ತೆಗೆದುಕೊಳ್ಳುತ್ತಾರೆ. ಕಡೆಗೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಫೋಟೋ ಬರುತ್ತದೆ. ಆಗ ಸದಾ ಬಡವರ ಅಭಿವೃದ್ಧಿಗೆ ಸಿದ್ಧ ಸರ್ಕಾರ ಎಂದು ಹೇಳುತ್ತದೆ.

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ‘ಸದಾ ಸಿದ್ಧ ಸರ್ಕಾರ’ ಎಂದು ಹೇಳುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದೆಲ್ಲಾ ಇವರಿಗೆ ಬಾಯಿಪಾಠವಾಗಿದೆ. ಅದನ್ನು ಇವರೇ ಬರೆದುಕೊಟ್ಟಿದ್ದಾರೆ. ಇದರಲ್ಲಿ ಅವರು ಕೊಡುತ್ತಿರುವುದು ಸುಮಾರು 08 ಲಕ್ಷದ 31 ಸಾವಿರ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಉಚಿತವಾದ ಊಟ ಕೊಡುತ್ತೇವೆಂದು ಹೇಳುತ್ತಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಕರೆ ಮಾಡಿ ಕೇಳಿದರೆ ಅವರ ಗುರಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇರುವ ಉಡುಪಿ ಜಿಲ್ಲೆಯಲ್ಲಿ ಸುಮಾರು 15,300 ಜನರನ್ನು ಮಾತ್ರ ಗುರುತಿಸಿದ್ದಾರೆ. ಆದರೆ ಆ ಪೈಕಿ ಸುಮಾರು ಎರಡೂವರೆ ಸಾವಿರ ಜನರು ಊಟ ಮಾಡುತ್ತಿದ್ದಾರೆ. ಉಡುಪಿ, ಕಾರ್ಕಳ, ಕುಂದಾಪುರ ತಾಲ್ಲೂಕು ಪಂಚಾಯತಿಯವರು ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ನವರು ಒಂದು ನಿರ್ಣಯ ಮಾಡಿದರು. ನಮ್ಮ ಜಿಲ್ಲೆಯಲ್ಲಿ ಏನು ಮಾಡಿದರೂ ಇದು ಅನುಷ್ಠಾನಕ್ಕೆ ಬರುತ್ತಿಲ್ಲ. ಅದಕ್ಕೋಸ್ಕರ ಹಿಂದೆ ಆಹಾರದ ಪ್ಯಾಕೆಟ್ ಅನ್ನು ಕೊಡುತ್ತಿದ್ದ ಹಾಗೆ ಈಗಲೂ ಅದೇ ಪ್ರಮಾಣದಲ್ಲಿ ಕೊಡಿ ಎಂದು ಹೇಳಿದರು. ಅದರ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿದರೂ ಕೂಡ ಇವತ್ತಿನವರೆಗೂ 'ಬೇಕಿದ್ದರೆ ಊಟ ಮಾಡಿ, ಬೇಡದಿದ್ದರೆ ವೇಸ್ಟ್ ಮಾಡಿ' ಎನ್ನುವಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಇದು ಯಾವ ಸರ್ಕಾರ, ಯಾವ ಮಂತ್ರಿಗಳು ಕೆಲಸಗಳನ್ನು ಮಾಡಬೇಕು? ನಮ್ಮ ಜಿಲ್ಲೆಗೆ ಕೃಷಿ ಮಂತ್ರಿಯವರೊಬ್ಬರು ಬರುವುದನ್ನು ನಾನು ನೋಡಿದ್ದೇನೆ. ಅವರು ಅಲ್ಲಿಗೆ 3-4 ಬಾರಿ ಬಂದಿದ್ದರು. ಅವರೊಬ್ಬರು ಬಂದಿರುವುದನ್ನು ಮಾತ್ರ ನಾನು ನೋಡಿದ್ದೇನೆ. ಉಳಿದ ಯಾವ ಮಂತ್ರಿಯವರೂ ಜಿಲ್ಲಾ ಭೇಟಿಯನ್ನು ಮಾಡಿಲ್ಲ. ಮಂತ್ರಿಯವರು ಕೇವಲ ಅವರ ಜಿಲ್ಲೆಗೆ ಮಾತ್ರ ಸಚಿವರಾಗಿದ್ದಾರೆ ಮತ್ತೆ ಕೆಲವರು ಅವರ ಕ್ಷೇತ್ರಕ್ಕೆ ಮಂತ್ರಿಯಾಗಿದ್ದಾರೆ ಎನ್ನುವ ಪರಿಸ್ಥಿತಿ ಇದೆ. ದಯವಿಟ್ಟು ಇದರ ಬಗ್ಗೆ ತಾವು ಯೋಚನೆ ಮಾಡಿ ಎಂದು ವಿನಂತಿ ಮಾಡುತ್ತೇನೆ.

ನೀರಾವರಿ ಬಗ್ಗೆ ಬಹಳ ಕರಾರುವಕ್ಕಾದ ವಿಷಯಗಳನ್ನು ಹೇಳಿದ್ದಾರೆ. ಕುಡಿಯುವ ನೀರಿನ ಬಗ್ಗೆ, ನೀರಾವರಿ ಬಗ್ಗೆ ಬೇರೆ ಬೇರೆ ಯೋಜನೆಗಳನ್ನು ರೂಪಿಸಿದ್ದೀರಿ. ನಾನು ಒಂದೇ ಯೋಜನೆ ಬಗ್ಗೆ ಮಾತ್ರ ಮಾತನಾಡುತ್ತೇನೆ, ಎಲ್ಲಾ ಯೋಜನೆಗಳ ಬಗ್ಗೆ ಮಾತನಾಡಲು ನನಗೆ ಸಮಯವಿಲ್ಲ. ಇವತ್ತು ಎತ್ತಿನಹೊಳೆ ಯೋಜನೆ ಬಗ್ಗೆ ಚರ್ಚೆಯಾಗುತ್ತಿದೆ. ಎತ್ತಿನಹೊಳೆ ಯೋಜನೆ ಬೇಕು-ಬೇಡ ಎನ್ನುವುದನ್ನು ನಾನು, ಮಾನ್ಯ ವೀರಯ್ಯನವರು ಮತ್ತು ಮಾನ್ಯ ಉಗ್ರಪ್ಪನವರು ನೋಡಿಕೊಳ್ಳುತ್ತೇವೆ. ಅದನ್ನು ಸರ್ಕಾರಕ್ಕೆ ತಂದು ಹಾಕುವುದಿಲ್ಲ. ನಾನು ಮತ್ತು ಮಾನ್ಯ ಐವನ್ ಡಿ'ಸೋಜಾರವರು ಬೇರೆ ಯೋಚನೆಯಲ್ಲಿದ್ದೇವೆ. ಎತ್ತಿನಹೊಳೆ ಯೋಜನೆಗೆ ಸುಮಾರು 13,716 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಇದೆ. ಈಗಾಗಲೇ ಸುಮಾರು 2,565 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಇದು ಪ್ರಾರಂಭವಾಗಿ ನಾಲ್ಕು ವರ್ಷಗಳಾಯಿತು. ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಇದುವರೆಗೂ ಒಂದು ಹನಿ ನೀರು ಕೂಡ ಎಲ್ಲಿಗೆ ಬರಬೇಕೋ ಅಲ್ಲಿಗೆ ಬಂದಿಲ್ಲ. ಅದನ್ನೇ ನಾವು 'ಪರ್ಸೆಂಟೇಜ್' ಎಂದು ಹೇಳಿದೆವು. ಅವ್ಯವಹಾರ ಎಂದು ಹೇಳಿದ್ದು ಏಕೆಂದರೆ, ನಿಮಗೆ ಸಿಟ್ಟು ಬರಬೇಕು, ಜಗಳ ಮಾಡಬೇಕು, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೆಲ್ಲಾ ಇದ್ದದ್ದೇ. ನಾವು ಶೇ.10, ಶೇ.5, ಶೇ.15 ಎಂದು ಹೇಳಿದರೆ ನೀವು ಗಲಾಟೆ ಮಾಡುತ್ತೀರಿ. ಇದನ್ನೇ ಪರ್ಸೆಂಟೇಜ್ ಎಂದು ಹೇಳುವುದು. ಸುಮಾರು ಮೂರು ವರ್ಷಗಳಿಂದ ಸಾವಿರಗಟ್ಟಲೆ ಪೈಪುಗಳು ತುಕ್ಕು ಹಿಡಿದು ಬಿದ್ದಿವೆ. ಒಂದು ಹನಿ ನೀರು ಹೋಗಿಲ್ಲ, ಸುಮಾರು 2,650 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಹಾಗಿದ್ದರೆ, ಯಾವಾಗ ಎತ್ತಿನಹೊಳೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯನ್ನು ಪೂರೈಸುತ್ತೀರಿ? ಹಣ ಮಾಡುವ ದಂಧೆಗೋಸ್ಕರ ಈ ಯೋಜನೆಯನ್ನು ಹುಟ್ಟುಹಾಕಿದಿರೇ? ಈ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕು. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ, ಪರ್ಸೆಂಟೇಜ್ ಎಂದು ಹೇಳಿರುವುದು ಇದನ್ನೇ. ಇಂತಹ ವ್ಯವಹಾರಗಳಿಂದಾಗಿ ಆಗುವಂತಹದ್ದು. 2,650 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪರಿಸ್ಥಿತಿಗಳು ಇಂತಹ ಮಟ್ಟಕ್ಕೆ ಬಂದ ನಂತರ ಎತ್ತಿನಹೊಳೆ ಯೋಜನೆಗೆ ಆಗಬೇಕೆಂಬುದು ನನ್ನ ಆಗ್ರಹ, ವಿನಂತಿ ಇಷ್ಟೇ, ಸರ್ಕಾರಕ್ಕೆ ಶಕ್ತಿ ಸಾಮರ್ಥ್ಯ ಇದ್ದರೆ, ಎತ್ತಿನಹೊಳೆ ಯೋಜನೆಯನ್ನು ನಿಮ್ಮದೇ ಲೋಕಾಯುಕ್ತರ ಮೂಲಕ ತನಿಖೆ ಮಾಡಿಸಿ. ನಾನು ಹೇಳಿದ ಹಾಗೆ ಪರ್ಸೆಂಟೇಜ್ ವ್ಯವಹಾರವಾಗುತ್ತಿದೆ. ಖಾಲಿ ಪೈಪುಗಳನ್ನು ಹಾಕಿ ಕೋಟ್ಯಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಮಾನ್ಯ ಸಭಾನಾಯಕರು ಈಗಲೇ ಉತ್ತರ ಕೊಡಬಹುದು. ಇಲ್ಲವೇ ನಂತರ ಉತ್ತರ ಕೊಡಬಹುದು. ಕೂಡಲೇ ಪೂರ್ಣ ತನಿಖೆ ಮಾಡುತ್ತೇನೆ, ಆಪಾದನೆಗಳು ಸುಳ್ಳು, ಎತ್ತಿನಹೊಳೆ ಯೋಜನೆಯಲ್ಲಿ ಪರ್ಸೆಂಟೇಜ್ ವ್ಯವಹಾರ ಆಗಿಲ್ಲ, ಎತ್ತಿನಹೊಳೆ ಒಂದು ಪಾರದರ್ಶಕವಾದ ವ್ಯವಸ್ಥೆ, ತಕ್ಷಣವೇ ಲೋಕಾಯುಕ್ತ ತನಿಖೆಯಾಗಲಿ ಎಂದು ಹೇಳುವುದಾದರೆ ಅದಕ್ಕೆ ನನ್ನ ಆಕ್ಷೇಪ ಇಲ್ಲ.

(ಮುಂದು . . .

(101) 08-02-2018/ 6-00 /ಕೆಹೆಚ್/ವಿಕೆ

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-** ಇದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಎಲ್ಲರನ್ನೂ ಕೇಳಿ ನನಗೆ ಉತ್ತರವನ್ನು ಕೊಡುವವರೆಗೂ ಕಾಯುತ್ತೇನೆ ಎಂದು ಹೇಳಿದೆ. ಇದು ಸರ್ಕಾರದ ಗೌರವದ ಪ್ರಶ್ನೆ. ನಿಮ್ಮ ಮೇಲೆ ನಮಗೆ ಬಹಳ ಪ್ರೀತಿ ಇದೆ. ಪ್ರೀತಿ ಇಲ್ಲ ಎಂದು ನಾನು ಹೇಳಲಿಲ್ಲ. ಇದು ಸರ್ಕಾರದ ವ್ಯವಸ್ಥೆಯಾಗಿದೆ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅವರ ಸರ್ಕಾರದ ಅಧಿಕಾರಾವಧಿಯಲ್ಲಿ ಆಗಿರುವುದೆಲ್ಲವನ್ನು ಈಗಲೂ ಹಾಗೆಯೇ ಹೇಳುತ್ತಿದ್ದಾರೆ. ಅದು ನಾವು ಮಾಡಿರುವಂತಹ ಪರ್ಸೆಂಟೇಜ್ ಆಗಿದೆ. ಇದು ಒಟ್ಟು 13 ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದ್ದು, ಕೇವಲ 2600 ಕೋಟಿ ರೂಪಾಯಿಗಳಿಗೆ ನೀರು ಬಂದು ಬಿಡುತ್ತದೆಯೇ? ಪೂರ್ಣ ಮಟ್ಟದಲ್ಲಿ ಕೆಲಸ ಆಗಬಾರದೇ? ಮಾನ್ಯ ಸದಸ್ಯರೆ ನಾನು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವುದು ನಿಜ. ಒಂದು ಓವರ್ ಹೆಡ್ ಟ್ಯಾಂಕ್, ಬಾವಿ ಮತ್ತು ಪೈಪ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೈನ್‌ಗಳ ಅಭಿವೃದ್ಧಿ ಕೆಲಸಗಳಿಗೆ ಸುಮಾರು 5 ಕೋಟಿ ರೂಪಾಯಿಗಳ ಯೋಜನೆಯ ವೆಚ್ಚವಾಗುತ್ತದೆ ಎಂದು ಇಟ್ಟುಕೊಳ್ಳೋಣ.

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಎಲ್ಲೆಲ್ಲಿ ಪೈಪ್ ಲೈನ್‌ಗಳು, ಓವರ್ ಹೆಡ್ ಟ್ಯಾಂಕ್‌ಗಳು ಆಗಿದೆ ಎಂಬುದನ್ನು ಹೋಗಿ ನೋಡಿಕೊಂಡು ಬರುವುದಕ್ಕೆ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಓವರ್ ಹೆಡ್ ಟ್ಯಾಂಕ್, ಬಾವಿ, ಪೈಪ್ ಲೈನ್‌ನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದು ಸರಿಯಾದ ಬದುಕಲ್ಲವೆಂದು ಹೇಳುತ್ತೇನೆ.

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೆ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಬೇಕಾದರೂ ಮಾತನಾಡುವುದಲ್ಲ. ನಾನು ಅವರ ಹತ್ತಿರ ಕೇಳಿ ಮಾತನಾಡಬೇಕೆ. ಮಾನ್ಯ ಸದಸ್ಯರು ಇಲ್ಲಿಯವರೆಗೂ ಯಾವುದೇ ರೀತಿಯಲ್ಲಿ ಗಡಿಬಿಡಿಯನ್ನು ಮಾಡಲಿಲ್ಲ. ಮಾನ್ಯ ಸಭಾನಾಯಕರೆ ಮಾನ್ಯ ಸದಸ್ಯರಿಗೆ ತಾವು ಏನಾದರೂ ಹೇಳಿ ಮಾತನಾಡುವುದಕ್ಕೆ ಬಿಟ್ಟಿರಬಹುದು ಎಂದು ನನಗೆ ಅನುಮಾನ ಬರುತ್ತಿದೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೆ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಆಯಿತು. ಅದರ ಬಗ್ಗೆ ನನಗೆ ಅಡ್ಡಿ ಇಲ್ಲ. ಮಾನ್ಯ ಸದಸ್ಯರು ಆ ರೀತಿ ಯಾವತ್ತೂ ಮಾಡಲಿಲ್ಲ. ಅವರು ಬಹಳ ಒಳ್ಳೆಯವರಿದ್ದಾರೆ.

**ವೈಸ್ ಛೇರ್ಮನ್**:- ಮಾನ್ಯ ಸದಸ್ಯರಾದ ರಿಜ್ವಾನ್ ಅರ್ಷದ್ ರವರೇ ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ, ನೀವು ಅವರಿಗೆ brief ಮಾಡಿ. ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿರವರು ಇದರ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಇವತ್ತು ಏಕೆ ಈ ರೀತಿ ಮಾತನಾಡುತ್ತಿದ್ದಾರೆ? ಮಾನ್ಯ ಸಭಾಪತಿಯವರೆ, ಈ ರೀತಿಯ ಮಾನಸಿಕ ಸ್ಥಿತಿ ಒಮ್ಮೊಮ್ಮೆ ನಮ್ಮೆಲ್ಲರಿಗೂ ಆಗುತ್ತದೆ. ನಾವು ಒಂದು ಗ್ರಾಮ ಪಂಚಾಯಿತಿಯಲ್ಲಿ ಒಂದು ಬಾವಿ ಮತ್ತು ಓವರ್ ಹೆಡ್ ಟ್ಯಾಂಕ್‌ಗೋಸ್ಕರ 5 ಲಕ್ಷ ಅಥವಾ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. ಇದನ್ನೆಲ್ಲ ಮಾಡಬೇಕಾದರೆ ಮೊದಲು ಜಲಸಂಪನ್ಮೂಲಗಳನ್ನು ನೋಡುತ್ತಾರೆ. ಅದಕ್ಕೆ ಹೆಚ್ಚುವರಿಯಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರ್ಚಾಗುತ್ತದೆ. ನಂತರ ಓವರ್ ಹೆಡ್ ಟ್ಯಾಂಕ್ ಮಾಡುತ್ತಾರೆ. ಕಡೆಯಲ್ಲಿ ಪೈಪ್ ಲೈನ್ ಅನ್ನು ಮಾಡುತ್ತಾರೆ. ಆದರೆ ಇಲ್ಲಿ ಮೊದಲು ಪೈಪ್ ಲೈನ್‌ಗಳನ್ನು ಮಾಡುತ್ತಾರೆ. ಏಕೆಂದರೆ ಇದು ಸುಲಭದ ಕೆಲಸವಾಗಿದ್ದು, ಇದರಿಂದ ಪರ್ಸೆಂಟೇಜ್ ಜಾಸ್ತಿ ಸಿಗುತ್ತದೆ ಎಂದು ಮಾಡುತ್ತಾರೆ. ಈ ಪರ್ಸೆಂಟೇಜ್ ಸಿಗುವುದರಲ್ಲಿ ಇಂಜಿನಿಯರ್‌ಗಳು, ಅವರು ಇವರು ಎಂದು ಸಹಾಯ ಮಾಡುತ್ತಾರೆ. ಇದರಿಂದ ಇವರಿಗೂ ಸಹ ಪರ್ಸೆಂಟೇಜ್ ಸಿಗುತ್ತದೆ. ನಾನು ಏನು ಹೇಳುತ್ತಿದ್ದೇನೆಂದರೆ, ನೀವು ನೀರಿನ ಮೂಲವನ್ನು ಹುಡುಕಿ ಪೈಪ್ ಲೈನ್‌ಗಳ ಮೂಲಕ ಏನೇನು ಯೋಜನೆಗಳನ್ನು ಮಾಡಬೇಕೋ ಅದನ್ನು ಮಾಡಿದರೆ, ಇಷ್ಟು ನೀರು ಹೋಗುವ ಪ್ರಮಾಣದಲ್ಲಿ ಒಂದಿಷ್ಟು ಭಾಗ ನೀರು ಬರುತ್ತಿತ್ತು. ಈ ಯೋಜನೆಯನ್ನು ಜಾರಿಗೆ ಬಂದ ಕೂಡಲೇ 2 ಸಾವಿರ ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಇವರು ಮೊದಲು ಪೈಪ್‌ಗಳನ್ನು ಖರೀದಿ ಮಾಡುತ್ತಾರೆ. ಈಗ ಆ ಪೈಪ್‌ಗಳೆಲ್ಲ ತುಕ್ಕು ಹಿಡಿದು ಬಿಟ್ಟಿದೆ. ಈ ವ್ಯವಸ್ಥೆಯ ಬಗ್ಗೆ ಹೇಳಿದಾಗ ನಿಮ್ಮ ಸರ್ಕಾರವಿದ್ದಾಗ ಇದೇ ರೀತಿ ಮಾಡಲಾಗಿತ್ತೆ ಎಂದು ಕೇಳುತ್ತಾರೆ. ಹೌದು, ನಾವು ತಪ್ಪು ಮಾಡಿ ಈಚೆ ಕುಳಿತುಕೊಂಡಿದ್ದೇವೆ. ನೀವು ಸಹ ಈಚೆಗೆ ಬರುತ್ತೀರಾ?

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೆ, ಈಗಲಾದರೂ ಮಾನ್ಯ ಸದಸ್ಯರು ತಪ್ಪು ಮಾಡಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಇದು ಜನಾದೇಶವಾಗಿದೆ. ನಾವು ಪ್ರಜಾಪ್ರಭುತ್ವದಲ್ಲಿ ಜನರು ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುತ್ತಾರೆ ಎಂದು ನಂಬಿದ್ದೇವೆ. ನಾವು ತಪ್ಪು ಮಾಡದೇ ಪೂರ್ಣ ಪ್ರಮಾಣದಲ್ಲಿ ಮತ್ತು ಅತ್ಯಂತ ವ್ಯವಸ್ಥಿತವಾಗಿ ಈ ಯೋಜನೆಯನ್ನು ಮಾಡಿದ್ದರೆ, ನಮ್ಮನ್ನು ಜನರು ಈಚೆ ಕೂರಿಸುತ್ತಿದ್ದಾರಾ? ಎನ್ನುವಂತಹ ಪ್ರಶ್ನೆ ಉದ್ಭವಿಸುತ್ತದೆ. ಹಾಗಾದರೆ ಜನರು ತಪ್ಪು ಮಾಡುತ್ತಾರೆಯೇ? ಪ್ರಜಾಪ್ರಭುತ್ವದಲ್ಲಿ ಜನರು ತಪ್ಪು ಮಾಡಿದ್ದಾರೆಯೇ, ತಾವು ಬರುವುದಕ್ಕಿಂತ ಮುಂಚೆ ಶ್ರೀ ನಾಣಯ್ಯನವರು ಇದ್ದರು. ಅವರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ, ಇವೆಲ್ಲವುದಕ್ಕಿಂತ 'ಜನಾಂಗ ಅತ್ಯಂತ ಸರ್ವ ಶ್ರೇಷ್ಠ' ಎಂಬ ಮಾತನ್ನು ಅವರು ಹೇಳುತ್ತಿದ್ದರು. 'ಜನಾದೇಶವೇ ಅಂತಿಮ' ಅದು ನ್ಯಾಯಾಂಗವನ್ನು, ಕಾರ್ಯಾಂಗವನ್ನು, ಶಾಸಕಾಂಗವನ್ನು ಸೃಷ್ಠಿ ಮಾಡುತ್ತದೆ. ನಮ್ಮ ಮತ್ತು ನಿಮ್ಮನ್ನು ಈ ಸ್ಥಾನಕ್ಕೆ ಬರುವಂತೆ ಮಾಡಿದವರು ಜನಾಂಗದವರು. ಅವರೇ ತಪ್ಪು ಮಾಡಿದ್ದಾರೆ ಎಂದು ನಾನು ಹೇಳಬೇಕೆ. ಆ ಕಾರಣಕ್ಕೋಸ್ಕರ ಜನರು ನಮಗೆ ಶಿಕ್ಷೆ ಕೊಟ್ಟಿದ್ದಾರೆ ಎಂದು ಹೇಳಿದರೆ, ಅವರ ನಿರೀಕ್ಷೆಯ ಪ್ರಮಾಣದಲ್ಲಿ ನಾವು ತಲುಪಿಲ್ಲವೆಂದು ನಾವು ತಿಳಿದುಕೊಳ್ಳುತ್ತೇವೆ. ನೀವು ಒಪ್ಪಿಕೊಳ್ಳುವುದಾದರೆ ಈಚೆಗೆ ಬನ್ನಿ, ನಾವು ಆಚೆಗೆ ಹೋಗೋಣ. ದಯವಿಟ್ಟು ಈ ರೀತಿಯ ವ್ಯವಸ್ಥೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್**:- ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ ಮಾತನಾಡಿದ್ದು ಮುಗಿಯಿತೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ಇನ್ನು 5-10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಇದರ ಬಗ್ಗೆ ಇನ್ನು ಮಾತನಾಡುವವರು ಯಾರು ಇಲ್ಲ ಎಂದು ನನಗನಿಸುತ್ತಿದೆ.

**ವೈಸ್ ಛೇರ್ಮನ್**:- ಇದರ ಬಗ್ಗೆ ಇನ್ನೊಬ್ಬರು ಮಾತನಾಡುವುದಕ್ಕೆ ಇಚ್ಛೆಪಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ನಾನು ಅವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಮಾತನಾಡುವುದು. ನಾನು ಮಾತನಾಡುವುದೆಲ್ಲಾ ಮುಗಿಯಿತು.

**ವೈಸ್ ಛೇರ್ಮನ್**:- ಮಾನ್ಯ ರಮೇಶ್ ಬಾಬು ರವರು ಮಾತನಾಡಲು ಇಚ್ಛಿಸುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣದ ಪುಟ ೧೮ರ ಕಂಡಿಕೆ ೩೨ ರಲ್ಲಿ ಪಂಚಾಯತ್ ರಾಜ್ . . . .

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಯವರು ಮಾತನಾಡಿದ ಮೇಲೆ ಸದನವನ್ನು ಮುಕ್ತಾಯ ಮಾಡೋಣವೆಂದು ಹೇಳುತ್ತಿದ್ದೇನೆ.

**ವೈಸ್ ಛೇರ್ಮನ್**:- ಇದರ ಬಗ್ಗೆ ಮಾತನಾಡುವವರಿಗೆಲ್ಲಾ ಅವಕಾಶವಿದೆ. ಏನೂ ತೊಂದರೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣದ ಪುಟ ೧೮ರ ಕಂಡಿಕೆ ೩೨ ರಲ್ಲಿ ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. 'ಉದ್ಯೋಗ ಖಾತ್ರಿ ಯೋಜನೆ'ಯನ್ನು ನಮ್ಮ ರಾಜ್ಯ ಸರ್ಕಾರವು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದಿದೆ. ಸಾಮಾನ್ಯವಾಗಿ ಒಂಬತ್ತೂವರೆ ಕೋಟಿ ಮಾನವ ದಿನಗಳನ್ನು ನಿರ್ವಹಣೆ ಮಾಡಿರುವುದು, ಸಾಧಾರಣ ಕೆಲಸವೇನಲ್ಲ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರಿಗೆ ನಮ್ಮ ಬಗ್ಗೆ ಎಷ್ಟೇ ನಿಷ್ಠೂರವಿದ್ದರೂ ಕೂಡ, ನನಗೆ ಅವರ ಮೇಲೆ ಬಹಳ ಗೌರವ ಇದೆ. ಸಾಮಾನ್ಯವಾಗಿ ಗಾಂಧಿ ಪ್ರತಿಮೆಯ ಮುಂದೆ ಎಲ್ಲ ಪಾರ್ಟಿಯವರೂ ಹೋಗಿ ಕುಳಿತುಕೊಂಡೆವು. 3F (Funds, Functions and Functionaries) ಎಂದು ಏನು ಕರೆಯುತ್ತೇವೆ. ಪಂಚಾಯಿತಿ ಇಲಾಖೆಗೆ ಕೊಡುವಂತಹ ಅಧಿಕಾರ, ಪಂಚಾಯಿತಿ ಇಲಾಖೆಗೆ ಕೊಡುವಂತಹ ಅನುದಾನ, ಸರ್ಕಾರವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿ ಇಲಾಖೆಗೆ ಕೊಡುವಂತಹ ಸಿಬ್ಬಂದಿಗಳನ್ನು ಇನ್ನೂ ಕೊಟ್ಟಿಲ್ಲ. ಅದಕ್ಕೋಸ್ಕರ ನಾವೆಲ್ಲಾ ಈ ಸರ್ಕಾರದ ಗಮನವನ್ನು ಸೆಳೆಯುವುದಕ್ಕೋಸ್ಕರ ಗಾಂಧಿ ಪ್ರತಿಮೆಯ ಮುಂದೆ ಎಲ್ಲಾ ಪಾರ್ಟಿಯವರೂ ಅಂದರೆ 17 ಜನ ಶಾಸಕರು ಹೋಗಿ ಕುಳಿತುಕೊಂಡೆವು. ರಾಜ್ಯ ಸರ್ಕಾರವು ನಮ್ಮನ್ನು ಮಾತನಾಡಿಸುವುದಕ್ಕೆ ಬರಲೇ ಇಲ್ಲ. ನಮ್ಮ ಭ್ರಮೆ, ನಮ್ಮ ತಲೆಯಲ್ಲಿ ಏನಿತ್ತೆಂದರೆ ನಾವೆಲ್ಲಾ ಹೋಗಿ ಗಾಂಧಿ ಪ್ರತಿಮೆಯ ಮುಂದೆ ಕುಳಿತುಕೊಂಡ ಕೂಡಲೇ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವಂತಹ ಸರ್ಕಾರ, ನಮ್ಮ ಶಾಸಕರುಗಳೆಲ್ಲಾ ವಿಕಾಸ ಸೌಧ ಮತ್ತು ವಿಧಾನ ಸೌಧದ ಮಧ್ಯವಿರುವಂತಹ ಗಾಂಧಿ ಪ್ರತಿಮೆಯ ಮುಂದೆ ಕುಳಿತುಕೊಂಡಿದ್ದಾರೆ ಎಂದು ತಿಳಿದುಕೊಂಡು ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬರುತ್ತಾರೆ ಎಂದು ನಾವು ತಿಳಿದುಕೊಂಡಿದ್ದೇವು. ಆದರೆ ವಿರೋಧ ಪಕ್ಷದ ನಾಯಕರುಗಳೂ ಮಾತ್ರವಲ್ಲ. ಮಾನ್ಯ ಕೊಂಡಯ್ಯನವರ ಕಡೆಯವರು ಮತ್ತು ಶ್ರೀ ಶ್ರೀಕಂಠೇಗೌಡರ ಕಡೆಯವರು ಗಾಂಧಿ ಪ್ರತಿಮೆಯ ಮುಂದೆ ಕುಳಿತುಕೊಳ್ಳಲು ಬಂದಿದ್ದರು. ನಾವೇ ಕುಳಿತುಕೊಂಡು, ಕುಳಿತುಕೊಂಡು ನಾವೇ ಒಂದು ನಿರ್ಧಾರ ಮಾಡಿದ್ದೆವು. ಈ ಸರ್ಕಾರಕ್ಕೆ ಗಾಂಧಿ ಹೇಳಿದರೂ ಕೇಳುವ ಕೆಲಸ ಇಲ್ಲವೆಂದು ತಿಳಿದುಕೊಂಡು, ಕಡೆಗೆ ನಾವೇ ಒಂದು ಪತ್ರಿಕಾಗೋಷ್ಠಿಯನ್ನು ಮಾಡಿ ವಾಪಸ್ಸು ಬಂದೆವು. ಇದು ಎಲ್ಲರಿಗೂ ಆದಂತಹ ಸಮಸ್ಯೆಯಾದ್ದರಿಂದ, ನನಗೇನು ಬೇಜಾರು ಆಗಲಿಲ್ಲ. ಎಲ್ಲರನ್ನೂ ಕರೆದುಕೊಂಡು ಹೋಗಿ ಗಾಂಧಿ ಪ್ರತಿಮೆಯ ಹತ್ತಿರ ಕೂರಿಸಿದ್ದೆವು ಎಂಬುದೇ ಒಂದು ಖುಷಿಯ ವಿಚಾರ. ಇದರ ಬಗ್ಗೆ ಸರ್ಕಾರ ಏನು ಕೇಳಲಿಲ್ಲ. ಸರ್ಕಾರ ಕೇಳುವಂತಹ ಇಚ್ಛಾಶಕ್ತಿ ಸರ್ಕಾರಕ್ಕೆ ಇರಲಿಲ್ಲವೇ, ಮಾನ್ಯ ಹೆಚ್.ಕೆ.ಪಾಟೀಲ್‌ರವರ ಬಗ್ಗೆ ಮತ್ತು ಸರ್ಕಾರದ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿಚಾರದಲ್ಲಿ ನಾನು ಇಲ್ಲಿಯವರೆಗೂ ದೂರಿಲ್ಲ. ಈ ಸದನದ ಮೂಲಕ ಇಡೀ ರಾಜ್ಯಕ್ಕೆ ತಿಳಿಯುವ ಹಾಗೆ ಒಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹೀಗಿರುವ ಮಂತ್ರಿ ಮಂಡಲದಲ್ಲಿ ಗ್ರಾಮೀಣಾಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಹೆಚ್.ಕೆ.ಪಾಟೀಲ್ ರವರಿಗಿಂತ ಹೆಚ್ಚು ಸಮರ್ಥರಾದವರೂ ಬೇರೆ ಯಾರು ಇಲ್ಲವೆಂದು ನನಗೆ ಅನಿಸಿದ ಮಾತನ್ನು ಹೇಳಿದೆ.

**(ಈ ಹಂತದಲ್ಲಿ ಎಲ್ಲಾ ಸದಸ್ಯರು ಮೇಜನ್ನು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)**

ಇದರ ಬಗ್ಗೆ ಸತ್ಯವನ್ನು ಹೇಳಿದರೆ, ಅದನ್ನು ಒಪ್ಪಿಕೊಳ್ಳುವುದಕ್ಕೆ ಯಾರು ತಯಾರು ಇಲ್ಲ. ಈ ವಿರೋಧ ಪಕ್ಷದ ಬಗ್ಗೆ ಮಾನ್ಯ ಸದಸ್ಯರುಗಳಿಗಿರುವ ಆತಂಕಗಳು ಎಷ್ಟು ಎಂಬುದನ್ನು ಹೇಳಿದರೆ, ಆಡಳಿತ ಪಕ್ಷದ ಸಚೇತಕರು ಮೇಜನ್ನು ತಟ್ಟಿದ ಮೇಲೆ, ನಮ್ಮ ಸರ್ಕಾರವನ್ನು ಹೊಗಳುತ್ತಿದ್ದಾರೆಂದು ಒಬ್ಬೊಬ್ಬರಾಗಿ ಮೇಜನ್ನು ತಟ್ಟಲು ಪ್ರಾರಂಭಿಸಿದರು. ಮೊದಲು ಇವರಿಗೆಲ್ಲಾ ಏನು ಹೇಳುತ್ತಿದ್ದಾರೆಂದು ಮನವರಿಕೆಯಾಗಲಿಲ್ಲ. ಇಲ್ಲಿ ಏನಾಗಿದೆ ಇಂತಹ ಸ್ಥಿತಿಯಲ್ಲಿ 17 ಜನ ಶಾಸಕರು ಹೋಗಿ . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ವೈಸ್ ಛೇರ್ಮನ್:-** ಬಾಳೆ ಹಣ್ಣಿನಲ್ಲಿ ಸಿಪ್ಪೆಯೂ ಇದೆ. ಹಣ್ಣು ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ತಾವು ಹಣ್ಣು ಎಂದು ಹೇಳುತ್ತೇನೆ. ಸಿಪ್ಪೆ ಯಾರು ಎಂದು ಹೇಳುವುದಿಲ್ಲ, ಹೇಳಿದರೆ ಅದಕ್ಕೆ ಮತ್ತೆ ಗಲಾಟೆಯಾಗುತ್ತದೆ. ಅದಕ್ಕೆ ಅದರ ಬಗ್ಗೆ ಮಾತನಾಡುವುದು ಬೇಡ. ಸಿಪ್ಪೆ ಯಾರೆಂದು ನಾನು ಹೇಳುವುದಿಲ್ಲ? ಈ 17 ಜನ ಶಾಸಕರು ಹೋಗಿ ಮಾತನಾಡಿಲ್ಲ ಎಂಬುದನ್ನು ನಾನು ಸರ್ಕಾರಕ್ಕೆ ಬಿಟ್ಟು ಬಿಡುತ್ತೇನೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಂಬತ್ತೂವರೆ ಕೋಟಿ ಮಾನವ ದಿನಗಳನ್ನು ಸೃಷ್ಠಿ ಮಾಡಿದ್ದಾರೆ. ಅನೇಕ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ 21 ಅಂಶಗಳ ಕಾರ್ಯಕ್ರಮವನ್ನು ಮಾಡಿದ್ದಾರೆ. ಇದರ ಬಗ್ಗೆ ಹೇಳುವುದು ನೂರಕ್ಕೆ ನೂರು ಸತ್ಯ ಇದರ ಬಗ್ಗೆ ನನ್ನ ವಾದ ಇಲ್ಲ. ಆದರೆ 'ಉದ್ಯೋಗ ಖಾತ್ರಿ ಯೋಜನೆ'ಯಲ್ಲಿ ಬರುವಂತಹದ್ದು ನಿಮ್ಮ ಸರ್ಕಾರವೇ ಇರಲಿ, ನಮ್ಮ ಸರ್ಕಾರವೇ ಇರಲಿ, 'ಉದ್ಯೋಗ ಖಾತ್ರಿ ಯೋಜನೆ'ಯಲ್ಲಿ ನೂರಕ್ಕೆ ನೂರರಷ್ಟು ಬರುವುದು ಕೇಂದ್ರ ಸರ್ಕಾರದ್ದಾಗಿದೆ. 'ಉದ್ಯೋಗ ಖಾತ್ರಿ ಯೋಜನೆ'ಯಲ್ಲಿ ಎಲ್ಲೂ ಕೂಡ ಕೇಂದ್ರ ಸರ್ಕಾರದ ಹೆಸರನ್ನು ಉಲ್ಲೇಖ ಮಾಡಿಲ್ಲ. ಅದು ನಿಮ್ಮ ವಿವೇಚನೆಗೆ ಬಿಟ್ಟಿರುವುದು. ಇದು ನಿಮ್ಮ ಸರ್ಕಾರದ ಜಿಪುಣತನ ಎಂದು ನನಗೆ ಅನಿಸಿಬಿಟ್ಟಿದೆ. ನಾನು ಈಗಲೂ ನಿಮಗೆ ಹೇಳುವುದೇನೆಂದರೆ ಇನ್ನು ಹೆಚ್ಚಿನ ಸಮಯವನ್ನು ಬಳಸಿಕೊಳ್ಳುವುದಿಲ್ಲ. ಈಗಾಗಲೇ ಸಮಯವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯದ ಬಗ್ಗೆ ಬೇರೆ ಒಂದು ವಿಷಯವನ್ನು ತರಬೇಕೆಂದು ಅಂದುಕೊಂಡಿದ್ದೇನೆ. ಅದರ ಬಗ್ಗೆ ನಂತರ ನೋಡೋಣ. ಈ ಗ್ರಾಮ ಪಂಚಾಯಿತಿಗಳನ್ನು ಸಬಲೀಕರಣ ಮಾಡಿದ್ದೇವೆ ಎಂದು ಹೇಳುವಾಗ ಸರ್ಕಾರ ಏನು ಉತ್ತರವನ್ನು ಹೇಳುತ್ತದೆ. ವಿವಿಧ ಇಲಾಖೆಗಳ 100 ಸೇವೆಗಳನ್ನು ಒಂದೇ ಸೂರಿನಡಿಯಲ್ಲಿ ಒದಗಿಸುವ 'ಬಾಪೂಜಿ ಸೇವಾ ಕೇಂದ್ರ'ವನ್ನು ಸ್ಥಾಪನೆ ಮಾಡಿ, ಗ್ರಾಮ ಪಂಚಾಯಿತಿಗೆ ಕೊಟ್ಟಿದ್ದೇವೆ. ಯಾರು ಕೂಡ ಪಟ್ಟಣಕ್ಕೆ ಹೋಗಬಾರದು, ನಗರಕ್ಕೆ ಹೋಗಬಾರದು, ನಿಮ್ಮ ಹಳ್ಳಿಯಲ್ಲಿಯೇ ಆರ್.ಟಿ.ಸಿ. ಸಿಗುತ್ತದೆ. ನಿಮ್ಮ ಹಳ್ಳಿಯಲ್ಲಿಯೇ ವಿಧವಾ ವೇತನ ಸಿಗುತ್ತದೆ. ನಿಮ್ಮ ಹಳ್ಳಿಯಲ್ಲಿಯೇ ಅಂಗವಿಕಲರಿಗೆ ಅವಕಾಶಗಳು ಆಗುತ್ತದೆ. ನಿಮ್ಮ ಜಾತಿ ಪ್ರಮಾಣ ಪತ್ರಗಳು ನಿಮ್ಮ ಗ್ರಾಮ ಪಂಚಾಯಿತಿಯಲ್ಲಿಯೇ ಸಿಗುತ್ತದೆ ಎಂದು ನೂರು ಸೇವೆಗಳನ್ನು ಮಾಡಿದರಲ್ಲವೇ, ನಾಳೆಯ ದಿವಸ ಉತ್ತರವನ್ನು ಕೊಡುವಾಗ ಆತ್ಮಸಾಕ್ಷಿಯಾಗಿ ಇದರ ಬಗ್ಗೆ ತನಿಖೆಯನ್ನು ಮಾಡಿ ಉತ್ತರವನ್ನು ಕೊಡಬೇಕು. ಈಗ ಒಂದು ಸೇವೆ ಕೂಡ ಇಲ್ಲ. ಆರ್.ಟಿ.ಸಿ., ಸಿಗುತ್ತಿತ್ತು. ತಂತ್ರಜ್ಞಾನದ ತಪ್ಪಿನಿಂದ ಈಗ ಅದು ಕೂಡ ರದ್ದಾಗಿದೆ. ಪರಿಸ್ಥಿತಿಗಳು ಎಲ್ಲಿಯವರೆಗೆ ಹೋಗಿದೆ ಎಂದು ಹೇಳಿದರೆ ನೂರು ಸೇವೆಗಳನ್ನು ಕೊಡುವುದಕ್ಕೋಸ್ಕರ 'ಬಾಪೂಜಿ ಸೇವಾ ಕೇಂದ್ರ'ವನ್ನು ನಿರ್ಮಾಣ ಮಾಡಿದ್ದೇವೆಂದು ಸರ್ಕಾರವು ಹೇಳುತ್ತದೆ. ಇದರಲ್ಲಿ

ಸಮಸ್ಯೆಗಳೇನಾದರೂ ಇದ್ದರೆ, ಅದನ್ನು ಪರಿಹಾರ ಮಾಡಬೇಕು. ನೂರು ಸೇವೆಗಳನ್ನು ಕೊಡುತ್ತೇವೆ ಎಂದು ಹೇಳಿ ಒಂದು ವರ್ಷವಾಯಿತು. ಒಂದು ಸೇವೆ ಮಾತ್ರ ಆರ್.ಟಿ.ಸಿ., ನಲ್ಲಿ ಸಿಗುತ್ತಿತ್ತು. ಆರ್.ಟಿ.ಸಿ., ನಲ್ಲೂ ಸಿಗದೇ ಇರುವಂತಹ ಪರಿಸ್ಥಿತಿಗಳು ಇವತ್ತಿನ ದಿವಸ ನಿರ್ಮಾಣವಾಗಿರುವಂತಹ ಹಿನ್ನಲೆಯಲ್ಲಿ ತಾವು ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಬಲೀಕರಣ ಬಗ್ಗೆ ನೀವು ಯೋಚನೆ ಮಾಡಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪಿ.ಡಿ.ಓ., ಗಳಿಗೆ ಪಿ.ಡಿ.ಓ., ಗಳು ಅಲ್ಲವೆಂದು ಹೇಳಿದ್ದಾರೆ. ಈಗ ಮಾನ್ಯ ಶ್ರೀಕಂಠೇಗೌಡ ರವರು ಮಾತನಾಡುವಾಗ ಹೇಳಿದರಲ್ಲವೇ, ಮೂರ್‍ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ಒಂದು ಪಿ.ಡಿ.ಓ., ಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಪಿ.ಡಿ.ಓ., ಗಳ ಆಯ್ಕೆ ಪ್ರಕ್ರಿಯೆಗಳನ್ನು ಮಾಡಿ, ನೇಮಕಾತಿಯ ಪ್ರಕ್ರಿಯೆಯನ್ನು ಪ್ರಕಟಿಸಿ ಒಂದೂವರೆ ವರ್ಷವಾಯಿತು. ಒಂದೂವರೆ ಸಾವಿರ ಪಿ.ಡಿ.ಓ., ಗಳು, ಹೆಚ್ಚು-ಕಡಿಮೆ 700 ಜನ ಸೆಕ್ರಟರಿಗಳು, 2 ಸಾವಿರ ಮಂದಿ ಸಿಬ್ಬಂದಿಗಳನ್ನು ಆಯ್ಕೆ ಪ್ರಕ್ರಿಯೆಗಳನ್ನು ಮುಗಿಸಿ ಒಂದೂವರೆ ವರ್ಷವಾಯಿತು. ಇವತ್ತಿನವರೆವಿಗೂ ಅವರ ನೇಮಕವಾಗಿಲ್ಲ. ಅವರುಗಳಿಗೆ training ಗಳನ್ನು ಕೊಟ್ಟು ಇನ್ನು ನೇಮಕವಾಗಿಲ್ಲ. ಹಾಗೆ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ. ನಿಮಗೆ ಆರ್ಥಿಕ ಇಲಾಖೆಯಿಂದ ಏನಾದರೂ ತೊಂದರೆ ಇದೆಯೇ, ಅನುಮತಿಯನ್ನು ಕೊಟ್ಟರೆ ಆಗುವುದಿಲ್ಲ. ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿ ಮಾಡುತ್ತೀರಿ, ಅದರ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಸರ್ಕಾರವು ಎಷ್ಟು ನಿಷ್ಕ್ರಿಯವಾಗಿದೆ ಎಂದು ಹೇಳಿದರೆ ಪಿ.ಡಿ.ಓ., ಗಳ ಆಯ್ಕೆಗಳನ್ನು ಮಾಡಿ, ಒಂದೂವರೆ ವರ್ಷವಾದರೂ ಕೂಡ ಗ್ರಾಮ ಪಂಚಾಯಿತಿಗೆ ಕಳುಹಿಸಲು ಆಗದೇ ಇರುವಷ್ಟು ನಿಷ್ಕ್ರಿಯವಾಗಿ ಹೋಗಿದೆ ಎಂದು ಹೇಳಿದ ಮೇಲೆ ಪ್ರಥಮ ಬಾರಿಗೆ ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಈ ಸರ್ಕಾರಕ್ಕೆ ಇರುವಂತಹ ಬದ್ಧತೆ ಎಷ್ಟು ಎಂಬುದರ ಬಗ್ಗೆ ನಾನು ಪ್ರಶ್ನೆ ಮಾಡಬೇಕಲ್ಲವೇ? ಇದ್ದರ ಬಗ್ಗೆ ತಾವು ನಾಳೆ ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಕಂದಾಯ ಇಲಾಖೆಯಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಒಳ್ಳೆಯ ಅನುಭವ ಇರುವ ಮಂತ್ರಿಗಳಾಗಿದ್ದಾರೆ. ಅವರಲ್ಲಿರುವ ಸಿಟ್ಟು, ಸೇಡು, ಇನ್ನು ಈ ಬಡವರ ಬಗ್ಗೆ ಕೆಲಸವನ್ನು ಮಾಡಬೇಕಾದರೆ ಆಗುವಂತಹ ಅನಾಹುತಗಳ ಬಗ್ಗೆ ಅವರ ಅಧಿಕಾರಿಗಳಿಗೆ ಬೈಯುತ್ತಾರೆ. ಕಂಪ್ಯೂಟರ್ ಅನ್ನು ಒಡೆದು ಹಾಕು ಎಂದು ಹೇಳುತ್ತಾರೆ. ತಹಶೀಲ್ದಾರ್‌ರವರಿಗೆ ಏನು ಎಂದು ಜೋರು ಮಾಡುತ್ತಾರೆ. ಅವರಲ್ಲಿರುವ ಶ್ರದ್ಧೆ ಬಗ್ಗೆ ನನಗೆ ಆತಂಕವಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ 94C and 94CC of Karnataka State Land Revenue Act ಅಡಿ ಎಂಟೂವರೆ ಲಕ್ಷ ಜನ ಮನೆಗಳನ್ನು ಕಟ್ಟುಕೊಂಡು ವ್ಯಾಸ್ತವ್ಯ ಮಾಡಿ ರೇಷನ್ ಕಾರ್ಡ್, ಮನೆಗಳ ರಸೀದಿಗಳಿದ್ದು, ಎಂಟೂವರೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಜನರು 2012ನೇ ಇಸವಿ ಡಿಸೆಂಬರ್ 31ನೇ ತಾರೀಖಿಗಿಂತ ಮೊದಲು ವಾಸ್ತವ್ಯವಿರುವವರು ಅರ್ಜಿಗಳನ್ನು ಹಾಕಿಕೊಂಡು ಕುಳಿತುಕೊಂಡಿದ್ದಾರೆ. ಎಂಟೂವರೆ ಲಕ್ಷ ಜನರು ಅರ್ಜಿಗಳನ್ನು ಕೊಟ್ಟರೆ ನೆನ್ನೆಯ ದಿವಸ ನಾನು ಕೇಳಿದ ಹಾಗೆ ಕೆಲವು Deemed Forest ನಲ್ಲಿದೆ, ಕೆಲವು ಕುಮ್ಕಿ ಯಲ್ಲಿ ಇದೆ. ಕೆಲವು ಗೋಮಾಳದಲ್ಲಿ ಇದೆ. ಕೆಲವು Poramboke land ಇದೆ. ಕೆಲವು ವಗೈರೆಗಳು ಇದೆಯಲ್ಲವೇ, ಅದೆಲ್ಲವನ್ನೂ ಬಿಡುತ್ತೇವೆಂದು ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿದ್ದೇವೆಂದು ಹೇಳಿದರು. ನಾವು ಪ್ರತಿ ಬಾರಿ ಈ ಸದನದಲ್ಲಿ ಇದರ ಬಗ್ಗೆ ಕೇಳುತ್ತಿದ್ದೇವೆ. ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿದ್ದೇವೆಂದು ಹೇಳುತ್ತೀರೆಂದು ಇದನ್ನು ಯಾವಾಗ ಕೊಡುತ್ತೀರಿ. ಯಾವಾಗ ಕೊಡುತ್ತೀರಿ ಎಂದು ಕೇಳುತ್ತಲೇ ಇದ್ದೇವೆ.

(ಮುಂದು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಸರ್ಕಾರಕ್ಕೆ ಇನ್ನು ಮೂರು ತಿಂಗಳ ಅಧಿಕಾರಾವಧಿ ಮಾತ್ರ ಬಾಕಿ ಇದೆ. ಇಂತಹ ಸಮಯದಲ್ಲಿ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಮಂತ್ರಿಗಳು ಮೂರುವರೆ ಲಕ್ಷ ಹೆಕ್ಟೇರ್‌ಗಳಷ್ಟು ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶವನ್ನು ವಿನಾಯಿತಿಗೊಳಿಸಲಾಗಿದೆ, ಆದರೆ ಇದನ್ನು ಖಾಸಗಿ ವ್ಯಕ್ತಿಗಳಿಗೆ ಕೊಡುವುದಕ್ಕಾಗಿ ಅಲ್ಲ ಬದಲಾಗಿ ಸಾರ್ವಜನಿಕ ವ್ಯಕ್ತಿಗಳಿಗೆ ವಿತರಣೆ ಮಾಡಲಿಕ್ಕೆ ಎಂಬುದಾಗಿ ಉತ್ತರವನ್ನು ನೀಡುತ್ತಾರೆ. ಇಂತಹ ಕ್ರಮಗಳಿಂದ ನೀವು ಯಾವ ರೀತಿಯ ಕೆಲಸಗಳನ್ನು ಮಾಡಿದ ಹಾಗೆ ಆಯಿತು? Section 94C of the Karnataka Land Revenue Act, 1964 ರನ್ವಯ ಬಡವರಿಗೆ ಹಕ್ಕುಪತ್ರಗಳನ್ನು ಕೊಡಿ ಎಂಬುದಾಗಿ ಇಷ್ಟು ದಿನಗಳವರೆಗೆ ಹೋರಾಟ ಮಾಡಲಾಗಿದೆ. ಬಹುಶಃ ಕಂದಾಯ ಇಲಾಖೆಯ ಮಂತ್ರಿಗಳು ಮತ್ತು ಅರಣ್ಯ ಇಲಾಖೆಯ ಮಂತ್ರಿಗಳ ನಡುವೆ ಸಮನ್ವಯ ಇಲ್ಲದಂತೆ ಕಾಣುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ, ಇನ್ನು ಸ್ವಲ್ಪ ತಿಂಗಳುಗಳ ಅವಧಿಯಲ್ಲಿ ಎಲ್ಲರಿಗೂ ಹಕ್ಕುಪತ್ರಗಳನ್ನು ನೀಡುವುದಾಗಿ ಹೇಳುತ್ತಾರೆ. ಆದರೆ ನಿನ್ನೆಯ ದಿವಸ ಮಾನ್ಯ ಅರಣ್ಯ ಮಂತ್ರಿಗಳು ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶವನ್ನು ವಿನಾಯಿತಿಗೊಳಿಸಿರುವುದು ಖಾಸಗಿ ವ್ಯಕ್ತಿಗಳಿಗೆ ಕೊಡುವುದಕ್ಕಾಗಿ ಅಲ್ಲ ಬದಲಾಗಿ ಸಾರ್ವಜನಿಕ ಹಿತಾಸಕ್ತಿಗೆ ಬಳಸಿಕೊಳ್ಳುವುದಕ್ಕಾಗಿ ಇದನ್ನು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ ಎಂಬುದಾಗಿ ಹೇಳುತ್ತಾರೆ. ನಿನ್ನೆಯ ದಿವಸ ಈ ವಿಚಾರದಲ್ಲಿ ಇಷ್ಟೊಂದು ಗಲಾಟೆಗಳಾದ ನಂತರ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಯೋಚನೆಯನ್ನು ಮಾಡಲಾಗುವುದು ಎಂಬುದಾಗಿ ಹೇಳುತ್ತಾರೆ. ಆದರೆ ಈ ಸರ್ಕಾರಕ್ಕೆ ಇನ್ನು ಎಷ್ಟು ದಿವಸ ಅಧಿಕಾರಾವಧಿ ಇದೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮುಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗುತ್ತದೆ ಎಂಬುದು ಜನರಿಗೆ ಬಿಟ್ಟ ವಿಚಾರವಾಗಿದೆ. ಈ ಬಗ್ಗೆ ನಮಗೆ ಗೊಂದಲವಿಲ್ಲ. ಈ ರೀತಿಯ ವ್ಯವಸ್ಥೆಗಳಿವೆ. ಕಂದಾಯ ಇಲಾಖೆಯಲ್ಲಿರುವ ಸಮಸ್ಯೆಗಳನ್ನು ದಯಮಾಡಿ ಪರಿಹಾರ ಮಾಡಲಿಕ್ಕೆ ನಿಮಗೇನಾದರೂ ಸಾಧ್ಯವಿದೆಯೇ ಎಂಬ ನಿಟ್ಟಿನಲ್ಲಿ ತಮ್ಮ ಸರ್ಕಾರ ಪರಿಶೀಲಿಸಬೇಕೆಂದು ನಾನು ವಿನಂತಿಸುತ್ತೇನೆ. ತಮ್ಮದು ಮೊದಲನೇ ಸ್ಥಾನದಲ್ಲಿರುವ ಸರ್ಕಾರವಾಗಿದೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇನ್ನೂ ಮಾನ್ಯ ಸದಸ್ಯರು ಮಾತನಾಡುವುದು ಮುಗಿಯಲಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಮುಗಿಸಬೇಕೇ? ನಾನು ಮಾತನಾಡಬಾರದೇ? ಸರ್ಕಾರಿ ಮುಖ್ಯ ಸಚೇತಕರಿಗೆ ಯಾವುದೇ ರೀತಿಯ ತೊಂದರೆಯಿಲ್ಲವೇ? ಏಕೆಂದರೆ ನಾನು ಅವರನ್ನು ಕೇಳಿಯೇ ಮಾತನಾಡಬೇಕು. ಆಡಳಿತ ಪಕ್ಷದಲ್ಲಿ ಎರಡು ರೂಲಿಂಗ್ ಇದೆಯಾದರೂ ಅವುಗಳ ಅಜೆಂಡಾ ಒಂದೇ ಆಗಿದೆ. ಮೊದಲನೆಯದು ಅವರನ್ನು ಕೇಳಿ ಮಾತನಾಡಬೇಕು ಹಾಗೂ ಎರಡನೆಯದು ಅವರು ಹೇಳಿದ್ದನ್ನೇ ಮಾತನಾಡಬೇಕು. ಸಾಮಾನ್ಯ ಜ್ಞಾನವಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರು ಟೀಕೆ-ಟಿಪ್ಪಣಿಗಳನ್ನು ಮಾಡಬೇಕು. ಸರ್ಕಾರವನ್ನು ಜಗ್ಗಬೇಕು, ತರಾಟೆಗೆ ತೆಗೆದುಕೊಳ್ಳಬೇಕು, ಅದರ ಕಿವಿಯನ್ನು ಹಿಂಡಬೇಕು ಹಾಗೂ ಅದರ ತಪ್ಪುಗಳನ್ನು ಹೇಳಬೇಕು. ಇದನ್ನು ಕಂಡು ಸರ್ಕಾರವು ಗೊಂದಲಗೊಳ್ಳಬೇಕು ಹಾಗೂ ತನ್ನ ತಪ್ಪನ್ನು ಸರಿ ಪಡಿಸಿಕೊಳ್ಳಬೇಕು. ಈ ರೀತಿಯಾಗಿ ವ್ಯವಸ್ಥೆ ಇದೆ. ಇವರಿಗೆ ಏನಾಗಿದೆ ಎಂದು ನಾನು ಹೇಳುವುದನ್ನು ದಯಮಾಡಿ ಕೇಳಿ. ಸದನವೆಂದರೆ ನಮ್ಮ ನಮ್ಮ ರಾಜಕೀಯ ಪಕ್ಷಗಳ ಸಭೆಯಲ್ಲ.

**ಶ್ರೀ ರಿಜ್ವಾನ್ ಅರ್ಷದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರವನ್ನು ದೇಶದ ಪ್ರಧಾನ ಮಂತ್ರಿಗಳಿಗೆ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ನೀವು ಮೊದಲು ಕೇಳಿ. ದೇಶದ ಪ್ರಧಾನ ಮಂತ್ರಿಗಳಿಗೆ ಹೇಳೋಣ. ಅದು ಬೇರೆ ವಿಚಾರ. ಸದನ ಎಂದರೆ, ನಮ್ಮ ನಮ್ಮ ರಾಜಕೀಯ ಪಕ್ಷಗಳ ಸಭೆಯಲ್ಲ. ಪಾಪ ಇವರಿಗೆಲ್ಲಾ ಏನಾಗಿದೆ ಎಂದರೆ, ಅವರವರ ರಾಜಕೀಯ ಪಕ್ಷಗಳ ಸಭೆಯನ್ನು ಕರೆದು ಇವರುಗಳನ್ನೆಲ್ಲಾ ಬೈಯ್ದು, ಇವರುಗಳೆಲ್ಲಾ ಚಪ್ಪಾಳೆ ತಟ್ಟಿ, ಹೊಗಳಿದರೆ ಮಾತ್ರವೇ ಇವರುಗಳಿಗೆ ಖುಷಿಯಾಗುತ್ತದೆ. ಆದರೆ, ನೀವು ಅಂದುಕೊಂಡ ಹಾಗೆ ಅಲ್ಲ. ಸದನದಲ್ಲಿ ಕೆಲವು ವ್ಯವಸ್ಥೆಗಳಿವೆ. ನನಗಿಂತಲೂ ಮುಂಚೆ ಈ ಸದನದಲ್ಲಿ ಯಂ.ಸಿ.ನಾಣಯ್ಯ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ||ಎಂ.ಪಿ.ನಾಡಗೌಡ ಮತ್ತು ಸುದರ್ಶನ್ ರವರುಗಳಂತಹ ಸದಸ್ಯರುಗಳು ಇದ್ದರು. ಅವರುಗಳ ಮಾತುಗಳನ್ನೆಲ್ಲಾ ನೀವುಗಳು ಕೇಳಬೇಕಾಗಿತ್ತು. ಈಗ ನಾನು ಮಾತನಾಡುವಾಗ ನಿಮ್ಮ ಮೇಲಿನ ಪ್ರೀತಿಯಿಂದ ಸುಮ್ಮನಿದ್ದೆ. ಅವರುಗಳು ಮಾತನಾಡುವಾಗ ನೀವುಗಳು ಇದ್ದಿದ್ದರೆ ನಿಮಗೆ ಗಂಡಾಂತರವಾಗುತ್ತಿತ್ತು; ಒಂದು ನಿಮಗೆ ಅಥವಾ ಅವರಿಗೆ ಗಂಡಾಂತರವಾಗುತ್ತಿತ್ತು. ನಿಮಗೆ ಅವರ ವಿಚಾರಗಳು ಗೊತ್ತಿಲ್ಲ. ಆದರೆ ನಾವು ಏನು ಮಾಡುತ್ತೇವೆ ಎಂದು ಹೇಳಿದರೆ, . . .

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಷ್ಟು ಕೋಮುವಾದಿಯಾಗಿ ಯಾರೂ ಮಾತನಾಡುತ್ತಿರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಈ ಸದನದ ವ್ಯವಸ್ಥೆಗಳಲ್ಲಿ. . .

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜಗಳವನ್ನು ಮಾಡಿಸುತ್ತಿದ್ದಾರಲ್ಲ, ಅದು ಕೋಮುವಾದವಾಗಿದೆ.

**ವೈಸ್ ಛೇರ್ಮನ್**:- ನೀವು ಅವರಿಗೆ ಸಲಹೆಯನ್ನು ಕೊಡಲು ಹೋಗಬೇಡಿ. ನೀವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಈ ಸದನದ ಒಟ್ಟು ವ್ಯವಸ್ಥೆಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಕಾಲ ಕಾಲಕ್ಕೆ ಶಾಸಕರುಗಳಿಗೆ ಸ್ವಲ್ಪ ತರಬೇತಿಯನ್ನು ನೀಡಬೇಕೆಂದು ಹೇಳುತ್ತಿರುತ್ತೇವೆ. ಅದರಂತೆ ನೀವು ತರಬೇತಿಯನ್ನೂ ಸಹ ನೀಡುತ್ತೀರಿ. ಆದರೆ ನಮ್ಮ ಗ್ರಹಚಾರಕ್ಕೆ ಇಂತಹ ತರಬೇತಿಗಳನ್ನು ಪಡೆದುಕೊಳ್ಳುವಂತಹ ಸಣ್ಣ ಮನುಷ್ಯರು ನಾವು ಅಲ್ಲ ಎಂಬುದಾಗಿ ನಮ್ಮ ತಲೆಯೊಳಗೆ ಬಂದು ಬಿಟ್ಟಿದೆ. ಹೀಗಾಗಿ ನಾವುಗಳು ತರಬೇತಿಗೆ ಹೋಗುವುದೇ ಇಲ್ಲ, ಆ ನಂತರ ನಾವು ಆಡಿದ್ದೇ ಆಟ ಎನ್ನುವಂತಹ ಭಾವನೆಗಳು ನಮ್ಮೆಲ್ಲರಲ್ಲಿ ಬೆಳೆದುಬಿಟ್ಟಿದೆ. ಈ ವಿಚಾರದಲ್ಲಿ ನಾನು, ಅವರು-ಇವರು ಎಂದು ಹೇಳುವುದಿಲ್ಲ. ಈ ಕಾರಣಕ್ಕಾಗಿ ನೀವು ಮುಂದೆ ಏನಾದರೂ ಸದನದಲ್ಲಿ ತರಬೇತಿಯ ಅಭ್ಯಾಸ ವರ್ಗಕ್ಕೆ ಹಾಜರಾಗದೇ ಇರುವವರಿಗೆ ಸಣ್ಣದಾದ ಕಡಿವಾಣವನ್ನು ಹಾಕುವುದು ಒಳ್ಳೆಯದು. ಇಲ್ಲದಿದ್ದರೆ ಬಹಳ ಗಂಡಾಂತರವಾಗುತ್ತದೆ. ಇದೆಲ್ಲಾ ಬಹಳ ಒಳ್ಳೆಯ ಬೆಳವಣಿಗೆ ಅಲ್ಲ ಎಂಬುದಾಗಿ ನಾನು ಹೇಳುತ್ತೇನೆ. ಇಡೀ ದೇಶದಲ್ಲಿ ಮೊದಲನೇ ಸ್ಥಾನದಲ್ಲಿರುವ ಸರ್ಕಾರ ಎಂಬುದಾಗಿ ಪ್ರಚಾರ ಫಲಕವನ್ನು ಹಾಕಿಕೊಂಡು ನೀವುಗಳು ಮೊದಲನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾನದ ಸರ್ಕಾರಕ್ಕೆ ಬರುತ್ತಿದ್ದೀರಿ, ನಿಮಗೆ ಸ್ವಾಗತ ಎನ್ನುವಂತಹ ಮಾತುಗಳನ್ನು ನೀವೇ ಹೇಳುತ್ತಿದ್ದೀರಿ. ನಾನು ನಿಮ್ಮನ್ನು ಕೇಳುವುದೇನೆಂದರೆ, ಇಷ್ಟು ದಿನಗಳ ಕಾಲ ಸದನದಲ್ಲಿ ಚರ್ಚೆಯಾಗಿದೆ. ರಾಜ್ಯದಲ್ಲಿ ಮೂರು ಸಾವಿರ ರೈತರ ಮಾರಣ ಹೋಮವಾಗಿದೆ, ಹಿಂದೂ-ಮುಸಲ್ಮಾನ ಎಂಬ ಜನಾಂಗ ಬೇಧವಿಲ್ಲದೇ ಸಾವಿರಾರು ಕೊಲೆಗಳಾಗಿವೆ. ಇಂತಹ ವಿಚಾರಗಳಲ್ಲಿ ನಿಮ್ಮದು ಮೊದಲನೇ ಸ್ಥಾನದಲ್ಲಿರುವ ಸರ್ಕಾರವೇ? ನಿಮ್ಮ ಅಧಿಕಾರಾವಧಿಯಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿದ್ದೀರಿ. ಈಗ ಈ ಸಂಸ್ಥೆಯ ಕಥೆ ಏನಾಗಿದೆ ಎಂದರೆ ಹಿಂದಿನ ಲೋಕಾಯುಕ್ತರಾಗಿದ್ದ ಶ್ರೀ ಸಂತೋಷ್ ಹೆಗ್ಡೆ ಅವರು ಅಧಿಕಾರದಲ್ಲಿದ್ದಾಗ. . . . ಸರ್ಕಾರವನ್ನು ಕೇಳಿ ನಾನು ಮಾತನಾಡುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಿಮ್ಮ ಪಕ್ಷವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳಾದರೂ ಸಹ ಲೋಕ್‌ಪಾಲ್ ವಿಧೇಯಕವನ್ನು ಇನ್ನೂ ಏಕೆ ಜಾರಿಗೊಳಿಸಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಅದನ್ನು ಮೊದಲು ಮಾತನಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಲೋಕ್‌ಪಾಲ್‌ನ್ನು ಇನ್ನೂ ಏಕೆ ಜಾರಿಗೊಳಿಸಿಲ್ಲ ಎನ್ನುವ ವಿಚಾರದ ಬಗ್ಗೆ ನೀವು ಒತ್ತಾಯಿಸಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಗುಜರಾತ್ ಸರ್ಕಾರದಲ್ಲಿ ಇನ್ನೂ ಏಕೆ ಲೋಕಾಯುಕ್ತದಂತಹ ಸಂಸ್ಥೆಯನ್ನು ಸ್ಥಾಪನೆ ಮಾಡಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಕೇಂದ್ರದಲ್ಲಿ ಲೋಕ್‌ಪಾಲ್‌ನ್ನು ಮಾಡಿಲ್ಲವಾದ್ದರಿಂದ ರಾಜ್ಯದಲ್ಲಿ ಲೋಕಾಯುಕ್ತವನ್ನು ಮಾಡುವುದಿಲ್ಲ ಎಂಬುದು ಸರ್ಕಾರದ ಅರ್ಥವಾಗಿದೆ. ಈ ವಿಚಾರ ನಿಮಗೆ ಗೊತ್ತಾಯಿತೆ? ಇವತ್ತಿನ ದಿವಸ ಲೋಕಾಯುಕ್ತದಂತಹ ತನಿಖಾ ದಳದ ವ್ಯವಸ್ಥೆ ಬೆದುರು ಬೊಂಬೆಯಂತಾಗಿದೆ. ಬೆದುರು ಬೊಂಬೆಗಳು ನಮ್ಮ ಊರಿನಲ್ಲಿರುತ್ತವೆ. ಇದಕ್ಕೆ ನೀವು ಏನೆಂದು ಕರೆಯುತ್ತೀರಿ ನನಗೆ ಗೊತ್ತಿಲ್ಲ. ಇದಕ್ಕೆ ಯಾವುದೇ ಜೀವ, ಶಕ್ತಿಗಳಿರುವುದಿಲ್ಲ. ಇದನ್ನು ಹೊಲಗಳಲ್ಲಿ ಹಕ್ಕಿಗಳನ್ನು ಹಾರಿಸಲು ಬಳಸುತ್ತಾರೆ. ಅಂತಹ ಪರಿಸ್ಥಿತಿ ಲೋಕಾಯುಕ್ತ ಸಂಸ್ಥೆಯದ್ದಾಗಿದೆ. ಸರ್ಕಾರದ ಒಟ್ಟು ಮಾತುಗಳನ್ನು, ನಡವಳಿಕೆಗಳನ್ನು

ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದಾಗ . . . . , ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ಹೀಗೆ ಯಾರೋ ಒಬ್ಬರು ಒಮ್ಮೆ ಮಾತನಾಡುತ್ತಿರುವಾಗ, "ಕಾರಕ್ಕೂ, ಅಹಂಕಾರಕ್ಕೂ ಏನು ವ್ಯತ್ಯಾಸ" ಎಂಬುದಾಗಿ ಕೇಳಿದರು. 'ಅಹಂಕಾರ' ಎಂದು ಹೇಳಿದರೆ ಇವರುಗಳಿಗೆ ಗೊತ್ತಾಗುತ್ತದೆ. 'ಕಾರಕ್ಕೆ' ನಾವೇ ನೀರನ್ನು ಕುಡಿಯುತ್ತೇವೆ, 'ಅಹಂಕಾರಕ್ಕೆ' ಜನ ನೀರನ್ನು ಕುಡಿಸುತ್ತಾರೆ ಎಂಬುದಾಗಿ ಹೇಳಿದರು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಹೇಳಿದವರು ಸರಿಯಾಗಿಯೇ ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, 'ಕಾರಕ್ಕೆ' ನಾವೇ ನೀರನ್ನು ಕುಡಿಯುತ್ತೇವೆ, 'ಅಹಂಕಾರಕ್ಕೆ' ಜನ ನೀರನ್ನು ಕುಡಿಸುತ್ತಾರೆ. ಮುಂದಿನ ಚುನಾವಣೆಯಲ್ಲಿ ಈ ವ್ಯವಸ್ಥೆಗೆ ಜನರು ನೀರು ಕುಡಿಸುತ್ತಾರೆ ಎಂದು ಭಾವಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ವೈಸ್‌ಛೇರ್ಮನ್**:- ಮಾನ್ಯ ಸದಸ್ಯರಾದ ರಮೇಶ್ ಬಾಬು ರವರೇ ಈಗ ನೀವು ಮಾತನಾಡಿ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ನೀಡಿದರೆ ನಾನು ನಾಳೆಯ ದಿವಸ ಮಾತನಾಡುತ್ತೇನೆ, ಇವತ್ತಿನ ದಿವಸ ಒಂದೆರೆಡು ಟಿ.ವಿ. ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದೇನೆ.

**ವೈಸ್‌ಛೇರ್ಮನ್**:- ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನದ ಕಲಾಪವು ಸಂಜೆ 6 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ)**
**ದಿನಾಂಕ: 09ನೇ ಫೆಬ್ರವರಿ ಮಾಹೆ 2018ರ ಶುಕ್ರವಾರದಂದು**
**ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"